ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಆಧುನಿಕ ನೋಟ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ
ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಸಂಪ್ರಬಂಧ.

901A

ಕುವೆಂಪು ಅವರ 'ಮಲೆನಾಡಿನ ಚಿತ್ರಗಳು'
ಆಧುನಿಕ ನೋಟ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ
ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ಸಂಪ್ರಬಂಧ.

ಸಂಶೋಧಕರು- ಟಿ. ಎಸ್ ಅನಿತ
ಮಾರ್ಗದರ್ಶಕರು- ಡಾ. ಹಿ.ಚಿ. ಬೋರಲಿಂಗಯ್ಯ.

ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಆಧುನಿಕ ನೋಟ

ಪರಿವಿಡಿ

ಅಧ್ಯಾಯ ೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೨. ಮಲೆನಾಡಿನ ಚಿತ್ರಗಳು : ವಸ್ತು, ಭಾಷೆ ಮತ್ತು ನಿರೂಪಣಾ ಶೈಲಿ

ಅಧ್ಯಾಯ ೩. ಕುವೆಂಪು ಅವರ ಬೇಟೆಯ ಚಿತ್ರಗಳು:

೩.೧. ಮರಸು ಬೇಟೆ

೩.೨. ಸಾರಿಕೆಬೇಟೆ

೩.೩. ಜೇನು ಬೇಟೆ

೩.೪. ಇತರೆ ಬೇಟೆಯ ವಿಧಗಳು

ಅಧ್ಯಾಯ ೪. ಕುವೆಂಪು ಅವರು ಚಿತ್ರಿಸಿದ ಜೀವನ ಚಿತ್ರಗಳು :

೪.೧. ವ್ಯಕ್ತಿ ಚಿತ್ರ

೪.೨. ಬಾಲ್ಯ ಚಿತ್ರ

೪.೩. ನಂಬಿಕೆ, ಆಚರಣೆ, ಬದುಕು

ಅಧ್ಯಾಯ ೫. ಆಧುನೀಕರಣದತ್ತ ಮಲೆನಾಡು

೫.೧. ಜನ ಜೀವನ

೫.೨ .ಬೇಸಾಯ ಕ್ರಮ

೫.೩. ಶಿಕ್ಷಣ ಕ್ರಮ

ಅಧ್ಯಾಯ ೬. ಮಲೆನಾಡು ಅಂದು - ಇಂದು

ಅಧ್ಯಾಯ ೭. ಸಮಾರೋಪ

ಅನುಬಂಧ

★ ಆಕರಗ್ರಂಥ

★ ಪರಾಮರ್ಶನ ಕೃತಿಗಳು

ಅಧ್ಯಾಯ -೧

ಅಧ್ಯಯನದ ಉದ್ದೇಶ, ವ್ಯಾಪ್ತಿ

ಕುವೆಂಪು ಅವರು ನಮ್ಮ ಸಾಹಿತ್ಯ ಕ್ಷೇತ್ರದ ಮಹೋನ್ನತ ಪ್ರತಿಭೆ ಎಂಬುವುದರಲ್ಲಿ ಯಾವುದೇ ಸಂಶಯವಿಲ್ಲ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಪರಂಪರೆಯನ್ನು ಸೃಷ್ಟಿಸಿದ ಇವರ ಸಾಧನೆ ಸಿದ್ಧಿಗಳು ಅನನ್ಯ. ಕುವೆಂಪು ಅವರು ಕವಿತೆ, ಕತೆ, ನಾಟಕ, ಕಾದಂಬರಿ, ಜೀವನ ಚಿತ್ರಗಳು, ಮಕ್ಕಳ ಸಾಹಿತ್ಯ, ಮಹಾಕಾವ್ಯ, ವಿಮರ್ಶೆ , ವಿಚಾರ, ಜೀವನ ಚರಿತ್ರೆ , ಆತ್ಮಕತೆ ಮುಂತಾದ ಪ್ರಕಾರಗಳಲ್ಲಿ ಸುಮಾರು ಎಂಬತ್ತಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾರೆ. ಅವರ ಕೃತಿಗಳಲ್ಲಿ ಕಲೆ, ತತ್ವ , ಆಧ್ಯಾತ್ಮ , ಪ್ರಕೃತಿ , ಪ್ರೀತಿ, ದೇವರು, ನಾಡು - ನುಡಿ , ಪುರಾಣ , ಇತಿಹಾಸ , ಸಂಸ್ಕೃತಿ, ಸಾಹಿತ್ಯ ಮೀಮಾಂಸೆ, ವಿಜ್ಞಾನ ವಿಚಾರ ಮುಂತಾಗಿ ನಾನಾ ವಿಷಯಗಳು ವಸ್ತುವಾಗಿವೆ. ಅವರ ಸಾಹಿತ್ಯ ಕನ್ನಡಕ್ಕಷ್ಟೇ ಅಲ್ಲದೇ ಭಾರತೀಯ ಸಾಹಿತ್ಯಕ್ಕೂ ಸಹ ಮೌಲಿಕವಾದುದ್ದಾಗಿದೆ.

ಕುವೆಂಪು ರಚಿಸಿದ ಪ್ರಮುಖ ಕೃತಿಗಳಲ್ಲಿ ಅವರ 'ಮಲೆನಾಡಿನ ಚಿತ್ರಗಳು' ನಮ್ಮ ಸಾಹಿತ್ಯದ ವಿಶಿಷ್ಟವಾದ ಅಪರೂಪದ ಕೃತಿ. ಇದನ್ನು ೧೯೩೩ರಲ್ಲಿ ರಚಿಸಿದ್ದಾರೆ. ಈ ಪ್ರಬಂಧ ಸಂಕಲನದಲ್ಲಿ ಒಬ್ಬ ಹರಟೆಗಾರರಾಗಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಇಲ್ಲಿನ ಚಿತ್ರಗಳು ಹಾಸ್ಯದೊಂದಿಗೆ ಗಾಂಭೀರ್ಯವನ್ನೂ , ಲಾಲಿತ್ಯವನ್ನೂ ಒಳಗೊಂಡು ಸುಂದರ ನೆನಪುಗಳಾಗಿ ಮೂಡಿಬಂದಿವೆ. ಕುವೆಂಪು ಅವರೇ ಹೇಳುವಂತೆ ''ನೆನಹು ಬಾಳಿನ ಬುತ್ತಿ; ಅನುಭವಗಳ ಅಕ್ಷಯ ನಿಧಿ, ಜೀವನ ಯಾತ್ರೆ ಬೇಸರವಾದಾಗ, ಜೀವನದಲ್ಲಿ ನವೀನತೆ ಮೊಳೆಯದೆ ಮಂಕುಕವಿದಾಗ, ಜೀವನದಲ್ಲಿ ಬಿಸಿಲ ಬೇಗೆ ಹೆಚ್ಚಿ ಬಳಲಿದಾಗ, ಹಾದಿಯ ಬಳಿ ದಟ್ಟವಾಗಿ ಸೊಂಪಿಡಿದು ಬೆಳೆದ ಮರದ ತಣ್ಣೆಳಲಿನ ತಂಪಿನಲ್ಲಿ, ಮೊರೆದು ಹರಿಯುವ ತೊರೆಯ ಮಂಜುಳ ನಾದವನ್ನು ಆಲಿಸುತ್ತಾ ಆ ಬುತ್ತಿಯನ್ನು ಬಿಚ್ಚಿ ಉಣಬಹುದು, ತಣಿಯಬಹುದು, ದಣಿವಾರಿಸಿಕೊಳ್ಳಬಹುದು. ನಮಗೆ ಬೇಕಾದವರು , ನಮ್ಮ ಜೀವನ ಅನುಭವಗಳಲ್ಲಿ ಒಲ್ಮೆಯುಳ್ಳವರು ಬಳಿಯಿದ್ದರೆ ಅವರಿಗೂ ಆ ಬುತ್ತಿಯ ಪರಿಚಯ ಮಾಡಿಕೊಟ್ಟು ಒಂಟಿಯಾಗಿ ಅನುಭವಿಸುವ ಸುಖವನ್ನು ಇಮ್ಮಡಿಯಾಗಿ ಅನುಭವಿಸಬಹುದು'' ಹೀಗೆ ತಮ್ಮ ಅನುಭವದ

ನೆನಪುಗಳನ್ನು ಕುವೆಂಪು ಅವರು ಮಲೆನಾಡನ್ನು ಬಿಟ್ಟು ಬಂದು ಬಯಲು ಸೀಮೆಯಲ್ಲಿದ್ದಾಗ ಅವರ ಆಪ್ತಮಿತ್ರರೊಂದಿಗೆ ಹೇಳಿ ನಲಿಯುತ್ತಿದ್ದರಂತೆ. ಈ ಅನುಭವಗಳ ಬರಹವೇ 'ಮಲೆನಾಡಿನ ಚಿತ್ರಗಳು'.

'ಮಲೆನಾಡಿನ ಚಿತ್ರಗಳು' ಒಂದು ಚಿಕ್ಕದಾದ ಪ್ರಬಂಧ ಸಂಕಲನ. ಇದರಲ್ಲಿ ಹನ್ನೆರಡು ಚಿತ್ರಗಳಿವೆ. ಕುವೆಂಪು ಅವರಿಗಿರುವ ದೈವದತ್ತವಾದ ಪ್ರತಿಭಾ ಶಕ್ತಿಯಿಂದ ಅವರು ಯಾವಾಗಲೋ ಕೇಳಿದ್ದನ್ನು, ಕಂಡದ್ದನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸುತ್ತಾರೆ. ಇದು ಕೇಳುವವರನ್ನು ಅಥವಾ ಓದುಗರನ್ನು ತನ್ನೆಡೆಗೆ ಆಕರ್ಷಿಸುತ್ತದೆ. 'ಮಲೆನಾಡಿನ ಚಿತ್ರಗಳಲ್ಲಿ' ಅಲ್ಲಿನ ಜನಜೀವನ, ಪ್ರಕೃತಿಯ ಸೊಬಗು, ಬೇಟೆಯ ನೆನಪುಗಳು, ವ್ಯಕ್ತಿ ಚಿತ್ರ, ಶಿಕ್ಷಣ , ಬಾಲ್ಯಜೀವನ ಇಂತಹ ಸಾಕಷ್ಟು ಚಿತ್ರಗಳನ್ನು ಕಾಣಬಹುದು. ಕುವೆಂಪು ಅವರು ಸಾಮಾನ್ಯವಾಗಿ ತಮ್ಮ ಕೃತಿಗಳಲ್ಲಿ ಮಲೆನಾಡೆಂಬ ಪ್ರಾದೇಶಿಕತೆಯ ಮೂಲಕ ಅಲ್ಲಿನ ಸಾಮಾಜಿಕ ಚಿಂತನೆಯಿಂದ ಸರ್ವೋದಯ ಸಮಷ್ಟಿ ಧೋರಣೆಗೆ ತಲುಪಿ ಅಲ್ಲಿಂದ ವಿಶ್ವಮಾನವ ಅಥವಾ ಅನಿಕೇತನ ಪರಿಕಲ್ಪನೆಗೆ ತಲುಪುತ್ತಾರೆ. ಈ ಚಿಂತನೆಯನ್ನು ಮಲೆನಾಡಿನ ಚಿತ್ರಗಳಲ್ಲೂ ಕಾಣಬಹುದು. ಹೀಗೆ ಕುವೆಂಪು ತಮ್ಮ ವಿರಾಟ್ ದೃಷ್ಟಿಯಿಂದ ನೋಡಿದ 'ಮಲೆನಾಡು' ಪ್ರಸ್ತುತ ಸಂದರ್ಭದಲ್ಲಿ ಎಂತಹ ಚಿತ್ರಗಳನ್ನು ಒಳಗೊಂಡಿದೆ ಎಂಬುದನ್ನು ಕುರಿತಂತೆ ಈ ನಿಬಂಧದಲ್ಲಿ ಅಧ್ಯಯನ ನಡೆಸಲು ನಿರ್ಧರಿಸಲಾಗಿದೆ. ಈ ಚಿಂತನೆಗೆ ಕಾರಣವೇನೆಂದರೆ ಕುವೆಂಪುರವರ ಸಾಹಿತ್ಯದಲ್ಲಿ ವರ್ಣಿಸಲ್ಪಟ್ಟ ಮಲೆನಾಡು ಇಂದು ಸಾಕಷ್ಟು ಬದಲಾವಣೆಗೆ ಒಳಗಾಗಿದೆ. ಕಾಲ, ಬದುಕು, ಸಮಾಜ ಯಾವುದೂ ನಿಂತ ನೀರಲ್ಲ. ಹರಿಯುವ ನದಿಯಂತೆ ಚಲನಶೀಲವಾದದ್ದು. ಇದಕ್ಕೆ ಮಲೆನಾಡು ಕೂಡ ಹೊರತಲ್ಲ. ಇಂದಿನ ಜಾಗತೀಕರಣ, ಕೈಗಾರಿಕೀಕರಣ, ಆಧುನೀಕರಣದಂತಹ ಅನೇಕ ಕಾರಣಗಳು ಇಂತಹ ಬದಲಾವಣೆಯ ಮೇಲೆ ಪ್ರಭಾವ ಬೀರಿವೆ. ಈ ಕಾರಣ ಮತ್ತು ಪರಿಣಾಮಗಳನ್ನು ಕುರಿತು ಅಧ್ಯಯಿಸುವುದೇ ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಕುವೆಂಪು ಅವರು 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ' ಮೊದಲಾದ ಕಥನ ಕೃತಿಗಳಲ್ಲಿ ಮಲೆನಾಡಿನ ಪ್ರತಿಯೊಂದು ವಸ್ತುವನ್ನೂ , ಘಟನೆಯನ್ನೂ ಎಲ್ಲಾ ವರ್ಗದ ಜನ ಜೀವನವನ್ನು, ಪರಿಸರವನ್ನು ಒಟ್ಟಿನಲ್ಲಿ ಆ ಕಾಲದ ಸಾಂಸ್ಕೃತಿಕ,

ಸಾಮಾಜಿಕ ಬದುಕನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿ, ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಬಹುಶಃ ಅವರು ಚಿತ್ರಿಸಿದ ಮಲೆನಾಡಿನ ಚಿತ್ರವೇ ಇಲ್ಲವೆನ್ನಬಹುದು. ಕುವೆಂಪುರವರು ಬಾಲ್ಯವನ್ನು ಮಾತ್ರ ಮಲೆನಾಡಿನಲ್ಲಿ ಕಳೆದಿದ್ದರು. ನಂತರ ಆಗಾಗ ರಜೆಯಲ್ಲಿ ಬಂದು ಹೋಗುತ್ತಿದ್ದರು ಅಷ್ಟೇ. ಆದರೂ ಆ ಬಾಲ್ಯದ ಅಗಾಧ ನೆನಪೇ ಅವರ ಎಲ್ಲಾ ಬರವಣಿಗೆಗೂ ವಸ್ತುವಾಯಿತು. ಪುರಾಣ, ಚರಿತ್ರೆ, ಸಾಮಾಜಿಕ, ವಿಜ್ಞಾನ ಇಂತಹ ಯಾವುದೇ ವಸ್ತುವಿನ ಆಧಾರದಿಂದ ಸಾಹಿತ್ಯ ರಚಿಸಿದರೂ ಅಲ್ಲಿ ಮಲೆನಾಡಿನ ಆ ಸುಂದರ ಪ್ರಕೃತಿಯ ಸೊಬಗು, ಅಂದಿನ ಗ್ರಾಮೀಣ ಸಾಂಸ್ಕೃತಿಕ ಜಗತ್ತು ಸೇರಿಕೊಂಡಿರಲು ಅವರ ಸೂಕ್ಷ್ಮಗ್ರಹಿಕೆ ಹಾಗೂ ಮಲೆನಾಡಿನ ಅನುಭವಗಳ ನೆನಪಿನಲ್ಲಿ ಬೆರತು ಹೋದ ಅವರ ಜೀವನವೇ ಕಾರಣವಿರಬಹುದು. ಹೀಗೆ ಕುವೆಂಪು ಅವರ ಸಾಹಿತ್ಯದ ಮೂಲಕ ಇಡೀ ಕನ್ನಡ ಸಾಹಿತ್ಯ ಅಷ್ಟೇ ಏಕೆ ಜಗತ್ತಿಗೇ ಮಲೆನಾಡು ಪರಿಚಿತವಾಗಿದೆ. ಈ ಮಲೆನಾಡು ಇಂದು ಯಾವ ರೀತಿಯಲ್ಲಿ ಬದಲಾವಣೆಯಾಗಿದೆ ಎಂಬುದನ್ನು 'ಮಲೆನಾಡಿನ ಚಿತ್ರಗಳು' ಪ್ರಬಂಧ ಸಂಕಲನದ ಆಧಾರದ ಮೇಲೆ ಅಧ್ಯಯನ ನಡೆಸಲು ಉದ್ದೇಶಿಸಲಾಗಿದೆ.

ಕುವೆಂಪು ಅವರು ಮಲೆನಾಡಿನ ಚಿತ್ರಗಳಿಗೆ ಬರೆದ ಮುನ್ನುಡಿಯನ್ನು ಓದಿದರೆ ಅಲ್ಲೊಂದು ಜೀವನ ದರ್ಶನವನ್ನೇ ಕಾಣಬಹುದು. ಅವರು ಮಲೆನಾಡು ಮತ್ತು ನಗರ ಜೀವನ ಎರಡನ್ನೂ ಅನುಭವಿಸಿದವರು. ಆದರೆ ನಗರದಲ್ಲಿದ್ದರೂ ಅವರ ಮನಸ್ಸು ಮಲೆನಾಡಿನಲ್ಲೇ ಇತ್ತೆನ್ನಬಹುದು. ಏಕೆಂದರೆ ಅವರೇ ಮುನ್ನುಡಿಯಲ್ಲಿ ಹೇಳಿದ್ದಾರೆ. ''ಮನಸ್ಸಿಗೆ ಜೀವನದ ಅನುಭವಗಳನ್ನು ಆಯ್ದಿಟ್ಟುಕೊಳ್ಳುವ ಶಕ್ತಿಯಿದೆ. ತನಗೆ ಬೇಕಾದುದನ್ನು ಅದು ಹಿತವಾಗಿರಲಿ, ಅಹಿತವಾಗಿರಲಿ ಉಳಿಸಿಕೊಂಡು, ಉಳಿದುದನ್ನು ಮರೆತು ಬಿಡುತ್ತದೆ''. ಹಾಗೆ ಮುಂದುವರಿದು '' ಜೀವನದ ಸಂಪತ್ತು ಅದರ ಅನುಭವಗಳಲ್ಲದೇ, ನೆನಪು ಆ ಅನುಭವಗಳ ನಿಧಿ '' ಎಂದು ಹೇಳುತ್ತಾ ನಾವು ಮೈಸೂರಿನ ಸಂತೇಪೇಟೆಯ ಹೊಟೇಲಿನ ಗಲಿಬಿಲಿ, ಗಲೀಜುಗಳಲ್ಲಿದ್ದರೂ ಮಲೆನಾಡಿನ ಕವಿಶೈಲ, ನವಿಲುಕಲ್ಲುಗಳ ನೆತ್ತಿಯ ಚೇತೋಹಾರಿಯಾದ ವಾತಾವರಣದಲ್ಲಿ ರಸ ಋಷಿಗಳಾಗಿರಬಹುದು ಎನ್ನುತ್ತಾರೆ. ಕುವೆಂಪು ಅವರು ಮುನ್ನುಡಿಯಲ್ಲಿಯೇ ಮಲೆನಾಡಿನ ಅನೇಕ ಸುಂದರ ದೃಶ್ಯಗಳನ್ನು ನಮ್ಮ ಮುಂದಿರಿಸುತ್ತಾರೆ. ಅವರ ಮನೆಯ ಭವ್ಯತೆಯನ್ನು

ವಿವರಿಸುತ್ತಾರೆ. ಮನೆಯ ಸುತ್ತಮುತ್ತಲಿರುವ ಪರ್ವತಾರಣ್ಯಗಳು, ಕವಿಶೈಲ, ನವಿಲುಕಲ್ಲುಗಳಲ್ಲಿನ ಸೂರ್ಯೋದಯ, ಸೂರ್ಯಾಸ್ತವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ. ಇದು ಅವರಿಂದ ಮಾತ್ರ ಸಾಧ್ಯ. ಕುವೆಂಪು ಅವರೇ ಸಾಮಾನ್ಯ ಜನರಿಗೂ, ಕಲೆಯ ಕಣ್ಣಿರುವವರಿಗೂ ಇರುವ ವ್ಯತ್ಯಾಸವನ್ನು ಹೇಳಿದ್ದಾರೆ. ತಲತಲಾಂತರದಿಂದಲೂ ಧೀರಗಾಂಭೀರ್ಯದಿಂದಲೂ ಕರುಣಾಪೂರ್ಣ ಔದಾಸೀನ್ಯದಿಂದಲೂ ಅಲ್ಲಿಯೇ ಇರುವ ಕವಿಶೈಲದ ಮುಖಾಂತರ ಜನಗಳು ತಿರುಗಾಡಿದ್ದಾರೆ. ಆದರೆ ಯಾರಿಗೂ ಆ ಸ್ಥಾನದ ಮಹತ್ವ, ಬೃಹತ್ ಭವ್ಯತೆ, ಸೌಂದರ್ಯ, ಸುಖ ಶಾಂತಿಗಳ ಪರಿಚಯವಾಗಿರಲಿಲ್ಲ. ನಿಜವಾದ ಯೋಗ್ಯತೆಯ ಪರಿಚಯವಾಗುವುದಕ್ಕೆ ಒಂದು ಯೋಗ್ಯತೆ ಬೇಕು ಎನ್ನುತ್ತಾ ''ಕಲೆಯ ಕಣ್ಣಿಲ್ಲದವರಿಗೆ ಕವಿಶೈಲ ಒಂದು ಕಲ್ಲುಕಾಡು, ಕಲಾವಂತನಿಗೆ ಅದು ಸಗ್ಗವೀಡು''. ಮಲೆನಾಡಿನಲ್ಲಿ ಅನೇಕರಿಗೆ ಕಲಾ ಸಂಸ್ಕೃತಿಯ ಅಭಾವದಿಂದ ತಮ್ಮ ನಾಡಿನ ಅಂದ - ಚೆಂದ ಮಹಿಮೆ ಹಿರಿಮೆಗಳೇ ತಿಳಿದಿಲ್ಲ ಎನ್ನುತ್ತಾರೆ. ಇದೇ ಮುನ್ನುಡಿಯಲ್ಲಿ ಅವರು ತಮ್ಮ ಮಿತ್ರರೊಡನೆ ನವಿಲುಕಲ್ಲಿಗೆ ಹೋದಾಗ ಅಲ್ಲಿ ಕಂಡ ಸೂರ್ಯೋದಯಕ್ಕೂ ಮುಂಚಿನ ಮಂಜು ಆವರಿಸಿರುವ ದೃಶ್ಯವನ್ನು ವರ್ಣಿಸಿರುವುದು ಅವರ ಪ್ರತಿಭೆಗೆ ಸಾಕ್ಷಿಯಾಗಿದೆ. ''ಇರುಳು ಆಕಾಶದಲ್ಲಿ ಮಲಗಲು ತಾವಿಲ್ಲದೆ ಭೂಮಿಗೆ ಇಳಿದು ಬಂದು ಕಣಿವೆ ಕಣಿವೆಗಳಲ್ಲಿ ಹರಿದು ನಿದ್ದೆಗೈದ ಬೆಳ್ಮುಗಿಲುಗಳು ಬೆಳಗಾದರೂ ಆಲಸ್ಯದಿಂದ ಮೇಲೇಳಲಾರದೆ ಇರುವವೋ ಎಂಬಂತೆ ತೋರುತ್ತಿತ್ತು '' ಎಂದು ವರ್ಣಿಸಿದ್ದಾರೆ. ಅವರ ಕವಿಶಕ್ತಿ ಗದ್ಯದಲ್ಲೂ ಕಾಣಿಸಿಕೊಳ್ಳುವ ಬಗೆ ಇದಾಗಿದೆ. ಹೀಗೆ ಇಡೀ ಜೀವನವನ್ನು ಕಲ್ಪನೆ, ಸ್ಮೃತಿಗಳ ಮೂಲಕ ಸುಖ ಶಾಂತಿಪೂರ್ಣವಾಗಿ ಅನುಭವಿಸಿದ ಕುವೆಂಪು ಪ್ರಕೃತಿಯ ಭವ್ಯಸುಂದರ ದೃಶ್ಯಗಳಲ್ಲೇ ದೇವರನ್ನು ಕಂಡವರು. ಇಂತಹ ಅನುಭಗಳ ಮೂಲಕ ಸವಿ ನೆನಪುಗಳಾಗಿ ಉಳಿದ ಮಲೆನಾಡಿನ ಚಿತ್ರಗಳು ಇಂದು ಎಂತಹ ಅನುಭವ ನೀಡುತ್ತವೆ ಎಂಬುದರ ಅಧ್ಯಯನವೇ ಈ ನಿಬಂಧದ ಉದ್ದೇಶವಾಗಿದೆ.

ಪ್ರಸ್ತುತ ನಿಬಂಧದಲ್ಲಿ ಕುವೆಂಪು ಅವರ ಮಲೆನಾಡಿನ ಚಿತ್ರಗಳನ್ನು ಆಧಾರವಾಗಿಟ್ಟುಕೊಂಡು ನಾನು ಮಲೆನಾಡಿನವಳೇ ಆಗಿದ್ದು, ಇಂದಿನ ಮಲೆನಾಡನ್ನು ಕುರಿತಂತೆ ನನ್ನ ಸಾಕ್ಷಿಪ್ರಜ್ಞೆಯಿಂದ '' ಕುವೆಂಪು ಅವರ ಮಲೆನಾಡಿನ ಚಿತ್ರಗಳು : ಆಧುನಿಕ ನೋಟ '' ಎಂಬ ಶೀರ್ಷಿಕೆಯಡಿಯಲ್ಲಿ ಇದನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತೇನೆ. ಈ

ಪ್ರಬಂಧವನ್ನು ಏಳು ಮುಖ್ಯ ಅಧ್ಯಾಯಗಳನ್ನು ಒಳಗೊಂಡಂತೆ ವಿಸ್ತೃತಗೊಳಿಸಲಾಗಿದೆ. ಮೊದಲ ಅಧ್ಯಾಯ ಪ್ರಬಂಧ ರಚನೆಯ ಉದ್ದೇಶ ಮತ್ತು ವ್ಯಾಪ್ತಿಗೆ ಸಂಬಂಧಿಸಿದ್ದು. ಇದು ವಿಷಯದ ಆಯ್ಕೆ, ಅಗತ್ಯತೆ ಹಾಗೂ ಅಧ್ಯಯನದ ವಿಧಾನಗಳ ಮೇಲೆ ಬೆಳಕು ಹರಿಸುತ್ತದೆ.

ಎರಡನೇ ಅಧ್ಯಾಯದಲ್ಲಿ ಕುವೆಂಪು ಅವರ ' ಮಲೆನಾಡಿನ ಚಿತ್ರಗಳು ' ಪ್ರಬಂಧ ಸಂಕಲನದಲ್ಲಿನ ಪ್ರಬಂಧಗಳ ವಸ್ತು ನಿರ್ವಹಣೆ, ಭಾಷೆ ಮತ್ತು ನಿರೂಪಣಾ ಶೈಲಿಯನ್ನು ಕುರಿತಂತೆ ಅಧ್ಯಯನ ನಡೆಸಲಾಗಿದೆ. ಕಾರಣ ಕುವೆಂಪು ಅವರು ೧೯೩೩ ರಲ್ಲೇ ಈ ಕೃತಿಯನ್ನು ರಚಿಸಿದ್ದಾರೆ. ಇದು ಅವರ ಒಂದೇ ಒಂದು ವಿಶಿಷ್ಟವಾದ ಪ್ರಬಂಧ ಸಂಕಲನ. ಅವರು ' ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು ' ಕಾದಂಬರಿಗಳನ್ನು ಬರೆಯುವ ಮೊದಲೇ ಇದನ್ನು ಬರೆದಿದ್ದರಿಂದ ಕಾದಂಬರಿಗಳಲ್ಲಿ ಚಿತ್ರಿಸಿದಂತೆ ಮಲೆನಾಡಿನ ಸಂಪೂರ್ಣ ಚಿತ್ರಣವನ್ನು ಇಲ್ಲಿ ಚಿತ್ರಿಸಲಿಲ್ಲ. ಆದರೂ ಕೆಲವೊಂದು ಪ್ರಮುಖ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಆ ಅನುಭವಗಳಲ್ಲಿನ ವಸ್ತು ಮತ್ತು ಅವರು ಗದ್ಯದಲ್ಲಿ ಬಳಸಿದ ಭಾಷೆ ಹಾಗೂ ನಿರೂಪಣಾ ಶೈಲಿ ಎಂತಹದ್ದು ಎಂಬುದರ ಬಗ್ಗೆ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುತ್ತದೆ. ಯಾವುದೇ ಒಂದು ಕೃತಿಯನ್ನು ಕುರಿತು ಬೇರೆ ಬೇರೆ ದೃಷ್ಟಿ ಕೋನಗಳಿಂದ ನೋಡುವ ಮೊದಲು ಅದನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಾದದ್ದು ಅತ್ಯಗತ್ಯ. ಹೀಗೆ ಅರ್ಥೈಸಿಕೊಳ್ಳಬೇಕಾದಾಗ ಅಲ್ಲಿನ ವಸ್ತು ಯಾವುದೆಂಬುದು ಮಹತ್ವದ್ದಾಗುತ್ತದೆ. ಯಾವುದೇ ಕಲಾಕೃತಿಯಲ್ಲಿ ಮುಖ್ಯವಾಗಿ ಗುರುತಿಸಬಹುದಾದದ್ದು ಏನೆಂದರೆ ಅದರ ವಸ್ತು ಆವಿಷ್ಕಾರಗೊಳ್ಳುವ, ಪ್ರವಹಿಸುವ ವಿಶಿಷ್ಟವಾದ ನೆಲೆಯನ್ನು, ಇದರ ಆಧಾರದ ಮೇಲೆ ಕೃತಿಯೊಂದರ ಉದ್ದೇಶ ಅದರಲ್ಲಿಯ ಮನೋಭೂಮಿಕೆ, ಪ್ರಜ್ಞೆ, ಪ್ರೇರಣೆ ಮತ್ತು ನಿರ್ವಹಣೆಯಂತಹ ಕಲಾತ್ಮಕ ಕೌಶಲ್ಯಗಳ ಯಶಸ್ಸನ್ನು ವಿಶ್ಲೇಷಿಸಬಹುದಾಗಿದೆ. ಭಾಷೆಯು ಭಾವವನ್ನು ಅಭಿವ್ಯಕ್ತಿಗೊಳಿಸುವ ಒಂದು ಮಾಧ್ಯಮವಾಗಿದ್ದು, ಬರಹಗಾರ ತಮ್ಮ ಅನುಭವವನ್ನು ಓದುಗರಿಗೆ ಮುಟ್ಟಿಸಬೇಕಾದರೆ ಅರ್ಥಪೂರ್ಣವಾದ ಭಾಷೆಯನ್ನು ಬಳಸಬೇಕಾಗುತ್ತದೆ. ಬರಹಗಾರ ತನ್ನ ಮನೋಧರ್ಮಕ್ಕೆ ಅನುಗುಣವಾಗಿ ಭಾಷೆಯನ್ನು ಬಳಸುವುದನ್ನು ಕಾಣಬಹುದಾಗಿದೆ. ನವಿರತೆ ಮತ್ತು ಆದಷ್ಟು ಸರಳತೆಯನ್ನು ಬಳಸಿ ಓದುಗನ ಮನಸೆಳೆಯುವ ಭಾಷಾ

ಪ್ರಯೋಗಕ್ಕೆ ಬರಹಗಾರ ತೊಡಗುತ್ತಾನೆ. ಕುವೆಂಪುರವರು ತಮ್ಮ ಭಾಷಾ ಬಳಕೆಯಲ್ಲಿ ಅದು ಪದ್ಯ ಅಥವಾ ಗದ್ಯ ಯಾವುದೇ ಆಗಲಿ ಓದುಗರನ್ನು ತಮ್ಮೆಡೆಗೆ ಆಕರ್ಷಿಸಿಕೊಳ್ಳುವ ವಿಶೇಷ ಪ್ರತಿಭೆಯುಳ್ಳವರಾಗಿದ್ದಾರೆ. ವಸ್ತು, ಭಾಷೆಯಂತೆಯೇ ನಿರೂಪಣಾ ವಿಧಾನವೂ ಒಂದು ವಿಶಿಷ್ಟ ಬಗೆಯ ತಂತ್ರ. ಬರಹಗಾರ ರಚಿಸಿದ ಸಾಹಿತ್ಯ ಓದುಗನನ್ನು ತಲುಪುವ ಬಗೆ, ಹಾಗೆಯೇ ಓದುಗರಲ್ಲಿ ಬೇಸರ ತರದೇ ಕುತೂಹಲದಿಂದ ಮುಂದೆ ಓದಿಸಿಕೊಂಡು ಹೋಗುವ ಕಲಾಸೂಕ್ಷ್ಮತೆ ನಿರೂಪಣೆಯಲ್ಲಿಬೇಕು. ಕುವೆಂಪು ಅವರ ಪ್ರಬಂಧದಲ್ಲಿ ಇಂತಹ ನಿರೂಪಣೆಯನ್ನು ಕಾಣಬಹುದು. ಈ ಎಲ್ಲಾ ಕಲಾ ತಂತ್ರಗಳನ್ನು ಕುರಿತು ಅಧ್ಯಾಯ ಎರಡರಲ್ಲಿ ವಿಶ್ಲೇಷಿಸಲಾಗುತ್ತದೆ.

ಮೂರನೇ ಅಧ್ಯಾಯ ಕುವೆಂಪುರವರು ಚಿತ್ರಿಸಿದ ಬೇಟೆಯ ಪ್ರಸಂಗಳಿಗೆ ಸಂಬಂಧಿಸಿದ್ದು. ಬೇಟೆ ಮಲೆನಾಡಿನ ಜನರ ಪ್ರಮುಖ ಹವ್ಯಾಸಗಳಲ್ಲೊಂದು. ಕುವೆಂಪು ಬೇಟೆಯ ಅನುಭವಗಳನ್ನು ಬಹಳ ಸ್ವಾರಸ್ಯಕರವಾಗಿ, ರೋಮಾಂಚನಕಾರಿಯಾಗಿ ಹಾಗೆಯೇ ಕುತೂಹಲಕಾರಿಯಾಗಿ ಚಿತ್ರಿಸಿದ್ದಾರೆ. ಹಾಗೆಯೇ ಬೇಟೆಯಲ್ಲಿನ ಬೇರೆ ಬೇರೆ ಬಗೆಗಳನ್ನು ತಿಳಿಸಿದ್ದಾರೆ. ಅದರಲ್ಲಿ ಮರಸು ಬೇಟೆ, ಸಾರಿಕೆ ಬೇಟೆ, ಗುಂಪುಬೇಟೆ, ಜೇನುಬೇಟೆ ಇಂತಹ ಅನೇಕ ರೀತಿಯ ಬೇಟೆಯ ವಿಧಗಳನ್ನು ತಮ್ಮ ಅನುಭವದೊಂದಿಗೆ ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ. ಬೇಟೆಯ ಸಾಹಸವನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಕೃತಿಗಳು ಬಂದಿವೆ. ಅದರಲ್ಲಿ ಮಲೆನಾಡಿನ ಶಿಕಾರಿ ವೈಶಿಷ್ಟ್ಯ ಪೂರ್ಣವಾಗಿದ್ದು, ಇಲ್ಲಿ ರೈತ ತನ್ನ ಬೆಳೆಗಳನ್ನು ಸಂರಕ್ಷಿಸಿಕೊಳ್ಳುವುದರೊಂದಿಗೆ ತನ್ನಲ್ಲಿ ಹುದುಗಿರುವ ಸಾಹಸ ಪ್ರಜ್ಞೆಯನ್ನು ಪರೀಕ್ಷಿಸಿಕೊಳ್ಳುತ್ತಾನೆ. ಶಿಕಾರಿಯಲ್ಲಿ ಮೈ ನವಿರೇಳಿಸುವ ಪ್ರಸಂಗಗಳೂ ಇವೆ. ಹಾಗೆಯೇ ಪೇಚಿಗೆ ಸಿಲುಕಿದ ಪ್ರಸಂಗಗಳು, ರಸಮಯ ಸನ್ನಿವೇಶಗಳೂ ಹಲವು ಇವೆ. ಈ ಶಿಕಾರಿಯ ಹವ್ಯಾಸ ಬರುಬರುತ್ತಾ ಮಲೆನಾಡಿನಲ್ಲಿ ಮರೆಯಾಗುತ್ತಿದೆ. ಇದಕ್ಕೆ ಕಾರಣವನ್ನು 'ಮಲೆನಾಡಿನ ಚಿತ್ರಗಳು' ಪ್ರಬಂಧ ಸಂಕಲನದ ಹಿನ್ನೆಲೆಯಿಂದ ಚರ್ಚಿಸಲಾಗಿದೆ. ಈ ಪ್ರಬಂಧ ಸಂಕಲನದಲ್ಲಿ ಹೆಚ್ಚು ಪ್ರಬಂಧಗಳು ಬೇಟೆಯ ಚಿತ್ರಗಳನ್ನು ಕುರಿತಂತವುಗಳು. ಆದ್ದರಿಂದ ಈ ಕುರಿತು ಅಧ್ಯಯನ ನಡೆಸಲಾಗುತ್ತದೆ.

ನಾಲ್ಕನೇ ಅಧ್ಯಾಯದಲ್ಲಿ ಕುವೆಂಪು ಚಿತ್ರಿಸಿದ ಜೀವನ ಚಿತ್ರಗಳನ್ನು

ವಿಶ್ಲೇಷಿಸಲಾಗುತ್ತದೆ. ಬೇಟೆಯ ಚಿತ್ರಗಳನ್ನು ಬಿಟ್ಟು, ಉಳಿದ ಪ್ರಬಂಧಗಳಲ್ಲಿ (ಅಣ್ಣಪ್ಪನ ರೇಷ್ಮೆ ಕಾಯಿಲೆ, ಕಥೆಗಾರ ಮಂಜಣ್ಣ ಇತ್ಯಾದಿ) ಮಲೆನಾಡಿನ ಜೀವನ ಚಿತ್ರಗಳನ್ನು ನಂಬಿಕೆ, ಆಚರಣೆ, ಬದುಕು, ಬಾಲ್ಯ ಜೀವನವನ್ನು ಕುರಿತಂತೆ ಚಿತ್ರಿಸಿದ್ದಾರೆ. ಇದರೊಂದಿಗೆ ಮಂಜಣ್ಣ, ಅಣ್ಣಪ್ಪ, ಪುಟ್ಟಾಚಾರಿಯಂತಹ ವ್ಯಕ್ತಿಚಿತ್ರಗಳನ್ನು ಸಮರ್ಥವಾದ ರೀತಿಯಲ್ಲಿ ಚಿತ್ರಿಸಿದ್ದಾರೆ. ಅದರೊಂದಿಗೆ ಮಲೆನಾಡಿಗರ ಮಾನವೀಯ ಮೌಲ್ಯಗಳನ್ನು ಚಿತ್ರಿಸಿದ್ದಾರೆ. ಇಂತಹ ಜೀವನ ಚಿತ್ರಗಳು ಇಂದು ಮಲೆನಾಡಿನಲ್ಲಿ ಎಷ್ಟು ಉಳಿದುಕೊಂಡಿವೆ, ಎಷ್ಟು ಬದಲಾಗಿವೆ ಎಂಬುದನ್ನು ಕುರಿತು ಇಲ್ಲಿ ಅಧ್ಯಯನ ನಡೆಸಲಾಗುತ್ತದೆ.

ಐದನೇ ಅಧ್ಯಾಯದಲ್ಲಿ ಕುವೆಂಪುರವರ ಸಾಹಿತ್ಯದಲ್ಲಿ ವರ್ಣಿಸಲ್ಪಟ್ಟ ಮಲೆನಾಡಿನ ಪ್ರಾದೇಶಿಕತೆ, ಸಮಾಜ, ಸಂಸ್ಕೃತಿ, ಇಪ್ಪತ್ತೊಂದನೇ ಶತಮಾನದಲ್ಲಿ ಹೇಗೆ ಆಧುನೀಕರಣಗೊಂಡಿದೆ ಎಂಬುದನ್ನು ಕುರಿತು, ಹಾಗೆಯೇ ಇದಕ್ಕೆ ಮುಖ್ಯಕಾರಣಗಳೇನು ಎಂಬುದನ್ನು ಅಲ್ಲಿನ ಜನಜೀವನ, ಬೇಸಾಯ, ಶಿಕ್ಷಣ ಪದ್ಧತಿ ಇವುಗಳ ಆಧಾರದ ಮೇಲೆ ವಿಶ್ಲೇಷಿಸಲಾಗುತ್ತದೆ. ವ್ಯವಸಾಯ ಮಲೆನಾಡಿನ ಜನರ ಮುಖ್ಯ ಕಸುಬಾಗಿದ್ದು, ಇದರ ಮೇಲಾದ ಆಧುನೀಕರಣದ ಪ್ರಭಾವವನ್ನು, ಅದರ ಪ್ರಯೋಜನ ಮತ್ತು ದುಷ್ಪರಿಣಾಮವನ್ನು ಇಲ್ಲಿ ಚರ್ಚಿಸಲಾಗುತ್ತದೆ. ಹಾಗೆಯೇ ಮತ್ತೊಂದು ಅಂಶವಾದ ಶಿಕ್ಷಣ ಇಲ್ಲೂ ಸಹ ಇಂದು ಸಾಕಷ್ಟು ಬದಲಾವಣೆಗಳಾಗಿರುವುದನ್ನು ಗಮನಿಸಬಹುದು. ಇಂತಹ ಅನೇಕ ವಿಷಯಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗುತ್ತದೆ.

ಆರನೇ ಅಧ್ಯಾಯದಲ್ಲಿ ಕುವೆಂಪುರವರು ಕಂಡ ಅಂದಿನ ಮಲೆನಾಡು ಮತ್ತು ಇಂದು ಅದೇ ಮಲೆನಾಡು ಹೇಗಿದೆ ಎಂಬುದನ್ನು ಕುರಿತು ವಿಶ್ಲೇಷಿಸಲಾಗುತ್ತದೆ. ಮೇಲಿನ ಅಧ್ಯಾಯದಲ್ಲಿ ಆಧುನಿಕ ಪ್ರಭಾವವನ್ನು ಕುರಿತು ಚರ್ಚಿಸಿದರೆ, ಇಲ್ಲಿ ಪ್ರಸ್ತುತ ಹೇಗಿದೆ ಎಂಬುದನ್ನು ವಿವರಿಸಲಾಗುತ್ತದೆ. ಕುವೆಂಪು ವರ್ಣಿಸಿರುವ ಆ ಭವ್ಯ ಪ್ರಕೃತಿ, ಪ್ರಾಣಿ ಸಂಕುಲ, ಜನರ ಮುಗ್ಧತೆ ಇಂದು ಸಂಪೂರ್ಣ ಬದಲಾಗಿದೆ. ಇದನ್ನು ನಾನು ಮಲೆನಾಡಿನವಳೇ ಆಗಿದ್ದು , ಅದರಲ್ಲೂ ಕುವೆಂಪು ಅವರ ಹುಟ್ಟೂರು, ಅವರ ಸಾಹಿತ್ಯದಲ್ಲಿ ವರ್ಣಿಸಲ್ಪಟ್ಟ ಪ್ರಕೃತಿಯ ಕೇಂದ್ರ ಸ್ಥಾನವಾದ ಕುಪ್ಪಳ್ಳಿಯಿಂದ ಹತ್ತು -ಹನ್ನೆರಡು ಮೈಲಿಯ ಅಂತರದಲ್ಲೇ ಇದ್ದು, ಮಲೆನಾಡಿನ ಸ್ಥಿತ್ಯಂತರಗಳನ್ನು ಗಮನಿಸಿ,

ನನ್ನ ದೃಷ್ಟಿಕೋನದಿಂದ ವಿವರಿಸಲು ಪ್ರಯತ್ನಿಸುತ್ತೇನೆ. ಸಮಾರೋಪದಲ್ಲಿ ಆರಂಭದ ಮೊದಲ ಅಧ್ಯಾಯಗಳಲ್ಲಿ ಸೂಚಿಸಿದ ಅಧ್ಯಯನ ಕ್ರಮಗಳನ್ನು ಅದರ ಫಲಶೃತಿಗಳನ್ನು ಜೊತೆಗೆ ಕೊನೆಯವರೆಗೂ ಅಧ್ಯಯನಕ್ಕೆ ದೊರೆತ ಬಹುಮುಖ ಚಿಂತನಾ ಕ್ರಮಗಳನ್ನು ಗುರುತಿಸಲಾಗುತ್ತದೆ.

ಯಾವುದೇ ಒಂದು ಅಧ್ಯಯನದ ಮೂಲಕ ಒಂದು ಕೃತಿಯನ್ನು ಪೂರ್ಣವಾಗಿ ವಿಶ್ಲೇಷಿಸಲಾಗುವುದಿಲ್ಲ. ಹಾಗೆಯೇ ಎಲ್ಲರ ಅಭಿಪ್ರಾಯಗಳೂ ಒಂದೇ ರೀತಿ ಇರಬೇಕಾಗಿಲ್ಲ. ಅದರಲ್ಲೂ ಕುವೆಂಪುರವರಂಥ ಮಹಾನ್ ಸಾಹಿತಿಯ ಕೃತಿಗಳು ಕಾಲದಿಂದ ಕಾಲಕ್ಕೆ ಬೇರೆ ಬೇರೆ ಬಗೆಯಲ್ಲಿ ಅನೇಕ ದೃಷ್ಟಿಕೋನಗಳಿಂದ ಅಧ್ಯಯನಕ್ಕೆ ಒಳಪಡುವಂತಹವು. ಇದೇ ಮಲೆನಾಡು ಮುಂದೆ ಇನ್ನೂ ಸಾಕಷ್ಟು ಬದಲಾವಣೆಗೆ ಒಳಪಡುತ್ತದೆ. ಆಗ ಇದನ್ನೇ ಬೇರೆಯದೇ ರೀತಿಯಲ್ಲಿ ವಿಶ್ಲೇಷಿಸಬಹುದು. ಹೀಗೆ ಸಾಹಿತ್ಯವಾಗಲಿ, ಸಮಾಜವಾಗಲಿ ನಿರಂತರ ಬದಲಾವಣೆಗೆ ಒಳಪಡುವಂತಹದು. ನಾನು ಈ ನಿಬಂಧದಲ್ಲಿ ನನ್ನ ಚಿಂತನೆಯ ವ್ಯಾಪ್ತಿಗೆ ನಿಲುಕಿದಷ್ಟನ್ನು ವಿವರಿಸಲು ಪ್ರಯತ್ನಿಸಿದ್ದೇನೆ. ಕುವೆಂಪು ಕೃತಿಗಳ ಓದಿನೊಂದಿಗೆ ಅವರ ಅನುಭವಗಳನ್ನು ಹಂಚಿಕೊಂಡು, ಅದರ ಸವಿಯನುಂಡು ಅದರೊಂದಿಗೆ ಇಂದಿನ ಮಲೆನಾಡಿನ ಸ್ಥಿತಿಗಳನ್ನು ಕುರಿತು ಚಿಂತಿಸುವುದೇ ಒಂದು ವಿಶಿಷ್ಟ ಅನುಭವವಾಗಿದೆ.

ಅಧ್ಯಾಯ -೨
ಮಲೆನಾಡಿನ ಚಿತ್ರಗಳು : ವಸ್ತು, ಭಾಷೆ ಮತ್ತು ನಿರೂಪಣಾ ಶೈಲಿ

ಕುವೆಂಪು ಕೃಷಿ ಮಾಡದ, ಸೃಷ್ಟಿಸದ, ಪೋಷಿಸದ, ಬೆಳೆಸದ ಸಾಹಿತ್ಯ ಪ್ರಕಾರವೇ ಇಲ್ಲ ಎನ್ನಬಹುದು. ಹೆಚ್ಚೂ ಕಡಿಮೆ ಎಲ್ಲ ಪ್ರಕಾರಗಳಲ್ಲಿಯೂ, ಮುಖ್ಯವಾಗಿ ಭಾವಗೀತೆ, ಕಥನ ಕಾವ್ಯ, ಮಹಾಕಾವ್ಯ, ನಾಟಕ, ಕಾದಂಬರಿ, ಹರಟೆ, ವಿಮರ್ಶೆ ಈ ಎಲ್ಲದರಲ್ಲೂ ತಮ್ಮ ಪ್ರತಿಭೆಯನ್ನು ತೋರಿಸಿಕೊಟ್ಟಿದ್ದಾರೆ. ಸಹಜವಾಗಿಯೇ ಒಂದೊಂದು ತೆರನಾದ ಪ್ರಕಾರಗಳೂ ಒಂದೊಂದು ಬಗೆಯ ಶೈಲಿಯನ್ನು ಹೊಂದಿರುತ್ತವೆ. ಕುವೆಂಪುರವರು ಬಳಸಿದ ಶೈಲಿ ಈ ಎಲ್ಲಾ ಪ್ರಕಾರಗಳಲ್ಲಿಯೂ ಸರಳವಾಗಿ, ವೈವಿಧ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. ಅವರ ಗದ್ಯಶೈಲಿಗೆ ಸಂಬಂಧಿಸಿದಂತೆ ನಮಗೆ ದೊರೆಯುವ ಮೊದಲ ಕೃತಿಯೆಂದರೆ 'ಮಲೆನಾಡಿನ ಚಿತ್ರಗಳು '. ಹರಟೆಗೂ, ಕತೆಗೂ ಮಧ್ಯವರ್ತಿಯಾದ, ಎರಡರ ಲಕ್ಷಣಗಳನ್ನೂ ಒಳಗೊಂಡಿರುವ ರಚನೆಗಳನ್ನು ಚಿತ್ರಗಳೆಂದು ಕರೆದಿರುವಲ್ಲಿ ಔಚಿತ್ಯವಿದೆ.

ಕುವೆಂಪುರವರು ತಮ್ಮ ಬದುಕಿನಲ್ಲಿ ಕಂಡುಂಡ ಅನುಭವಗಳ ನೆನಪು ಸುರುಳಿ ಬಿಚ್ಚಿದಾಗ ಗೊತ್ತುಗುರಿಯಿಲ್ಲದೆ ಘಟನಾವಳಿಗಳು ರೆಕ್ಕೆಬಿಚ್ಚಿ ನರ್ತಿಸುವಾಗ ಚಿತ್ರಗಳು ಮೂಡುತ್ತವೆ. ಅನುಭವಗಳೇ ಭಾಷಾರೂಪದ ಚಿತ್ರಗಳಾಗಿ ಮೈದೋರುತ್ತವೆ. ಇಲ್ಲಿಯ ಒಂದೊಂದು ಚಿತ್ರವೂ ಆತ್ಮಕಥೆಯ ಧಾಟಿಯಲ್ಲಿರುವುದರಿಂದ ಓದುಗರನ್ನು ಎದುರಿಗೆ ಕೂರಿಸಿಕೊಂಡು ಚಿತ್ರಕಾರನೇ ಉತ್ತಮ ಪುರುಷದಲ್ಲಿ ಕತೆಯನ್ನು ನಿರೂಪಿಸುವಂತೆ ತಂತ್ರವನ್ನು ಬಳಸಿಕೊಂಡಿರುವುದರಿಂದ ಇವುಗಳಲ್ಲಿನ ಆತ್ಮೀಯತೆಯೂ, ಭಾಷೆಯಲ್ಲಿನ ಸರಸ, ಉತ್ಸಾಹ, ಕುತೂಹಲವೂ ಓದುಗರನ್ನು ಆಕರ್ಷಿಸುತ್ತದೆ. ಇಲ್ಲಿ ವಾಚಕರೆಲ್ಲರೂ ಶ್ರೋತೃಗಳಾಗುತ್ತಾರೆ. ಶ್ರೋತೃಗಳ ಗಮನ ಅನ್ಯ ದಿಕ್ಕಿನಲ್ಲಿ ಹರಿಯದಂತೆ ನಿರೂಪಕನ ಕಥನದಲ್ಲಿಯೇ ಏಕೀಕೃತವಾಗುವಂತೆ, ನಿರೂಪಣೆ ಹೆಜ್ಜೆ ಹೆಜ್ಜೆಗೂ ಕುತೂಹಲವನ್ನು ಕೆರಳಿಸುತ್ತದೆ. ಕೇಳುಗರ ಇಂಗಿತವನ್ನು, ಅವರ ಪ್ರಶ್ನೋಪಪ್ರಶ್ನೆಗಳನ್ನು ನಿರೀಕ್ಷಿಸಿಕೊಂಡು ಉತ್ತರ ಹೇಳುವ ರೀತಿಯಲ್ಲಿ ಇಲ್ಲಿಯ ಕಥನಕ್ರಿಯೆ ಮುಂದುವರಿಯುವುದರಿಂದ ಮಾತಿನ ಆಡಂಬರಕ್ಕಾಗಲಿ, ಅಲಂಕಾರ ಬಳಕೆಗಾಗಲಿ, ತತ್ವೋಪದೇಶಕ್ಕಾಗಲಿ ಇಲ್ಲಿ ಅವಕಾಶವಿಲ್ಲ.

ಕುವೆಂಪು ಅವರು 'ಮಲೆನಾಡಿನ ಚಿತ್ರಗಳಲ್ಲಿ' ಬರೆದ ಮುನ್ನುಡಿಯಲ್ಲಿಯೇ ವಾಚಕರೊಂದಿಗೆ ಆತ್ಮೀಯತೆಯಿಂದ ಬೆರೆತು ತಮ್ಮ ಅನುಭವದೊಂದಿಗೆ ಒಂದಾಗಿಸಿಕೊಳ್ಳುತ್ತಾರೆ. ಉದಾಹರಣೆಗೆ ಈ ಭಾಗವನ್ನು ಗಮನಿಸಬಹುದು.

> "ಚಿತ್ರಗಳಿಗಾಗಿ ಬರೆಯುವ ಮುನ್ನುಡಿ 'ಚಿತ್ರ'ಗಳಂತೆಯೆ ಶಿಥಿಲವಾಗಿದ್ದರೇನಂತೆ, ಕವಿಶೈಲ ನವಿಲುಕಲ್ಲುಗಳ ಮಾತೆತ್ತಿಯಾಯಿತು. ಅವುಗಳ ವಿಚಾರವಾಗಿ ನಿಮಗೆರಡು ಮಾತು ಹೇಳಿಬಿಡುತ್ತೇನೆ. ನೀವು ಬೇಡ, ಮುನ್ನುಡಿಯಲ್ಲಿ ಹರಟೆ ಲಕ್ಷಣವಲ್ಲ ; ನಮಗೆ ಆದನ್ನೆಲ್ಲ ಕೇಳಲು ಇಷ್ಟವಿಲ್ಲ ಎಂದು ಕೂಗಿಕೊಂಡರೂ ನಾನು ಬೇರೆ ಬಿಡುವಂತಿಲ್ಲ ; ಹೇಳಲೇಬೇಕು ! ನನಗೇನೋ ಹೇಳಬೇಕೆನ್ನುವ ಹುಚ್ಚು ಹಿಡಿದಿದೆ ! ಕೇಳುವ ಹುಚ್ಚಿದ್ದವರು ಕೇಳಲಿ ! ಉಳಿದವರು ಪುಸ್ತಕವನ್ನಾಚೆಗೆ ಬಿಸಾಡಲಿ !"[೧]

ಇಲ್ಲಿ ಕುವೆಂಪುರವರು ಬಳಸಿದ ಮಾತಿನ ಧಾಟಿಯೇ ಓದುಗರನ್ನು ಸೆಳೆಯುತ್ತದೆ. ಇದೇ ರೀತಿ 'ಹಾಸ್ಯದ ಚಟಾಕಿ'ಯಲ್ಲಿ ಪ್ರಾರಂಭವಾಗುವ ಸರಳ, ಸುಲಭ ಭಾಷಾ ಶೈಲಿಯೇ ವಾಚಕರ ತಾದಾತ್ಮ್ಯವನ್ನು ಸಾಧಿಸುತ್ತದೆ.

> "ನಮ್ಮ ಮನೆಯ ಮಹಡಿಯ ಮೇಲೆ ಮಲಗಿದ್ದೆವು. ನಾವು ಎದ್ದಾಗ ಆರು ಗಂಟೆಯಾಗಿತ್ತು. ಮೂಡಲಿನಲ್ಲಿ ಮುದ್ದು ಬಿಸಿಲಿನ ಚಲುಮೆ ಚಿಮ್ಮುವಂತಿತ್ತು. ನಾನು ಹೇಳಿದುದರ ಅರ್ಥ ನಿಮಗೆ ಚೆನ್ನಾಗಿ ತಿಳಿಯಬೇಕಾದರೆ ಚಿತ್ರ ಕಣ್ಣಿಗೆ ಕಟ್ಟಿ ನಿಲ್ಲಬೇಕಾದರೆ, ಇನ್ನೆರಡು ಮಾತುಗಳನ್ನು ಹೆಚ್ಚಾಗಿ ಹೇಳಿಬಿಡುತ್ತೇನೆ. ಚೆನ್ನಾಗಿ ಕಿವಿಗೊಟ್ಟು ಕೇಳಿಬಿಡಿ, ನಾನು ನಿಮ್ಮ ಕಣ್ಣಿಗೆ ಕಟ್ಟುವ ಚಿತ್ರವನ್ನು ಮಾತ್ರ ಮರೆಯಬಾರದು. ಏಕೆಂದರೆ, ನಾನು ಇನ್ನು ಮುಂದೆ ನಿಮ್ಮೊಡನೆ ಮಲೆನಾಡನ್ನು ಕುರಿತು ಆಡುವ ಹರಟೆಗಳಿಗೆಲ್ಲ ಇದು ನಕಾಶೆಯಾಗಬಹುದು. ಮಲೆನಾಡೆಲ್ಲಿ ನನ್ನದೇ; ಆದರೆ ಮಲೆನಾಡಿಗೆ ಮೊದಲು ಮನೆ ನನ್ನದಷ್ಟೆ ? ನಾನು ಹರಟುವ ವಿಷಯಗಳಿಗೆಲ್ಲ ನಮ್ಮ ಮನೆ ಕೇಂದ್ರಸ್ಥಾನವಾಗಿ ಬಿಡಬಹುದು. ಆದ್ದರಿಂದ ಕಿವಿಗೊಟ್ಟು ಕೇಳಿ ಕಣ್ಣಿಟ್ಟು ನೋಡಿ "[೨].

ಇಲ್ಲಿಯ ಕೊನೆಯ ವಾಕ್ಯ ಗಮನಾರ್ಹ. ಇದು ಎಲ್ಲ ಚಿತ್ರಗಳಿಗೂ ಅನ್ವಯಿಸುತ್ತದೆ. ಕಿವಿ, ಕಣ್ಣು ಸದಾ ಜಾಗೃತವಾಗಿರಬೇಕು. ಅವೆರಡೂ ಏಕ ಕಾಲದಲ್ಲಿ ಕ್ರಿಯಾಶೀಲವಾಗಿರ

ಬೇಕು. ಅಂದರೆ ಕೇಳುವಿಕೆಯೇ ನೋಡುವಿಕೆಯಾಗಬೇಕು. ಈ ಚಿತ್ರಗಳಲ್ಲಿ ಪ್ರಬಂಧಕಾರನ ಆತ್ಮೀಯತೆ, ಅನುಭವ ಸಾಂದ್ರತೆಯ ಜೊತೆಗೆ ಯಾವ ರೀತಿಯ ಸಂಕೋಚವಾಗಲಿ, ಕಟ್ಟುಪಾಡುಗಳಾಗಲಿ ಇರುವುದಿಲ್ಲ. ಹೀಗಾಗಿ ಇವು ನಮಗೆ ತುಂಬ ರುಚಿಸುತ್ತವೆ. ಪ್ರಬಂಧಕಾರರು ಓದುಗರೊಂದಿಗೆ ನೇರ ಸಂಭಾಷಣೆಯನ್ನೇ ಮಾಡುತ್ತಾರೆ. ನಾನೊಬ್ಬ ದೊಡ್ಡ ಹರಟೆಗಾರನೆಂದು ಮೊದಲೇ ಓದುಗರಿಗೆ ತಿಳಿಸಿ ಹರಟೆಯ ಲಕ್ಷಣವನ್ನು ಓದುಗರಿಗೆ ಸಲುಗೆಯಿಂದಲೇ ತಿಳಿಸುತ್ತಾರೆ.

> ''ನಾನು ಏನನ್ನೋ ಹೇಳಲು ಹೋಗಿ ಇನ್ನೇನನ್ನೋ ಹರಟುತ್ತಾ ಕುಳಿತುಬಿಟ್ಟೆ. ಹರಟೆಯ ಹಣೆಯ ಬರಹವೇ ಹೀಗೆ. ತುದಿಯಿಲ್ಲ, ಬುಡವಿಲ್ಲ; ಗೊತ್ತಿಲ್ಲ, ಗುರಿಯಿಲ್ಲ. ಜಗತ್ತಿನಲ್ಲಿ ದೇವರಿಗೆ ಸರಿಸಮಾನವಾಗಿರುವುದೆಂದರೆ ಹರಟೆಯೊಂದೇ ! ಹರಟೆಯೆಂದರೆ ಬೇಜಾರಿಗೆ ಭೇಷಜವಿದ್ದ ಹಾಗೆ. ಪೂರ್ವಾನುಭವಗಳೆಂಬ ಸ್ವಪ್ನಾರಣ್ಯದಲ್ಲಿ ಪೋಲಿ ಪೋಲಿಯಾಗಿ ಅಲೆಯುವುದೇ ಹರಟೆ ''[3]

ಹೀಗೆ ಪ್ರಬಂಧಗಳ ನಡುವೆಯೇ ಹರಟೆಯನ್ನು ಕುರಿತು ವ್ಯಾಖ್ಯಾನ ಮಾಡುವ ವಿಶಿಷ್ಟ ಕಲೆ ಕುವೆಂಪುರವರ ಸಾಹಿತ್ಯದಲ್ಲಿ ಕಾಣಬಹುದು.

ಹಾಸ್ಯ ಇಲ್ಲಿಯ ಚಿತ್ರಗಳ ಪ್ರಧಾನ ಲಕ್ಷಣ. ಓದುಗರನ್ನು ತನ್ನೆಡೆಗೆ ಸೆಳೆಯಲು ಇದು ಅವಶ್ಯಕ ಕೂಡ. ' ಅಜ್ಜಯ್ಯನ ಅಭ್ಯಂಜನ ', 'ಕತೆಗಾರ ಮಂಜಣ್ಣ ' 'ರಾಮರಾವಣರ ಯುದ್ಧ ' ಇವುಗಳನ್ನೆಲ್ಲಾ ಹಾಸ್ಯದ ಚಿಲುಮೆಗಳೆಂದೇ ಹೇಳಬಹುದು. ''ನಮ್ಮ ಮನೆಯಲ್ಲಿ ಸ್ನಾನದ ಇಲಾಖೆಯೇ ಪ್ರತ್ಯೇಕವಾಗಿತ್ತು. ಯಾರಿಗೋ ಸಂಬಳ ಕೊಡಬೇಕೆಂದು ಇಲಾಖೆ ನಿರ್ಮಿತವಾಗಿರಲಿಲ್ಲ ''[4] ಎನ್ನುವಾಗ ವ್ಯವಹಾರ ಲೋಕದ ಕಟುಸತ್ಯವನ್ನು ಹಾಸ್ಯದ ಮೂಲಕ ಚಿಮ್ಮಿಸಿರುವುದನ್ನು ಗುರುತಿಸಬಹುದು. ಹಾಗೆಯೇ ''ಮೂರ್ತಿ, ನಮ್ಮ ಕಾಡಿನ ಸೊಬಗು ಸವಿಯಲು ಬಂದಿದ್ದರು. ಸೊಬಗನ್ನು ಸವಿದರೋ ಬಿಟ್ಟರೋ ಹೇಳಲಾರೆ, ಮಲೇರಿಯಾ ಜ್ವರವನ್ನೇನೋ ಸ್ವಲ್ಪ ಮಟ್ಟಿಗೆ ಸವಿದರು ''[5] ಎಂಬಲ್ಲಿ ಮಲೆನಾಡಿನಲ್ಲಿ ಜನರನ್ನು ಕಾಡುತ್ತಿದ್ದ ಮಲೇರಿಯಾ ರೋಗದ ಭೀಕರತೆ ವ್ಯಕ್ತವಾಗುತ್ತಿದ್ದರೂ ಅದನ್ನು ಹಾಸ್ಯಮಯವಾಗಿ ಹೇಳಲಾಗಿದೆ. ಅದೇ ರೀತಿ 'ರಾಮ ರಾವಣರ ಯುದ್ಧ ' ದಲ್ಲಿ ಬರುವ ಭೀಮನ ಪಾತ್ರ, ಎಂತಹ ಗಂಭೀರ ವ್ಯಕ್ತಿತ್ವ ವುಳ್ಳವರಿಗಾದರೂ ನಗು

ತರಿಸುವಂತಹದ್ದನ್ನು ಕಾಣಬಹುದು. ಇಡೀ ಪ್ರಬಂಧವೇ ಹಾಸ್ಯ, ಕಟಕಿ, ವಿಡಂಬನೆಯ ಪಾಕ ಸಾಮಗ್ರಿಯೇ ಹೊರತು ಕತೆಯಲ್ಲ ; ಕತೆಗಾಗಿ ಅದನ್ನು ಯಾರೂ ಓದುವುದಿಲ್ಲ. ರಸವತ್ತಾದ ಹಾಸ್ಯ ಶೈಲಿಗೆ ಅದೊಂದು ಉತ್ತಮ ನಿದರ್ಶನವಾಗಿದೆ.

'ಮಲೆನಾಡಿನ ಚಿತ್ರಗಳು ' ಕುವೆಂಪು ಅವರ ಸಾಹಿತ್ಯ ಕೃಷಿಯ ಪ್ರಾರಂಭದ ಹಂತವಾದರೂ ಅಲ್ಲಿ ಶುದ್ಧ ಸರಳ, ಸಹಜ, ಸುಂದರ ಶೈಲಿಯನ್ನು ಕಾಣಬಹುದು. ಈ ಪ್ರಬಂಧ ಸಂಕಲನಕ್ಕೆ ಅವರು ಬರೆದ ಮುನ್ನುಡಿಯೇ ಒಂದು ಉತ್ತಮ ಪ್ರಬಂಧವಾಗಿದೆ ಎನ್ನಬಹುದು. ಈ ಚಿತ್ರಗಳು ಕುವೆಂಪು ಅವರು ಜೀವನದಲ್ಲಿ ಕಂಡುಂಡ ಮತ್ತು ಕೇಳರಿಯದ ಬದುಕಿನ ನೆನಪಿನ ಬುತ್ತಿಗಳು. ಈ ಬುತ್ತಿ ಗಂಟುಬಿಚ್ಚಿ ಕುವೆಂಪುರವರು ಆಗಾಗ ತಾವೇ ಸವಿದು ಆನಂದಪಟ್ಟಿದ್ದಾರೆ. ನಮಗೂ ಬುತ್ತಿಯನ್ನು ಉಣಬಡಿಸಿ ತಣಿಸಿದ್ದಾರೆ. ಇವುಗಳಲ್ಲಿ ಕೆಲವು ಸುಖದ ಚಿತ್ರಗಳು, ಕೆಲವು ಕಷ್ಟದ ಚಿತ್ರಗಳು. ಕಷ್ಟದ ಚಿತ್ರಗಳೂ ಕೂಡ ಕಾಲ ಕಳೆದಂತೆ ಸುಖದಾಯಕವಾಗಿಯೇ ಪರಿಣಮಿಸುತ್ತವೆ ಎಂಬುದು ಅನುಭವದ ಸತ್ಯ. ಹೀಗಾಗಿ ಇವೂ ಆಸ್ವಾದ್ಯವಮಾನವಾಗುತ್ತವೆ. ಈ ದೃಶ್ಯಗಳು ಚೇತೋಹಾರಿಗಳಾಗಿವೆ. ಹೀಗೆಂದು ಹೇಳಿದ ಅವರು ನಮ್ಮನ್ನು ಪ್ರಕೃತಿಯ ಸಿರಿಬೀಡಿನಂತಿರುವ ತಮ್ಮ ಮನೆಯ ಸಮೀಪದ ನವಿಲು ಕಲ್ಲಿಗೋ ಕವಿಶೈಲಕ್ಕೋ ಕರೆದೊಯ್ಯುತ್ತಾರೆ. ಆ ಪ್ರಕೃತಿ ಸೌಂದರ್ಯದ ರಸಧಾಮಗಳಲ್ಲಿ ನಮ್ಮನ್ನು ಅಲೆಯಿಸುತ್ತಾರೆ. ನಮಗೆ ಅಲೌಖಿಕವಾಗಿ ಅನುಭವಗಳನ್ನು ಒದಗಿಸಿಕೊಡುತ್ತಾರೆ. ಯಾರಿಗಾದರೂ ಈ ಆನಂದಧಾಮದಲ್ಲಿ ಒಂದುವಿಧವಾದ ಧಾರ್ಮಿಕತೆ ಸ್ಫುಟವಾಗಿ ಅನುಭವ ವೇದ್ಯವಾಗುತ್ತದೆ. ಮಾತಿಗೆ ನಿಲುಕದ ಅನುಭವ ನಿಮಗೆ ಆಗುವುದರಿಂದ ಅದು ವರ್ಣನಾನೀತ ಎಂದು ಕುವೆಂಪು ಅಭಿಪ್ರಾಯಪಡುತ್ತಾರೆ. ನವಿಲು ಕಲ್ಲಿನಲ್ಲಿ ಕಂಡ ಸೂರ್ಯೋದಯ ಅಂತಹ ಒಂದು ಚಿತ್ರ. ಮಾನವ ನಿರ್ಮಿತ ದೇವಾಲಯಗಳಲ್ಲಿ ಆಗುವ ಭಗವದ್ದರ್ಶನಕ್ಕಿಂತ ಬೇರೆಯಾದ ಅಪೂರ್ವದರ್ಶನದ ಅನುಭವ ವಿಶೇಷ ಈ ಪ್ರಕೃತಿ ಸೌಂದರ್ಯದ ರಮ್ಯಧಾಮಗಳಲ್ಲಿ ಹೃದ್ಗೋಚರವಾಗುವುದೆಂದು ಕವಿಯ ಖಚಿತವಾದ ಅಭಿಪ್ರಾಯವಾಗಿದೆ. ಒಬ್ಬ ಶ್ರೇಷ್ಠ ಸಾಹಿತಿಯಿಂದ ಮಾತ್ರ ಹೀಗೆ ಬರೆಯಲು ಸಾಧ್ಯ ಎನ್ನಬಹುದು. ಓದುಗ ಕೃತಿಪ್ರವೇಶಿಸುವ ಮೊದಲು ಆತನನ್ನು ಹೇಗೆ ಸಿದ್ಧಗೊಳಿಸಬೇಕು ಎಂಬುದು ಕುವೆಂಪು ಅವರಿಗೆ ತಿಳಿದಿತ್ತೆನ್ನಬಹುದು. ಆದ್ದರಿಂದಲೇ ಅವರು ಚಿತ್ರಗಳನ್ನು

ವಿವರಿಸುವ ಮೊದಲು ಇಷ್ಟು ದೀರ್ಘವಾದ ಮುನ್ನುಡಿ ಬರೆದು ಮುಂದಿನ ಪ್ರಬಂಧಗಳನ್ನು ಕುರಿತು ಅರ್ಥವತ್ತಾದ ಹಿನ್ನೆಲೆಯನ್ನು ಓದುಗನಿಗೆ ದೊರಕಿಸಿಕೊಟ್ಟಿದ್ದಾರೆ. ನಂತರ 'ಮಲೆನಾಡಿಗೆ ಬಾ ' ಕವನ ಓದುಗನನ್ನು ಮಲೆನಾಡಿಗೆ ಕರೆದೊಯ್ಯುತ್ತದೆ. ಮುಂದೆ ನಮಗೆ ತಿಳಿದೇ ಇದೆ, ಹೇಗೆ ತಮ್ಮ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಾರೆಂಬುದು. ಇಂತಹ ಕೃತಿಗಳನ್ನು ಓದಿದಾಗ ಎಲ್ಲರೂ ತಮ್ಮ ತಮ್ಮ ಪರಿಸರವನ್ನು ಕ್ಷಣಕಾಲ ಮರೆತು, ಈ ಪರಿವೇಷವನ್ನು ತೆಗೆದಿಟ್ಟು , ಅಲ್ಲಿಯ ವ್ಯಕ್ತಿಗಳಾಗಿ ಬಾಳಿ ಆ ಜೀವನವನ್ನು ಬದುಕಿ ಬರುತ್ತಾರೆ ಎನ್ನಬಹುದು.

'ಮಲೆನಾಡಿನ ಚಿತ್ರಗಳಲ್ಲಿ ' ಕುವೆಂಪು ಬಳಸಿದ ಭಾಷೆಯ ಬಗೆಗೆ ಹೇಳಬೇಕೆಂದರೆ ಇದು ಪ್ರಬಂಧವಾದರೂ ಅನೇಕ ಕಡೆ ಲೇಖಕರ ಕವಿ ವ್ಯಕ್ತಿತ್ವ ಕಾಣಿಸಿಕೊಂಡಿರುವುದನ್ನು ಗಮನಿಸಬಹುದು. ಮಲೆನಾಡಿನ ಪ್ರಕೃತಿ ವರ್ಣನೆ ಆಗಿರಬಹುದು. ಸೂರ್ಯೋದಯ, ಚಂದ್ರೋದಯದ ವರ್ಣನೆ ಆಗಿರಬಹುದು. ಕಾಡಿನ ದಟ್ಟಣೆಯಾಗಿರಬಹುದು, ಇಲ್ಲೆಲ್ಲಾ ಅವರ ಕವಿತಾ ಶಕ್ತಿಯನ್ನು ಗುರುತಿಸಬಹುದು. ''ತಳತಳಿಸುವ ಮಿಂಚಿನ ವಕ್ರ ರೇಖೆಯಂತೆ ಹೊರಮೂಡಿದ ದಿನೇಶನು ನೋಡೆ ನೋಡೆ ಕುಂಕುಮದಲ್ಲಿ ಮಿಂದು ಮಿಂಚಿನುಂಡೆಯಾದವನು ! ಆತನ ಪೂರ್ಣಬಿಂಬದಿಂದ ಸೂಸಿದ ಪ್ರಭಾವಕಾಂತಿ ಪರ್ವತ ಶೃಂಗಗಳ ಮೇಲೆಯೂ ಮಂಜಿನ ಸಮುದ್ರದ ಮೇಲೆಯೂ ಬಿದ್ದು ಮನೋಹರವಾಯಿತು. ತಂಗಾಳಿಯೂ ಹಕ್ಕಿಗಳ ಗಾನವೂ ಸೊಬಗಿನ ಸಂಭ್ರಮದಲ್ಲಿ ಭಾಗಿಗಳಾದುವು. ರವಿಕಿರಣಗಳ ಉಷ್ಣಸ್ಪರ್ಶದಿಂದ ನಿದ್ದೆ ತಿಳಿದು ಎಚ್ಚೆತ್ತ ಮಂಜು, ಮುಗಿಲು ಮುಗಿಲಾಗಿ ಗಗನದೆಡೆಗೆ ಒಯ್ಯನೊಯ್ಯನೆ ಏರಲಾರಂಭಿಸಿತು ''[1] ಇಂತಹ ಸಾಕಷ್ಟು ವರ್ಣನೆಗಳು ಪ್ರಬಂಧಗಳುದ್ದಕ್ಕೂ ಬಂದಿರುವುದನ್ನು ಗಮನಿಸಬಹುದು. 'ಕಾಡಿನಲ್ಲಿ ಕಳೆದ ಒಂದಿರುಳು ' ಪ್ರಬಂಧದ ಕೊನೆಯಲ್ಲಿ ಅವರೇ ಹೇಳಿದ್ದಾರೆ ''ಬೇಟೆಗಾರರಾಗಿ ಬನಕೆ ಹೋದವರು ಕಬ್ಬಿಗರಾಗಿ ಮನೆಗೆ ಬಂದೆವು ''[2] ಎಂದು. ಅವರ ಗದ್ಯ ಬರಹಗಳೆಲ್ಲ , ಅದರಲ್ಲೂ ಕಥನ ಬರಹಗಳೆಲ್ಲವೂ ಪರಿಸರ ಭಾಷೆಯ ನೆಲೆಯಲ್ಲಿ ರೂಪುಗೊಂಡಿವೆ ಎನ್ನಬಹುದು. ಇಲ್ಲಿ ಪರಸ್ಪರ ಪಾತ್ರಗಳು ಸಂವಾದಿಸುವುದು ವಿರಳ. ಹೆಚ್ಚಿನವೆಲ್ಲವೂ ಕುವೆಂಪು ಅವರೇ ನಿರೂಪಿಸಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಇಲ್ಲಿನ ಚಿತ್ರಗಳೆಲ್ಲಾ ಅವರ ಅನುಭವಗಳೇ ಆಗಿರುವುದು.

ಇನ್ನು ವಸ್ತುವಿಗೆ ಸಂಬಂಧಿಸಿದಂತೆ ಇಲ್ಲಿರುವ ಚಿತ್ರಗಳಲ್ಲಿ ಬಹುಪಾಲು ಬೇಟೆಯನ್ನು ಕುರಿತಂಥವು. ಈ ಬೇಟೆಯ ಸನ್ನಿವೇಶವನ್ನು ವರ್ಣಿಸುವಾಗ ಕುವೆಂಪು ತೋರ್ಪಡಿಸಿರುವ ಕಲೆಯ ಸೂಕ್ಷ್ಮತೆ ಗಮನಾರ್ಹವಾದದ್ದು. 'ಹಾಸ್ಯದ ಚಟಾಕಿ ', 'ಕಾಡಿನಲ್ಲಿ ಕಳೆದ ಒಂದಿರುಳು ', 'ಬಂದನಾ ಹುಲಿರಾಯನು ', 'ಪುಟ್ಟಾಚಾರಿಯ ಕಾಡುಕೋಳಿ ' 'ಜೇನುಬೇಟೆ ' ಈ ಎಲ್ಲಾ ಪ್ರಬಂಧಗಳ ವಸ್ತು ಬೇಟೆಯಾದರೂ ಇದರೊಂದಿಗೆ ವ್ಯಕ್ತಿ ಚಿತ್ರಗಳನ್ನು, ಜೀವನ ಕ್ರಮವನ್ನು ಕಾಣಬಹುದು. ಇನ್ನುಳಿದ ಚಿತ್ರಗಳಲ್ಲಿ ಬಾಲ್ಯವನ್ನು ಕುರಿತ ಅನುಭವ, ಅಭ್ಯಂಜನದಂತಹ ಆಚರಣೆ, 'ತೋಟದಾಚೆಯ ಭೂತ ' ಚಿತ್ರದಲ್ಲಿ ಮಲೆನಾಡಿನಲ್ಲಿದ್ದ ನಂಬಿಕೆ, ಶಿಕ್ಷಣ ಕ್ರಮ, ಗೋಪಾಲಕರ ಜೀವನ, ಮಾನವೀಯ ಮೌಲ್ಯಗಳು ಇಂತಹ ಅನೇಕ ವಸ್ತುಗಳನ್ನೊಳಗೊಂಡಂತೆ ಈ ಕೃತಿಯನ್ನು ಅರ್ಥೈಸಿಕೊಳ್ಳಬಹುದು. ಮಾತಿನ ಚಾಣಾಕ್ಷತೆಯೊಂದಿಗೆ ಲಾಲಿತ್ಯಪೂರ್ಣವಾಗಿ, ನುಡಿಚಿತ್ರಗಳಾಗಿ ಮೂಡಿಬಂದಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಒಬ್ಬ ಸಾಹಿತಿಯ ಯಶಸ್ಸು ಆತನ ಸೂಕ್ಷ್ಮ ಸಂವೇದನೆ ಹಾಗೂ ಅದರ ಅಭಿವ್ಯಕ್ತಿಯನ್ನು ಅವಲಂಬಿಸಿರುತ್ತದೆ. ಶ್ರೇಷ್ಠ ಸಾಹಿತಿಯ ಚಿತ್ರ ಅಥವಾ ವರ್ಣನೆಗಳು ನಮ್ಮ ಕಣ್ಮುಂದೆ ನಡೆಯುತ್ತಿವೆಯೋ ಎಂದೆನಿಸುವಂತಿರುತ್ತದೆ. ತಮ್ಮ ಅನುಭವಗಳನ್ನು ಸಹಜವಾದ, ಆಡಂಬರವಿಲ್ಲದ ಭಾಷಾತಂತ್ರದ ಮೂಲಕ ನಿರೂಪಿಸಿ ಓದುಗರನ್ನು ಆಕರ್ಷಿಸಬೇಕಾಗುತ್ತದೆ. ಇಂತಹ ಭಾಷಾತಂತ್ರ ನಿರೂಪಣಾ ಶೈಲಿಯನ್ನು ಕುವೆಂಪು ಅವರಲ್ಲಿ ಕಾಣಬಹುದಾಗಿದೆ.

ಅಡಿ ಟಿಪ್ಪಣಿಗಳು :

೧. ಕುವೆಂಪು, ಮಲೆನಾಡಿನ ಚಿತ್ರಗಳು, ಮುನ್ನುಡಿ, ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೩.

೨. ಕುವೆಂಪು ಮಲೆನಾಡಿನ ಚಿತ್ರಗಳು-ಹಾಸ್ಯದ ಚಟಾಕಿ, ಉದಯರವಿ ಪ್ರಕಾಶನ, ಮೈಸೂರು, ೨೦೦೬,ಪುಟ-೧೦.

೩. ಕುವೆಂಪು ಮಲೆನಾಡಿನ ಚಿತ್ರಗಳು-ಹಾಸ್ಯದ ಚಟಾಕಿ, ಉದಯರವಿ ಪ್ರಕಾಶನ, ಮೈಸೂರು, ೨೦೦೬,ಪುಟ-೧೨.

೪. ಕುವೆಂಪು ಮಲೆನಾಡಿನ ಚಿತ್ರಗಳು-ಅಜ್ಜಯ್ಯನ ಅಭ್ಯಂಜನ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೩೪.

೫. ಕುವೆಂಪು ಮಲೆನಾಡಿನ ಚಿತ್ರಗಳು-ಹಾಸ್ಯದ ಚಟಾಕಿ,ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೧೫.

೬. ಕುವೆಂಪು ಮಲೆನಾಡಿನ ಚಿತ್ರಗಳು-ಮುನ್ನುಡಿ, ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೭.

೭. ಕುವೆಂಪು ಮಲೆನಾಡಿನ ಚಿತ್ರಗಳು-ಕಾಡಿನಲಿ ಕಳೆದ ಒಂದಿರುಳು
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೩೧.

ಅಧ್ಯಾಯ -೩

ಕುವೆಂಪು ಅವರು ಚಿತ್ರಿಸಿದ ಬೇಟೆಯ ಚಿತ್ರಗಳು

ಬೇಟೆಯನ್ನು ಕುರಿತಂತೆ ಅನೇಕ ಕೃತಿಗಳು, ವಿವರಗಳು ನಮ್ಮ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಬಂದಿವೆ. ಏಕೆಂದರೆ ಬೇಟೆ ಎನ್ನುವುದು ನಮ್ಮ ಆದಿಮಾನವ ಕಾಲದಿಂದಲೂ ಬದುಕಿಗಾಗಿ, ಹವ್ಯಾಸಕ್ಕಾಗಿ ಮಾಡಿಕೊಂಡು ಬಂದಿರುವಂತಹದ್ದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಕೃತಿಗಳು ಬೇಟೆಯ ಚಿತ್ರಣ ನೀಡುವ ಅಪರೂಪದ ಕೃತಿಗಳು. ಇವರ ಕಥನ ಸಾಹಿತ್ಯಕ್ಕೆಲ್ಲಾ ರಂಗಭೂಮಿಯಾದ ಮಲೆನಾಡಿನಲ್ಲಿ ಕುವೆಂಪು ಕಾಲಕ್ಕಾಗಲೇ ಬೇಟೆಯು ಬದುಕಿನ ಕೊನೆಯ ಅವಸ್ಥೆಯಲ್ಲಿದ್ದಂತೆ ತೋರುತ್ತದೆ. ಏಕೆಂದರೆ ಅದೇ ಶತಮಾನದ ಕೊನೆಗಾಗಲೇ ಬೇಟೆ, ಕಾಡು ಎಲ್ಲವೂ ಗಣನೀಯವಾಗಿ ವಿನಾಶದ ಅಂಚಿನಲ್ಲಿರುವುದು ಕಂಡುಬರುತ್ತದೆ. ಹಿಂದಿನಿಂದ ಹೇಗೋ ಉಳಿದುಕೊಂಡು ಬಂದ ಕೆಲವು ಬೇಟೆಯ ತಂತ್ರ-ವಿವರಗಳ ಜೊತೆಗೆ, ಹಿಂದಿನ ತಲೆಮಾರಿನ ಹಿರಿಯರಿಂದ ಕೇಳಿ ತಿಳಿದು ಸೂಕ್ಷ್ಮವಾಗಿ ಕುವೆಂಪು ಅವರು ಗ್ರಹಿಸಿ ತಮ್ಮ ಕೃತಿಗಳಲ್ಲಿ ಕಲಾತ್ಮಕವಾಗಿ ದಾಖಲಿಸಿರುವುದು ಅವುಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಮಲೆನಾಡಿನಲ್ಲಿ ಅಂದು ಕಾಡು ಭೀಕರವಾಗಿ ಬಲಿಷ್ಠವಾಗಿ ಅಬೇಧ್ಯವಾಗಿತ್ತು. ಅಪಾರ ಸಂಖ್ಯೆಯ ಗಿಡಮರ, ಬಳ್ಳಿಗಳಿಂದ ನಿತ್ಯ ಹಸಿರಾಗಿ ಕಣ್ಮನ ಸೆಳೆಯುತ್ತಿತ್ತು. ನೋಡಿದತ್ತ ಗಿರಿಮಾಲೆಗಳು ಮೈದುಂಬಿ ನಿಂತಿರುತ್ತಿದ್ದವು. ನದಿ, ತೊರೆ, ಜಲಪಾತಗಳು, ಬಳುಕುತ್ತ ಸಾಗುತ್ತಿದ್ದವು. ಕಾಡಿನ ಒಳಗೆ ನಾನಾ ತೆರನಾದ ಪ್ರಾಣಿಗಳು, ಪಕ್ಷಿಗಳು, ಹುಳುಗಳು, ಕೀಟಗಳು ತಮ್ಮ ಗುಣ ಸ್ವಭಾವದೊಂದಿಗೆ ಸ್ವಾಭಾವಿಕ ಬದುಕಿನಲ್ಲಿ ತತ್ಪರವಾಗಿದ್ದವು. ಕ್ರೂರವಾದ ಹುಲಿ, ಚಿರತೆ, ಕರಡಿಗಳೂ, ಸೌಮ್ಯ ಸ್ವಭಾವದ ಮೊಲ, ಬರ್ಕ, ಜಿಂಕೆಗಳೂ ಹೆಸರಿಸಲಾರದಷ್ಟು ಅಸಂಖ್ಯವಾಗಿದ್ದವು ! ಕಾಡು ಹಸಿರಿನಿಂದ, ಪ್ರಾಣಿಗಳ ಘರ್ಜನೆ, ಕೂಗುಗಳಿಂದ, ಹಕ್ಕಿಗಳ ಚಿಲಿಪಿಲಿಯಿಂದ ತುಂಬಿಕೊಂಡಿತ್ತು. ಇಂತಹ ಕಡೆ ಆ ಕಾಲಕ್ಕೆ ಬೇಟೆ ಕೂಡ ಸಹಜವೆನಿಸಿತ್ತು.

ಬೇಟೆ ಆಯಾ ಪ್ರದೇಶಕ್ಕೆ ತಕ್ಕಂತೆ ಬೇರೆ ಬೇರೆ ರೀತಿ ಇರುವಂತಹದ್ದು. ಅದರಲ್ಲಿ

ಮಲೆನಾಡಿನ ಬೇಟೆಯ ಅನುಭವ ವಿಶಿಷ್ಟವಾದದ್ದು. ಕುವೆಂಪು ಅವರು ಅನುಭವಿಸಿದ್ದ ಅನುಭವಗಳಲ್ಲಿ ತುಂಬಾ ಸ್ವಾರಸ್ಯಕರವಾದದ್ದು, ರೋಮಾಂಚನಕಾರಿಯಾದದ್ದು ಈ ಬೇಟೆಯ ಚಿತ್ರಗಳು. ಕುವೆಂಪು ಅವರಲ್ಲದೆ ಅನೇಕರು ಇಲ್ಲಿನ ಬೇಟೆಯ ಚಿತ್ರಗಳನ್ನು ತಮ್ಮ ಸಾಹಿತ್ಯದಲ್ಲಿ ವರ್ಣಿಸಿದ್ದಾರೆ. ಉದಾಹರಣೆಗೆ ಕಡಿದಾಳು ರಾಮಪ್ಪಗವಡರು 'ಮಲೆನಾಡಿನ ಶಿಕಾರಿಯ ನೆನಪುಗಳು' ಎಂಬ ಕೃತಿಯಲ್ಲಿ ಶಿಕಾರಿಯ ನಿಯಮಗಳನ್ನು ತಮ್ಮ ಅನುಭವಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಹೇಳಿದ್ದಾರೆ. ಕುವೆಂಪು ಅವರ 'ಮಲೆನಾಡಿನ ಚಿತ್ರಗಳು ' ಪ್ರಬಂಧ ಸಂಕಲನದಲ್ಲೂ ಇಂತಹ ಅನೇಕ ಬೇಟೆ ಪ್ರಸಂಗಗಳನ್ನು ಕುರಿತು ಚಿತ್ರಿಸಿರುವುದನ್ನು ಕಾಣಬಹುದು. ಅವರ ವರ್ಣನೆಯನ್ನು ವಿಶ್ಲೇಷಿಸುವ ಮೊದಲು ಮಲೆನಾಡಿನ ಬೇಟೆಯ ನಿಯಮಗಳನ್ನು ತಿಳಿಯುವುದು ಅವಶ್ಯಕ. ಕುವೆಂಪು ಅವರೇ ಅಲ್ಲಲ್ಲಿ ಬೇಟೆಯನ್ನು ಕುರಿತು ಹೇಳುವಾಗ ತಿಳಿಸಿದ್ದಾರೆ. ಆದರೂ ಇನ್ನೊಮ್ಮೆ ಸಂಕ್ಷಿಪ್ತವಾಗಿ ಯಾದರೂ ತಿಳಿದುಕೊಳ್ಳೋದು ಅಗತ್ಯ ಎನಿಸುತ್ತದೆ.

ಬೇಟೆ ಅಥವಾ ಶಿಕಾರಿ ಎಂದರೆ ಸಾಹಸ. ಪ್ರದರ್ಶನದ ರಸ ನಿಮಿಷಗಳೊಂದಿಗೆ ಕಾಡು ಪ್ರಾಣಿಗಳನ್ನು ಕೊಲ್ಲುವ ಕ್ರಮ. ಶಿಕಾರಿಯು ಹಳ್ಳಿಯ ಜನರ ಹವ್ಯಾಸವೂ ಹೌದು, ಜೊತೆಗೆ ಅಂದಿನ ದಿನಗಳಲ್ಲಿ ಮಲೆನಾಡಿನಲ್ಲಿ ಬೆಳೆಯುತ್ತಿದ್ದ ಭತ್ತ, ಅಡಿಕೆ, ಕಬ್ಬು ಬಾಳೆಯಂತಹ ಬೆಳೆಗಳನ್ನು ಪ್ರಾಣಿಗಳು ಹಾಳು ಮಾಡುತ್ತಿದ್ದವು. ಮನೆಯಲ್ಲಿ ಸಾಕಿದ ಜಾನುವಾರುಗಳು (ಎಮ್ಮೆ-ಹಸುಕರು) ಕೆಲವೊಮ್ಮೆ ನಾಯಿಗಳೂ ಹುಲಿಯ ಪಾಲಾಗುತ್ತಿದ್ದವು. ಇಂತಹ ಸಂದರ್ಭಗಳಲ್ಲೆಲ್ಲಾ ಈ ಪ್ರಾಣಿಗಳ ಹಾವಳಿಯನ್ನು ತಡೆಯಲಾರದೆ ಬೇಟೆಯಾಡಬೇಕಾಗುತ್ತಿತ್ತು. ಅದು ಅನಿವಾರ್ಯವೂ ಆಗಿತ್ತು. ಬೇಟೆ, ಧೈರ್ಯ, ಭಯ, ಸಿಟ್ಟು, ಹಾಸ್ಯ, ಬುದ್ಧಿಕೌಶಲ್ಯಕ್ಕೆ ಅವಕಾಶ ನೀಡುವುದಲ್ಲದೆ ಮಾಂಸದ ಆಸೆಗೂ ಅಲ್ಲಿ ಅವಕಾಶವಿತ್ತು. ಅಂದಿನ ಮಲೆನಾಡಿನಲ್ಲಿ ಅನಕ್ಷರಸ್ಥರೂ, ಬಡವರೂ ಹೆಚ್ಚಾಗಿದ್ದು, ಅವರೇ ಹೆಚ್ಚು ಬೇಟೆಗೆ ಹೋಗುತ್ತಿದ್ದರು. ಆದರೆ, ಅವರಲ್ಲಿ ಆಗ ಬೇಟೆಯ ಸುಂದರ ಕೌತುಕ ಪ್ರಸಂಗಗಳನ್ನು ಸೂಕ್ಷ್ಮ ಘಟನೆಗಳನ್ನು ಆ ರಸ ನಿಮಿಷಗಳನ್ನು ಸಂಗ್ರಹಿಸಬೇಕೆಂಬ ಕಾಳಜಿ ಇರಲಿಲ್ಲ, ಹಾಗಿದ್ದಿದ್ದರೆ ಇನ್ನಷ್ಟು ಸ್ವಾರಸ್ಯಕರವಾದ ಬೇಟೆ ಪ್ರಸಂಗಗಳನ್ನು ಸವಿಯಬಹುದಿತ್ತು.

ಬೇಟೆಯಾಡುವುದು ಅಷ್ಟು ಸುಲಭವಾದದ್ದಲ್ಲ. ಬೇಟೆಗೆ ಹೋಗುವಾಗ ಮುಖ್ಯವಾಗಿ ಕೋವಿ ಅಗತ್ಯ. ಜೊತೆಗೆ ಕತ್ತಿ, ನಾಯಿ, ಬೆಳಕು ಇಂತಹ ಅನೇಕ

ಪರಿಕರಗಳು ಬೇಟೆಗಾರನ ಬಳಿ ಇರಬೇಕಾಗುತ್ತದೆ. ಕೋವಿ ಬೇಟೆಯಲ್ಲಿ ಪ್ರಮುಖ ಆಯುಧವಾಗಿರುವಂತೆ ಅದನ್ನು ಬಳಸುವಲ್ಲಿ ಅನುಸರಿಸಬೇಕಾದ ನಿಯಮಗಳು ಕೆಲವೊಂದಿವೆ. ಒಬ್ಬ ಒಳ್ಳೆಯ ಬೇಟೆಗಾರನಾಗಬೇಕಾದರೆ ಕೋವಿಯನ್ನು ಚಮತ್ಕಾರದಿಂದ ಗುರಿಹಚ್ಚಿ ನಾಗಾಲೋಟದಿಂದ ಬರುತ್ತಿರುವ ಪ್ರಾಣಿಯನ್ನು ಹೊಡೆದರೆ ಆತನಿಗೆ ಒಳ್ಳೆಯ ಈಡುಗಾರನೆಂದು ಕರೆಯುತ್ತಾರೆ. ಪ್ರಾಣಿ ಎಷ್ಟೇ ಜೋರಾಗಿ ಓಡಿಬರಲಿ, ಅವನು ಹೊಡೆದು ಕೆಡವುತ್ತಾನೆ. ಈ ರೀತಿ ಕೋವಿಯನ್ನು ಗುರಿಹಚ್ಚಿ ಹೊಡೆಯುವುದು ಸುಲಭವಲ್ಲ, ಬಹಳ ಅಭ್ಯಾಸ ಮಾಡಬೇಕು. ಕೋವಿಯನ್ನು ಎಡಗೈಯಿಂದ ಹಿಡಿದು ಕುದುರೆಯನ್ನು ಹೆಬ್ಬೆರಳಿನಿಂದ ಎಳೆದು ನಿಲ್ಲಿಸಿ ಹತ್ತೆಯನ್ನು ಬಲಭಾಗದ ಎದೆಗೆ ಒತ್ತಿಕೊಂಡು ಎಡಕಣ್ಣನ್ನು ಮುಚ್ಚಿ ಬಲಗಣ್ಣಿನಿಂದ ಗುರಿ ಹಿಡಿಯಬೇಕು. ಗುರಿ ಹಿಡಿಯುವುದು ಹೇಗೆಂದರೆ, ಕೋವಿ ಮರದ ಹತ್ತೆಗೂ, ನಳಿಗೆಗೂ ಸೇರುವ ಹೆಸರುಕಾಳು ಗಾತ್ರದ ಗುಂಡನ್ನು ಇಟ್ಟು ಬೆಸೆದಿರುತ್ತಾರೆ. ಇದು ಹಿತ್ತಾಳೆಯದು. ಇದಕ್ಕೆ ನಳಮುದ್ರೆ ಎಂದು ಹೆಸರು. ಕೋವಿಯನ್ನು ಎದೆಗೆ ಏರಿಸಿ ಹತ್ತೆ ಸೇರಿಸಿ ಎತ್ತರದ ಭಾಗಕ್ಕೂ, ನಳ ಮುದ್ರೆಗೂ, ಪ್ರಾಣಿಗೂ ಈ ಮೂರಕ್ಕೂ ನೇರ ನೋಡಿ ಬಿಲ್ಲನ್ನು ತೋರು ಬೆರಳಿನಿಂದ ಹಿಂದಕ್ಕೆ ಎಳೆಯಬೇಕು. ಆಗ ಕೋವಿ ಈಡಾಗುತ್ತದೆ, ಗುರಿ ಬೀಳುತ್ತದೆ. ಈಡು ಹೊಡೆಯುವಾಗ ಕೈ ನಡುಗಿದರೆ ಗುರಿ ತಪ್ಪುತ್ತದೆ. ಇದು ನಿಂತ ಪ್ರಾಣಿಗಳಿಗೆ ಹೊಡೆಯುವುದು. ಪ್ರಾಣಿಗಳು ಓಟದಿಂದ ಬರುತ್ತವೆ, ಆಗ ಶಬ್ದದಿಂದಲೇ ಪ್ರಾಣಿಯನ್ನು ತಿಳಿದುಕೊಂಡು ಯಾವ ಕಂಡಿಯಲ್ಲಿ ಪ್ರಾಣಿ ಹಾರುತ್ತದೆ. ಆ ಕಂಡಿಗೆ ಸರಿಯಾಗಿ ನಿಗಾ ಇಟ್ಟುಕೊಂಡು ಬಂದೂಕಿನ ಕುದುರೆಯನ್ನು ಎಳೆಯಲು ಹೆಬ್ಬೆರಳು ಅದರ ಮೇಲೆ ಇಟ್ಟು ಆಟಬಿಲ್ಲಿಗೆ ತೋರು ಬೆರಳನ್ನು ಇಟ್ಟುಕೊಂಡು ಸಿದ್ಧವಾಗಿರಬೇಕು. ಪ್ರಾಣಿ ಹೊರಟ ತಕ್ಷಣ ಕುದುರೆಯನ್ನು ಎಳೆದು ಎದೆಗೆ ಏರಿಸಿ ಗುರಿ ಹಚ್ಚಿ ಹೊಡೆಯಬೇಕು. ಇದು ಬಹಳ ಚಮತ್ಕಾರಯುತವಾದದ್ದು. ಪ್ರಾಣಿ ಏನೆಂಬುದನ್ನು ನೋಡದೆ ಗುರಿ ಹಚ್ಚುವಂತಿಲ್ಲ. ಪ್ರಾಣಿ ನೋಡಿದ ತಕ್ಷಣ ಕೈ, ಕಣ್ಣು ಒಟ್ಟಿಗೆ ಕೆಲಸ ಮಾಡಬೇಕಾಗುತ್ತದೆ. ಪ್ರಾಣಿಯ ಎರಡನೇ ಹಾರಿಕೆಗೆ ಹೊಡೆಯಬೇಕು.ಇಲ್ಲವಾದರೆ ಪ್ರಾಣಿ ಮುಂದಾಗಿ ಈಡು ಹಿಂದಾಗುತ್ತದೆ. ಗುರಿ ತಪ್ಪುತ್ತದೆ. ಇದು ಒಂದೆರಡು ಸೆಕೆಂಡುಗಳಲ್ಲಿ ಮಾಡಬೇಕಾದ ಕೆಲಸ. ಇಂತಹ ಹಾರಿಕೆಗೆ ಈಡು ಹೊಡೆದು ಪ್ರಾಣಿಗಳನ್ನು ಕೆಡಗುವವನಿಗೆ ಒಳ್ಳೆಯ ಈಡುಗಾರನೆಂದು ಕರೆಯುತ್ತಾರೆ.

ಕೋವಿಯಲ್ಲೇ ಬತ್ತಿಕೋವಿ, ಕೇಪಿನ ಕೋವಿ, ತೋಟ ಕೋವಿ ಮೊದಲಾದವನ್ನು ಬೇಟೆಗೆ ಬಳಸುತ್ತಿದ್ದರು. ಬತ್ತಿ ಕೋವಿ ಎಂಬುದು ತೋಟಕೋವಿ ಮತ್ತು ಕೇಪಿನ ಕೋವಿಗಿಂತ ಮೊದಲು ಬಳಸುತ್ತಿದ್ದ ಆಯುಧವಾಗಿದೆ. ಮೊದಲು ಕೇಪುಗಳಿಲ್ಲದಿದ್ದರಿಂದ ಅದಕ್ಕೆ ಬದಲಾಗಿ ಕೇಪನ್ನಿಡುವಲ್ಲಿ ಬತ್ತಿ ಇಟ್ಟು ಅದಕ್ಕೆ ಬೆಂಕಿಹಚ್ಚಿ ಅದು ಮಸಿ ಇರುವ ಜಾಗಕ್ಕೆ ತಾಗಿದಾಗ ಮಸಿಗೆ ಬೆಂಕಿ ಹತ್ತಿ ಕೋವಿ ಈಡಾಗುತ್ತಿತ್ತು. ಮೊದಲು ಈ ಮಸಿ ಕೇಪು, ಗುಂಡು ಇದನ್ನೆಲ್ಲಾ ಹಳ್ಳಿಯಲ್ಲೇ ತಯಾರಿಸುತ್ತಿದ್ದರು. ಆದರೆ ನಂತರ ಅದನ್ನು ತಯಾರಿಸುವ ಕಂಪನಿಗಳು ಪ್ರಾರಂಭವಾದವು. ಮತ್ತೊಂದು ಕೋಪಿನ ಕೋವಿ, ಇದರ ಕುರಿತು ಕುವೆಂಪು ಸಾಹಿತ್ಯದಲ್ಲೇ ಅನೇಕ ಬಾರಿ ಪ್ರಸ್ತಾಪಿಸಿರುವುದನ್ನು ಗುರುತಿಸಬಹುದು. ಇದರಲ್ಲಿ ತೋಟದ ಕೋವಿಯಲ್ಲಿ ಹೊಡೆದಷ್ಟೇ ದೂರದಲ್ಲಿ ಪ್ರಾಣಿಗಳಿಗೆ ಗುರಿ ಹೊಡೆಯಬಹುದು. ಹಾಗೆ ಎಷ್ಟು ದೊಡ್ಡ ಪ್ರಾಣಿಗಳನ್ನು ಬೇಕಾದರೂ ಹೊಡೆಯಬಹುದು. ಆದರೆ ಪ್ರಾಣಿಗಳಿಗೆ ತಕ್ಕಂತೆ ಈಡನ್ನು ಹಾಕಿಕೊಳ್ಳಬೇಕು. ಇದನ್ನು ಯಾವಾಗಲೂ ಸ್ವಲ್ಪ ಬೆಚ್ಚಗಿನ ಸ್ಥಳದಲ್ಲಿಡಬೇಕಾಗುತ್ತದೆ. ಇಲ್ಲದಿದ್ದರೆ ಅದು ಸರಿಯಾಗಿ ಈಡಾಗುವುದಿಲ್ಲ. ಮಲೆನಾಡಿನಲ್ಲಿ ಹೆಚ್ಚಾಗಿ ಈ ಕೇಪಿನ ಕೋವಿಯನ್ನೇ ಬಳಸುತ್ತಿದ್ದರು. ಮಲೆನಾಡಿನಲ್ಲಿ ಬೇಟೆಗೆ ಬಳಸುತ್ತಿದ್ದ ಮತ್ತೊಂದು ಕೋವಿ ತೋಟ ಕೋವಿ. ಇದರಲ್ಲಿ ಚರೆತೋಟ, ಗುಂಡಿನ ತೋಟ ಬಳಸುತ್ತಾರೆ. ಚರೆತೋಟ ಚಿಕ್ಕಪುಟ್ಟ ಪ್ರಾಣಿಪಕ್ಷಿಗಳಿಗೂ ಗುಂಡಿನ ತೋಟ ದೊಡ್ಡ ಪ್ರಾಣಿಗಳ ಶಿಕಾರಿಗೂ ಬಳಸುತ್ತಿದ್ದರು. ಕೇಪಿನ ಕೋವಿ, ತೋಟಾಕೋವಿ ಎರಡರಲ್ಲೂ ಒಂಟಿನಳಿಗೆ, ಜೋಡಿನಳಿಗೆಗಳಿರುತ್ತವೆ. ಕೋವಿಯೊಂದಿಗೆ ಶಿಕಾರಿಗೆ ಹೋಗುವಾಗ ಮಬ್ಬು ಬಣ್ಣದ ಉಡುಪನ್ನು ತೊಟ್ಟು, ದೊಂದಿ, ಕತ್ತಿ, ಕಂಬಳಿ ಹಿಡಿದು ಹೊರಡುತ್ತಾರೆ.

ಬೇಟೆಗೆ ಹೊರಡುವಾಗ ಹೇಗೆ ಸಿದ್ಧರಾಗಬೇಕೆಂಬುದನ್ನು ತಿಳಿದ ನಂತರ ಬೇಟೆ ಯಾಡಿದ ಪ್ರಾಣಿಯನ್ನು ಹಂಚಿಕೊಳ್ಳುವ ಬಗೆಯೂ ಮಲೆನಾಡಿನಲ್ಲಿ ವಿಶೇಷವಾದದ್ದು. ಬೇಟೆಯಲ್ಲಿ ಪ್ರಾಣಿಯನ್ನು ಗುಂಡಿನಿಂದ ಹೊಡೆದು ಕೆಡಗಿದರೆ ಅವನಿಗೆ ಆ ಪ್ರಾಣಿಯ ಹಿಂದಿನ ಒಂದು ಕಾಲು ಜೊತೆಗೆ ಒಟ್ಟು ಮಾಂಸದಲ್ಲಿ ಮೂರನೆಯ ಒಂದು ಭಾಗ ಕೊಡಬೇಕು. ಗ್ರಾಮದ ಪಟೇಲರಿಗೆ ಸ್ವಲ್ಪ ಮಾಂಸ ಕಳಿಸಬೇಕು. ಪ್ರಾಣಿಗೆ ಮೊದಲು ಒಬ್ಬ ಗುಂಡನ್ನು ಹೊಡೆದು ಪೆಟ್ಟುಬಿದ್ದು, ಅದು ಮುಂದೆ ಹೋದಾಗ ಮತ್ತೊಬ್ಬನು ಅದನ್ನು

ಹೊಡೆದು ಕೆಡಗಿದರೆ ಮರಿ ಈಡಿನ ಪಾಲು ಎಂದು ಕೊಡಬೇಕಾಗಿತ್ತು. ಶಿಕಾರಿಗೆ ಬಂದ ನಾಯಿಗಳಿಗೂ ಜನ ಪಾಲಿನಂತೆ ಒಂದು ಪಾಲನ್ನು ಕೊಡುತ್ತಾರೆ. ಅದರಲ್ಲೂ ಹಂದಿ ಶಿಕಾರಿಯಾದರೆ ಅದರ ತಲೆ ನಾಯಿಗಳ ಪಾಲಿಗೆ ಸೇರುತ್ತಿತ್ತು. ಇದರ ಜೊತೆಗೆ ಕೋವಿಗೆ ಒಂದು ಪಾಲು, ಹಳು ಸೋಯುವವರಿಗೆ (ಚಿಕ್ಕಪುಟ್ಟ ಗಿಡಗಳನ್ನು ಕತ್ತಿಯಿಂದ ಕತ್ತರಿಸುವುದು) ಮಾಂಸವನ್ನು ಹಂಚಿದವನಿಗೆ, ಸತ್ತ ಪ್ರಾಣಿಯನ್ನು ಹೊತ್ತು ತಂದವರಿಗೆ ಹೀಗೆ ಒಂದು ಪ್ರಾಣಿಯನ್ನು ಬೇಟೆಯಾಡಿದರೆ ಸಾಕಷ್ಟು ಜನರು ಹಂಚಿ ತಿನ್ನುತ್ತಿದ್ದರು. ಈ ರೀತಿ ಬೇಟೆಯಲ್ಲಿ ವಿಶೇಷವಾದ ವಿಶಿಷ್ಟವಾದ ನಿಯಮಗಳನ್ನು ಗುರುತಿಸಬಹುದು. ಜೊತೆಗೆ ಬೇಟೆಯಲ್ಲಿಯೇ ಅನೇಕ ವಿಧದ ಬೇಟೆಗಳನ್ನು ಕಾಣಬಹುದು. ಅದರಲ್ಲಿ ಕೆಲವೊಂದು ಕ್ರಮಗಳನ್ನು ಕುವೆಂಪು ಅವರು ಪರಿಚಯಿಸಿದ್ದಾರೆ. ಅಂತಹ ಬೇಟೆಯ ಚಿತ್ರಗಳನ್ನು ಅವರ ಪ್ರಬಂಧ ಸಂಕಲನದಲ್ಲೂ ಗುರುತಿಸಬಹುದು. ಕುವೆಂಪು ಅನುಭವದ ಸ್ವಾರಸ್ಯಕರ ಬೇಟೆಯ ಚಿತ್ರಗಳನ್ನು ಅಲ್ಲಿನ ವರ್ಣನೆ, ಕುತೂಹಲವನ್ನು, ಅವರೇ ಹೇಳಿರುವ ಬೇರೆ ಬೇರೆ ಬಗೆಗಿನ ಬೇಟೆಯ ಕ್ರಮಗಳನ್ನು ಈಗ ಒಂದೊಂದಾಗಿ ತಿಳಿದು ಕೊಳ್ಳಲು ಪ್ರಯತ್ನಿಸಬಹುದು. ಕುವೆಂಪು ಅವರು ತಮ್ಮ ಮಲೆನಾಡಿನ ಚಿತ್ರಗಳಲ್ಲಿ ಮರಸು ಬೇಟೆ, ಸಾರಿಕೆ ಬೇಟೆ, ಜೇನುಬೇಟೆ ಇಂತಹ ಕೆಲವೊಂದನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಆ ಕುರಿತು ಮುಂದೆ ಚರ್ಚಿಸಲಾಗುತ್ತದೆ.

ಕುವೆಂಪು ಕೃತಿಗಳಲ್ಲಿ ಅದರಲ್ಲೂ ಗದ್ಯ ಕೃತಿಗಳಲ್ಲಿ ಹೆಜ್ಜೆ ಹೆಜ್ಜೆಗೆ ಬೇರೆ ಬೇರೆ ರೀತಿಯ ಬೇಟೆ ಚಿತ್ರಗಳು ವಿವರಗಳು ಬರುತ್ತವೆ. ಆದರೆ ಮಲೆನಾಡಿನಲ್ಲಿ ಅದನ್ನು ಯಾರೂ ವೃತ್ತಿಯಾಗಿ ಅವಲಂಬಿಸಿರಲಿಲ್ಲ. ಹಿಂದಿನ ಕಾಲದಲ್ಲಿ ಬೇಟೆಯನ್ನೇ ವೃತ್ತಿಯಾಗಿ ಅವಲಂಬಿಸಿ ಬದುಕಿದ್ದರೇನೋ. ಏಕೆಂದರೆ ಆಗ ಕಾಡು ಮತ್ತು ಪ್ರಾಣಿಪಕ್ಷಿಗಳು ಸಮೃದ್ಧವಾಗಿದ್ದವು. ನಂತರ ಬರಬರುತ್ತ ವ್ಯವಸಾಯಕ್ಕಾಗಿ ಕಾಡನ್ನು ಕಡಿಯುತ್ತಾ ಬಂದಿದ್ದರಿಂದ ಕಾಡಿಗೂ, ಕಾಡಿನ ಪ್ರಾಣಿಗಳಿಗೂ ಅಸ್ತಿತ್ವವನ್ನು ಉಳಿಸಿಕೊಳ್ಳುವುದು ಕಷ್ಟವಾಯಿತು. ಈ ಹಂತದಲ್ಲಿ ಬೇಟೆ ಕೇವಲ ಹವ್ಯಾಸವಾಗಿ ಉಳಿಯಿತು ಎನಿಸುತ್ತದೆ. ಕುವೆಂಪು ಬರೆಯುವ ಕಾಲದಲ್ಲಿ ಮಲೆನಾಡಿನಲ್ಲಿ ಬೇಟೆ ಹವ್ಯಾಸದ ಹಂತದಲ್ಲಿದ್ದಿದ್ದರಿಂದ ಈ ಬೇಟೆಯ ಚಿತ್ರಣಗಳ ಮೂಲಕ ಅಂದಿನ ಮಲೆನಾಡನ್ನು ಅಲ್ಲಿಯ ಬದುಕನ್ನು ತಿಳಿಯಬಹುದು.

ಕುವೆಂಪು ಅವರ ಮಲೆನಾಡಿನ ಚಿತ್ರಗಳು ಪ್ರಬಂಧ ಸಂಕಲನದಲ್ಲಿ ಹೆಚ್ಚಿನವು ಬೇಟೆಯನ್ನು ಕುರಿತ ನೆನಪುಗಳೇ ಆಗಿವೆ. ಆ ನೆನಪುಗಳನ್ನು ಸ್ವಾರಸ್ಯಪೂರ್ಣವಾಗಿ ಸುಂದರವಾಗಿ ನಿರೂಪಿಸಿದ್ದಾರೆ. ಅವರು ನಮ್ಮೊಂದಿಗೆ ಹಂಚಿಕೊಂಡ ಮೊದಲ ಚಿತ್ರವಾದ 'ಹಾಸ್ಯದ ಚಟಾಕಿ'ಯಲ್ಲೇ ಬೇಟೆಯ ಚಿತ್ರಣಕ್ಕೆ ಹಿನ್ನೆಲೆಯಾಗಿರುವ ಪರಿಸರವನ್ನು ಕುವೆಂಪು ಅವರ ಮನೆ ಸುತ್ತಲಿನ ಪರಿಸರವನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಇದರೊಂದಿಗೆ ಅವರು ಬೇಟೆಯ ಚಿತ್ರಗಳನ್ನು ವರ್ಣಿಸುವ ಮೊದಲು ಅದಕ್ಕೆ ಸಂಬಂಧಿಸಿದ ತತ್ವದ ವಿಚಾರಗಳನ್ನು ಸಂಕ್ಷಿಪ್ತವಾಗಿ ನಮಗೆ ತಿಳಿಸುತ್ತಾರೆ. ಬೇಟೆಯನ್ನು ಕುರಿತಂತೆ ಇರುವ ಬೇರೆ ಬೇರೆ ವಿಧಗಳ ಹಿನ್ನೆಲೆಯಲ್ಲಿ ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಕೃತಿಯನ್ನು ಮುಂದೆ ವಿಶ್ಲೇಷಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವು ಮರಸು ಬೇಟೆ, ಸಾರಿಕೆ ಬೇಟೆ, ಜೇನು ಬೇಟೆ ಇತ್ಯಾದಿ.

೩.೧-ಮರಸು ಬೇಟೆ : ಮರಸು ಬೇಟೆ ಎಂದರೆ ಕಾಡು ಪ್ರಾಣಿಗಳಿಗಾಗಿ ಮರೆಯಲ್ಲಿ ಕೂತು ಬೇಟೆಯಾಡುವುದು. ಕುವೆಂಪು ಮರಸು ಬೇಟೆಯನ್ನು ಕುರಿತು 'ಬಂದನಾ ಹುಲಿರಾಯನು' ಪ್ರಬಂಧದಲ್ಲಿ ರಸವತ್ತಾಗಿ ಚಿತ್ರಿಸಿದ್ದಾರೆ. ಮರಸು ಬೇಟೆಯಲ್ಲಿ ಬೇಟೆಗಾರ ಕೆಲವು ಸಾರಿ ಮರಗಳ ಮೇಲೆ ಇನ್ನು ಕೆಲವು ಸಾರಿ ನೆಲದ ಮೇಲೆಯೆ ಪೊದೆಗಳ ನಡುವೆ ಮರೆಮಾಡಿಕೊಂಡು ಕೂತು ಪ್ರಾಣಿಗಳು ಬರುವುದನ್ನು ಜಾಗರೂಕತೆಯಿಂದ ನಿರೀಕ್ಷಿಸುತ್ತಾನೆ. ಮರಸುಬೇಟೆಗೆ ತಕ್ಕ ಸಮಯ ಎಂದರೆ ಪ್ರಾತಃ ಕಾಲ, ಸಂಧ್ಯಾಕಾಲ, ಬೆಳ್ದಿಂಗಳ ರಾತಿ. ಪ್ರಾಣಿಗಳು ಸಂಜೆಯಾಗಲು ಅರಣ್ಯದ ಮಧ್ಯದಿಂದ ಇಳಿಯಲು ತೊಡಗುತ್ತವೆ. ಏಕೆಂದರೆ ಕಣಿವೆಗಳಲ್ಲಿ, ಗದ್ದೆಗಳಲ್ಲಿ ಅವುಗಳಿಗೆ ಮೇವು ಸಿಕ್ಕುವುದು ಸುಲಭ. ಹಂದಿ, ಕಾಡುಕುರಿ, ಮಿಗ ಮೊದಲಾದ ಪ್ರಾಣಿಗಳು ಪೈರಿಗೆ ಮಾರಿಗಳು, ಬೇಟೆಗಾರರು ಜೀವಿಗಳು ಇಳಿದು ಬರುವ ಮಾರ್ಗಗಳನ್ನು ಅನುಭವದಿಂದಲೊ ಅಥವಾ ಐತಿಹ್ಯದಿಂದಲೊ ಅರಿತು ಅಂತಹ ಕಂಡಿಗಳನ್ನು ಕಾಯುತ್ತಾರೆ. ಆದ್ದರಿಂದ ಕಾಡಿನಿಂದ ಕೆಳಗಿಳಿಯುವ ಪ್ರಾಣಿಗಳನ್ನು ಹೊಡೆಯಬೇಕಾದರೆ ಸಾಯಂಕಾಲ ಸುಸಮಯ. ಹಾಗೆ ಇಳಿದ ಪ್ರಾಣಿಗಳು ರಾತ್ರಿಯೆಲ್ಲ ಗದ್ದೆಗಳನ್ನೂ, ತೋಟಗಳನ್ನೂ ಲೂಟಿಮಾಡಿ ಉಷಃ ಕಾಲಕ್ಕೆ ಸರಿಯಾಗಿ ಪುನಃ ಅರಣ್ಯಾಭಿಮುಖವಾಗಿ ಮೇಲೆರುತ್ತವೆ. ಆದ್ದರಿಂದ ಬಯಲಿನಿಂದ ಮೇಲೆರುವ ಜೀವಾದಿಗಳನ್ನು ಸುಡಬೇಕಾದರೆ

ಬೆಳಗಿನ ಜಾವ ಪ್ರಶಸ್ತ. ಇನ್ನು ಕಾಡಿನಲ್ಲಿ ಹಣ್ಣಿನ ಮರಗಳಿದ್ದರೆ ಅಲ್ಲಿಯೂ ಕೂಡ ಪ್ರಾಣಿಗಳನ್ನು ಎದುರುಗೊಳ್ಳುವುದು ಸುಲಭ. ವಿಶೇಷವಾಗಿ ಅವು ಹಣ್ಣಿನ ಮರಗಳಿಗೆ ಬರುವುದು ಬೆಳಿಗ್ಗೆ ಎಂಟುಗಂಟೆಯ ಒಳಗೆ ಅಥವಾ ಸಾಯಂಕಾಲ ಐದು ಗಂಟೆಯ ಮೇಲೆ ಬೆಳ್ದಿಂಗಳ ರಾತ್ರಿಯಲ್ಲಿ ರಾತ್ರಿ ಎಷ್ಟು ಹೊತ್ತಿಗಾದರೂ ಬರಬಹುದು.

ಮಲೆನಾಡಿನಲ್ಲಿ ಅಂದಿನ ಕಾಲದಲ್ಲಿ ಹಣ್ಣಿನ ಮರಗಳಿಗೆ ಬರಗಾಲವಿರಲಿಲ್ಲ. ಅದರಲ್ಲಿಯೂ ವಸಂತ ಋತುವಿನಲ್ಲಿ ಎಲ್ಲಿ ನೋಡಿದರೂ ಹಣ್ಣು ಎತ್ತ ನೋಡಿದರೂ ಹೂವು. ಕಾಡುಮಾವಿನಹಣ್ಣು, ನೇರಲಹಣ್ಣು, ಸೂಣೆ ಹಣ್ಣು, ಕಲ್ಲುಸಂಪಗೆ ಹಣ್ಣು ಕಣಗಿಲುಹಣ್ಣು, ಗೋಳಮಟೆಹಣ್ಣು, ಇಪ್ಪೆಹಣ್ಣು, ಹೆಬ್ಬಲಸಿನಹಣ್ಣು, ಹಲಸಿನಹಣ್ಣು ಹೀಗೆ ಕಾಡಿನ ತುಂಬ ಹಣ್ಣಿನ ಮರಗಳು. ಬೇಟೆಗಾರರಿಗೆ ಯಾವ ಯಾವ ಪ್ರಾಣಿಗಳು ಯಾವ ಯಾವ ಹಣ್ಣಿನ ಮರಗಳಿಗೆ ಬರುತ್ತವೆ ಎಂಬುದು ಸ್ಪಷ್ಟವಾಗಿ ತಿಳಿದಿರುತ್ತದೆ. ಮರಗಳಿರುವ ಸ್ಥಾನವೂ ಸಹ ಪ್ರಾಣಿಗಳಿಗೆ ಅಷ್ಟೇ ಮುಖ್ಯವಾಗಿರುತ್ತದೆ. ಸಾಧಾರಣವಾಗಿ ಮೃಗಗಳು ಕಾಡಿನ ತುಂಬಾ ವಾಸ ಮಾಡುವುದಿಲ್ಲ, ಅವುಗಳಿಗೂ ಕೂಡ ನಿಯತ ಸ್ಥಾನಗಳಿರುತ್ತವೆ ; ಹಕ್ಕೆಗಳಿರುತ್ತವೆ. ಹಕ್ಕೆಗಳಿಗೆ ಸಮೀಪವಾಗಿ, ಹಣ್ಣುರುಚಿಯಾಗಿ, ಸ್ಥಳ ನಿರ್ಜನವಾಗಿ, ಜೀವಿಗಳು ತಿರುಗಾಡುವ ಕಂಡಿಗಳಲ್ಲಿರುವ ಮರಗಳಿಗೆ ಪ್ರಾಣಿಗಳು ಬಂದೇ ಬರುತ್ತವೆ. ಅಂತಹ ಜಾಗಗಳಲ್ಲಿಯೇ ಬೇಟೆಗಾರರು ಮರಸು ಕೂರುತ್ತಾರೆ.

ಕುವೆಂಪು ಅವರು 'ಮಲೆನಾಡಿನ ಚಿತ್ರಗಳು ' ಕೃತಿಯಲ್ಲಿನ 'ಬಂದನಾ ಹುಲಿರಾಯ' 'ಕಾಡಿನಲಿ ಕಳೆದ ಒಂದಿರುಳು ' 'ಪುಟ್ಟಾಚಾರಿಯ ಕಾಡುಕೋಳಿ ' ಈ ಕೆಲವು ಪ್ರಬಂಧಗಳ ಮೂಲಕ ಮರಸು ಬೇಟೆಯ ನೆನಪುಗಳನ್ನು ಹಂಚಿಕೊಂಡಿದ್ದಾರೆ.

'ಬಂದನಾ ಹುಲಿರಾಯ' ಎಂಬುದು ಒಂದು ಅದ್ಭುತ ರಮ್ಯ ಪ್ರಬಂಧ. ಮರಸು ಬೇಟೆಗೆ ಹೋದ ಧೈರ್ಯವಂತನಾದ ರಂಗಯ್ಯನ ಮನೋವ್ಯಾಪಾರಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ರಂಗಯ್ಯ ಮಲೆನಾಡಿನ ಒಬ್ಬ ಸಾಮಾನ್ಯ ವ್ಯಕ್ತಿ. ಈತನ ಜೀವನದಲ್ಲಿ ನಡೆದ ಒಂದು ವಿಶಿಷ್ಟ ಅನುಭವವನ್ನು ಇಲ್ಲಿ ವಿವರಿಸಲಾಗಿದೆ. ಬೇಟೆಗೆ ಹೋದ ರಂಗಯ್ಯನಿಗೆ ಎಷ್ಟು ಹೊತ್ತು ಕಾದರೂ ಯಾವ ಪ್ರಾಣಿಯೂ ಕಾಣದೆ, ಸೊಳ್ಳೆ ಕಾಟ

ಸಹಿಸಲಾರದೆ, ಸುಮ್ಮನೆ ಕೂರಲಾರದೆ ಎಲೆಯಡಿಕೆ ಅಗಿಯಲು ಪ್ರಾರಂಭಿಸುತ್ತಾನೆ. ಎಲೆಯಡಿಕೆ ಮಲೆನಾಡಿನಲ್ಲಿ ಬಾಲ್ಯ ಕಳೆದುದಕ್ಕೆ ಒಂದು ಚಿಹ್ನೆ ಎಂದು ಕುವೆಂಪು ಹೇಳುತ್ತಾ ಮರಸು ಬೇಟೆಗೆ ಹೋಗುವವರಿಗೆ ಇರುವ ಕೆಲವು ಚಾಳಿ (ಅಭ್ಯಾಸ) ಬಗೆಗೆ ಹೇಳುತ್ತಾರೆ. ಮರಸಿಗೆ ಹೋಗುವವರು ಎಲೆಯಡಕೆ ಹಾಕಿಕೊಳ್ಳುತ್ತಾರೆ. ಕೆಲವರು ನಶ್ಯ ಹಾಕಿಕೊಳ್ಳುತ್ತಾರೆ. ಅದರಲ್ಲೂ ಉಂಡೆ ನಶ್ಯ (ಮಡ್ಡಿ ನಶ್ಯ) ಹಾಕುತ್ತಾರೆ. ಏಕೆಂದರೆ ಒಂದು ವೇಳೆ ಬೇಟೆಗಾರ ಸುಣ್ಣ ಹಚ್ಚಿ, ನಶ್ಯದುಂಡೆ ಕಟ್ಟಿ ತಿಕ್ಕಲು ಪ್ರಾರಂಭಿಸಿ, ಅರೆದೂರ ಹೋದಾಗಲೆ ಯಾವುದಾದರೊಂದು ಪ್ರಾಣಿ ಓಡುತ್ತ ಬಂದು ಬಿಟ್ಟರೆ ? ಆದ್ದರಿಂದ ಮನೆಯಲ್ಲಿಯೆ ನಶ್ಯ ತಿಕ್ಕಿ ಚಿಟಿಕೆಕಟ್ಟಿ ತೆಗೆದುಕೊಂಡು ಹೋಗುತ್ತಾರೆ.''ನಶ್ಯ ಎಲೆಯಡಿಕೆಗಳನ್ನು ಮರಸಿಗೆ ಕೂತಾಗ ಉಪಯೋಗಿಸಬಹುದು ; ಆದರೆ ಬೀಡಿ ಸಿಗರೇಟು ಮಧ್ಯಗಳನ್ನು ಉಪಯೋಗಿಸಬಾರದು ಏಕೆಂದರೆ ಬೀಡಿ ಸಿಗರೇಟು ಹೊತ್ತಿಸಿದರೆ ಹೊಗೆಯೆದ್ದು ಪ್ರಾಣಿಗಳಂತಿರಲಿ, ಸೊಳ್ಳೆಗಳು ಕೂಡ ಸಮೀಪಕ್ಕೆ ಬರುವುದಿಲ್ಲ ! ಮಧ್ಯಪಾನವಂತೂ ಮಾಡುವ ಹಾಗೇ ಇಲ್ಲ. ಅದರಿಂದಾಗುವ ತೊಂದರೆಗಳು ತಿಳಿದೇ ಇದೆ.''

ರಂಗಪ್ಪ ಎಲೆಯಡಿಕೆ ಅಗಿಯಲು ಪ್ರಾರಂಭಿಸಿ, ತಂಬಾಕು ಹಾಕಲು ಸಿದ್ಧಗೊಳಿಸಿಕೊಳ್ಳುತ್ತಾ ತಲೆ ಎತ್ತಿದರೆ ಎದುರಿನಲ್ಲಿ ಹೆಬ್ಬುಲಿ ಕುಳಿತಿರುವುದನ್ನು ನೋಡಿ ಅವನು ಹೆದರಿ ಬೆವರಲಾರಂಭಿಸಿದನು. ನಂತರ ಹುಲಿಯ ನಡತೆಯನ್ನು ಕುರಿತು ಅದರಲ್ಲೂ ಅದರ ಮೆಲ್ಲಡಿಗಳ ವಿಚಾರ ಕುವೆಂಪು ವಿವರಿಸುತ್ತಾರೆ. ಅದು ಒಣಗಿದ ತರಗೆಲೆಗಳ ಮೇಲೆ ನಡೆದರೂ ಸ್ವಲ್ಪವೂ ಸದ್ದು ಮಾಡದೆ ಅಡಿ ಇಡುತ್ತಿತ್ತು. ಅದು ಬರುವ ಸದ್ದು ಕೇಳುವುದಕ್ಕೆ ನೂರು ಕಿವಿಗಳಿದ್ದರೂ ಸಾಲದು. ಅದರಲ್ಲಿ ಅನ್ಯಮನಸ್ಕರಾಗಿ ಮೇಯುವ ದನಕರುಗಳಾಗಲಿ, ತತ್ಪರತೆಯಿಂದ ಎಲೆಯಡಿಕೆ ತಿನ್ನುತ್ತಾ ಕುಳಿತ ರಂಗಯ್ಯ ನಂತಹ ಬೇಟೆಗಾರಾಗಲಿ ಕೇಳುವುದು ಹೇಗೆ ಸಾಧ್ಯ. ಅಂತೂ ರಂಗಯ್ಯನ ಮುಂದೆ ಭಯಂಕರವಾದ ಹೆಬ್ಬುಲಿ ಕುಳಿತಿತ್ತು. ಆಗ ರಂಗಯ್ಯನ ಬಳಿ ಇದ್ದದ್ದು ಕೇಪಿನ ಕೋವಿ. ಹುಲಿ ಸ್ವಲ್ಪವಾದರೂ ದೂರವಾಗಿದ್ದರೆ ಅದನ್ನು ಸುಡಬಹುದಿತ್ತು. ಆದರೆ ಪಾದ ಬೀಸಿದರೆ ರಂಗಯ್ಯನ ಕರುಳು ಈಚೆಗೆ ಬರುವಷ್ಟು ಹತ್ತಿರದಲ್ಲಿ ಆದಿತ್ತು.

ರಂಗಯ್ಯ ಇಲ್ಲಿ ಹುಲಿಯನ್ನು ನೋಡಿ ಹೆದರಿದ್ದಾನೆ ಎಂದರೆ ಆತ ಹೇಡಿಯಲ್ಲ

ಎಂಬುದನ್ನು ಕುವೆಂಪು ಅವರೇ ಹೇಳಿದ್ದಾರೆ. ಆತನ ಬಳಿ ಒಂಟಿನಳಿಗೆ ಕೇಪಿನ ಕೋವಿ ಇದ್ದಿದ್ದರಿಂದ ಬೇಗ ಈಡು ತುಂಬುವುದು ಅಸಾಧ್ಯವಾಗಿತ್ತು. ಒಂದೇ ಈಡಿಗೆ ಹುಲಿ ಸಾಯುವುದೂ ಅನುಮಾನವಿತ್ತು. ಅವನು ಎಷ್ಟು ಎದೆ ಗಟ್ಟಿ ಮಾಡಿಕೊಂಡರೂ ದೇಹ ಮೆಲ್ಲಗೆ ಕಂಪಿಸಲು ಪ್ರಾರಂಭವಾಯಿತು. ಅದರಲ್ಲಿಯೂ ಹುಲಿ ಒಂದು ಸಾರಿ ಆಕಳಿಸಿ, ಕಣ್ಣು ಮೀಸೆಗಳನ್ನು ತಿರುಗಿಸಿ, ಭುಜ ಪ್ರದೇಶವನ್ನು ನೆಕ್ಕಿದಾಗ ರಂಗಯ್ಯನಿಗೆ ಅದರ ಪಾಳ್ಮೊಗದ ಗುಟ್ಟು ಗೊತ್ತಾದುದನ್ನು ಕುವೆಂಪು ಅವರು ಅರ್ಥವತ್ತಾದ ಉಪಮೆಯೊಂದಿಗೆ ವಿವರಿಸಿದ್ದಾರೆ. ಅದರ ದಂತಪಂಕ್ತಿಗಳು, ನಾಲಿಗೆ, ಉದ್ದದ ಕೋರೆ ದಾಡೆಗಳು! ''ಯಶೋಧೆ ಕೃಷ್ಣನ ಬಾಯಲ್ಲಿ ಬ್ರಹ್ಮಾಂಡಗಳನ್ನು ಕಂಡು ಭಯಗೊಂಡುದು ಸುಳ್ಳೋ ನಿಜವೋ ನನಗೆ ಗೊತ್ತಿಲ್ಲ. ರಂಗಯ್ಯನಂತೂ ಹುಲಿಯ ಬಾಯೊಳಗೆ ಪಾತಾಳ, ನರಕ, ಮೃತ್ಯಂ ಎಲ್ಲವನ್ನೂ ಒಂದೇ ಕಡೆಗೆ ಕಂಡು ನಡುಗತೊಡಗಿದನು ಎಂದು''[9] ವಿವರಿಸಿದ್ದಾರೆ. ಮುಂದೆ ವರ್ಣಿಸುವ ರಂಗಯ್ಯನ ಜೀವದ ಮೇಲೆ ಆಸೆ ಬಿಟ್ಟನು. ಹೆಂಡಿರು, ಮಕ್ಕಳನ್ನು, ಆಸ್ತಿಪಾಸ್ತಿಯನ್ನು, ನೆಂಟರಿಷ್ಟರನ್ನು, ಅಡಿಕೆ ತೋಟವನ್ನು ನೆನೆದನು. ಅಷ್ಟರಲ್ಲಿ ಹುಲಿ ಒಮ್ಮೆ ಗರ್ಜಿಸಿತು. ರಂಗಯ್ಯ ನಡುಗುತ್ತಿದ್ದ, ರಂಗಯ್ಯ ತನ್ನ ತೋಟದಾಚೆಯ ಭೂತವನ್ನು ನೆನೆದು ಬೇಡಿಕೊಂಡ. ಬೇಟೆ ದೇವರಿಗೆ ಹಣ್ಣುಕಾಯಿ ಕೊಡುವೆನೆಂದು ಹೇಳಿಕೊಂಡು ಪಂಜರಳ್ಳಿಗೆ ಪೂಜೆ ಮಾಡಿ ಕೋಳಿ ಬಲಿ ಕೊಡುವೆನೆಂದು ಹರಕೆಹೊತ್ತ. ದ್ರಾವಿಡ ದೆವ್ವಗಳೆಲ್ಲ ಪೂರೈಸಿದ ಮೇಲೆ ಆರ್ಯ ದೇವತೆಗಳಿಗೆ ಹರಕೆ ಹೊತ್ತ. ಮನೆದೇವರಾದ ತಿರುಪತಿ ವೆಂಕಟರಮಣನನ್ನು, ಧರ್ಮಸ್ಥಳ ದೇವರನ್ನು ಬೇಡಿಕೊಂಡನು. ಇಷ್ಟಾದರೂ ಹುಲಿ ಇಟ್ಟ ಹೆಜ್ಜೆಯನ್ನು ಕೀಳಲಿಲ್ಲ.

ಕಡೆಯಲ್ಲಿ ಹುಲಿಗಳು ಮನುಷ್ಯರ ಸದ್ದನ್ನು ಕೇಳಿದರೆ ಓಡಿ ಹೋಗುತ್ತವೆ ಎಂಬುದನ್ನು ತಿಳಿದಿದ್ದ ಅವನು ಏನಾದರೂ ಸದ್ದು ಮಾಡಲು ಧೈರ್ಯಮಾಡಿದ, ಕೆಮ್ಮಿದ ಹುಲಿಗೆ ಕೇಳಲಿಲ್ಲ, ಹೋ ಎಂದು ಕೂಗಿದ ಅದೂ ಕೇಳಿಸಲಿಲ್ಲ, ಇನ್ನೂ ಜೋರಾಗಿ ಕೂಗಿದ ಅದು ಮಾಲೆ ಮಾಲೆಯಾಗಿ ಅವನ ಮನೆಗೆ ಮುಟ್ಟಿತು. ಮಲೆನಾಡಿನಲ್ಲಿ ಮನೆಯಿಂದ ಹೊರಟು ಮಧ್ಯ ಕಾಡಿಗೆ ಹೋದರೂ ಬೆಟ್ಟಗುಡ್ಡಗಳು ಇಳಿಜಾರಾಗಿರುವುದರಿಂದ ಗಟ್ಟಿಯಾಗಿ ಮಾತಾಡಿದರೂ ಅದರ ತಪ್ಪಲಿನಲ್ಲಿರುವ ಮನೆಗೆ ಕೇಳಿಸುತ್ತದೆ. ಅಂತೂ ರಂಗಯ್ಯನ ಕೂಗು ಕೇಳಿ ಏನೋ ದೊಡ್ಡ ಪ್ರಾಣಿ ಹೊಡೆದು,

ಹೊರಲಾರದೆ ತನ್ನನ್ನು ಕರೆಯುವನೆಂದು ತಿಳಿದು ರಂಗಯ್ಯನ ತಮ್ಮ ಸಿದ್ದಣ್ಣನೂ ಕೂಗುತ್ತ ಹೊರಟುಬಂದ. ರಂಗಯ್ಯ ಈಗ ಇನ್ನೂ ಜೋರಾಗಿ ಕೂಗಲಾರಂಭಿಸಿದ. ಹುಲಿ ಆಶ್ಚರ್ಯದಿಂದ ಆಲಿಸುತ್ತಿತ್ತು. ಸಿದ್ದಣ್ಣ ಹತ್ತಿರ ಬಂದಾಗ ತಕ್ಷಣ ಚಿಮ್ಮಿ ಮರೆಯಾಯಿತು. ನಂತರ ಸಿದ್ದಣ್ಣ ನಿಜವನ್ನು ಕೇಳಿ ತಿಳಿದು ಅಣ್ಣನನ್ನು ಎತ್ತಿ ನಿಲ್ಲಿಸಿದ. ರಂಗಯ್ಯ ಯಾವ ದೇವರಿಗೂ ಹರಕೆ ಒಪ್ಪಿಸಲಿಲ್ಲ. ಯಾವ ದೇವರ ಕೃಪೆಯಿಂದ ಅವನು ಬದುಕಿದೆನೆಂದು ತೀರ್ಮಾನ ಮಾಡುವವರಾರು ? ಹೀಗೆ ಮರಸು ಬೇಟೆಗೆ ಹೋದಾಗ ನಡೆದ ಹುಲಿ ಪ್ರಸಂಗವನ್ನು ಕುವೆಂಪು ರಂಗಯ್ಯನ ಬಾಯಿಂದ ಕೇಳಿ ಇಲ್ಲಿ ನಮಗೆ ತಿಳಿಸಿದ್ದಾರೆ. ಕುವೆಂಪು ಅವರು ರಂಗಯ್ಯನ ಶೈಲಿ, ಭಾಷೆ, ಚಮತ್ಕಾರ, ವರ್ಣನಾಶಕ್ತಿ , ನನಗಿಲ್ಲ ಎನ್ನುತ್ತಾರೆ. ಆದರೆ ಕುವೆಂಪು ಅವರ ವರ್ಣನಾಶಕ್ತಿ, ಲೇಖನಶಕ್ತಿ ಎಂತಹುದು ಎಂಬುದು ನಮಗೆಲ್ಲರಿಗೂ ತಿಳಿದಿರುವಂತಹದೇ.

ಮಲೆನಾಡಿನ ಚಿತ್ರಗಳಲ್ಲೇ ಮರಸು ಬೇಟೆಗೆ ಸಂಬಂಧಿಸಿದ ಇನ್ನೊಂದು ಚಿತ್ರ 'ಪುಟ್ಟಾಚಾರಿಯ ಕಾಡು ಕೋಳಿ' ಪ್ರಬಂಧ. ಇಲ್ಲಿ ಪುಟ್ಟಚಾರ ವೃತ್ತಿಯಿಂದ ಕಮ್ಮಾರ, ಪ್ರವೃತ್ತಿಯಿಂದ ಬೇಟೆಗಾರ. ಪುಟ್ಟಾಚಾರಿ ಒಂದು ದಿನ ತಿಂಗಳು ಬೆಳಕಿನ ರಾತ್ರಿಯಲ್ಲಿ ನಡುಗಾಡಿನಲ್ಲಿರುವ ಒಂದು ಹಣ್ಣಿನ ಮರಕ್ಕೆ ಮರಸಿಗೆ ಹೋದನು. ಆ ಹಣ್ಣಿನ ಮರಕ್ಕೆ ಕಡವೆಗಳು ಬರುತ್ತಿದ್ದವು. ನಡುರಾತ್ರಿಯಲ್ಲಿ ಅವನು ನಿದ್ದೆಗೆಟ್ಟು ತಲೆ ಸರಿಯಿಲ್ಲದೆ ಅರೆ ಎಚ್ಚತ್ತು ಕುಳಿತಿದ್ದಾಗ ಪಕ್ಕದ ಊರಿನ ಶೇಷಣ್ಣನ ಗಾಡಿಯೆತ್ತುಗಳು ಮೇಯುತ್ತ ಮೇಯುತ್ತ ಅರಣ್ಯ ಮಧ್ಯದಲ್ಲಿದ್ದ ಆ ಹಣ್ಣಿನ ಮರಕ್ಕೆ ಬಂದವು. ಮೊದಲು ಒಂದು ಎತ್ತು ಬಂತು. ಆ ಹಳುವಿನಲ್ಲಿ ಮಾಯಾಕಾರಿಯಾದ ನೆರಳುನೆರಳಾದ ಬೆಳ್ದಿಂಗಳಲ್ಲಿ ಪುಟ್ಟಾಚಾರಿಯ ಕಣ್ಣಿಗೆ ಕಡವೆಯೇ ಬಂದಂತಾಯಿತು. ಒಂದು ಗುಂಡು ಹೊಡೆದನು. ಪ್ರಾಣಿ ಬಿತ್ತು. ಪುಟ್ಟಾಚಾರಿ ಮರದ ಅಟ್ಟಣೆಯ ಮೇಲೆಯೇ ತನ್ನ ಕೇಪಿನ ಕೋವಿಗೆ ಈಡು ತುಂಬಿ ಕೆಳಗಿಳಿಯಬೇಕು ಎನ್ನುವಷ್ಟರಲ್ಲಿ ಮತ್ತೊಂದು ಎತ್ತೂ ಬಂದಿತು. ಕಡವೆ ಬತ್ತೆಂದು ಹಿಗ್ಗಿ ಹೋಗಿದ್ದ ಅವನಿಗೆ ಸಾಕಾದಷ್ಟು ವಿವೇಕವಿರಲಿಲ್ಲ. ಮತ್ತೊಂದು ಕಡವೆ ಬಿತ್ತೆಂದು ತಿಳಿದು ಅದಕ್ಕೂ ಒಂದು ಗುಂಡು ಹೊಡೆದನು. ಅದೂ ಬಿತ್ತು. ಬೇಟೆಗಾರ ಪರಮ ಸಂತೋಷದಿಂದ ಮರಸಿನಿಂದ ಇಳಿದು ಹೋಗಿ ನೋಡಿದನು. ಬಹಳ ಗೋಳಾಡಿ ಕಣ್ಣೀರು ಸುರಿದನು. ಬಸವಣ್ಣನನ್ನು ಕೊಂದೆನಲ್ಲಾ ಎಂದು ಅತಿಯಾಗಿ ಪಶ್ಚಾತ್ತಾಪಪಟ್ಟನು. ಇದು ಪುಟ್ಟಾಚಾರಿ ಮರಸಿಗೆ ಹೋದಾಗ ನಡೆದ ಪ್ರಸಂಗವಾಗಿದೆ.

'ಕಾಡಿನಲ್ಲಿ ಕಳೆದ ಒಂದಿರುಳು' ಎಂಬ ಪ್ರಬಂಧದಲ್ಲಿ ಮರಸುಬೇಟೆಗೆ ಹೋಗಿ ಈಡಿಗಾಗಿ ಕಾದಿದ್ದರ ಚಿತ್ರಣವಿದೆ. ಕುವೆಂಪು ತಮ್ಮ ಆಪ್ತರಾದ ತಿಮ್ಮು ಮತ್ತು ಓಬು ಅವರೊಡನೆ ದಟ್ಟವಾದ ಅರಣ್ಯದಲ್ಲಿ ಸಂಜೆ ಹೊತ್ತಿಗಾಗಲೆ ಮರಸು ಬೇಟೆಗೆ ಹೊರಟರು. ಕಾಡಿನ ನಡುವೆ ಇರುವ ಕಾಡುಮಾವಿನ ಮರದ ಬಳಿ ಇವರು ಮರಸಿಗೆ ಹೊರಟಿದ್ದರು. ಅದರ ಸುತ್ತಮುತ್ತಲಿದ್ದ ಮರಗಳಲ್ಲಿ ಅಟ್ಟಣೆಗಳನ್ನು ಕಟ್ಟಿದ್ದರು. ಅಟ್ಟಣೆ ಎಂದರೆ ಮರಸಿಗೆ ಕೂರುವ ಸ್ಥಳ. ಎಲ್ಲರೂ ಒಟ್ಟಿಗೆ ಕುಳಿತಿರಲಿಲ್ಲ ಹದಿನೈದು ಗಜ ದೂರದಲ್ಲಿ ಮೂವರು ಕುಳಿತಿದ್ದರು. ಇವರ ನಡುವೆ ಕುವೆಂಪು ಸೀಸೆಯಿಂದ ಕಾಫಿ ಕುಡಿಯುವಾಗ ಕತ್ತಲಲ್ಲಿ ಮೂಗಿಗೂ ಸುರಿದುಕೊಂಡರಂತೆ. ಇಂಥ ಹಾಸ್ಯ ಸಂಗತಿಗಳು ಗಂಭೀರ ಸನ್ನಿವೇಶದ ನಡುವೆ ಬರುತ್ತಿರುತ್ತವೆ. ಮರಸಿಗೆ ಹೋದಾಗ ಸ್ವಲ್ಪವೂ ಸದ್ದು ಮಾಡಬಾರದು. ಪ್ರಾಣಿಗಳಿಗೆ ಮನುಷ್ಯರಿರುವ ಸೂಚನೆ ಹೋದರೆ ಸಾಕು ಆ ಎಡೆಗೆ ಕಾಲಿಡುವುದೇ ಇಲ್ಲ. ಇಂಥ ಸಂದರ್ಭದಲ್ಲಿ ಕುವೆಂಪು ಅವರಿಗೆ ಸೀನು-ಕೆಮ್ಮು ಏನೂ ಮಾಡಿದರೂ ತಡೆಯಲಾಗಲಿಲ್ಲ. ಕಾಡಿನಲ್ಲಿ ಕಡ್ಡಿ ಮುರಿದರೂ ಸದ್ದಾಗುತ್ತಿತ್ತು. ಇವರು ಮಾಡಿದ ತಪ್ಪಿನಿಂದ ಓಬು ಇದ್ದಲ್ಲಿಗೆ ಬಂದ ಕಣೆ ಹಂದಿಯ ಹಿಂಡು ಓಡಿ ಬಿಟ್ಟವಂತೆ. ಇದು ಕವೆಂಪು ಅವರಿಗೆ ತಿಳಿದದ್ದು ಬೆಳಿಗ್ಗೆ. ಕವೆಂಪು ಅವರಿಗೆ ಕುಳಿತು ಕುಳಿತು ಬೇಸರವಾಗ ತೊಡಗಿತ್ತು. ಇವರೆಲ್ಲಾ ಸಂಜೆ ಬೇಗ ಹೋದದ್ದರಿಂದ ಈಗ ಚಂದ್ರೋದಯದ ಸಮಯ ಕುವೆಂಪು ಅವರ ಚಂದ್ರೋದಯದ ವರ್ಣನೆ ಇಲ್ಲಿ ಮನೋಜ್ಞವಾಗಿ ಮೂಡಿಬಂದಿದೆ. ಸ್ವಲ್ಪ ಹೊತ್ತಿನಲ್ಲಿ ಕುವೆಂಪು ಇದ್ದಲ್ಲೇ ಯಾವುದೋ ಪ್ರಾಣಿ ಸದ್ದು ಮಾಡುವುದು ತಿಳಿಯಿತು. ಮುಂದೇನು ಮಾಡುವುದೆಂದು ಯೋಚಿಸಿಕೊಂಡರು. ಬೃಹತ್ ಅರಣ್ಯದ ನೀರವ ಮೌನಕ್ಕೆ ಹಂದಿ ಗಾಳಿಹಿಡಿಯುವುದು, ಗೂಬೆಯ ಕರ್ಕಶ ಧ್ವನಿ, ನಾಯಿ ಬೊಗಳುವ ಸದ್ದು ಇವೆಲ್ಲಾ ಭಂಗ ಮಾಡುತ್ತಿದ್ದಂತೆ ಅನುಭವವಾಗುತ್ತಿತ್ತು.

ಕುವೆಂಪು ಬೆಳದಿಂಗಳ ಇರುಳಿನ ಸೌಂದರ್ಯವನ್ನು ಸವಿಯುತ್ತಾ ಅಲ್ಲೆ ನಿದ್ರೆಗೆ ಜಾರಿದರು. ಇದ್ದಕಿದ್ದ ಹಾಗೆ ನಿದ್ರಾಭಂಗವಾಯಿತು. ಅವರ ಅಟ್ಟಣೆಯಿಂದ ಒಂದೇ ಮಾರು ದೂರದಲ್ಲಿದ್ದ ಮುತ್ತುಗದ ಮರದೆಲೆಗಳಲ್ಲಿ ಕಟಪಟ ಧ್ವನಿಯಾಯಿತು. ಕೋವಿಯಿಂದ ಸಿಡಿದ ದೊಡ್ಡ ಚರೆಗಳು ಮೃತ್ಯು ವೇಗದಿಂದ ಧಾವಿಸಿದುವೆಂದು ಗೊತ್ತಾಯಿತು. ಸ್ವಲ್ಪ ಈ ಕಡೆ ಬಂದಿದ್ದರೆ ತನಗೆ ತಾಗುತ್ತಿತ್ತೆಂದು ಮೈ ಮುಟ್ಟಿ ನೋಡಿಕೊಂಡರು. ಏಕೆಂದರೆ ಪ್ರಾಣಿಗೆ ಗುಂಡು ಬಡಿದ ಕೂಡಲೆ ಅದರ

ಅನುಭವವಾಗುವುದಿಲ್ಲ ಎಂಬುದನ್ನು ಹಿರಿಯರಿಂದ ಕೇಳಿತಿಳಿದಿದ್ದರು ಕುವೆಂಪು. ಸ್ವಲ್ಪ ಹೊತ್ತಾದ ಮೇಲೆ ಯಾರು ಹೊಡೆದಿರಬಹುದು ಈಡನ್ನೆಂದು ಯೋಚಿಸಿದರು. ತಿಮ್ಮು, ಓಬು ಮಾರು ದೂರದಲ್ಲಿದ್ದರು. ಕಾಡಿನ ಮಧ್ಯೆ ಮರಸಿಗೆ ಕೂತಾಗ ಒಬ್ಬರನ್ನೊಬ್ಬರು ಕರೆಯಬಾರದೆಂದು ಬೇಟೆಯ ನಿಯಮ ಆದರೂ ಕೇಳಬೇಕು ಎಂದುಕೊಂಡರು. ಅಷ್ಟರಲ್ಲಿ ಪೊದೆಯಲ್ಲಿ ಏನೋ ಏಟು ಬಿದ್ದ ನೋವಿನಿಂದ ಒದ್ದಾಡಿಕೊಳ್ಳುವಂತೆ ಸದ್ದಾಯಿತು. ನಂತರ ಆ ಸದ್ದು ನಿಂತಿತು. ಪ್ರಾಣಿ ಸತ್ತಿರಬಹುದೆಂದು ಭಾವಿಸಿದರು. ಆದರೆ ಕರೆಯುವ ಧೈರ್ಯಮಾಡಲಿಲ್ಲ. ಅಷ್ಟರಲ್ಲಿ ಬೆಳ್ದಿಂಗಳು ಮಬ್ಬಾಗಿ ಚಂದ್ರನು ಕಾಂತಿಹೀನನಾದನು. ಮುಗಿಲಿಂದ ಇಬ್ಬನಿ ಬೀಳಲಾರಂಭಿಸಿ. ಊರಿನಲ್ಲಿ ಕೋಳಿಗಳ ಕೂಗು ಕೇಳಿಸಿತು. ಬೆಳಗಾಗುತ್ತಿದ್ದಂತೆ ಕಾಡಿನಲ್ಲಿನ ಅನೇಕ ಪ್ರಾಣಿ-ಪಕ್ಷಿಗಳ ಚಲನವಲನಗಳನ್ನು ಕುವೆಂಪು ಸುಂದರವಾಗಿ ವರ್ಣಿಸಿದ್ದಾರೆ.

ಬೆಳಗಾದ ನಂತರ ಓಬು ತಿಮ್ಮ ಕುವೆಂಪು ಮೂವರು ಅಟ್ಟಣೆಯಿಂದ ಕೆಳಗಿಳಿದು ಈಡು ಹೊಡೆದುದ್ದರ ಬಗೆಗೆ ಚರ್ಚಿಸಿದರು. ಕಣಿಹಂದಿ ಕುವೆಂಪು ಅವರಿಗೆ ಹತ್ತಿರದಲ್ಲಿತ್ತು. ಆದರೆ ಅವರು ನಿದ್ರೆ ಮಾಡಿದ್ದರಿಂದ ಹೊಡೆಯಲಾಗಿರಲಿಲ್ಲ. ಓಬು ಹೊಡೆದದ್ದು ಪ್ರಾಣಿಗೆ ತಾಗಿದಿಯೇ ಇಲ್ಲವೇ ಎಂಬುವುದು ತಿಳಿಯದೇ ಅಲ್ಲೆಲ್ಲ ಹುಡುಕಿದರೂ ಯಾವ ಚಿಹ್ನೆಯೂ ಕಾಣಲಿಲ್ಲ. ಗುರಿತಪ್ಪಿತೆಂದು ಹೋಗುವಾಗ ತಿಮ್ಮು ನೆಲವ ನೋಡಿ ರಕ್ತದ ಹನಿ ಬಿದ್ದಿರುವುದನ್ನು ತೋರಿಸಿದ. ಅದೇ ದಾರಿಯಲ್ಲಿ ರಕ್ತದ ಜಾಡು ಹಿಡಿದು ಮುಂದುವರೆದರು ನಂತರ ರಕ್ತವೂ ಸಿಕ್ಕಲಿಲ್ಲ, ಪ್ರಾಣಿಯೂ ಸಿಗಲಿಲ್ಲ. ಆದರೆ ಬೆಳಗಿನ ಸುಂದರ ದೃಶ್ಯವನ್ನು ನೋಡಿ ಮನಸಾರೆ ಆನಂದಿಸಿದರು-ಹೀಗೆ ಬೇಟೆಗಾರರಾಗಿ ಬನಕೆ ಹೋದವರು ಕಬ್ಬಿಗರಾಗಿ ಮನೆಗೆ ಬಂದರು. ಈ ಚಿತ್ರದಲ್ಲಿ ಪ್ರಕೃತಿ ಸೌಂದರ್ಯ, ನಿರೀಕ್ಷೆ ಕುತೂಹಲ ಇವುಗಳ ಸಂಕೀರ್ಣಾನುಭವದ ರಸಾನುಭೂತಿಯನ್ನು ಕಾಣಬಹುದು.

ಹೀಗೆ ಕುವೆಂಪು ಅವರು ಮಲೆನಾಡಿನ ಚಿತ್ರಗಳಲ್ಲಿ ಮರಸುಬೇಟೆಯನ್ನು ಕುರಿತ ತಮ್ಮ ಅನುಭವ ಹಾಗೂ ನೆನಪುಗಳನ್ನು ಸುಂದರವಾಗಿ ಕಣ್ಣಿಗೆ ಕಟ್ಟುವಂತೆ ಸೂಕ್ಷ್ಮವಾಗಿ ಚಿತ್ರಿಸಿ ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಕುವೆಂಪು ಅವರು ಅನುಭವಿಸಿದ ಆ ಜೀವನಾನುಭವಗಳು ಇಂದು ಮಲೆನಾಡಿನಲ್ಲಿ ಕೇವಲ ನೆನಪಾಗಿ ಮಾತ್ರ ಉಳಿದಿವೆ ಎನ್ನಬಹುದು. ಏಕೆಂದರೆ ಮರಸು ಬೇಟೆ ಅನ್ನುವ ಒಂದು ಬೇಟೆವಿಧ ನಮ್ಮಲ್ಲಿತ್ತೆನ್ನುವುದೇ

ಸಾಕಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ. ಜೊತೆಗೆ ಮರಸಿಗೆ ಕೂರುವಾಗ ಮುಖ್ಯವಾಗಿ ಬೇಟೆಗಾರನಲ್ಲಿ ತಾಳ್ಮೆ ಇರಬೇಕು. ಅಂತಹ ಮನಸ್ಥಿತಿಯಾಗಲಿ, ಬೇಟೆಯಾಡಬೇಕೆಂಬ ಕುತೂಹಲವಾಗಲಿ ಈಗಿನ ಜನರಲ್ಲಿ ಬಹಳ ಕಡಿಮೆ. ಹಾಗೆ ಇಲ್ಲಿ ಧೈರ್ಯವೂ ಬೇಕು. ಅಷ್ಟು ದಟ್ಟವಾದ ಕಾಡುಗಳೂ ಈಗ ಅಪರೂಪವಾಗಿವೆ. ಅದೇನೆ ಇದ್ದರೂ ಮರಸು ಬೇಟೆಯ ಬಗೆಗೆ ಮಲೆನಾಡಿನ ಚಿತ್ರಗಳಲ್ಲಿ ಓದಿ ತಿಳಿದಾಗ ಒಂದು ವಿಶಿಷ್ಟ ಅನುಭವ ಉಂಟಾಗದೆ ಇರಲು ಸಾಧ್ಯವಿಲ್ಲ ಎನ್ನಬಹುದು.

ಇದೇ ಮರಸು ಬೇಟೆ ಕುರಿತು ಕುವೆಂಪು ಕಾನೂರು ಹೆಗ್ಗಡತಿಯಲ್ಲಿ ಕೆಳಕಾನೂರಿನ ಓಬಯ್ಯಗೌಡ ಹಣ್ಣಿನ ಮರಕ್ಕೆ ಮರಸು ಕೂರಲು ಹೋಗುವುದನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಹಾಗೆ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ದೊಡ್ಡಣ್ಣ ಹೆಗ್ಗಡೆ ಬಾಲ್ಯದಲ್ಲಿ ತನ್ನನ್ನು ಮರಸು ಬೇಟೆಗೆ ಕರೆದೊಯ್ದ ಸಂಗತಿಯನ್ನು ಐತ ನೆನೆಯುತ್ತಾನೆ. ಹೀಗೆ ಕುವೆಂಪು ಚಿತ್ರಗಳಲ್ಲಿ ಹೇಳಿರುವ ಘಟನೆಗಳನ್ನು ಮುಂದೆ ತಮ್ಮ ಗದ್ಯ ಕೃತಿಗಳಲ್ಲಿ ಸಾಕಷ್ಟು ಕಡೆ ಬಳಸಿಕೊಂಡಿದ್ದಾರೆ.

೩.೧-ಸಾರಿಕೆ ಬೇಟೆ : ಸಾರಿಕೆ ಎಂಬುದು ಬೇಟೆಯ ಮತ್ತೊಂದು ವಿಧಾನ. ಇದರಲ್ಲಿ ಬೇಟೆಗಾರನು ಒಬ್ಬನೇ ಕಾಡಿನಲ್ಲಿ ಪ್ರಾಣಿಗಳು ಓಡಾಡುವ ಕಂಡಿಗಳಲ್ಲಿ ನೀರನ್ನು ಕುಡಿಯಲು ಬರುವ ಜಾಗದಲ್ಲಿ, ಮರಗಳ ಮೇಲೆ ಕಾದುಕುಳಿತು ಪ್ರಾಣಿಗಳನ್ನು ಬೇಟೆಯಾಡುತ್ತಾನೆ. ಇಲ್ಲಿ ಬೇಟೆಗಾರ ತನ್ನೊಂದಿಗೆ ಬೇಟೆ ನಾಯಿಗಳನ್ನು ಕರೆದುಕೊಂಡು ಹೋಗದೆ ಕಾಡಿನಲ್ಲಿ ಸುಮ್ಮನೆ ಅಲೆಯುತ್ತಾ ಹೋಗುತ್ತಾನೆ. ಆಗ ಕಣ್ಣಿಗೆ ಬಿದ್ದ ಪ್ರಾಣಿಗಳನ್ನು ಹೊಡೆಯುತ್ತಾನೆ. ಇಲ್ಲಿ ಏನಿದ್ದರೂ ಸಾರಿಕೆ ಬೇಟೆ ಬೇಟೆಗಾರನೊಬ್ಬನ ವೈಯಕ್ತಿಕ ಜಾಣ್ಮೆ, ವಿವೇಕ, ಧೈರ್ಯಗಳನ್ನು ಅವಲಂಭಿಸಿರುತ್ತದೆ.

ಕುವೆಂಪು ಅವರು ಮಲೆನಾಡಿನ ಚಿತ್ರಗಳಲ್ಲಿನ ಮೊದಲ ಚಿತ್ರವಾದ 'ಹಾಸ್ಯದ ಚಟಾಕಿ'ಯಲ್ಲಿ ಹಾಗೆ 'ಪುಟ್ಟಾಚಾರಿಯ ಕಾಡುಕೋಳಿ' ಪ್ರಬಂಧದಲ್ಲಿ ಸಾರಿಕೆ ಬೇಟೆಯ ಪ್ರಸಂಗಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. 'ಹಾಸ್ಯದ ಚಟಾಕಿ' ಪ್ರಬಂಧದಲ್ಲಿ ಸ್ವತಃ ತಾವೆ ತಮ್ಮ ಗೆಳೆಯರೊಡನೆ ಸಾರಿಕೆ ಬೇಟೆಗೆ ಹೋದಂತಹ ಅನುಭವವನ್ನು ಹೇಳುತ್ತಾರೆ. ಇವರ ಮಿತ್ರರೆಲ್ಲಾ ಮೈಸೂರಿನಿಂದ ರಜೆಯಲ್ಲಿ ಮಲೆನಾಡಿನ ಸೌಂದರ್ಯ ಸವಿಯಲು

ಬಂದವರು. ಸ್ನಾನಕ್ಕೆಂದು ಕೆರೆಯ ಬಳಿ ಹೋದಾಗ ಯಾವುದೋ ಶಬ್ದ ಕೇಳಿ ಇಂತಹ ಪ್ರಾಣಿ ಎಂದು ಗುರುತಿಸಲಾಗದೆ ಪರೀಕ್ಷಿಸಬೇಕೆಂದು ತೋಟ ಕೋವಿ, ರೈಫಲ್ ತೆಗೆದುಕೊಂಡು ನಾಯಿಗಳನ್ನು ಕರೆದುಕೊಂಡು ಬೇಟೆಗೆ ಹೊರಟರು. ಹುಡುಕಿದರೆ ಯಾವ ಪ್ರಾಣಿಯೂ ಕಾಣಲಿಲ್ಲ. ಅಲ್ಲಿಂದ ಮಿತ್ರರನ್ನು, ಗೋಪಾಲನನ್ನು ಮನೆಗೆ ಕಳುಹಿಸಿ ಕುವೆಂಪು ಹಿ-(ಗೆಳೆಯ) ಇಬ್ಬರೇ ನಾಯಿಗಳನ್ನು ಕರೆದುಕೊಂಡು ಕಾಡಿಗೆ ಹೋಗುತ್ತಾರೆ. ಸಾರಿಕೆ ಬೇಟೆಯಲ್ಲಿ ನಾಯಿಗಳಿರಬಾರದು, ಆದರೂ ಅವು ಕಾಡಿನಲ್ಲೆಲ್ಲ ಗಾಳಿಹಿಡಿಯುತ್ತ ಅವರೊಂದಿಗೆ ಹೋಗಿದ್ದವು. ಲೇಖಕರ ಕೈಯಲ್ಲಿ ರೈಫಲ್ ಇದ್ದಿದ್ದರಿಂದ ಮೊಲ ಅವರ ಮುಂದೆ ಬಂದರೂ ಹೊಡೆಯಲಿಲ್ಲ. ಏಕೆಂದರೆ ಸ್ವಲ್ಪ ದೂರದಲ್ಲಿ ಕೆಳಗಡೆ ಗೆಳೆಯ ಇದ್ದಿದ್ದರಿಂದ ರೈಫಲ್ ಗುಂಡು ಬಹಳ ದೂರದವರೆಗೆ ಹೋಗುತ್ತದೆ ಎಂದು ಮೊಲಕ್ಕೆ ಹೊಡೆದ ಗುಂಡು ಅದನ್ನು ಭೇದಿಸಿಕೊಂಡು ಗೆಳೆಯನಿಗೆ ತಾಗಿದರೆ ಎಂದುಕೊಂಡು ಸುಮ್ಮನಾದರು.

ಬೆಳಿಗ್ಗೆ ಎಂಟು ಗಂಟೆಯ ಸಮಯದಲ್ಲಿ ಕಾಡಿನಲ್ಲಿ ಮಡಿವಾಳ, ಕಾಜಾಣ, ಕೋಗಿಲೆ, ಚೋರೆ, ಮರಕುಟಿಕ, ಮೀಂಗುಲಿ, ಕುಟುರ ಮೊದಲಾದ ಹಕ್ಕಿಗಳ ದನಿ ಬನವೆಲ್ಲ ತುಂಬಿತ್ತು. ಮಧ್ಯೆ ಕಾಡಿನಿಂದ ಕಾಡಿನಂಚಿಗೆ ಬರುತ್ತಿದ್ದ ಕಾಡುಕೋಳಿಗಳ ಕೂಗೂ ಬೆಟ್ಟದಿಂದ ಬೆಟ್ಟಕ್ಕೆ ಹಾರಿ ಕೇಳುತ್ತಿತು. ಹೀಗೆ ಮುಂದುವರಿಯುತ್ತಾ ಸ್ವಲ್ಪ ದೂರದಲ್ಲೇ ನಾಯಿ ಗಟ್ಟಿಯಾಗಿ ಬೊಗಳುತ್ತಿತ್ತು. ಸುತ್ತಲೂ ನೋಡಿದರೆ ಏನೂ ಕಾಣಿಸಲಿಲ್ಲ. ಲೇಖಕರು ಕಾಡುಹಂದಿ ಇರಬಹುದೇ ? ಎಂದು ಮುಂದೆ ಹೋಗಿ ನೋಡಿದರು. ನೋಡಿದರೆ ರುದ್ರ ಮನೋಹರ ದೃಶ್ಯ ? ಅಲ್ಲಿ ಹುಲ್ಲಿನ ಹಾಸಿನ ಮೇಲೆ ಸರ್ಪವೊಂದು ಹೆಡೆಯೆತ್ತಿ ನಿಂತಿದೆ. ನಾಯಿ ಹಾವಿನ ಹೆಡೆಯ ಚಲನೆಗೆ ಹೊಂದಿಕೊಂಡು ಹಾರಾಡುತ್ತಿತ್ತು. ಲೇಖಕರು ತನ್ನ ಬಳಿ ಕ್ಯಾಮರಾ ಇದಿದ್ದರೆ ಎಂತಹ ನೋಟವನ್ನು ಹಿಡಿದಿಡಬಹುದಾಗಿತ್ತು? ಆದರೆ ರೈಫಲ್ ಇತ್ತು ಎಂದು ನಿರಾಶರಾದರು.

ಲೇಖಕರಿಗೆ ಹಾವಿಗಿಂತ ಅವರ ಮುದ್ದಿನ ನಾಯಿ ರೋಜಿಗೆ ಅಪಾಯ ಆಗದಂತೆ ನೋಡಿಕೊಳ್ಳುವುದು ಮುಖ್ಯ ಎನ್ನಿಸಿ ಹಾವಿನ ಗೋಜಿಗೆ ಹೋಗದೆ ನಾಯಿಯನ್ನೇ ಗದರಿಸಿದರು. ಹಾವಿನ ಮೇಲೆ ಒಂದು ಕಲ್ಲಾದರೂ ಎಸೆಯೋಣವೆಂದರೆ ನಾಯಿ ತನ್ನ

ಪ್ರಾಣಾಪಾಯವನ್ನು ಸ್ವಲ್ಪವೂ ಗಮನಿಸದೆ ಹಾವಿನ ಮೇಲೆ ಬೀಳುವುದು ನಿಶ್ಚಯ ಎನಿಸಿತು. ಲೇಖಕರು ನಾಯಿಯ ಬಳಿ ಬಂದುದನ್ನು ಕಂಡು ರೋಜಿಯ ಧೈರ್ಯವೂ ಉತ್ಸಾಹವೂ, ಸಾಹಸವೂ, ಆರ್ಭಟವೂ ಹೆಚ್ಚಿ ಹೋಗಿದ್ದವು. ನಾಯಿಗಳ ಸ್ವಭಾವ ಲೇಖಕರಿಗೆ ಅನುಭವದಿಂದ ಚೆನ್ನಾಗಿ ಗೊತ್ತಿದ್ದರಿಂದ ತಾಳ್ಮೆ ವಹಿಸಿದರು. ಎಷ್ಟು ಗದರಿಸಿದರೂ ನಾಯಿ ಬರಲೇ ಇಲ್ಲ. ಹಾವನ್ನು ಗುಂಡಿನಿಂದ ಹೊಡೆಯೋಣವೆಂದರೆ ಆಗ ಅವರ ಬಳಿ ಇದ್ದದು ರೈಫಲ್, ಗುರಿ ತಪ್ಪಿದರೆ ಹಾವಿನ ಬದಲು ನಾಯಿ ಸಾಯಬಹುದು ಎಂದುಕೊಂಡು ಇಷ್ಟರಲ್ಲಿ ಅನಾಹುತ ಇನ್ನೂ ಹೆಚ್ಚಿತು. ಗುಂಡು ಹಾರಿಸುವುದೆಂದು ಕೋವಿ ಎತ್ತಿದಾಗ ರೋಜಿಗೆ ಭೀಮಶಕ್ತಿ ಬಂದಂತಾಗಿ ಸರ್ಪದ ಮೇಲೆ ಎರಗ ತೊಡಗಿತು. ಕಡೆಗೆ ಏನಾದರೂ ಆಗಲಿ ದೇವರೆ ಗತಿ ಎಂದು ಈಡು ಹಾರಿಸಿಯೇ ಬಿಟ್ಟರು. ನಾಯಿಯೂ ಸಾಯಲಿಲ್ಲ, ಹಾವೂ ಸಾಯಲಿಲ್ಲ. ಅನಾಹುತ ಮತ್ತೂ ಹೆಚ್ಚಿತು. ಅದುವರೆಗೆ ಹಾವನ್ನು ಮೇಲ್ಬಾಯ್ದು ಕಚ್ಚಲು ಹಿಂಜರಿಯುತ್ತಿದ್ದ ರೋಜಿ ಗುಂಡು ಹೊಡೆದ ಕೂಡಲೆ ಒಂದು ಸಾರಿ ಹಾವನ್ನೆ ಕಚ್ಚಿ ಎಳೆಯಿತು. ಹಾವು ಬುಸುಗುಟ್ಟಿ ಎರಗಿತು ಲೇಖಕರಿಗೆ ಏನು ಮಾಡಬೇಕೆಂದು ತೋಚದಾಯಿತು. ರೈಫಲಿನ ಬದಲು ತೋಟದ ಕೋವಿ ಇದ್ದಿದ್ದರೆ ಅಂದುಕೊಂಡರು. ಕೊನೆಗೆ ಗೆಳೆಯರನ್ನು ಕರೆಯತೊಡಗಿದರು. ಅವರು ಈಡಿನ ಶಬ್ಧ ಕೇಳಿ ನಾಯಿ ಆರ್ಭಟ ಗಮನಿಸಿ ಹಂದಿಯೋ, ಹುಲಿಯೋ, ಏನಪಾಯವೋ ಎಂದು ಭಾವಿಸಿ ಗುಡ್ಡವನ್ನು ಏರಿ ಓಡಿಬಂದರು. ತೋಟ ಕೋವಿಯಿಂದ ಈಡು ಹೊಡೆಯಿರಿ ಎನ್ನುವಷ್ಟರಲ್ಲಿ ಕಾಡಿನಲ್ಲಿ ಅಲ್ಲಲ್ಲಿ ತಿರುಗುತ್ತಿದ್ದ ಇತರ ನಾಯಿಗಳೂ ಅಲ್ಲಿಗೆ ಬಂದವು ಹಾವಿಗೆ ಸ್ವಸಂರಕ್ಷಣೆಯೇ ಹೆಚ್ಚಾಗಿ ಇನ್ನೂ ಮುತುವರ್ಜಿ ವಹಿಸಿಕೊಂಡಿತು. ಎಷ್ಟೇ ಪ್ರಯತ್ನ ಪಟ್ಟರೂ ಹಾವಿಗೆ ಈಡು ಹೊಡೆಯಲಾಗಲಿಲ್ಲ. ಹಾವು ಪೊದೆಯಲ್ಲಿದ್ದ ಬಿಲಕ್ಕೆ ನುಗ್ಗಿತು. ಅಂತೂ ಹಾವೂ, ನಾವೂ, ನಾಯಿಗಳು ಎಲ್ಲರೂ ಗಂಡಾಂತರದಿಂದ ಪಾರಾದೆವು ಎಂದು ಲೇಖಕರು ನಿಟ್ಟುಸಿರು ಬಿಟ್ಟರು.

ಸಾರಿಕೆ ಬೇಟೆಯನ್ನು ಕುರಿತಾದ ಇನ್ನೊಂದು ಚಿತ್ರ 'ಪುಟ್ಟಚಾರಿಯ ಕಾಡುಕೋಳಿ' ಈತ ಕಬ್ಬಿಣದ ಕೆಲಸದವನು. ಕುವೆಂಪು ಅವರಿಗೆ ಚಿಕ್ಕವರಿರುವಾಗಿಂದನೂ ಅವನಲ್ಲಿ ಏನೋ ಒಂದು ವಿಧವಾದ ಗೌರವವಿತ್ತು. ಪುಟ್ಟಾಚಾರಿಯ ಬೇಟೆಯ ಕೌಶಲವನ್ನು ಕುರಿತು ಹೇಳುತ್ತಾ ಅವನದು ನುರಿತ ಕೈ, ಇಟ್ಟ ಗುರಿ ತಪ್ಪುತ್ತಿರಲಿಲ್ಲ. ಪ್ರಾಣಿ ಎಷ್ಟು ವೇಗವಾಗಿ

ಹಳುವಿನ ನಡುನಡುವೆ ಮಿಂಚಿ ಬಂದರೂ ಪುಟ್ಟಾಚಾರಿಯು ಕಂಡಿ ಆದರ ಭಾಗಕ್ಕೆ ಸಾವಿನದಾರಿಗೆ ಹೆಬ್ಬಾಗಿಲಾಗಿಯೆ ಬಿಡುತ್ತಿತ್ತು. ಪುಟ್ಟಾಚಾರಿಯ ಈಡು ಎಂದರೆ ಎಲ್ಲರಿಗೂ ಭರವಸೆ. ಒಂದು ವೇಳೆ ಅವನು ಹುಸಿಯೀಡು ಹೊಡೆದರೂ ಅವನನ್ನು ಯಾರೂ ಅಸಡ್ಡೆ ಮಾಡುತ್ತಿರಲಿಲ್ಲ. ''ಪ್ರಾಣಿಯ ಸುಕೃತ ಚೆನ್ನಾಗಿತ್ತು'' ಎಂದು ಹೇಳಿ ಗುಂಡು ತಪ್ಪಿದ್ದಕ್ಕೆ ಆಶ್ಚರ್ಯ ಪಡುತ್ತಿದ್ದರೆ ಹೊರತು ಅವನನ್ನು ದೂರುತ್ತಿರಲಿಲ್ಲ.

ಲೇಖಕರು ಪುಟ್ಟಾಚಾರಿಯು ಕಾಡುಕೋಳಿ ಬೇಟೆಗೆ ಹೋದಾಗ ನಡೆದ ಘಟನೆಯನ್ನು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ. ಪುಟ್ಟಾಚಾರಿ ಬೆಳಗ್ಗೆ ನಸುಕು ಹರಿಯುವುದರಲ್ಲಿಯೆ ಎದ್ದು ಕಮ್ಮಾರ ಸಾಲೆಯಲ್ಲಿ ಕೆಲಸಕ್ಕೆ ಶುರುಮಾಡಿದ್ದನು. ಅಷ್ಟರಲ್ಲಿ ಕಾಡಿನಲ್ಲಿ ಕಾಡುಕೋಳಿಗಳು ಕೂಗುವ ನೀಳ್ದನಿಯನ್ನು ಕೇಳಿ ಅವನ ಮನಸ್ಸು ಅತ್ತಕಡೆ ಎಳೆಯಲಾರಂಭಿಸಿತು. ಒಲೆಗೆ ನೀರು ಚಿಮುಕಿಸಿ ಕೋವಿ ಹಿಡಿದು ಹೊರಟನು. ಬೇಗ ಬೇಗನೆ ಕಾಡುಕೋಳಿಗಳ ಆಹ್ವಾನವಾಣಿಯನ್ನು ಕೇಳುತ್ತ ಅಡವಿಯೊಳಗೆ ಹೋಗುತ್ತಿದ್ದನು. ಹಿಂದೆ ಯಾರೋ ಕೂಗಿದಂತಾಯ್ತು ನೋಡುತ್ತಾನೆ ಯಜಮಾನರು ನೇಗಿಲ ಕುಳ, ಕತ್ತಿ, ಹಾರೆ ಗುದ್ದಲಿ ಇದನ್ನೆಲ್ಲ ಮಾಡಬೇಕಾಗಿತ್ತು ಅವು ಒಂದು ತಿಂಗಳಿಂದ ಅಲ್ಲೆಯೆ ಬಿದ್ದಿದ್ದವು. ಗೌಡರು ಕೋಪದಿಂದಲೇ ದಿನ ಬೆಳಗಾದರೆ ಕೋವಿ, ಮರಸು ಷಿಕಾರಿ ! ನೀನು ಹೀಗೆ ಮಾಡಿದರೆ ಕೋವಿ ಕಸಿದಿಟ್ಟು ಬಿಡುತ್ತೇನೆ ಎಂದರು. ಪುಟ್ಟಾಚಾರಿ ಹಲ್ಲುಹಲ್ಲು ಬಿಡುತ್ತ ಮೆಲ್ಲಮೆಲ್ಲಗೆ ಕಾಡಿಗೆ ಜಾರಿದನು, ಗೌಡರೂ ಗೊಣಗುತ್ತಾ ಸುಮ್ಮನಾದರು. ಗೌಡರಿಗೂ ಮನಸ್ಸಿನಲ್ಲಿಯೇ ಪುಟ್ಟಾಚಾರಿ ಮಾಂಸದ ಪಲ್ಯಕ್ಕೆ ಏನಾದರೊಂದು ಪ್ರಾಣಿ-ಪಕ್ಷಿ ತಂದೇ ತರುತ್ತಾನೆಂದು ಸಂತೋಷ ಪಟ್ಟು ಹೋದರು. ಪುಟ್ಟಾಚಾರಿ ಕಾಡಿಗೇರಿದನು. ಕಾಡುಕೋಳಿಯ ಕೂಗು ಮಾತ್ರ ಕೇಳುತ್ತಿತ್ತೇ ವಿನಃ ಅವು ಕಂಡಿರಲಿಲ್ಲ, ಆಚಾರಿಗೆ ರೇಗಿ ಹೋಯಿತು. ಒಂದು ಕಡೆ ಕುಳಿತು ಒಂದು ತೆಳುವಾದ ಚಿಗುರೆಲೆಯನ್ನು ಎರಡು ಹೆಬ್ಬೆರಳುಗಳ ನಡುವೆ ಇಟ್ಟುಕೊಂಡು ಹುಂಜದಂತೆ ಕೇಕೆ ಹಾಕಿದನು. ಹೇಂಟೆ ಬರಲಿಲ್ಲ, ಹೇಂಟೆ ಹುಂಜವನ್ನು ಕರೆಯುವಂತೆ ಕೂಗಿದನು ಹುಂಜ ಯಾವುವೂ ಬರಲಿಲ್ಲ. ಬೇಟೆಯಾಗದೆ ಬರಿಗೈಯಲ್ಲಿ ಹಿಂತಿರುಗುವಂತಿರಲಿಲ್ಲ, ಏನನ್ನಾದರೂ ಹೊಡೆದುಕೊಂಡೇ ಹೋಗಬೇಕೆಂದು ದೃಢ ನಿಶ್ಚಯ ಮಾಡಿಕೊಂಡನು. ಅಷ್ಟರಲ್ಲಿ ಬಿಳುಗಲ್ಲು ತುಂಡಿನ ನೆತ್ತಿಯ ಕಾಡಿನಲ್ಲಿ ಒಂದು ಹುಂಜ ಕೇಕೆ ಹಾಕಿತು. ಅದನ್ನು ಕೊಂದೇ ಬಿಡುತ್ತೇನೆಂದು

ನಡೆಯುವ ಹೊತ್ತಿಗೆ ಕೋಳಿ ಕೂಗು ನಿಲ್ಲಿಸಿತ್ತು. ಅಲ್ಲೆ ಎಲ್ಲೊ ಇರಬೇಕೆಂದು ಭಾವಿಸಿ ಆಚಾರಿ ಧಾವಿಸಿದನು. ಆರಣ್ಯ ಇಳಿಜಾರಾಗಿತ್ತು. ಆಚಾರಿ ಕೆಳಗಿನಿಂದ ಮೇಲೆರುತ್ತಿದ್ದನು. ಹೋಗುತ್ತ ದೂರದಲ್ಲಿ ಏನನ್ನೊ ಕಂಡು ನಿಂತನು. ಎದೆ ಎತ್ತರ ಬೆಳೆದ ಹುಲ್ಲಿನ ನಡುವೆ ಹೆಣ್ಣು ಹೆಬ್ಬುಲಿಯೊಂದು ತನ್ನ ಮರಿಗಳೊಡನೆ ಎಳಬಿಸಿಲಿನಲ್ಲಿ ಮಲಗಿ ಚೆಲ್ಲಾಟವಾಡುತ್ತಿತ್ತು. ಹುಲಿಯ ಬಾಲದ ತುದಿ ಮಾತ್ರ ಬೆಳೆದ ಹುಲ್ಲಿನ ಮೇಲೆ ಬಂದು ಬಿಸಿಲಿನಲ್ಲಿ ಕುಣಿದಾಡುತ್ತಿತ್ತು. ಅದನ್ನು ಆಚಾರಿ ಕಾಡುಕೋಳಿಯ ಪುಕ್ಕ ಎಂದು ತಿಳಿದು ಅದರ ಸಮೀಪ ಹೋದನು. ಎದೆಯೆತ್ತರ ಬೆಳೆದ ಹುಲ್ಲಿನಲ್ಲಿ ಕಾಡುಕೋಳಿಯಾಗಿದ್ದರೆ ಕಾಣುತ್ತಲೇ ಇರಲಿಲ್ಲ. ಅದು ಅವನಿಗೆ ತಿಳಿಯಲಿಲ್ಲ. ಅಂತೂ ಕಾಡುಕೋಳಿ ತನ್ನ ಬಗಲಿಗೆ ಬಿತ್ತೆಂದು ತಿಳಿದು ಹಿಗ್ಗಿದನು. ಹಳುವಿನಲ್ಲಿ ತೂರಿ ಆದಷ್ಟು ಸಮೀಪಕ್ಕೆ ಹೋಗಿ ಮೆಲ್ಲಗೆ ಎದ್ದು ನಿಂತು ಸುಡಬೇಕೆಂದು ನಿಶ್ಚಯಿಸಿ ಬಹಳ ಕಷ್ಟಪಟ್ಟು ಮೆಲ್ಲಗೆ ಮುಂದುವರಿದು ಹೋಗುತ್ತಲೇ ಇದ್ದನು. ಅಷ್ಟರಲ್ಲಿ ಹುಲಿಗೆ ಹುಲ್ಲು ಅಲ್ಲಾಡುತ್ತಿದ್ದುದು ತಿಳಿದಿತ್ತು. ಪುಟ್ಟಾಚಾರಿ ನೆಲಕ್ಕೆ ಹಬ್ಬಿಕೊಂಡೇ ಮೆಲ್ಲಗೆ ಬರುತ್ತಿದ್ದನು. ಹುಲಿಗೂ ಇದು ಮನುಷ್ಯ ಎಂದು ತಿಳಿದಿರಲಿಲ್ಲ. ತಿಳಿದಿದ್ದರೆ ಅದೂ ಓಡಿಹೋಗುತ್ತಿತ್ತು. ಪುಟ್ಟಚಾರಿ ಕೋಳಿಗೆ ತಾನು ಕಾಣಬಾರದೆಂದು ಅರ್ಧ ಎದ್ದು ನಿಂತು ನೋಡುತ್ತಾನೆ. ಕೋಳಿಗೆ ಬದಲಾಗಿ ಬಣ್ಣ ಬಣ್ಣದ ಹೆಬ್ಬುಲಿ. ಆಚಾರಿಗೆ ಹುಲಿಯ ಕಣ್ಣುಗಳು ಬಂದು ತನ್ನ ಕಣ್ಣುಗಳಿಗೆ ತಿಳಿಸದಂತಾಯಿತು. ಹುಲಿ ಜೊತೆ ಮರಿಗಳೂ ಇದದ್ದು ಇನ್ನೂ ಅಪಾಯಕಾರಿಯಾಗಿತ್ತು. ಹುಲಿ ಎದ್ದು ನಿಂತಿತು. ಒಂದು ವೇಳೆ ಹುಲಿ ಮೈಮೇಲೆ ನೆಗೆದರೆ ಸುಮ್ಮನೆ ಸಾಯುವುದಕ್ಕಿಂತ ಅದಕ್ಕೂ ಒಂದು ಗುಂಡು ತಗುಲಿಸಿಯೆ ಸಾಯುವೆನೆಂದು ನಿಶ್ಚಯಿಸಿ ನಿಂತನು. ಇಬ್ಬರಿಗೂ ಪ್ರಾಣಸಂಕಟ. ಹುಲಿಗೆ ಮರಿಗಳ ಮೇಲಿನ ಮಮತೆ. ಆಚಾರಿಗೆ ಮನೆಯ ಮೇಲಿನ ಮಮತೆ. ಹುಲಿಗೂ ಮರಿ ಬಿಟ್ಟು ಹೋಗುವಂತಿಲ್ಲ. ಆಚಾರಿಗೂ ಈಡು ಹೊಡೆಯಲೂ ಭಯ ಹಿಂತಿರುಗಲೂ ಭಯ. ಕಡೆಗೆ ಆಚಾರಿ ಒಂದು ಉಪಾಯ ಹೂಡಿ ಹುಲಿಗೆ ಗೊತ್ತಾಗದಂತೆ ಹತ್ತು ಕ್ಷಣಕ್ಕೊಂದು ಹೆಜ್ಜೆಯನ್ನು ಹಿಂದುಹಿಂದಕ್ಕೆ ಮೆಲ್ಲಗೆ ಚಲಿಸ ತೊಡಗಿದನು. ಇಳಿಜಾರಾದ ಗುಡ್ಡವನ್ನು ಹಿಮ್ಮೊಗವಾಗಿ ಇಳಿಯುವುದು ಒಂದು ದೊಡ್ಡ ಸಾಹಸವೇ ಆಗಿತ್ತು. ಹೀಗೆ ಮೆಲ್ಲಗೆ ಸರಿದನು. ಹುಲಿಗೆ ಮೊದಲು ಸರಿದದ್ದು ಗೊತ್ತಾಗದಿದ್ದರೂ ನಂತರ ತಿಳಿಯಿತು. ಹುಲಿಯೂ ಒಂದು ಸಾರಿ ಮೇಲೆ ಹಾರುವಂತೆ ಸಂಚು ತೋರಿದರೂ ಹಾರಲಿಲ್ಲ ಗುರ್ರೆಂದು ಅಲ್ಲಿಯೆ ತಿಂತಿತು. ಆಚಾರಿಯ ಕೋವಿಯ ಕುದುರೆಯನ್ನು ಸದ್ದು ಮಾಡದೆ

ಎಳೆದವನು ಕೆಳಗಿಳಿಸಿದನು. ಹುಲಿಗೂ ಹಾಳು ಮನುಷ್ಯ ತೊಲಗಿದರೆ ಸಾಕಾಗಿತ್ತು. ಆಚಾರಿ ಎರಡು ಗಂಟೆ ಹೊತ್ತು ಹೀಗೆ ಹಿಂದಕ್ಕೆ ನಡೆದು ಸ್ವಲ್ಪ ಮರೆಮರೆಯಾದ ಜಾಗಕ್ಕೆ ಬಂದನು. ಹುಲಿ ಇನ್ನೂ ನೋಡುತ್ತಲೇ ಇತ್ತು. ಮತ್ತೆ ಈಡು ಹೊಡೆಯಲು ನೋಡಿದರೆ ಕೋವಿಗೆ ತುಂಬಿದ ಈಡು ಕಾಡುಕೋಳಿಗೆಂದು ಸಣ್ಣ ಚರೆಯದ್ದು. ಇದು ಹುಲಿ ರೋಮಕ್ಕೂ ಸಾಲದೆಂದು ಸುಮ್ಮನೆ ಕೆಣಕಿ ಅಪಾಯ ತಂದುಕೊಳ್ಳುವುದೇಕೆಂದು ಆಚಾರಿ ಸುಮ್ಮನಾದನು. ಹುಲಿ ಮಾಯಾವಾಗಿತ್ತು, ಆಚಾರಿಯು ನಿಟ್ಟುಸಿರಳೆದನು.

ಕುವೆಂಪು ಅವರು ಸಾರಿಕೆ ಬೇಟೆಯ ಕುರಿತಾದ ಎರಡು ಘಟನೆಗಳನ್ನು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ. ಸಾರಿಕೆ ಬೇಟೆಗೆ ಸಂಬಂಧಿಸಿದಂತೆ ತಮ್ಮ ಕಾದಂಬರಿಗಳಲ್ಲಿಯೂ ಕೆಲವು ಪ್ರಸಂಗಗಳು ಮೂಡಿಬಂದಿವೆ. ಸಾರಿಕೆ ಬೇಟೆ ಯಾವುದೇ ಒಬ್ಬ ಬೇಟೆಗಾರನ ಚಾಣಾಕ್ಷತೆ, ಬೇಟೆಯ ಕೌಶಲ್ಯವನ್ನು ಒರೆಗೆ ಹಚ್ಚುತ್ತದೆ. ಸಾಕಷ್ಟು ಪ್ರಾಣಿ-ಪಕ್ಷಿಗಳಿರುತ್ತಿದ್ದ ಅಂದಿನ ಮಲೆನಾಡಿನಲ್ಲಿ ಬೆಳಿಗ್ಗೆ, ಸಂಜೆ, ರಾತ್ರಿ ಸಮಯದಲ್ಲಿ ಹೀಗೆ ಒಬ್ಬೊಬ್ಬರೆ ಬೇಟೆಗೆ ಹೋಗುತ್ತಿದ್ದರು. ಇದರಿಂದ ಅವರಿಗೂ ಮನಸ್ಸಿಗೆ ಉಲ್ಲಾಸವಾಗುತ್ತಿತ್ತು. ಈಗ ಒಬ್ಬರೆ ಸುಮ್ಮನೆ ಅಲೆದಾಟುವುದೇ ಭಯ ಹುಟ್ಟಿಸುವಂತಹ ಸ್ಥಿತಿಗೆ ತಲುಪಿದ್ದೇವೆ.

೩.೩-ಜೇನುಬೇಟೆ : ಮನುಷ್ಯ ನಾಗರೀಕನಾಗುವ ಮೊದಲೂ ಸಹ ಜೇನುಬೇಟೆಯಾಡುತ್ತಿದ್ದನು ಎಂಬುದನ್ನು ತಿಳಿದರೆ ಈ ಬೇಟೆ ಎಷ್ಟು ಪ್ರಾಚೀನ ಮಾದುದೆಂದು ಗುತ್ತಾಗುತ್ತದೆ. ಮಲೆನಾಡಿನಲ್ಲಿ ಆಗ ಕಾಡಿನ ಸಂಪತ್ತು ಸಮೃದ್ಧವಾಗಿತ್ತು. ಅಲ್ಲಿ ಅನೇಕ ವಿಶಿಷ್ಟ ರೀತಿಯ ಪ್ರಾಣಿ-ಪಕ್ಷಿಗಳನ್ನು ಕಾಣಬಹುದಾಗಿತ್ತು. ಅದೇ ರೀತಿ ಜೇನು ಮೊದಲಿಂದಲೂ ನೈಸರ್ಗಿಕವಾಗಿ ಸಮೃದ್ಧವಾಗಿ ದೊರೆಯುತ್ತಿತ್ತು. ಮಲೆನಾಡಿನಲ್ಲಿ ಜೇನು ಸಂಗ್ರಹಿಸುವುದು ಒಂದು ಹವ್ಯಾಸವಾಗಿತ್ತು. ಕಾಡಿನಲ್ಲೆಲ್ಲಾದರೂ ಜೇನು ದೊರೆತರೆ ತುಪ್ಪದ ಜೊತೆ ಹಲ್ಲೆಯನ್ನು ತಂದು ಹುಳುಗಳ ಸಮೇತ ಮನೆಯಲ್ಲಿ ಪೆಟ್ಟಿಗೆಯೊಳಕ್ಕೆ ಇಟ್ಟು ಬೇಕಾದಾಗ ತುಪ್ಪ ತೆಗೆದುಕೊಳ್ಳಲಾಗುತ್ತಿತ್ತು. ಈಗ ಅಪರೂಪಕ್ಕೆ ಎಲ್ಲಾದರೂ ಒಂದೊಂದು ಕಡೆ ಕಾಣಬಹುದು. ಅದರಲ್ಲೂ ಕೆಲವು ನಿಯಮಗಳುಂಟು ಎಲ್ಲಾ ಜೇನನ್ನು ಅಷ್ಟು ಸುಲಭದಲ್ಲಿ ಕೀಳಲಾಗುವುದಿಲ್ಲ. ಜೇನು ಹುಳುಗಳಲ್ಲೇ ಅನೇಕ ವಿಧಗಳಿವೆ, ಈ

ಕುರಿತು ಕುವೆಂಪು ಅವರೇ ಸಾಕಷ್ಟು ವಿವರಣೆಯನ್ನು ನೀಡಿದ್ದಾರೆ.

ಕುವೆಂಪು ತಮ್ಮ ಜೇನು ಬೇಟೆಯ ಅನುಭವವನ್ನು ವಿವರಿಸುವಾಗ ಅದರ ಬೇರೆ ಬೇರೆ ಪ್ರಭೇದಗಳನ್ನು ತಿಳಿಸಿದ್ದಾರೆ. ಜೇನಿನಲ್ಲಿ ಹೆಜ್ಜೇನು, ತುಡವೆ, ಕೋಲುಜೇನು, ನಸರಿ ಎಂಬ ಪ್ರಭೇದಗಳಿವೆ. ತುಡವೆಯಲ್ಲಿ ಕರಿ ಬಿಳಿ ಎಂಬ ಎರಡು ಜಾತಿ. ಇವುಗಳ ತುಪ್ಪವೆಲ್ಲ ತಿನ್ನಲು ಮಧುರವಾದರೂ, ಅವುಗಳ ಕಡಿತ, ಕಾಟ, ರುಚಿ, ಗುಣ ಇವುಗಳಲ್ಲಿ ವ್ಯತ್ಯಾಸವಿದೆ. ಹೆಜ್ಜೇನನ್ನು ನಾವು ಸಾಮಾನ್ಯವಾಗಿ ನೋಡಿರುತ್ತೇವೆ. ಪಟ್ಟಣಗಳಲ್ಲಿ ದೊಡ್ಡ ಸೌಧಗಳಲ್ಲಿ ಕರ್ರೆಗೆ ನೇತಾಡುವುವು. ಮಲೆನಾಡಿನಲ್ಲಿ ದೊಡ್ಡ ದೊಡ್ಡ ಮರಗಳ ರೆಂಬೆ ಕೊಂಬೆಗಳಲ್ಲಿ ನೇತುಬೀಳುತ್ತವೆ. ಅದನ್ನು ಕೀಳಬೇಕಾದರೆ ಅಥವಾ ಕೊಯ್ಯಬೇಕಾದರೆ ಜೇನು ಕಟ್ಟಿರುವ ಕೊಂಬೆಗೆ ನೇರವಾಗಿ ಕೆಳಭಾಗದಲ್ಲಿ ನೆಲದ ಮೇಲೆ ಬೆಂಕಿಹಾಕಿ, ಬೆಂಕಿಗೆ ಹಸುರೆಲೆಗಳನ್ನು ಒಟ್ಟಿ ಹೊಗೆಮಾಡುತ್ತಾರೆ. ಆ ಧೂಮಪಾನವನ್ನು ಸಹಿಸಲಾರದ ಮಧುಪಗಳು ಹಲ್ಲೆಯನ್ನು ಬಿಟ್ಟು ದೂರಹೋಗುತ್ತವೆ. ಆಗ ಮರವನ್ನು ಹತ್ತಿ ಹಗ್ಗಕಟ್ಟಿದ ಬೋಗುಣಿಗೆ ಅದನ್ನು ಕೊಯ್ದುಹಾಕಿ ಮೆಲ್ಲಗೆ ಇಳಿಸುತ್ತಾರೆ. ಒಂದು ಜೇನಿಗೆ ಒಂದೇ ಹಲ್ಲೆ ಇರುತ್ತದೆ. ಆದರೆ ಬಹಳ ದೊಡ್ಡದು. ಹೆಜ್ಜೇನು ಹುಳು ಕಡಿದರೆ ತುಂಬಾಯಾತನೆ. ಎಷ್ಟೋ ಜನರೂ, ಪ್ರಾಣಿಗಳೂ ಅವುಗಳ ಕೈಗೆ ಸಿಕ್ಕಿ ಪ್ರಾಣಬಿಟ್ಟಿದ್ದಾರೆ. ಆದ್ದರಿಂದ ಹೆಜ್ಜೇನನ್ನು ಸಾಧಾರಣವಾಗಿ ಹಗಲು ಕೀಳುವುದಿಲ್ಲ. ತುಡುವೆ, ಕೋಲುಜೇನು ಇವುಗಳನ್ನು ನೋಡಲು ಬಹಳ ಜನರಿಗೆ ಅವಕಾಶವಿಲ್ಲ. ಕೋಲುಜೇನು ಬಹಳ ಸಾಧುವಾದದು. ಇದರ ಗೂಡು ದೊಡ್ಡದು ಎಂದರೆ ಚೆನ್ನಾಗಿ ಬೆಳೆದ ಚಕ್ಕೋತದ ಕಾಯಿಯಷ್ಟು ದಪ್ಪವಿರುತ್ತದೆ. ಇದರಲ್ಲಿಯೂ ಒಂದು ಜೇನಿಗೆ ಒಂದೇ ಹಲ್ಲೆ. ಹಲ್ಲೆ ಪೊದೆಗಳಲ್ಲಿ ಸಣ್ಣ ಕೋಲುಗಳಿಂದ ನೇತು ಬಿದ್ದಿರುತ್ತದೆ.

ಬಿಳಿತುಡುವೆ ಕರಿತುಡುವೆಗಿಂತ ಸ್ವಲ್ಪಸಾಧು. ಮರಗಳಲ್ಲಿ ಸಣ್ಣ ತೂತು ಇರುವ ಪೊಟರೆ ಗೆದ್ದಲಿಲ್ಲದ ಹುತ್ತ ಇಂಥಾ ಅಂತರಂಗದ ಸ್ಥಳಗಳಲ್ಲಿಯೆ ತುಡುವೆ ಜೇನು ಗೂಡುಮಾಡುವುದು. ಕೋಲುಜೇನು, ಹೆಜ್ಜೇನು ಇವುಗಳಂತೆ ಇದು ಎಂದಿಗೂ ಬಹಿರಂಗವಾಗಿರುವುದೇ ಇಲ್ಲ. ಇದರಲ್ಲಿ ಒಂದೊಂದು ಜೇನಿಗೆ ಆರು ಏಳು ಹಲ್ಲೆಗಳ ತನಕ ಇರುತ್ತವೆ. ಇದರ ಹಲ್ಲೆಗಳನ್ನು ಹೆಜ್ಜೇನು ಹಲ್ಲೆಗಳಿಗೆ ಹೋಲಿಸಿದರೆ ಬಹು ಸಣ್ಣ. ಈ ಜೇನು ಹೆಜ್ಜೇನಿಗಿಂತ ಚಿಕ್ಕದು. ಕೋಲು ಜೇನಿಗಿಂತ ದೊಡ್ಡದು. ಇಷ್ಟೆಲ್ಲಾ ವಿಷಯಗಳನ್ನು

ಜೇನಿನ ಬಗೆಗೆ ತಿಳಿದ ನಂತರ ಕುವೆಂಪು ಅವರು ತಮ್ಮ ಗೆಳೆಯರೊಂದಿಗೆ ''ಜೇನುಬೇಟೆಗೆ'' ಹೋದ ಪ್ರಸಂಗವನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ.

ಕುವೆಂಪು ಅವರೊಂದಿಗೆ ಪುಟ್ಟಣ್ಣ , ಹೆಗ್ಗಡೆ, ಇಬ್ರಾಹಿ, ಹೆಳೆಪೈಕದ ಪುಟ್ಟ ಜೊತೆಗೆ ನಾಯಿಗಳನ್ನು ಕರೆದುಕೊಂಡು ಕಾಡಿಗೆ ಹೊರಟರು. ಹೋಗುವಾಗಲೆ ಹಂದಿ ಕಂಡಿದ್ದು ಅದಕ್ಕೆ ಗುಂಡು ಹಾರಿಸಿ ತಗಲದೆ ಅದು ಪಲಾಯನ ಮಾಡಿದ್ದು , ಇಂತಹ ರಸವತ್ತಾದ ಘಟನೆಗಳನ್ನು ವಿವರಿಸಿದ್ದಾರೆ. ಮುಂದೆ ಪುಟ್ಟ ನೋಡಿದ ಜೇನಿದ್ದಲ್ಲಿಗೆ ಹೋದರೆ ಅಲ್ಲಿ ಹಿಂದಿನ ದಿನದ ಕಾಳ್ಕಿಚ್ಚು ಮರದ ಬುಡದ ಹುತ್ತದಲ್ಲಿದ್ದ ತುಡುವೆ ಜೇನಿಗೆ ಹೊಗೆ ಹಾಕಿ ಓಡಿಸಿಬಿಟ್ಟಿತ್ತು. ನಿರಾಶೆಯಿಂದ ಹಿಂದಿರುಗಿ ಪುಟ್ಟಣ್ಣ ಕಂಡ ಜೇನಿಗಾಗಿ ಹೊರಟರು. ಅಲ್ಲಿ ಜೇನು ಹುಳುಗಳಿದ್ದವು. ಅವು ಕರಿತುಡವೆ ಜಾತಿಯ ಜೇನಾಗಿದ್ದರಿಂದ ಪುಟ್ಟಣ್ಣ ನನ್ನಿಂದಾಗದು. ಎಂದರು. ಈ ನಡುವೆ ಕೋಲುಜೇನು, ನಸರಿಗೆ ಸಂಬಂಧಿಸಿದಂತೆ ತಮ್ಮ ಬಾಲ್ಯದ ಅನುಭವವನ್ನು ನೆನಪಿಸಿಕೊಳ್ಳುತ್ತಾರೆ. ತೀರ್ಥಹಳ್ಳಿಯಲ್ಲಿ ಓದುವಾಗ ಕುಶಾವತಿ ನದಿಗೆ ಈಜಲು ಹೋದಾಗ ಕೋಲುಜೇನು ಕಂಡು ಅದನ್ನು ತೆಗೆಯಲು ಬೆಂಕಿ ಹಾಕಿ ಹುಳು ಓಡಿಸಲು ಪ್ರಯತ್ನಿಸಿದಾಗ ಹುಳು ಮತ್ತು ಹಲ್ಲೆ ಎರಡೂ ಬೂದಿಯಾಗಿ ಹೋಗಿ ನಿರಾಸೆಯಾದದ್ದನ್ನು ನೆನೆಯುತ್ತಾರೆ.

ಶ್ರೀಕಂಠ ಎಂಬ ತಮ್ಮ ಸ್ನೇಹಿತ ಹಾಗೂ ನಸರಿಯಿಂದ ಕುವೆಂಪು ಸ್ಕೂಲು ಬಿಡುವ ಪ್ರಸಂಗ ಬಂದಿತೆನ್ನುತ್ತಾರೆ. ಸ್ಕೂಲಿನ ಬೋಳು ಮಹಡಿಯ ಮೇಲೆ ಹತ್ತಿ ಹೆಡ್ಮಾಸ್ಟರ ಆಫೀಸಿನ ಮೇಲುಗಡೆ ಓದುತ್ತಿದ್ದಾಗ ಗೋಡೆಯೊಳಗೆ ಒಂದು ನಸರಿಗೂಡು ಇರುವುದನ್ನು ಶ್ರೀಕಂಠನಿಗೆ ಇವರೇ ಹೇಳಿದರು. ಹೆಡ್ಮಾಸ್ಟರ್ ಆಫೀಸಿರುವುದರಿಂದ ಕುವೆಂಪು ಎಷ್ಟು ಬೇಡವೆಂದರೂ ಕೇಳದೆ ಶ್ರೀಕಂಠ ಆದಿನ ಕೀಳದಿದ್ದರು ಮರುದಿನ ಅವನೊಬ್ಬನೇ ಬಂದು ಕಿತ್ತೇಬಿಟ್ಟ. ಆಮೇಲೆ ಜುಲ್ಮಾನೆಯನ್ನು ಕೊಟ್ಟರು. ಕುವೆಂಪು ಅವರಿಗೂ ಹೆಡ್ಮಾಸ್ಟರು ಸ್ವಲ್ಪ ಬೈದರು. ಸ್ಕೂಲಿನಲ್ಲಿ ನಸರಿ ಕೇಸು ಎಂದು ಆಗ ಈ ಸಂಗತಿ ಬಹಳ ಪ್ರಸಿದ್ಧವಾಗಿತ್ತು. ಇದೆಲ್ಲಾ ಅನುಭವಗಳನ್ನು ನೆನೆಯುತ್ತ ಮತ್ತೆ ಜೇನು ಬೇಟೆಯನ್ನು ಕುರಿತು ವಿವರಿಸುತ್ತಾರೆ. ಪುಟ್ಟಣ್ಣ ಕರಿತುಡವೆಯನ್ನು ಕೀಳಲಾಗುವುದಿಲ್ಲ ಎಂದಾಗ ಕುವೆಂಪು ಪುಟ್ಟಣ್ಣ ಇಬ್ಬರೂ ಜೇನು ಕಟ್ಟಿದ್ದ ಹುತ್ತದಿಂದ ದೂರ ಹೋಗಿ ಕುಳಿತಿದ್ದರು. ಹಳೆಪೈಕಟ ಪುಟ್ಟ

ಕಾಡುಮೆಣಸಿನ ಎಲೆಗಳನ್ನು ಚೆನ್ನಾಗಿ ಅಗಿದು, ಅದರ ರಸವನ್ನು ಹುತ್ತದ ತೂತಿಗೆ ಉಗಿದು ಉಸಿರಾಡ ತೊಡಗಿದನು. ತುಡವೆಜೇನು ಕೀಳಲು ಇದೊಂದು ಉಪಾಯ ಮೆಣಸಿನ ಎಲೆ, ಬೆಳ್ಳುಳ್ಳಿ ಮುಂತಾದ ''ಘಾಟು'' ಇರುವ ಪದಾರ್ಥಗಳನ್ನು ಅಗಿದು ತೂತಿನೊಳಕ್ಕೆ ಉಗಿದು ಗಾಳಿ ಊದುತ್ತಾರೆ. ಜೇನು ಹುಳುಗಳಿಗೆ ತಲೆತಿರುಗಿ ಹಲ್ಲೆಗಳನೆಲ್ಲ ಬಿಟ್ಟು ದೂರ ಸರಿಯುತ್ತವೆ. ಆಗ ಹಲ್ಲೆಗಳನ್ನು ತೆಗೆಯುತ್ತಾರೆ. ಆದರೆ ಪುಟ್ಟನ ಉಪಾಯಕ್ಕೆ ಕರಿ ತುಡುವೆ ಬಗ್ಗಲಿಲ್ಲ. ನಾಲ್ಕೈದು ಹುಳುಗಳು ಅವನಿಗೆ ಹೊಡೆದವು. ಜೇನುಕೀಳುವುದರಲ್ಲಿ ಪ್ರವೀಣರಾದ ಹೆಗ್ಗಡೆಯವರಿಗೂ ಬಗ್ಗದೆ ರೋಷದಿಂದ ಹೊಡೆಯಲಾರಂಭಿಸಿದವು. ಕುವೆಂಪು ಅವರು ಕುಳಿತೆಡೆಗೂ ಬಂದವು. ಪುಟ್ಟಣ್ಣ ಕುವೆಂಪು ಇಬ್ಬರೂ ಬಂಡೆಯ ಬಳಿ ಇಳಿಯುವಾಗ ಕಾಣೆ ಹಂದಿಯ ಗುಹೆಗಳು ಕಂಡುಬಂದವು. ಇವರು ಉದ್ವೇಗದಿಂದ ಅದನ್ನು ಪರೀಕ್ಷಿಸುತ್ತಿದ್ದ ಸಂದರ್ಭದಲ್ಲಿ ಹೆಗ್ಗಡೆಯವರು ಕರೆದರು. ಹೆಗ್ಗಡೆಯವರ ಮುಖ ಜೇನು ಹೊಡೆದು ಊದಿಹೋಗಿತ್ತು. ಆಗ ಪುಟ್ಟಣ್ಣ ಇನ್ನು ಏನೂ ಮಾಡಲಿಕ್ಕಾಗುವುದಿಲ್ಲ ಎಂದು ಬೆಂಕಿ ಹಾಕುವುದೊಂದೇ ಉಪಾಯ ಎಂದು ಹೇಳಿದರು. ಅಂತೆಯೇ ಬೆಂಕಿ ಹಚಿದ್ದರು. ಸಾಕಷ್ಟು ಹುಳುಗಳು ಬೆಂಕಿಗೆ ಆಹುತಿಯಾದವು. ಈ ಕುರಿತು ಕುವೆಂಪು ಲೋಕಪ್ರಸಿದ್ಧಿಯ ಜಯದಲ್ಲಿ ಇಂತಹದಷ್ಟೋ ಆಗಲೆ ಬೇಕಲ್ಲ ಎನ್ನುತ್ತಾರೆ. ಅಂತೂ ಹೇಗೋ ಕಷ್ಟಪಟ್ಟು ಜೇನು ಬೇಟೆಯಾಡಿ ಎಲ್ಲರೂ ಜೇನುತುಪ್ಪದ ಸವಿಯನ್ನು ಸವಿದರು.

ಈ ಮೇಲೆ ನಾವು ತಿಳಿದಂತಹ ಎಲ್ಲಾ ಬೇಟೆಯ ಚಿತ್ರಗಳನ್ನೂ ಕುವೆಂಪು ಅವರು ತಮ್ಮ ಮಲೆನಾಡಿನ ಚಿತ್ರಗಳಲ್ಲಿ ಅನುಭವದೊಂದಿಗೆ ಸ್ವಾರಸ್ಯಕರವಾಗಿ ವಿಶ್ಲೇಷಣೆಯೊಂದಿಗೆ ವರ್ಣಿಸಿದ್ದಾರೆ. ಮಲೆನಾಡಿನಲ್ಲಿ ಬೇಟೆಗೆ ಸಂಬಂಧಿಸಿದಂತೆ ಇಲ್ಲಿ ಚಿತ್ರಿಸಿದಷ್ಟೇ ಅಲ್ಲದೆ ಇನ್ನೂ ಕೆಲವು ವಿಧಧ ಬೇಟೆ ಕ್ರಮಗಳಿವೆ. ಇದನ್ನು ಕುವೆಂಪು ಅವರು ಮಲೆನಾಡಿನ ಚಿತ್ರಗಳಲ್ಲಿ ಹೇಳದಿದ್ದರೂ ಮುಂದೆ ಅವರ ಕಾದಂಬರಿ-ಕತೆಗಳಲ್ಲಿ ಈ ಕರಿತು ಕೆಲವು ವೈಶಿಷ್ಟ ಪೂರ್ಣವಾದ ಸಂಗತಿಗಳನ್ನು ಕತೆಗನುಗುಣವಾಗಿ ಅಲ್ಲಲ್ಲಿ ಚಿತ್ರಿಸಿದ್ದಾರೆ. ಅಂತಹ ಬೇರೆ ಬೇರೆ ವಿಧಧ ಬೇಟೆಗಳ ಬಗೆಗೆ ಮುಂದೆ ಸಂಕ್ಷಿಪ್ತವಾಗಿ ತಿಳಿದುಕೊಳ್ಳಬಹುದು.

೩.೪-ಇತರೆ ಬೇಟೆಯ ವಿಧಗಳು : ಮಲೆನಾಡಿನಲ್ಲಿ ಮೇಲೆ ವಿವರಿಸಲಾದ ಬೇಟೆಯ ಜೊತೆಗೆ ಈಗ ತಿಳಿಯುವ ಇನ್ನೂ ಕೆಲವು ಬೇಟೆಗಳು ಮುಖ್ಯವಾದವುಗಳೆ ಹುಲಿ, ಹಂದಿ, ಮೀನು ಈ ಪ್ರಾಣಿಗಳನ್ನು ಹೆಚ್ಚು ಬೇಟೆಯಾಡುತ್ತಿದ್ದರು. ಇಲ್ಲಿ ರಕ್ಷಣೆಗಾಗಿ,

ತಮ್ಮ ಬೆಳೆಗಳನ್ನು ಕಾಪಾಡಲು, ಆಹಾರಕ್ಕಾಗಿ ಬೇಟೆಯಾಡುತ್ತಾರೆ. ಅಂತಹ ಕೆಲವು ಬೇಟೆಯ ವಿಧಗಳು ಈ ಕೆಳಗಿನಂತಿವೆ.

ಬಲೆಶಿಕಾರಿ : ಬಲೆ ಬೇಟೆಗೆ ಕನಿಷ್ಠ ನಾಲ್ಕಾರು ಬಲೆಗಳು ಎಂಟು ಹತ್ತು ಜನ, ಮೂರು ನಾಲ್ಕು ನಾಯಿಗಳು ಬೇಕಾಗುತ್ತದೆ. ಬಲೆಗಳನ್ನು ತೆಗೆದುಕೊಂಡು ಕುರುಚಲು ಗಿಡಗಳು ಹೆಚ್ಚಾಗಿ ಇರುವ ಪ್ರದೇಶದಲ್ಲಿ ಒಂದಕ್ಕೊಂದು ಸೇರಿಸಿ ಸಾಲಾಗಿ ಕಟ್ಟುತ್ತಾರೆ. ಆ ಬಲೆಗಳನ್ನು ಮೂರು ಅಡಿ ಎತ್ತರಕ್ಕೆ ಎತ್ತಿ ಕೋಲುಗಳನ್ನು ಕೊಟ್ಟು ನಿಲ್ಲಿಸುತ್ತಾರೆ. ಕಾಡಿನ ಕಡೆಯಿಂದ ನಾಯಿಗಳನ್ನು ಬಿಟ್ಟುಕೊಂಡು ಗಿಡಗಳನ್ನು ದೊಣ್ಣೆಯಿಂದ ಬಡಿಯುತ್ತಾ, ಕೂಗುತ್ತಾ ಬರುತ್ತಾರೆ. ಆಗ ಗಿಡದ ಒಳಗಡೆ ಇದ್ದಂತ ಪ್ರಾಣಿಗಳು ಓಡಿಬಂದು ಬಲೆ ಒಳಗೆ ನುಗ್ಗುತ್ತವೆ. ನುಗ್ಗಿದ ತಕ್ಷಣ ನಿಲ್ಲಿಸಿದ ಕೋಲುಗಳು ತಪ್ಪಿ ಕೆಳಗೆ ಬಿದ್ದು ಪ್ರಾಣಿ ಬಲೆಯ ಒಳಗೆ ಆಗುತ್ತದೆ. ಬಲೆಯ ಪಕ್ಕದಲ್ಲಿ ಗಿಡದ ಮರೆಯಲ್ಲಿ ಒಬ್ಬ ದೊಣ್ಣೆ ಹಿಡಿದು ನಿಂತಿರುತ್ತಾನೆ. ಆತನು ಓಡಿ ಬಂದು ದೊಣ್ಣೆಯಿಂದ ಪ್ರಾಣಿಯನ್ನು ಬಡಿದು ಕೊಲ್ಲುತ್ತಾನೆ. ಕೆಲವೊಮ್ಮೆ ನಾಯಿಗಳೂ ಬಲೆಗೆ ಬಿದ್ದು ಹೊಡೆತಕ್ಕೆ ಸಿಕ್ಕುವುದೂವುಂಟು. ಕಾಡುಹಂದಿಗಳಿಗೂ ಕೂಡಾ ದೊಡ್ಡ ಬಲೆಗಳನ್ನು ಕಟ್ಟಿ ಕೆಡಗುತ್ತಾರೆ. ಅದನ್ನು ಕೊಲ್ಲುವುದಕ್ಕೆ ಬಲೆಗಳ ಪಕ್ಕದಲ್ಲಿ ಭರ್ಜಿ ಹಿಡಿದು ನಿಂತಿರುತ್ತಾರೆ. ಹಂದಿ ಬಲೆಗೆ ನುಗ್ಗಿದ ಕೂಡಲೆ ಅವನು ಭರ್ಜಿ ಹಾಕುತ್ತಾನೆ. ಈತನಿಗೆ ಅಭ್ಯಾಸ ಮತ್ತು ಧೈರ್ಯ ಇರಬೇಕು. ಈ ರೀತಿಯ ಹಂದಿ ಬೇಟೆಯನ್ನು ಬಯಲು ಸೀಮೆಯಲ್ಲೂ ಮಾಡುತ್ತಿದ್ದರಂತೆ. ಇಂತಹ ಬೇಟೆಗೆ ಬೇಕಾದ ಬಲೆಗಳನ್ನು ಮೊದಲು ಕಾಡುಮರದ ತೊಗಟೆಯನ್ನು ತೆಗೆದು ಕೊಳೆಸಿ ಅದರಿಂದ ನಾರು ತೆಗೆದು ತಯಾರಿಸುತ್ತಿದ್ದರು. ಆದರೆ ಈಗ ಇಂತಹ ಬಲೆಗಳು ಕಂಡುಬರುವುದಿಲ್ಲ ಪ್ಲಾಸ್ಟಿಕ್ ದಾರದಿಂದ ಮಾಡಿದ ಬಲೆಗಳೇ ಹೆಚ್ಚು ಬಳಕೆಯಲ್ಲಿರುವಂತಹದ್ದು.

ದೊಡ್ಡ ಬೇಟೆ ಅಥವಾ ಕೂಡುಬೇಟೆ : ಪ್ರಾಣಿಗಳನ್ನು ಬೇಟೆಯಾಡುತ್ತಿದ್ದ ವಿಧಾನಗಳಲ್ಲಿ ದೊಡ್ಡ ಬೇಟೆ ಅಥವಾ ಕೂಡುಬೇಟೆ ಸ್ವಾರಸ್ಯಕರವಾದದ್ದು , ಏಕೆಂದರೆ ಈ ಬೇಟೆಗೆ ಸುಮಾರು ಹತ್ತು ಹದಿನೈದು ಕೋವಿಕಾರರು, ಹದಿನೈದು ಇಪ್ಪತ್ತು ಜನ ಹಳುಸೋಯುವವರು, ನಾಲ್ಕಾರು ನಾಯಿಗಳು ಇರಬೇಕಾಗಿತ್ತು. ಇದೊಂದು ಸಾಮೂಹಿಕ ಬೇಟೆಯಾಗಿತ್ತು. ಇವರಲ್ಲಿ ಬಿಲ್ಲಿನವರು, ಹಳುವಿನವರು ಎಂದು ಎರಡು ಭಾಗ

ಮಾಡುತ್ತಾರೆ. ಕೋವಿ ಹಿಡಿದು ನಿಗದಿತ ಸ್ಥಳಗಳಲ್ಲಿ ಕುಳಿತು ಕಾಯ್ದು ಓಡಿಬರುವ ಪ್ರಾಣಿಗಳಿಗೆ ಗುರಿಯಿಟ್ಟು ಹೊಡೆಯುವವರು ಬಿಲ್ಲಿನವರು. ಕಾಡಿನಿಂದ ಪ್ರಾಣಿಗಳನ್ನು ಓಡಿಸಿ ತಂದು ಅವರಿಗೆ ಪೂರೈಸುವವರು ಹಳುವಿನವರು. ಬೇಟೆಗೆ ಮೊದಲು ಬಿಲ್ಲಿನವರು ಕಾಡಿನ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಪ್ರಾಣಿಗಳು ದಾಟಿಹೋಗಬಹುದಾದ ಸ್ಥಳಗಳನ್ನು ಹುಡುಕಿ ನಿರ್ಧಿಷ್ಟ ಅಂತರದಲ್ಲಿ ಅಲ್ಲಲ್ಲಿ ಕೋವಿ ಹಿಡಿದು ಅಡಗಿ ಕುಳಿತಿರುತ್ತಾರೆ. ಹಾಗೆ ಕೂರುವ ಸ್ಥಳಗಳನ್ನು ಕಂಡಿ ಎನ್ನುತ್ತಾರೆ. ಕೋವಿ ಹಿಡಿದವರು ಅಲ್ಲಿ ಕೂರುತ್ತಾರೆ. ನಂತರ ಹಳುವಿನವರು ಕಂಡಿಗಳ ಸದ್ದಿನಿಂದ ಕಾಡಿನ ಪ್ರಾಣಿಗಳನ್ನು ಕೋವಿಹಿಡಿದವರ ಬಳಿ ಅಟ್ಟಿಸಿಕೊಂಡು ಬರುವರು ತಮ್ಮೆಡೆಗೆ ಓಡಿ ಬರುವ ಪ್ರಾಣಿಗಳನ್ನು ಕಂಡಿ ಕಾಯುವವರು ಹೊಡೆಯುತ್ತಾರೆ. ಕುವೆಂಪು ಅವರ ಮಲೆನಾಡಿನ ಚಿತ್ರಗಳಲ್ಲಿ ಸಂಕ್ಷಿಪ್ತವಾಗಿ ಅದರ ವ್ಯಾಖ್ಯೆಯನ್ನು ಮಾತ್ರ ಹೇಳಿದ್ದಾರೆ. ಆದರೆ ಇಂತಹ ಕೂಡುಬೇಟೆ ಪ್ರಸಂಗವನ್ನು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಾಣಬಹುದು. ನಾಯಿಗುತ್ತಿ ಹುಲಿಕಲ್ಲು ಗುಡ್ಡವನ್ನೇರುವಾಗ ಈ ಕುರಿತು ಚಿಂತಿಸುತ್ತಾನೆ.

ಶಿಸ್ತು ಬೇಟೆ ಅಥವಾ ಕೋವಿ ಕಟ್ಟುವಿಕೆ : ಶಿಸ್ತು ಬೇಟೆಯಲ್ಲಿ ಬೇಟಗಾರರು ಹಾಜರಿರದ್ದರೂ ಬೇಟೆಯಾಗುತ್ತದೆ. ಇದು ಜಮೀನಿನಲ್ಲಿ ಬೆಳೆ ಇರುವ ಸಮಯದಲ್ಲಿ ಆ ಬೆಳೆಯನ್ನು ಲೂಟಿ ಮಾಡಲು ಪ್ರಾಣಿಗಳು ಬರುವ ಜಮೀನಿಗೆ ರಾತ್ರಿ ಕಾಲದಲ್ಲಿ ಬರುವ ಕಂಡಿಗಳಿಗೆ ಕೋವಿಯನ್ನು ಅಡ್ಡಕಟ್ಟಿ ಪ್ರಾಣಿಯನ್ನು ಕೆಡಗುತ್ತಾರೆ. ಹಂದಿ ಮತ್ತು ಹುಲಿಗೆ ಮಾತ್ರ ಈ ಶಿಸ್ತನ್ನು ಕಟ್ಟುತ್ತಿದ್ದರು. ಇದು ಮೃಗವನ್ನು ಕೊಲ್ಲುವ ಸ್ವಯಂಚಾಲಿತ ಯಂತ್ರದಂತೆ. ಕಾಡುಪ್ರಾಣಿಗಳ ಚಲನ ವಲನಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುವುದು ಈ ಬೇಟೆಯ ವಿಧಾನದ ಮೊದಲ ಕೆಲಸ. ನಂತರ ಆಯಾ ಪ್ರಾಣಿಗೆ ತಕ್ಕ ಅಳತೆಯ ಎತ್ತರಕ್ಕೆ ಮರದ ಸಣ್ಣದಾದ ಮೂರು ಕಂಬಗಳನ್ನು ನಿಲ್ಲಿಸಿ ಹಿಂಭಾಗಕ್ಕೆ ಎರಡು ಕಂಬ, ಮುಂಭಾಗಕ್ಕೆ ಒಂದು ಕಂಬ ಹೀಗೆ ಸರಿಯಾಗಿ ನಿಲ್ಲಿಸಿ, ಮದ್ದು ತುಂಬಿದ ಕೋವಿಯನ್ನು ಅಡ್ಡಾಡ್ಡವಾಗಿ ಅದರ ಮೇಲೆ ಇಟ್ಟು ಬಲವಾಗಿ ಹಗ್ಗದಿಂದ ಕಟ್ಟಬೇಕು, ಕೋವಿಯ ಕುದುರೆಗೆ ದಾರಕಟ್ಟಿ ಅದರ ಇನ್ನೊಂದು ತುದಿಯನ್ನು ದೂರಕ್ಕೆ ಒಂದಿಷ್ಟು ನೆಲದಿಂದ ಎತ್ತರ ಬರುವ ಹಾಗೆ ಕಟ್ಟುವರು. ಈ ದಾರಕ್ಕೆ ಸಿಡಿಗೋಲಿನ ಆಧಾರವಿರುತ್ತದೆ. ಪ್ರಾಣಿಯ ದೇಹದ ಯಾವುದೇ ಭಾಗ ದಾರಕ್ಕೆ ತಗುಲಿದರೆ ಸಾಕು. ಕೋವಿ ಹಾರಿ ಪ್ರಾಣಿಗೆ ಗುಂಡು

ಬಡಿಯುತ್ತದೆ. ಮೇಲುನೋಟಕ್ಕೆ ಇತರ ಬೇಟೆ ವಿಧಾನಗಳಲ್ಲಿಯ ಶ್ರಮ ಸಮಯದ ಪೋಲು ಇಲ್ಲಿ ಇಲ್ಲವಾದರೂ ಇದರಲ್ಲಿಯ ಅಪಾಯವನ್ನು ಕಡೆಗಣಿಸುವಂತಿಲ್ಲ. ಕಾಡು ಪ್ರಾಣಿಗಳಿಗಾಗಿ ಹೂಡುವ ಈ ತಂತ್ರ ಕೆಲವೊಮ್ಮೆ ತಿರುಮಂತ್ರದಂತೆ ಬೇಟೆಗಾರರಿಗೆ, ನಾಯಿಗಳಿಗೆ, ದನಕರುಗಳಿಗೆ, ತಿರುಗಾಡುವ ಜನರಿಗೆ ಕೋವಿಯ ಈಡು ತಾಗಬಹುದು. ಈ ವಿಧಾನದಲ್ಲಿ ಸಾಯಂಕಾಲ ಕೋವಿ ಕಟ್ಟಿಬಂದು ಬೆಳಿಗ್ಗೆ ಬೇಗ ಹೋಗಿ ಅದನ್ನು ಬಿಚ್ಚಿ ಬಿಡುತ್ತಿದ್ದರು. ಈ ಕುರಿತು ಕೆಲವು ಪ್ರಸಂಗಗಳು ಕುವೆಂಪು ಕಾದಂಬರಿಗಳಲ್ಲಿ ಕಾಣಬಹುದು. ಒಳ್ಳೆಯ ಬೇಟೆಗಾರರು ಈ ತಂತ್ರವನ್ನು ಒಪ್ಪುತ್ತಿರಲಿಲ್ಲ.

ಕರೆಬೇಟೆ : ಕರೆಬೇಟೆ ಎಂಬುದು ಪ್ರಾಚೀನ ಕಾಲದಿಂದಲೂ ಇರುವಂತಹದ್ದು. ಬೇಟೆಯ ಪ್ರಾಣಿಗಳಂತೆಯೇ ಕೂಗುತ್ತಾ ಅವುಗಳನ್ನು ಹತ್ತಿರಕ್ಕೆ ಸೆಳೆಯುತ್ತ ಮರಳು ಮಾಡಿ ಕೊಲ್ಲುವ ತಂತ್ರ, ಬೇಟೆಗಾರರು ಇಲ್ಲಿ ಪ್ರಾಣಿ-ಪಕ್ಷಿಗಳಂತೆ ಕೂಗುವ ಅನುಕರಣೆಯನ್ನು ಚೆನ್ನಾಗಿ ಮಾಡಿದಷ್ಟು ಬೇಟೆ ಫಲಪ್ರದವಾಗುತ್ತದೆ. ಸಾಮಾನ್ಯವಾಗಿ ಆಯಾ ಪ್ರಾಣಿಗಳ ಪ್ರಣಯಭಾವ ಉದ್ದೀಪನಗೊಂಡ ಸಂದರ್ಭದಲ್ಲಿ ಜೊತೆಗಾಗಿ ಅವು ಪರಿತಪಿಸುವಲ್ಲಿ ಬೇಟೆಗಾರ ಅದರ ಲಾಭ ಪಡೆದುಕೊಳ್ಳುತ್ತಾನೆ. ಕರೆಬೇಟೆ ಸಾಧು ಪ್ರಾಣಿಗಳಿಗೆ ಮಾತ್ರ ಅನ್ವಯಿಸುವುದು. ಕರೆಬೇಟೆಗೆ ಸಂಬಂಧಿಸಿದ ಒಂದು ಪ್ರಸಂಗ ಮಲೆನಾಡಿನ ಚಿತ್ರಗಳು ಸಂಕಲನದ "ಪುಟ್ಟಾಚಾರಿಯ ಕಾಡುಕೋಳಿ" ಚಿತ್ರದಲ್ಲಿ ಕಂಡು ಬರುತ್ತದೆ. ಪುಟ್ಟಾಚಾರಿ ಕಾಡಿಗೆ ಹೋಗಿ ನಾಲ್ಕೈದು ಮೈಲಿಗಳಷ್ಟು ಅರಣ್ಯದ ಭಾಗಕ್ಕೆ ಬಂದಾಗ ಕಾಡುಕೋಳಿಗಳು ಕೂಗುತ್ತಿದ್ದಾವೆ ಹೊರತು ಕಣ್ಣಿಗೆ ಕಂಡಿರಲಿಲ್ಲ, ಆಚಾರಿಗೆ ರೇಗಿಹೋಯಿತು. "ಒಂದು ಕಡೆ ಕುಳಿತು ಒಂದು ತೆಳುವಾದ ಚಿಗುರೆಲೆಯನ್ನು ಎರಡು ಹೆಬ್ಬೆರಳುಗಳ ನಡುವೆ ಇಟ್ಟುಕೊಂಡು ಹುಂಜದಂತೆ ಕೇಕೆ ಹಾಕಿದನು ; ಹೇಂಟೆ ಬರಲಿಲ್ಲ, ಹೇಂಟೆ ಹುಂಜವನ್ನು ಕರೆಯುವಂತೆ ಕೂಗಿದನು. ಹುಂಜ ಯಾವುದೂ ಬರಲಿಲ್ಲ"[3] ಹೀಗೆ ಕರೆಬೇಟೆಯ ಕ್ರಮದಿಂದಲೂ ಬೇಟೆಯಾಡುತ್ತಿದ್ದರು.

ಸೆಬೆಬೇಟೆ : ಹಕ್ಕಿಗಳನ್ನು ಬೇಟೆಯಾಡಲು ಅವು ಬಂದು ಕೂರುವ ಸ್ಥಳದಲ್ಲಿ ಇಲ್ಲವೆ ಅವು ಕಟ್ಟಿರುವ ಗೂಡುಗಳ ಎದುರಿನಲ್ಲಿ ಗಿಡಮರಗಳ ರೆಂಬೆ ಕೊಂಬೆಗಳ ಮೇಲೆ ಉರುಳುಗಣ್ಣ ಜೋಡಿಸಿಟ್ಟಿರುತ್ತಿದ್ದರು. ಸಿಡಿಗೋಲನನ್ನು ಗಟ್ಟಿಯಾಗಿ ನಿಲ್ಲಿಸಿರುತ್ತಾರೆ. ಅದರ

ಮೇಲ್ತುದಿಗೆ ಸೂತ್ರದ ದಾರ ಕಟ್ಟಿ ಸಿಡಿಗೋಲನ್ನು ಬಿಲ್ಲಿನಂತೆ ಭಾಗಿಸಿ ಕೆಳಗೆ ಬಿಗಿಯಲಾಗುತ್ತದೆ. ಹಕ್ಕಿಗಳು ಕೂರಬಹುದಾದಷ್ಟು ಉರುಳುಗಣ್ಣಿಯನ್ನು ಮಧ್ಯದಲ್ಲಿ ಇಟ್ಟು ಅದಕ್ಕೆ ಕಣೆಯು ಕಡ್ಡಿ ಆಧಾರವಾಗಿರುತ್ತದೆ. ಹಕ್ಕಿ ಉರುಳಿನಲ್ಲಿ ಬಂದ ತಕ್ಷಣ ಆಧಾರವಾಗಿರುವ ಕಣೆಯ ಕಡ್ಡಿ ಸಿಡಿಯುತ್ತದೆ. ಸಿಡಿಗೋಲು ಮೇಲಕ್ಕೆ ನೇರವಾಗಿ ಬಿಡುತ್ತದೆ. ಇದರಿಂದ ಉರುಳು ಬಿಗಿದು ಬಿಗಿದು ಹಕ್ಕಿ ಅಲ್ಲಿಯೇ ಒದ್ದಾಡುತ್ತಾ ಇರಬೇಕು ಇಲ್ಲವೆ ಸತ್ತು ತೂಗಾಡಬೇಕು. ಸೆಬೆ ಕಟ್ಟಲು ಅಥವಾ ಉರುಳು ಕಟ್ಟಲು ಕಾಡಿನ ಪಕ್ಷಿಗಳ ಬಗೆಗೆ ಹಾಗೆ ಉರುಳು ಕಟ್ಟುವ ಬಗೆಗೆ ಪ್ರತಿಯೊಂದು ಚೆನ್ನಾಗಿ ತಿಳಿದಿರಬೇಕು. ಉರುಳು ಬೇಟೆಯನ್ನು ಬಿಟ್ಟರೆ ಪಕ್ಷಿಗಳನ್ನು ಚಿಟ್ಟುಬಿಲ್ಲು (ಚಾಟರಿಬಿಲ್ಲು) ರಬ್ಬರ್‌ಬಿಲ್ಲುಗಳ ಸಹಾಯದಿಂದಲೂ ಬೇಟೆಯಾಡುತ್ತಿದ್ದರು. ಇದಲ್ಲದೆ ಕೋವಿಯನ್ನು ಗುರಿಯಿಟ್ಟು ಹೊಡೆದು ಕೊಲ್ಲುವ ಕ್ರಮವೂ ಮಲೆನಾಡಿನಲ್ಲಿತ್ತು. ಕೋವಿಯಿಂದ ಬೇಟೆಯಾಡುವ ಕ್ರಮ ಇಂದಿಗೂ ಅಪರೂಪಕ್ಕೆ ಒಮ್ಮೊಮ್ಮೆ ಬಳಕೆಯಲ್ಲಿದೆ.

ಮೀನು ಬೇಟೆ : ಮೀನು ಬೇಟೆ ಮಲೆನಾಡಿನಲ್ಲಿ ತುಂಬಾ ಪ್ರಸಿದ್ಧವಾದದ್ದು, ಈ ಬೇಟೆ ಇಂದಿಗೂ ಅಸ್ತಿತ್ವದಲ್ಲಿದೆ. ಆದರೆ ಬೇಟೆಯಾಡುವ ಕ್ರಮ ಬದಲಾಗಿದೆ ಅಷ್ಟೆ. ಕುವೆಂಪು ತಮ್ಮ ಪ್ರಬಂಧದಲ್ಲಿ ಈ ಕುರಿತು ಪ್ರಸ್ತಾಪಿಸಿಲ್ಲದಿದ್ದರೂ ಅವರ ಕಾದಂಬರಿಗಳಲ್ಲಿ ಈ ಮೀನುಬೇಟೆಯ ಅನೇಕ ಪ್ರಸಂಗಗಳು ಬಂದಿರುವುದನ್ನು ಕಾಣಬಹುದು.

ಮೀನು ಬೇಟೆ ಕೇವಲ ನದಿ ಕೆರೆಗಳಿಗೆ ಸೀಮಿತವಾಗಿಲ್ಲ. ಚಿಕ್ಕಪುಟ್ಟ ಹಳ್ಳಕೊಳ್ಳಗಳಲ್ಲೂ ಮೀನು ಬೇಟೆಯಾಡುತ್ತಾರೆ. ಮಳೆಗಾಲ, ಬೇಸಿಗೆ, ಚಳಿಗಾಲ ಎಲ್ಲಾ ಕಾಲದಲ್ಲೂ ಮೀನು ಹಿಡಿಯುತ್ತಾರೆ. ಬೇಸಿಗೆಯಲ್ಲಿ 'ಹೊಂಡ ತೊಳಕುವುದು' ಎಂಬ ವಿಧಾನವನ್ನು ಬಳಸುತ್ತಾರೆ. ಅಂದರೆ ಹಳ್ಳದ ನಡುವೆ ಅಥವಾ ತಗ್ಗಿರುವಲ್ಲಿ ಹೊಂಡದಲ್ಲಿ ನೀರು ನಿಂತಿದ್ದರೆ ಮಳೆಗಾಲದಲ್ಲಿ ಅಲ್ಲಿ ಮೀನು ಸೇರಿಕೊಂಡಿರುತ್ತವೆ. ಅಂತ ಸ್ಥಳಗಳಲ್ಲಿ ನೀರನ್ನು ತುಳುಕಿಸಿ ನೀರನ್ನು ಬತ್ತಿಸಿ ಮೀನು ಹಿಡಿಯುವುದು ಈ ವಿಧಾನ ತುಂಬ ಸರಳ ಮತ್ತು ಸುಲಭವಾದರೂ ಕೇವಲ ಚಿಕ್ಕಪುಟ್ಟ ಹೊಂಡಗಳಿಂದ ಇದು ಸಾಧ್ಯವೇ ಹೊರತು ದೊಡ್ಡದಾದ ವಿಶಾಲವಾದ ಹೊಂಡಗಳಿಂದ ಸಾಧ್ಯವಿಲ್ಲ.

ಮೀನುಗಳಿಗೆ ಘಾಟಿನ, ಕಡುವಾದ ಹಾಗೂ ಮತ್ತು ಬರಿಸುವ ಕಾಯಿ, ಬೇರು

ತೊಗಟೆಗಳನ್ನು ನೀರಿಗೆಸೆದು ಬೇಟೆಯಾಡುತ್ತಾರೆ. ಇದಕ್ಕೆ 'ಕಡು' ಹಾಕುವುದೆನ್ನುತ್ತಾರೆ. ಇನ್ನೊಂದು ಕ್ರಮ ಕೂಣಿ ಹಾಕಿ ಮೀನು ಹಿಡಿಯುವುದು. ಬಿದಿರು ಇಲ್ಲವೆ ಬೆತ್ತದಿಂದ ಮಾಡುವ ಬುಟ್ಟಿಯಾಕಾರದ ಸಾಧನದಿಂದ ಹೊಂಡ, ಕೆರೆ, ಹಳ್ಳ ಕಾಲುವೆ ಮೂಲಕ ಹರಿದು ಬರುವ ಮೀನುಗಳನ್ನು ಹಿಡಿಯುವುದು ಮಲೆನಾಡಿನಲ್ಲಿ ರೂಢಿಯಲ್ಲಿತ್ತು. ಈಗಲೂ ಕೆಲವು ಕಡೆ ಕಂಡು ಬರುತ್ತದೆ. ಕೂಣಿಯ ಮೂಲಕ ಏಡಿ, ಮೀನು ಎರಡನ್ನೂ ಹಿಡಿಯುತ್ತಾರೆ. ಮಳೆಗಾಲ ಮುಗಿದ ನಂತರ ಹಳ್ಳಕ್ಕೆ ಅಡ್ಡ ಕಟ್ಟಿ ನೀರನ್ನು ಕೂಣಿಗೆ ಹೋಗಿ ಬೀಳುವಂತೆ ಮಾಡಿ ಮೀನು ಬೇಟೆಯಾಡುತ್ತಾರೆ. ಇದನ್ನು ಬಿಟ್ಟರೆ ಗಾಳ ಮತ್ತು ಬಲೆಗಳ ಮೂಲಕವೂ ಮೀನು ಬೇಟೆಯಾಡುತ್ತಾರೆ. ಬೇಸಿಗೆಯಲ್ಲಾದರೆ ತುಂಗಾ ನದಿಯಂತಹ ದೊಡ್ಡ ನದಿಗಳಿಗೂ ಬಲೆ ಬಿಟ್ಟು ಮೀನು ಹಿಡಿಯುತ್ತಾರೆ. ಮಳೆಗಾದಲ್ಲಿ ಹಳ್ಳ ತುಂಬಿ ನೆರೆ ಬಂದಾಗ ನೆರೆಗೆ ಬಲೆ ಬಿಡುತ್ತಾರೆ. ಮೊದಲು ಗಾಳ, ಬಲೆಗಳನ್ನು ತಾವೆ ತಯಾರಿಸಿಕೊಳ್ಳುತ್ತಿದ್ದರು. ಈಗ ಬೇರೆ ಕಡೆಯಿಂದ ಹಣಕೊಟ್ಟು ತರುತ್ತಾರೆ.

ಮೀನು ಬೇಟೆಯಲ್ಲಿ ಇನ್ನೊಂದು ಹತ್ತು ಮೀನು ಬೇಟೆ ಇದೊಂದು ವಿಶಿಷ್ಟವಾದ ಮೀನುಬೇಟೆ ಧಾರಾಕಾರವಾಗಿ ಸುರಿಯುವ ಮಳೆಯಿಂದ ಹೊಳೆಯ ನೀರು ಹಳ್ಳಕ್ಕೆ ಬಂದು ಹಳ್ಳ ತುಂಬಿ ಗದ್ದೆಗಳಿಗೆ ನುಗ್ಗುತ್ತದೆ. ಅದರ ಜೊತೆಗೆ ಮೊಟ್ಟೆಯಿಡಲು ಮೀನುಗಳು ನದಿಕೆರೆಗಳಿಂದ ಮೇಲೇರಿ ಬರುತ್ತವೆ. ಆ ಸಮಯಕ್ಕೆ ಮೀನುಗಾರರು ರಾತ್ರಿ ದೀಪ ಉರಿಸಿ ಅವುಗಳನ್ನು ಆಕರ್ಷಿಸಿ, ಚಿಮ್ಮಿ ಬರುವ ಮೀನನ್ನು ಹಿಡಿಯುತ್ತಾರೆ. ಇಲ್ಲ ಕತ್ತಿಯಿಂದ ಕೊಲ್ಲುತ್ತಾರೆ. ಬೆಳಕಿಗೆ ಆಕರ್ಷಿತವಾಗಿ ಹತ್ತಿ ಬರುವ ಮೀನುಗಳ ಬೇಟೆಯೇ ಹತ್ತು ಮೀನು ಬೇಟೆ ಎನಿಸಿದೆ. ಈಗಲೂ ಈ ಬೇಟೆ ಅಸ್ತಿತ್ವದಲ್ಲಿದ್ದು , ಈಗ ದೀಪದ ಬದಲು ಬ್ಯಾಟರಿ ಬಳಸುತ್ತಾರೆ. ಬ್ಯಾಟರಿ ಬಳಸಿ ಕದ್ದಿಂಗಳ ರಾತ್ರಿಯಲ್ಲಿ ಕಾಡಿನಲ್ಲಿ ಚಲಿಸುತ್ತಾ ಮರಕ್ಕೆ ಬ್ಯಾಟರಿ ಹಾಕಿ ಆ ಬೆಳಕಿಗೆ ಪ್ರಾಣಿಗಳ ಕಣ್ಣು ಹೊಳೆದಾಗ ಅವು ಅಲ್ಲೆ ಕುಳಿತುಬಿಡುತ್ತವೆ. ಅವುಗಳ ಕಣ್ಣಿನ ಹೊಳಪಿನ ಬಣ್ಣದ ಅಂದಾಜಿಗೆ ಇಂತಹ ಪ್ರಾಣಿ ಎಂದು ಗುರುತಿಸಿ ಆ ಪ್ರಾಣಿಗೆ ಕೋವಿಯಿಂದ ಹೊಡೆಯುತ್ತಾರೆ. ಇದಕ್ಕಾಗಿಯೇ ತಲೆಗೆ ಕಟ್ಟುವ ಲೈಟನ್ನು ಸಹ ತಯಾರು ಮಾಡಿಕೊಂಡಿರುತ್ತಾರೆ.

ಮೀನು ಬೇಟೆಯಲ್ಲಿ ಇನ್ನೊಂದು ಬಗೆಯಿದೆ. ಇದು ನದಿಯಲ್ಲಿ ಅದರಲ್ಲೂ ಬೇಸಿಗೆ

ಸಮಯದಲ್ಲಿ ಮಾಡುವ ಬೇಟೆ ಅವಲು ಮೀನು ಎಂಬ ಜಾತಿಯ ಮೀನು ತನ್ನ ಮರಿಗಳನ್ನು ಆಡಿಸುತ್ತಾ ನದಿ ದಡದ ಬಳಿ ಬರುತ್ತದೆ. ಇದು ಬರುವ ಜಾಗ ಬೇಟೆಗಾರನಿಗೆ ತಿಳಿದಿರುತ್ತದೆ. ಈ ಅವಲು ಮೀನು ನೀರಿನಿಂದ ಒಮ್ಮೊಮ್ಮೆ ತಲೆ ಮೇಲೆ ಹಾಕುತ್ತವೆ. ಆ ಸಮಯ ನೋಡಿ ಬೇಟೆಗಾರ ಕೋವಿಯಿಂದ ಅದರ ತಲೆಗೆ ಹೊಡೆಯುತ್ತಾನೆ. ಇಲ್ಲಿ ಸಾಕಷ್ಟು ಸಮಯ ಕಾದು ಕುಳಿತಿರಬೇಕು. ಜೊತೆಗೆ ಗುರಿ ಇಡುವಲ್ಲಿ ಚಾಣಕ್ಷತೆ ಇರಬೇಕು.

ಇತ್ತೀಚೆಗೆ ಮೀನು ಬೇಟೆಯಾಡಲು ತೋಟ (ಸಿಡಿಮದ್ದು) ಅಂದರೆ ಕಲ್ಲುಬಂಡೆ ಒಡೆಯಲು ಬಳಸುವ ಸಿಡಿಮದ್ದನ್ನು ನದಿಗೆ ಹಾಕಿ ಮೀನುಗಳು ಸತ್ತು ಮೇಲೆ ತೇಲುತ್ತಾ ಬಂದಾಗ ಹಿಡಿಯುತ್ತಾರೆ. ಇದರಿಂದಾಗುವ ಹಾನಿಯ ಅರಿವಿಲ್ಲದೆ ಜಲಚರಗಳನ್ನು ಕೊಂದು ಅವುಗಳ ನಾಶಕ್ಕೆ ಕಾರಣರಾಗುತ್ತಾರೆ.

ಹೀಗೆ ಮಲೆನಾಡಿನಲ್ಲಿ ಕೆಲವು ಬೇಟೆಗಳು ತಮ್ಮ ವಿಶಿಷ್ಟವಾದ ವಿಧಾನಗಳೊಂದಿಗೆ ಅಸ್ತಿತ್ವದಲ್ಲಿದ್ದವು. ಅದರಲ್ಲೂ ನಾವು ಕುವೆಂಪು ಪ್ರಬಂಧಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಮಲೆನಾಡಿನಲ್ಲಿ ಹುಲಿಬೇಟೆ ಹಾಗೂ ಹಂದಿಬೇಟೆ ಹೆಚ್ಚು ಪ್ರಚಲಿತದಲ್ಲಿದ್ದದು ಕಂಡುಬರುತ್ತದೆ. ಮಲೆನಾಡಿನ ಜನರು ಹುಲಿಬೇಟೆಯಂತಹ ಅಪಾಯವನ್ನು ಏಕೆ ಎದುರಿಸುತ್ತಿದ್ದರೆಂದರೆ ಇಲ್ಲಿ ಮಾಂಸಕ್ಕಾಗಿಯಂತೂ ಯಾರೂ ಹುಲಿಯನ್ನು ಕೊಲ್ಲುತ್ತಿರಲಿಲ್ಲ. ಚರ್ಮ, ದಂತ, ಉಗುರುಗಳಿಗಾಗಿಯೂ ಅಲ್ಲ , ಜೀವವನ್ನು ಪಣಕ್ಕಿಟ್ಟು ಹುಲಿಬೇಟೆ ಆಚುತ್ತಿದ್ದುದು ಸಾಕು ಪ್ರಾಣಿಗಳ ರಕ್ಷಣೆಗಾಗಿ ಜೊತೆಗೆ ಪ್ರತಿಷ್ಠೆಗಾಗಿ ಬೇರೆ ಎಷ್ಟೋ ಪ್ರಾಣಿಗಳನ್ನು ಕೊಂದಿದರೂ ಜನ ನೆನಪಿಡುತ್ತಿದ್ದರೋ ಇಲ್ಲವೋ ಆದರೆ ಒಬ್ಬ ಒಂದು ಹುಲಿಯನ್ನು ಕೊಂದರೆ ಆತನನ್ನು ಕೊನೆಯವರೆಗೂ ಸ್ಮರಿಸುತ್ತಿದ್ದರು. ಹೀಗಾಗಿ ಪ್ರತಿ ಬೇಟೆಗಾರನಿಗೂ ತಾನೊಂದು ಹುಲಿ ಕೊಲ್ಲಬೇಕೆಂಬ ಕನಸಿರುತ್ತಿತ್ತು. ಈ ಸಂಗತಿಯನ್ನು ನಾವು ಮಲೆನಾಡಿನ ಚಿತ್ರಗಳಲ್ಲೂ ಕಾಣಬಹುದು. ಅದೇ ರೀತಿ ಮಲೆನಾಡಿನಲ್ಲಿ ಅತ್ಯಂತ ಪ್ರಸಿದ್ಧವಾದ ಬೇಟೆಯೆಂದರೆ ಕಾಡುಹಂದಿಯದು. ಈ ಕುರಿತು ಕುವೆಂಪು ಅವರೇ ತಮ್ಮ ಗದ್ಯ ಕೃತಿಗಳಲ್ಲಿ ಸಾಕಷ್ಟು ಘಟನೆಗಳನ್ನು ಸನ್ನಿವೇಶಗಳನ್ನು ಚಿತ್ರಿಸಿರುವುದನ್ನು ಗುರುತಿಸಬಹುದು.

ಮಲೆನಾಡಿನಲ್ಲಿ ಇಷ್ಟೊಂದು ವೈವಿಧ್ಯತೆಯಿಂದ ವೈಶಿಷ್ಟಯಿಂದ ಪ್ರಚಲಿತದಲ್ಲಿದ್ದಂತಹ ಬೇಟೆ ಇಂದು ಯಾವ ಸ್ಥಿತಿಯಲ್ಲಿದೆ ಎಂಬುದು ನಾವು ಇಲ್ಲಿ ತಿಳಿಯಬೇಕಾದ ಪ್ರಮುಖ ಅಂಶ. ಮೊದಲಿಗೆ ಬೇಟೆ ಎಂದಾಗ ಅಲ್ಲಿ ದಟ್ಟವಾದ ಕಾಡು ಸಾಕಷ್ಟು ಪ್ರಾಣಿಪಕ್ಷಿಗಳು ಇರಬೇಕಾದದ್ದು ಅವಶ್ಯಕ. ಆದರೆ ಈಗ ಮಲೆನಾಡಿನಲ್ಲಿ ಕುವೆಂಪು ಚಿತ್ರಿಸಿದ ದಟ್ಟವಾದ ಹೆಮ್ಮರಗಳ ಬೀಡು ಕೇವಲ ಕಲ್ಪನೆಯಾಗಿದೆ ಅಷ್ಟೆ. ಮತ್ತೆ ಕುವೆಂಪು ಹೇಳಿರುವ ಪ್ರಾಣಿ-ಪಕ್ಷಿಗಳನ್ನು ಇಂದಿನ ಪೀಳಿಗೆ ಹೆಸರನ್ನೇ ಕೇಳಿರಲಿಕ್ಕಿಲ್ಲ. ಅಂದ ಮೇಲೆ ಅವನ್ನು ಕಾಣುವುದಂತೂ ಸಾಧ್ಯವೇ ಇಲ್ಲದ ಮಾತು. ಹುಲಿ, ಕಾಡುಹಂದಿ ಇಂತಹ ಪ್ರಾಣಿಗಳನ್ನು ಸಹ ಪ್ರಾಣಿ ಸಂಗ್ರಹಾಲಯ, ಅಭಯಾರಣ್ಯಗಳಲ್ಲಿ ಮಾತ್ರ ನೋಡುವಂತಹ ಸ್ಥಿತಿ ಉಂಟಾಗಿದೆ. ಇಷ್ಟರ ಮಟ್ಟಿಗೆ ಮನುಷ್ಯ ನಾಗರಿಕನಾಗಿ ಬೆಳೆಯುತ್ತಾ ಪ್ರಕೃತಿಯ ವಿನಾಶಕ್ಕೆ ಕಾರಣನಾಗುತ್ತಿದ್ದಾನೆ. ಇಂದಿನ ಅವಸರದ ವೇಗದ ಜೀವನದಲ್ಲಿ ಬೇಟೆಯಂತಹ ಮನೋರಂಜನೆ, ಸಾಹಸಪೂರ್ಣ ಹವ್ಯಾಸಗಳನ್ನು ಮರೆತೇ ಬಿಟ್ಟಿದ್ದಾನೆ. ಈಗಿನವರ ಜೀವನದ ಗುರಿ, ಉದ್ದೇಶ ಒಂದೇ ಎಷ್ಟು ಸಾಧ್ಯವೊ ಅಷ್ಟು ಬೇಗ ಹೇಗಾದರೂ ಆರ್ಥಿಕವಾಗಿ ಪ್ರಬಲರಾಗಬೇಕು. ಸಾಮಾಜಿಕವಾಗಿ ಉತ್ತಮ ಸ್ಥಾನದಲ್ಲಿರಬೇಕು. ಇದಕ್ಕಾಗಿ ಏನು ಮಾಡಲು ಸಿದ್ಧರಾಗಿದ್ದಾರೆ. ಇನ್ನು ಮಲೆನಾಡಿನಲ್ಲಿ ಎಲ್ಲೋ ಸ್ವಲ್ಪ ಮಂದಿ ಬೇಟೆಯಾಡುತ್ತಿದ್ದರೂ ಅವರು ಬಳಸುವ ಕ್ರಮ ಅಲ್ಲೂ ಆಧುನಿಕತೆಯ ಲೇಪವಿದ್ದೇ ಇದೆ. ನಾನು ಆಗಲೇ ಹೇಳಿದಂತೆ ಮೀನುಬೇಟೆಗೆ ಸಿಡಿಮದ್ದುಗಳನ್ನು ಬಳಸುವ ಕ್ರಮ ಇಲ್ಲಿ ಅವರಿಗೆ ಬೇಟೆಯೂ ಆಗಬೇಕು, ಸಮಯವೂ ಉಳಿಯಬೇಕು ಆದ್ದರಿಂದ ಇಂತಹ ಸಿಡಿಮದ್ದು ಬಳಸುತ್ತಾರೆ. ಆದರೆ ಅದರಿಂದ ಉಂಟಾಗುವ ದುಷ್ಪರಿಣಾಮದ ಬಗೆಗೆ ಚಿಂತೆಯೇ ಇಲ್ಲದಂತೆ ಇರುತ್ತಾರೆ. ಬೇಟೆ ಮಲೆನಾಡಿನಲ್ಲಿ ಕಡಿಮೆಯಾಗಲು ಇನ್ನೊಂದು ಕಾರಣ ಮನುಷ್ಯ ಪ್ರಕೃತಿಯನ್ನು ನಾಶಮಾಡಿದಂತೆ ಪ್ರಾಣಿ-ಪಕ್ಷಿ ಸಂಕುಲ ಕಡಿಮೆಯಾಯಿತು. ಅವುಗಳ ರಕ್ಷಣೆಗಾಗಿ ಸರ್ಕಾರವೂ ಇಂತಹ ಬೇಟೆಯನ್ನು ನಿಷೇದಿಸಿತು. ಕಾನೂನಿಗೆ ಹೆದರಿಯೂ ಬೇಟೆ ಹವ್ಯಾಸ ಕಡಿಮೆಯಾಗಿರಬಹುದು. ಮತ್ತೆ ಬೇಟೆಯಾಡುವುದರ ಮುಖ್ಯ ಉದ್ದೇಶ ಆಹಾರಕ್ಕಾಗಿ ಮೊದಲು ಬೆಳೆಗಳ ಸಾಕುಪ್ರಾಣಿಗಳ ರಕ್ಷಣೆಗಾಗಿ ಇದ್ದರೂ ಕ್ರಮೇಣ ಮಾಂಸಾಹಾರಕ್ಕಾಗಿಯೇ ಬೇಟೆಯಾಡುತ್ತಿದ್ದರು. ಆದರೆ ಮೊದಲಿನಂತೆ ಈಗ ಬೇಟೆಯಾಡಿಯೇ ಮಾಂಸ-ಮೀನು ತಿನ್ನಬೇಕೆಂದೇನು ಇಲ್ಲ. ಈಗ ಯಾವಾಗ ಬೇಕು-ಎಷ್ಟು ಬೇಕು ಎಂದರೂ ಫಾರಂ ಕೋಳಿ, ಕುರಿ, ಮೀನು ಹೀಗೆ ಎಲ್ಲಾ

ರೀತಿಯ ಮಾಂಸಾಹಾರಗಳು ತಕ್ಷಣ ಸಿಗುವಂತಹ ವ್ಯವಸ್ಥೆ ಬಂದಿದೆ. ಅದೇ ಮೊದಲು ಕಾಡುಕೋಳಿ ಅಥವಾ ಮನೆಯಲ್ಲಿ ಸಾಕಿದ ಕೋಳಿ ಕೊಲ್ಲಬೇಕಾಗಿತ್ತು. ಅಂದರೆ ಒಟ್ಟಿನಲ್ಲಿ ಇಂದಿನ ಜೀವನ ಸಂಪೂರ್ಣವಾಗಿ ಬದಲಾಗಿರುವುದನ್ನು ಕಾಣಬಹುದು. ಸಮಾಜ, ಪ್ರಕೃತಿ ಜೀವನ ಮಾತ್ರ ಬದಲಾಗಿಲ್ಲ ಮನುಷ್ಯನೂ ಅವನ ವ್ಯಕ್ತಿತ್ವವೂ ಬದಲಾಗಿದೆ. ಅಂದಿನಂತೆ ಧೈರ್ಯವಾಗಿ, ಚಾಣಾಕ್ಷತೆಯಿಂದ, ತಾಳ್ಮೆಯಿಂದ ಬೇಟೆಯಾಡುವ ಮನಸ್ಥಿತಿಯೂ ಇಂದಿನ ಜನರಿಗಿಲ್ಲ ಕಾರಣ ಅವರೂ ಈ ಯಾಂತ್ರಿಕ ಬದುಕಿನೊಂದಿಗೆ ಬೆರೆತು ಹೋಗಿದ್ದಾರೆ. ಈಗ ಎಷ್ಟೇ ಹಣವಿದ್ರೂ ಫಾರಂ ಕೋಳಿ ಕುರಿಗಳು ಎಷ್ಟು ಸಿಕ್ಕಿದರೂ ಅಂದಿನ ಬೇಟೆಯಲ್ಲಿ ಅವರು ಅನುಭವಿಸಿದ ಆ ಮನೋರಂಜನೆ, ಅವರ ಸಾಹಸ, ಆ ರಸಾನುಭವಗಳು ನಮಗೆ ಬೇಕೆಂದರೂ ಈಗ ಸಿಗಲಾರವು.

ಅಡಿ ಟಿಪ್ಪಣಿಗಳು :

೧. ಕುವೆಂಪು, ಮಲೆನಾಡಿನ ಚಿತ್ರಗಳು, ಬಂದನಾ ಹುಲಿರಾಯ ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೪೨.

೨. ಕುವೆಂಪು, ಮಲೆನಾಡಿನ ಚಿತ್ರಗಳು, ಬಂದನಾ ಹುಲಿರಾಯ ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೪೫-೪೬.

೩. ಕುವೆಂಪು, ಮಲೆನಾಡಿನ ಚಿತ್ರಗಳು, ಪುಟ್ಟಾಚಾರಿಯ ಕಾಡುಕೋಳಿ ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೫೩.

ಅಧ್ಯಾಯ -೪
ಕುವೆಂಪು ಅವರು ಚಿತ್ರಸಿದ ಜೀವನ ಚಿತ್ರಗಳು

ಕುವೆಂಪು ಅವರು ತಮ್ಮ ಮಲೆನಾಡಿನ ಚಿತ್ರಗಳಲ್ಲಿ ಹೆಚ್ಚಿನ ಪ್ರಬಂಧಗಳಲ್ಲಿ ಬೇಟೆಯ ಚಿತ್ರವನ್ನು ಚಿತ್ರಿಸಿದರೂ ಅದು ಕೇವಲ ಬೇಟೆ ಆಗಿ ಮಾತ್ರ ಮೂಡಿಬರಲಿಲ್ಲ. ಅದರೊಂದಿಗೆ ಜೀವನ ಚಿತ್ರವೂ ಬೆರೆತು ಹೋಗಿದೆ. ಕುವೆಂಪು ಅವರ ಸಾಹಿತ್ಯದಲ್ಲಿ ನಾವು ಗಮನಿಸಿದಂತೆ ಸಾಮಾನ್ಯ ವ್ಯಕ್ತಿಗಳು, ಪ್ರಾಣಿ ಪಕ್ಷಿಗಳು ಸೃಷ್ಟಿಯ ಪ್ರತಿಯೊಂದು ವಸ್ತುವೂ ಮುಖ್ಯವಾಗಿರುತ್ತವೆ. ಈ ಮೂಲಕ ಅವರು ಹಿಂದಿನ ಪರಂಪರೆಗೆ ಅಭಿಮುಖವಾಗಿ ಒಂದು ಹೊಸ ಪರಂಪರೆಯನ್ನೇ ಸೃಷ್ಟಿಸಿದ್ದಾರೆ. ಈ ಪ್ರಬಂಧಗಳನ್ನು ಗಮನಿಸಿದಾಗ ಇಲ್ಲಿ ಬರುವ ಕತೆಗಾರ ಮಂಜಣ್ಣ , ಅಣ್ಣಪ್ಪ , ರಂಗಯ್ಯ, ಪುಟ್ಟಾಚಾರಿ ಮೊದಲಾದ ವ್ಯಕ್ತಿಗಳೆಲ್ಲರೂ ನಮಗೆ ತೀರ ಹತ್ತಿರದವರು ಎನಿಸುತ್ತಾರೆ. ಹಳ್ಳಿಯ ಬದುಕಿನಲ್ಲಿ ಈ ವ್ಯಕ್ತಿಗಳು ನೀರು, ಗಾಳಿಯಷ್ಟು ಸಹಜ, ಜೀವಂತ, ಇವರೊಂದಿಗೆ ಪ್ರಬಂಧಕಾರರ ಆತ್ಮೀಯತೆ, ಅನುಭವದ ಸಾಂದ್ರತೆ ಗಮನಿಸುವಂತಹದ್ದು. ಯಾವುದೇ ರೀತಿಯ ಸಂಕೋಚವಾಗಲಿ, ಕಟ್ಟುಪಾಡುಗಳಾಗಲೀ ಇಲ್ಲಿಲ್ಲ. ಆದ್ದರಿಂದ ಈ ಪ್ರಬಂಧಗಳು ನಮಗೆ ತುಂಬ ರುಚಿಸುತ್ತವೆ. ವ್ಯಕ್ತಿ ಚಿತ್ರದೊಂದಿಗೆ ಮಲೆನಾಡಿನ ಜೀವನ ಕ್ರಮ, ಅವರ ನಂಬಿಕೆ, ಆಚರಣೆಗಳನ್ನು ಕಾಣಬಹುದು. ಜೊತೆಗೆ ಪ್ರಬಂಧಕಾರರ ಬಾಲ್ಯದ ಜೀವನ ಚಿತ್ರವೂ ಹಾಸ್ಯಮಯವಾಗಿ ಮೂಡಿಬಂದಿವೆ.

೪.೧-ವ್ಯಕ್ತಿ ಚಿತ್ರಗಳು : ಕುವೆಂಪು ಅವರು ತಮ್ಮ ಪ್ರಬಂಧ ಸಂಕಲನದಲ್ಲಿ ಅನೇಕ ಸಮರ್ಥವಾದ ವ್ಯಕ್ತಿ ಚಿತ್ರಗಳನ್ನು ಕೊಟ್ಟಿದ್ದಾರೆ. ಹೀಗೆ ಚಿತ್ರಿಸುವಾಗ ಆ ವ್ಯಕ್ತಿಯ ಬಾಹ್ಯ ನೋಟವನ್ನು ಮಾತ್ರ ಚಿತ್ರಿಸದೆ ಆತನ ಅಂತರಂಗದ ಬಾವನೆಗಳಿಗೂ ಸ್ಪಂದಿಸಿ ಅದನ್ನು ಅರ್ಥೈಸಿದ್ದಾರೆ. ಅವರಲ್ಲಿರುವ ಮಾನವೀಯ ಮೌಲ್ಯಗಳು, ವ್ಯಕ್ತಿಯ ಮನೋವ್ಯಾಪಾರಗಳನ್ನು ಈ ಚಿತ್ರಗಳು ತಿಳಿಸುತ್ತವೆ. ಕುವೆಂಪು ಅವರು ಒಬ್ಬ ವ್ಯಕ್ತಿ ಚಿತ್ರವನ್ನು ಕೊಡುತ್ತಿದ್ದಾರೆ ಎಂದರೆ ಆ ವ್ಯಕ್ತಿ ನಮ್ಮ ಕಣ್ಣ ಮುಂದೆ ಪ್ರತ್ಯಕ್ಷವಾಗಿದ್ದಾನೆ ಎನಿಸುವಂತಿರುತ್ತದೆ. ಓದುಗ ಇಲ್ಲಿಯವರೆಗೆ ಆ ವ್ಯಕ್ತಿಯನ್ನು ನೋಡದೇ ಇದ್ದರೂ, ಕಾಲದ ದೃಷ್ಟಿಯಿಂದ ನಾವು ಮರೆತಿದ್ದರೂ ನಮ್ಮನ್ನು ಆ ಕಾಲಕ್ಕೆ, ಅಂದಿನ ಪರಿಸರಕ್ಕೆ ಆ ವ್ಯಕ್ತಿಯ

ಮುಂದೆ ನಿಲ್ಲಿಸುವಂತಹ ಶಕ್ತಿ ಕುವೆಂಪು ಅವರ ಲೇಖನಿ ಶೈಲಿಗಿದೆ.

'ಬಂದನಾ ಹುಲಿರಾಯ ' ಪ್ರಬಂಧದಲ್ಲಿ ಮರಸು ಬೇಟೆಯನ್ನು ಕುರಿತು ಹೇಳುತ್ತಿದ್ದರೂ ಅದರೊಂದಿಗೆ ರಂಗಯ್ಯನ ವ್ಯಕ್ತಿಚಿತ್ರವೂ ನಮ್ಮ ಮುಂದೆ ಚಿತ್ರಿತವಾಗಿದೆ. ರಂಗಯ್ಯನ ಮುಂದೆ ಹುಲಿ ಕುಳಿತಿರುವಾಗ ರಂಗಯ್ಯ ಅದನ್ನು ಸುಡಲಾಗಲಿಲ್ಲ. ಆದರೆ ಅವನು ಅಂಜುಬುರುಕನಲ್ಲ, ಎದೆಗಾರ ಬೇಟೆಗಾರ, ಹಿಂದೆ ಹುಲಿಗಳನ್ನು ಹೊಡೆದಿದ್ದ, ವನವರಾಹಗಳನ್ನು ಅಟ್ಟಿಯಟ್ಟಿ ಸುಟ್ಟು ಕೆಡವಿದ್ದ. ಆದರೆ ಆ ಹುಲಿ ಮೆತ್ತಗೆ ಬಂದು ಹತ್ತಿರ ಕುಳಿತುಬಿಟ್ಟಿತ್ತು. ಮೊದಲೇ ಕಣ್ಣಿಗೆ ಬಿದ್ದಿದ್ದರೆ ಅದನ್ನು ದೂರದಿಂದಲೇ ಸುಡುತ್ತಿದ್ದ. ಆದರೆ ಹುಲಿ ತನ್ನೆದುರಿಗೇ ಕುಳಿತಿರುವುದರಿಂದ ರಂಗಯ್ಯ ಜೀವದ ಮೇಲೆ ಆಸೆಬಿಟ್ಟನು. ಇಂತಹ ಸಂದರ್ಭದಲ್ಲಿ ಆತನು ಎಷ್ಟೇ ಧೈರ್ಯವಂತನಾದರೂ, ತನ್ನ ಸಾವು ಖಡಿತ ಎಂದು ನಿಶ್ಚಯಿಸಿದಾಗ ಅವನ ಮನಸ್ಸು ಒಬ್ಬ ಸಾಮಾನ್ಯ ಮನುಷ್ಯನಂತೆ ಲೌಖಿಕ ಆಸೆಗಳಿಗಾಗಿ ಬಯಸುವುದು ಆ ಕುರಿತು ಚಿಂತಿಸುವುದು ಸರ್ವೇಸಾಮಾನ್ಯ. ಇಂತಹ ಸೂಕ್ಷ್ಮ ಮನೋವ್ಯಾಪಾರಗಳನ್ನು ಕುವೆಂಪುರವರು ಚಿತ್ರಿಸಿದ್ದಾರೆ. ''ರಂಗಯ್ಯ ಹೆಂಡಿರು ಮಕ್ಕಳನ್ನು ನೆನೆದ. ಆಸ್ತಿಪಾಸ್ತಿಗಳನ್ನು ನೆನೆದ, ನೆಂಟರಿಷ್ಟರನ್ನು ನೆನೆದ, ಮನೆಮಾರುಗಳನ್ನು ನೆನೆದ, ಕಣ್ಣೀರು ಧಾರೆಧಾರೆಯಾಗಿ ಹರಿದು ನೆನೆದು ಹೋದ, ತಾನು ಬೆಳೆದಿದ್ದ ತರಕಾರಿಯ ತೋಟ, ಬೆಳೆದುನಿಂತ ಗದ್ದೆಗಳು, ಸಾಕಿ ಸಲಹಿದ ದನಕರುಗಳು, ಮೊನ್ನೆ ತಾನೇ ಸಾಲ ಮಾಡಿ ಕೊಂಡುಕೊಂಡಿದ್ದ ಅಡಿಕೆ ತೋಟ ಎಲ್ಲವೂ ಚಿತ್ತ ಭಿತ್ತಿಯಲ್ಲಿ ಚಲನಚಿತ್ರಗಳಂತೆ ಮಿಂಚಿದವು ''[೧]. ಅದೇ ರೀತಿ ಮತ್ತೊಮ್ಮೆ ಹುಲಿ ಗರ್ಜಿಸಿದಾಗ ಪ್ರತಿಯೊಬ್ಬ ಮನುಷ್ಯನೂ ಸಂಕಟ ಬಂದಾಗ ಹೇಗೆ ದೇವರನ್ನು ನೆನೆಯುತ್ತಾನೋ ಅದೇ ರೀತಿ ರಂಗಯ್ಯನೂ ತನ್ನ ತೋಟದಾಚೆಯ ಭೂತವನ್ನು ನೆನೆದು ಬೇಡಿಕೊಳ್ಳುತ್ತಾನೆ. ಬೇಟೆ ದೇವರಿಗೆ ಹಣ್ಣುಕಾಯಿ ಕೊಡುತ್ತೇನೆಂದು ಹೇಳಿಕೊಂಡ. ಪಂಜರಳ್ಳಿಗೆ ಪೂಜೆ ಮಾಡಿ ಕೋಳಿಬಲಿ ಕೊಡುವೆನೆಂದು ಹರಕೆ ಹೊತ್ತು ಜಕ್ಕಣಿಗೆ ಹೆಚ್ಚಾಗಿ ಎಡೆಯಿಕ್ಕುವಂತೆ ಪ್ರಲೋಭನಗೊಳಿಸಿದ. ಮನೆದೇವರಾದ ತಿರುಪತಿ ವೆಂಕಟರಮಣನನ್ನು ಸಂಕಟ ಕಾಲದಲ್ಲಿ ಪ್ರಾರ್ಥಿಸಿದ. ಧರ್ಮಸ್ಥಳಕ್ಕೆ ತನ್ನಷ್ಟುದ್ದ ಚಿನ್ನದ ತಂತಿ ಮಾಡಿಸಿ ಕೊಡುವಂತೆ ಪ್ರತಿಜ್ಞೆ ಮಾಡಿದ. ಅವನ ಅಲ್ಪಬುದ್ಧಿಗೆ ತಿಳಿದ ದೇವತೆಗಳನ್ನೆಲ್ಲ ಅಂಗಲಾಚಿ ಬೇಡಿಕೊಂಡ. ಇಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯಾದ ರಂಗಯ್ಯನ ಬೇಟೆಯಲ್ಲಿನ ಚಾಣಾಕ್ಷತೆ, ಆತನ ಧೈರ್ಯವನ್ನು ಹೊಗಳುವ ಜೊತೆಗೆ ಅದೇ ಸಮಯದಲ್ಲಿ ಆ ವ್ಯಕ್ತಿಯ ಮನಸ್ಸಿನಲ್ಲಿ ಉಂಟಾಗುತ್ತಿದ್ದ ಭಾವನೆಗಳನ್ನು

ಗ್ರಹಿಸಿರುವುದು ವಿಶೇಷವಾಗಿದೆ.

'ಪುಟ್ಟಾಚಾರಿಯ ಕಾಡುಕೋಳಿ ' ಕೇವಲ ಬೇಟೆಯ ಚಿತ್ರವಾಗಿರದೆ ಪುಟ್ಟಾಚಾರಿಯ ಜೀವನ ಕಥೆ ಸಹ ಆಗಿದೆ. ಅವನು ಒಬ್ಬ ದೊಡ್ಡ ಬೇಟೆಗಾರನಾಗಿದ್ದು ಅವನದು ನುರಿತ ಕೈಯಾಗಿತ್ತು. ಇಟ್ಟ ಗುರಿ ತಪ್ಪುತ್ತಿರಲಿಲ್ಲ ಎಂದು ಆತನ ಬೇಟೆಯ ಕೌಶಲವನ್ನು ವಿವರಿಸುತ್ತ ಆತನು ನೋಡಲು ಬಾಹ್ಯವಾಗಿ (ಹೊರನೋಟಕ್ಕೆ) ಹೇಗೆ ಕಾಣುತ್ತಿದ್ದನೆಂದು ವಿವರಿಸಿದ್ದಾರೆ. ''ಆತ ತೆಳ್ಳಗೆ ನೀಳವಾಗಿದ್ದ. ಜಿಡ್ಡು ಜಿಡ್ಡಾಗಿರುತ್ತಿದ್ದ ಅವನ ಹಾಸನದ ಟೋಪಿ, ಕೊಳೆಯಿಂದ ಹೊಳೆಯುತ್ತಿದ್ದ ನೀರು ಬಿದ್ದರೆ ಹೀರದೆ ಸಿಡಿಯುತ್ತಿದ್ದ ಅವನ ಹರಕಲು ಅಂಗಿ, ಯಾವಾಗಲೂ ಮೊಳಕಾಲಿನ ಮೇಗಡೆಯೇ ಇರುತ್ತಿದ್ದ ಅವನ ಸೊಂಟದ ಪಂಚೆ, ಎಡಭುಜದಿಂದ ಬಲಪಕ್ಕೆಯ ಮೇಲೆ ನೇತಾಡುತ್ತಿದ್ದ ಅವನ ಕೋವಿಯ ಚೀಲ ; ನಡೆದಾಗ ಅದರೊಳಗೆ ಕಣಿಕಣಿಗುಟ್ಟುತ್ತಿದ್ದ ಈಡಿನ ಸಾಮಾನುಗಳು, ಮಾತಾಡಿದರೆ ಹೊರಹೊರಡುತ್ತಿದ್ದ ಕವರ್ಗ ಪಂಚಮಾಕ್ಷರದ ಧ್ವನಿ, ಆ ಹಳೆಯ ಟೊಪ್ಪಿಗೆಯಿಂದ ನಿರ್ಲಕ್ಷ್ಯವಾಗಿ ಹೊರಟಿರುತ್ತಿದ್ದ ಎಣ್ಣೆ ಕಾಣದ ಕೆದರು ಕೂದಲು, ಮಲೆನಾಡಿನ ಪದ್ಧತಿಯಂತೆ ಕಿವಿಯಲ್ಲಿ ಮಿರುಗುತ್ತಿದ್ದ ಲೋಹದ ಗುಂಡಿಗಳು, ಚಪ್ಪಟೆಯಾದ ಮೊರಡು ಮುಖ, ನೀಳವಲ್ಲದ ಮೂಗು ' ಅವಿತುಕೊಂಡಿದ್ದರೂ ಕಾಂತಿಯಿಂದ ತೀಕ್ಷ್ಣವಾಗಿದ್ದ ಕಣ್ಣುಗಳು ''[3] ಲೇಖಕರಿಗೆ ಹೇಗೆ ಆತನ ಆಕೃತಿ ಕಣ್ಣಿಗೆ ಕಟ್ಟಿದಂತೆ ನೆನಪಿತ್ತೋ ಅದೇ ರೀತಿ ಓದುಗರಿಗೂ ಆತ ಕಣ್ಮುಂದೆ ಬರುವ ಹಾಗೆ ಚಿತ್ರಿಸಿದ್ದಾರೆ. ''ಪುಟ್ಟಾಚಾರಿಯ ಅಂತ್ಯ ಅತ್ಯಂತ ಶೋಚನೀಯವಾಗಿತ್ತು. ಯಾವನ ಇಚ್ಛೆಗೆ ಕಬ್ಬಿಣವೂ ತಲೆಬಾಗುತ್ತಿತ್ತೋ ಅಂತವನು ಅಣಬೆಯಂತೆ ಹುಳು ತಿಂದು ಕೊಳೆತು ತೀರಿಕೊಂಡನು. ಹೊಟ್ಟೆಯಲ್ಲಿ ಏನೋ ಒಂದು ಬಾವೆದ್ದು ಬಹಳ ಕಾಲ ನರಳಿದನು. ಆ ಕಾಡಿನಲ್ಲಿ ಡಾಕ್ಟರುಗಳಿರಲಿಲ್ಲ. ಹಳ್ಳಿಯ ವೈದ್ಯರು ಊಹೆಯ ಮೇಲೆ ಮದ್ದು ಕೊಟ್ಟರು. ರೋಗಿಯು ಚರ್ಮ ಮಾತ್ರ ಆವೃತವಾದ ಅಸ್ತಿಪಂಜರವಾದನು. ನೋಡಿಕೊಳ್ಳುವುದಕ್ಕೆ ಹೆಂಡಿರು, ಮಕ್ಕಳು ಯಾರೂ ಇರಲಿಲ್ಲ. ಅವನು ಏಕಾಂಗಿಯಾಗಿದ್ದನು. ಎಲ್ಲರನ್ನೂ ಕಳೆದುಕೊಂಡಿದ್ದನು. ಇತರರು ಶುಶ್ರೂಷೆ ಮಾಡಿದರು. ದನಕರುಗಳಿಗೆ ಮಾಡುವಂತೆ ಅವರ ಶುಶ್ರೂಷೆಯಲ್ಲಿ ನಿಷ್ಕಾಮಕರ್ಮ ಚೆನ್ನಾಗಿ ತೋರುತ್ತಿತ್ತು. ಮಳೆಗಾಲದಲ್ಲಿ ಒಂದು ದಿನ ಪ್ರಕೃತಿಯೆಲ್ಲ ಘೋರವಿಷಣ್ಣವಾಗಿದ್ದ ಸಮಯದಲ್ಲಿ ಜಗನ್ಮಾತೆ ಪುಟ್ಟಾಚಾರಿಯನ್ನು ತಬ್ಬಿಲಿಭೂಮಿಯಿಂದ ಎತ್ತಿಕೊಂಡು ಹೋದಳು. ಅನೇಕರು ಶಾಸ್ತ್ರಕ್ಕಾಗಿ ಶೋಕವನ್ನು ನಟಿಸಿದರು. ಒಬ್ಬರೂ ಕಣ್ಣೀರು

ಸುರಿಸಲಿಲ್ಲ, ಜಡಿಮಳೆ ಮಾತ್ರ ಹೋ...ಎಂದು ಸುರಿಯುತ್ತಿತ್ತು ''[5]. ಇಲ್ಲಿ ಪುಟ್ಟಾಚಾರಿಯ ಅಂತ್ಯದ ಧಾರುಣ ಕಥೆಯೊಂದಿಗೆ ಅಂದಿನ ನಂಬಿಕೆ, ಸಂಬಂಧಗಳ ಬೆಲೆ, ಜನರ ಸೋಗಲಾಡಿತನ, ಪ್ರಕೃತಿಯ ಸ್ಪಂದನೆ ಈ ಎಲ್ಲಾ ಅಂಶಗಳನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಲೇಖಕರು ತಬ್ಬಲಿ ಭೂಮಿ ಎಂದಿರುವಲ್ಲಿ ಇರುವ ವಿಶಾಲಾರ್ಥ ಗಮನಿಸುವಂತಹದ್ದು. ಇಷ್ಟೊಂದು ವಿಶಾಲವಾದ ಭೂಮಿಯಲ್ಲಿ ಪುಟ್ಟಾಚಾರಿಯ ನೋವಿಗೆ ಯಾರೊಬ್ಬರೂ ಸ್ಪಂದಿಸದೆ ಆತನನ್ನು ತಬ್ಬಲಿಯಾಗಿ ಸಾಯುವಂತೆ ಮಾಡಿದುದು, ಸ್ವತಃ ದೇವತೆಯೇ ತನ್ನ ಲೋಕಕ್ಕೆ ಕರೆದೊಯ್ದುದು, ಈ ಕಲ್ಪನೆಯ ವಿಶೇಷವಾಗಿದೆ. ಮನುಷ್ಯ ನಿರಾಕರಿಸಿದರೂ ಪ್ರಕೃತಿ ತನ್ನ ಮಗನಂತೆ ಒಪ್ಪಿಕೊಂಡು ತನ್ನ ಸಂತಾಪ ಸೂಚಿಸಿದ್ದದು ಇಲ್ಲಿ ವಿಶೇಷವಾಗಿದೆ.

ಪ್ರಬಂಧಕಾರರ ಒಕ್ಕಲಾಗಿದ್ದ ಅಣ್ಣಪ್ಪ ಎಂಬುವವನ ರೇಷ್ಮೆ ಕಾಯಿಲೆಗೆ ಸಂಬಂಧಿಸಿದಂತೆ ಮನಕಲಕುವ ಪ್ರಸಂಗವನ್ನು ಅಣ್ಣಪ್ಪನ ರೇಷ್ಮೆ ಕಾಯಿಲೆ ಪ್ರಬಂಧದಲ್ಲಿ ಚಿತ್ರಿಸಿದ್ದಾರೆ. ಇಲ್ಲಿ ಕೇವಲ ಕಾಯಿಲೆಯನ್ನು ಕುರಿತು ಮಾತ್ರ ಹೇಳುತ್ತಿಲ್ಲ, ಜೊತೆಗೆ ಅಲ್ಲಿನ ಬಡತನ, ಅಜ್ಞಾನ, ಮೂಢನಂಬಿಕೆ, ಮಾನವೀಯ ಮೌಲ್ಯಗಳನ್ನು ಯಜಮಾನ ಸಂಸ್ಕೃತಿಯನ್ನೂ ಚಿತ್ರಿಸಿದ್ದಾರೆ. ಅಣ್ಣಪ್ಪ ಬಡವ, ಪ್ರಾಮಾಣಿಕ, ವಿನೋದಗಾರ. ಈತ ಪ್ರಬಂಧಕಾರರ ಗದ್ದೆಯನ್ನು ಬೇಸಾಯಕ್ಕೆ ಮೂಡಿಕೊಂಡಿದ್ದ ಗೇಣಿ ಒಕ್ಕಲು. ಒಮ್ಮೆ ಈತ ಜ್ವರಗ್ರಸ್ತನಾದನು. ಎಲುಬು ಚರ್ಮ ಎರಡೇ ಇರುವ ಹಾಗೆ ಕಾಣುತ್ತಾನೆ. ಬಾಯಲ್ಲಿ ರಕ್ತಕಾರುತ್ತಾ ಮೇಲುಸಿರೆಳೆಯುತ್ತಿದ್ದನು. ಅಣ್ಣಪ್ಪನ ತಮ್ಮ ಮಾಯಬಂದು ಪ್ರಬಂಧಕಾರರಲ್ಲಿ ಅಣ್ಣಪ್ಪ ಉಳೆಯುತ್ತಾನೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ, ನೋಡಿಕೊಂಡು ಹೋಗಬೇಕೆಂದು ತಿಳಿಸಿದನು, ಅವನ ಸ್ಥಿತಿಯನ್ನು ಕೇಳಿ ಏನು ಔಷಧಿ ಮಾಡಿದಿರಿ ಎಂದಾಗ ಆತ ಚೌಡಿಕಾಟ, ಪಂಜರೂಳ್ಳಿ ದೆವ್ವಕ್ಕೆ ಕೋಳಿ ಕೊಟ್ಟೆವು, ಭಟ್ಟರು ಭಸ್ಮ ಕೊಟ್ಟರು ಹೀಗೆ ಹೇಳಲು ಪ್ರಾಂಭಿಸಿದಾಗ ಪ್ರಬಂಧಕಾರರಿಗೆ ರೇಗಿ ಔಷಧಿ ಕೊಡಬಾರದೇನೋ ಎಂದರು. ನೆರೆಮನೆ ಮಂಜಣ್ಣ ಔಷಧಿ ಕೊಟ್ಟರು ಎನ್ನುತ್ತಾನೆ ಮಾಯ. ನಂತರ ಲೇಖಕರು ಮಲೆನಾಡಿಗರು ಆರೋಗ್ಯದ ಬಗೆಗೆ ತೋರುವ ಕಾಳಜಿ ಯಾವ ಬಗೆಯದ್ದು ಎಂಬುದನ್ನು ತಿಳಿಸುತ್ತಾರೆ. ದೇವರು, ದೆವ್ವ, ಭಟ್ಟರು, ಶಾಸ್ತ್ರಿಗಳು, ಸ್ವಯಂ ಘೋಷಿತ ವೈದ್ಯರ ಬಳಿ ಹೋಗಿ ರೋಗಿ ಕೊನೆಯ ಹಂತ ತಲುಪಿದಾಗ ಡಾಕ್ಟರ್ ಹತ್ತಿರ ಹೋಗಿ ಔಷಧಿ ಪಡೆಯುತ್ತಾರೆ. ರೋಗಿ

ಸತ್ತರೆ ವೈದ್ಯರಿಂದ ಎನ್ನುತ್ತಾರೆ, ಬದುಕುಳಿದರೆ ಭಟ್ಟರ ಭಸ್ಮಕ್ಕೋ, ದೆವ್ವದ ಕೃಪೆಗೋ ಆರೋಪಿಸಿ ತಮ್ಮ ಅನುಭವದ ಜ್ಞಾನ ಭಂಡಾರವನ್ನು ಇತರರಿಗೂ ಹಂಚುತ್ತಾರೆ.

ಪ್ರಬಂಧಕಾರರು ಅಣ್ಣಪ್ಪನ ಗುಡಿಸಲಿಗೆ ಹೋಗಿ ನೋಡಿದಾಗ ಅವರಿಗೆ ನಮ್ಮ ದೇಶದ ದಾರಿದ್ರ್ಯವೇ ಮೂರ್ತಿಮತ್ತಾಗಿ ಎದುರಿಗೆ ಬಂದಂತಾಯಿತು. ಆತ ನೋಡಲು ಎಲುಬಿನ ಗೂಡಿನಂತೆ ಮುದ್ದೆಯಾಗಿ ಮುದುರಿಕೊಂಡು ಕೂತಿದ್ದ. ಮೈಮೇಲೆ ಬಟ್ಟೆಯಿಲ್ಲ, ತಲೆ ಕೂದಲು ಕೆದರಿ ವಿಕಾರವಾಗಿತ್ತು. ಅವರನ್ನು ನೋಡಿದ ಕೂಡಲೇ ಕೈ ಮುಗಿದು, ಬಿಕ್ಕಿ ಬಿಕ್ಕಿ ಅಳಲು ತೊಡಗಿದ. ಅವನಿಗೆ ಮಾತಾಡಲು ಉಸಿರೇ ಇರಲಿಲ್ಲ, ನೋಟ ಭಯಾನಕವಾಗಿತ್ತು. ಇಂತಹ ಸ್ಥಿತಿಯಲ್ಲೂ ಅಣ್ಣಪ್ಪ ಕೆಸರುಹಲಗೆಯ ಮೇಲೆ ಕುಳಿತುಕೊಳ್ಳಲು ಹವಣಿಸುತ್ತಿದ್ದ. ಲೇಖಕರನ್ನು ನೋಡಿ ''ಅಯ್ಯಾ ಮೇಲೆ ಕುಳಿತುಕೊಳ್ಳಿ''[೪] ಎಂದು ಕಾಲುಮಣೆಯನ್ನು ತೋರಿಸಿದ. ಅದರ ಮೇಲೆ ಕುಳಿತ ಇವರು ಸ್ವಲ್ಪ ಕಾಲ ಸ್ವಪ್ನ ಲೋಕದಲ್ಲಿ ಮುಳುಗಿ ಹೋದರು. ''ಲೋಕ ರೂಢಿಯ ದೃಷ್ಟಿಯಿಂದ ಎಷ್ಟೇ ಅಲ್ಪವಾದುದಾದಗಲೀ, ಎಷ್ಟೇ ಮಹತ್ತಾದುದಾಗಲೀ ಪ್ರತಿಯೊಂದು ವಸ್ತುವನ್ನೂ ಪ್ರತಿಯೊಂದು ಸನ್ನಿವೇಶವನ್ನೂ ವಿರಾಟ್ ದೃಷ್ಟಿಯಿಂದ ನೋಡಲೆಳಸುವುದು ನನಗೊಂದು ಹುಚ್ಚು ''[೫] ಎಂದುಕೊಳ್ಳುತ್ತಾ ತಾವು ಮುಂದೆ ಕಂಡುಕೊಳ್ಳುವ ತಮ್ಮ ಮುಂದಿನ ಕೃತಿಗಳಲ್ಲಿ ಹೇಳಿರುವ ದೃಷ್ಟಿ ಧೋರಣೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ತಿಳಿಸಲು ಪ್ರಯತ್ನಿಸಿದ್ದಾರೆ. ಇದೇ ವಿರಾಟ್ ರಂಗದ ಭಿತ್ತಿಯಲ್ಲಿ ರೇಷ್ಮೆ ಕಾಯಿಲೆಯನ್ನು ಚಿತ್ರಿಸಿದರು. ಈ ನಡುವೆ ಅಣ್ಣಪ್ಪ ಮಲಗಲೂ ಆಗದೆ ಕೂರಲೂ ಆಗದೆ ನರಳುತ್ತಿದ್ದ. ಇಂತಹ ಸಮಯದಲ್ಲಿಯೂ ಅವನು ಪ್ರೇತವಾಣಿಯೋ ಎಂಬಂತಿರುವ ಪಾತಾಳಸ್ವರದಿಂದ ''ಅಯ್ಯಾ, ನಾನು ಸಾಯುತ್ತೇನೆ, ನನ್ನ ಸಾಲಕ್ಕೆ ನನ್ನ ಮನೆಯ ದನ, ಕರು, ಪಾತ್ರೆ ಎಲ್ಲದರ ಪಟ್ಟಿಯನ್ನು ತೆಗೆದುಕೊಳ್ಳಿ ''[೬] ಎಂದನು. ಇದನ್ನು ಕೇಳಿ ಲೇಖಕರಿಗೆ ಎದೆ ಇರಿದಂತಾಯಿತು. ಎಷ್ಟು ಹೇಳಿದರೂ ಆತ ಮಲಗುವುದೂ ಇಲ್ಲ, ಹಾಗೆ ಲೇಖಕರು ಕಾಯಿಲೆ ಕುರಿತು ಮಾತನಾಡಿದರೆ ಆತ ತಾನು ಸಾಯುವುದರೊಳಗೆ ತನ್ನ ಋಣ ತೀರಿದ್ದನ್ನು ನೋಡುತ್ತೇನೆ. ನನ್ನ ದನ,ಕರು, ಪಾತ್ರೆ ಎಲ್ಲ ಪಟ್ಟಿ ಮಾಡಿ'' ಎಂಬುದೊಂದನ್ನೇ ಹೇಳುತ್ತಿದ್ದ. ಎಷ್ಟು ಹೇಳಿದರೂ ಕೇಳದಿದ್ದಾಗ ಅವರ ಸ್ನೇಹಿತರಿಗೆ ಸರಿ ಪಟ್ಟಿ ಮಾಡಿ ಎಂದರು. ಅವರೂ ಪಟ್ಟಿಯನ್ನು ಬರೆಯುವಂತೆ ನಟಿಸಿದರು. ಅಣ್ಣಪ್ಪ ಕಷ್ಟಸಹಿಷ್ಣುತೆಯಿಂದ

ಇಲ್ಲಿಯವರೆಗೂ ಬದುಕಿದ್ದನು. ಏಕೆಂದರೆ ಅವನಿಗೆ ಬಂದದ್ದು ರೇಷ್ಮೆಕಾಯಿಲೆ (ನ್ಯೂಮೋನಿಯಾ) ಯಾಗಿರಬೇಕೆಂದು ಲೇಖಕರು ಅಭಿಪ್ರಾಯಪಡುತ್ತಾರೆ. ನಂತರ ಡಾಕ್ಟರಿಗೊಂದು ಕಾಗದ ಬರೆದು ಒಬ್ಬ ಆಳನ್ನು ಔಷಧಿಗೆಂದು ಕಳುಹಿಸಿದರು. ಹಾಗೆಯೇ ಅಣ್ಣಪ್ಪನಿಗಾಗಿ ಮನಸ್ಸಿನಲ್ಲಿಯೇ ನಮ್ರವಾಗಿ ಭಗವಂತನನ್ನು ಲೇಖಕರು ಪ್ರಾರ್ಥಿಸಿದರು. ಇಲ್ಲಿ ಅಣ್ಣಪ್ಪನ ಕಾಯಿಲೆ ಜೊತೆಗೆ ಆತನ ಮಾನವೀಯ ಗುಣಗಳನ್ನು ಲೇಖಕರು ಚಿತ್ರಿಸಿದ್ದಾರೆ. ಆತ ಹೇಗಾದರೂ ತಾನು ಸಾಯುವುದರೊಳಗೆ ಸಾಲ ತೀರಿಸಬೇಕೆಂದುಕೊಳ್ಳುವ ಮನೋಭಾವ ಇಂದು ಕಾಣಸಿಗುವುದು ಬಹಳ ಅಪರೂಪ ಎನ್ನಬಹುದು. ಮನುಷ್ಯ ತನ್ನನ್ನು ಆಧುನಿಕ ಜೀವನಕ್ಕೆ ತೊಡಗಿಸಿಕೊಂಡಂತೆ ಆತನ ಆಸೆ ಆಕಾಂಕ್ಷೆಗಳು ಹೆಚ್ಚುತ್ತವೆ. ಆಗ ಮಾನವೀಯ ಮೌಲ್ಯಗಳು, ಸಂಬಂಧಗಳು ನಾಶವಾಗುತ್ತವೆ. ಈಗ ಸಾಲ ಪಡೆದವರೂ ಆರೋಗ್ಯವಾಗಿ ಬದುಕಿರುವಾಗಲೇ ಅವಕಾಶ ಸಿಕ್ಕರೂ ತೀರಿಸಲು ಪ್ರಯತ್ನಿಸುವುದಿಲ್ಲ. ಅಂತವರಲ್ಲಿ ಅಣ್ಣಪ್ಪನ ವ್ಯಕ್ತಿತ್ವ ನಿಜವಾಗಲೂ ಮಹತ್ವವುಳ್ಳದ್ದು.

''ಕತೆಗಾರ ಮಂಜಣ್ಣ '' ಒಂದು ಸುಂದರವಾದ ವ್ಯಕ್ತಿ ಚಿತ್ರ. ಮಂಜಣ್ಣ ಪ್ರಬಂಧಕಾರರ ಮನೆಯ ಆಳು. ಬಹಳ ಹಳೆಯ ಮನುಷ್ಯ. ಅವನಿಗೆ ಸುಮಾರು ಅರವತ್ತು ವರುಷ ವಯಸ್ಸಾಗಿತ್ತು. ಅವನ ಮುಖದ ತುಂಬ ಬಿಳಿಯ ಗಡ್ಡ, ಮೀಸೆ, ತಲೆಯ ತುಂಬ ಹಣ್ಣು ಹಣ್ಣು ಕೂದಲು, ಅವನ ಗಡ್ಡ ವಿರಳವಾಗಿ ಮೊಟಕಾಗಿತ್ತು. ಅವನು ಹರಿತವಾದ ತನ್ನ ಕತ್ತಿಯಿಂದಲೇ ಕತ್ತರಿಸುತ್ತಿದ್ದುದರಿಂದ ಅದು ಹಾಗಾಗಿತ್ತು. ಅವನು ಸ್ನಾನ ಮಾಡಿದ ಮೇಲೆ ತುಳಸಿಕಟ್ಟೆಯ ಮುಂದೆ ಕುಳಿತು ನಾಮದ ಪೆಟ್ಟಿಗೆ ತೆಗೆದು ಮೈಗೆಲ್ಲಾ ನಾಮ ಬಳಿದುಕೊಳ್ಳುತ್ತಿದ್ದನು. ಮಂಜಣ್ಣ ಎಂದರೆ ಹುಡುಗರಿಗೆ ಪ್ರಾಣ. ಅವನನ್ನು ನೋಡಿದ ಕೂಡಲೇ ಹುಡುಗರಿಗೆ ಆತ ಆಳು ಎಂಬುದು ಮರೆತುಹೋಗಿ, ಅವನಲ್ಲಿ ಗುರುಭಾವ ಉಂಟಾಗುತ್ತಿತ್ತು. ಮಂಜಣ್ಣ ಮಕ್ಕಳಿಗೆ ಗುರು. ಅವರ ಹಿರಿಯರಿಗೆ ಆಳಾಗಿದ್ದ. ಹುಡುಗರು ಮಂಜಣ್ಣನನ್ನು ಅಷ್ಟೊಂದು ಇಷ್ಟಪಡುವುದೇಕೆಂದರೆ ಅವನು ಬೇಕಾದ ಹಾಗೆ ಕಥೆ ಹೇಳುತ್ತಿದ್ದನು. ಒಮ್ಮೆ ಮಳೆಗಾಲದ ಸಂಜೆ ಹುಡುಗರೆಲ್ಲ ಮುರ ಬೇಯಿಸುವ ಒಲೆಯ ಮುಂದೆ ಚಳಿ ಕಾಯಿಸುತ್ತಾ ಕುಳಿತಿದ್ದರು. ಹಲಸಿನ ಬೀಜ ಸುಡಲು ಸಿದ್ಧರಾಗಿದ್ದರು. ಗದ್ದೆಯ ಕೆಲಸಕ್ಕೆ ಹೋಗಿದ್ದ ಸಿದ್ದ ಪುಟ್ಟ ಬಂದು ''ಒಂದೀಟು ಜಾಗ

ಬಿಡಿ, ಅಯ್ಯ! ಮಳೇಲಿ ನೆಂದು ಬಂದೀವಿ, ಒಂದೀಟು ಚಳಿ ಕಾಸ್ಕಂಡು ಹೋತೀವಿ'' ಎಂದರು. ಹುಡುಗರು ''ಜಾಗ ಇಲ್ಲ ಹೋಗ್ರೋ, ನಮಗೂ ಚಳಿ '' ಎಂದರು. ಸ್ವಲ್ಪ ಹೊತ್ತಿನ ಮೇಲೆ ಮಂಜಣ್ಣ ಬರಬರುತ್ತಾ ಕತೆ ಹೇಳುತ್ತಲೇ ಬಂದ. ''ಒಂದೂರಿನಲ್ಲಿ ಒಬ್ಬನಿದ್ದ '' ಎಂದು ಪ್ರಾರಂಭಿಸಿದೊಡನೆ ಹುಡುಗರೆಲ್ಲಾ ಅವನ ಕಡೆ ತಿರುಗಿದರು. ಕುಂಬಳಕಾಯಿ ಕಥೆ ಹೇಳಲು ತೊಡಗಿದನು. ಹುಡುಗರು ಹೂಂ ಗುಟ್ಟ ತೊಡಗಿದರು. ಕುಂಬಳಕಾಯಿ ಇಷ್ಟು ದೊಡ್ಡ ಇಷ್ಟು ದೊಡ್ಡ ಎಂದು ಕೈವಾಡ ತೋರಿಸುತ್ತ ಮಂಜಣ್ಣ ತನಗೆ ಚಳಿ ಕಾಯಿಸಿಕೊಳ್ಳಲು ಬೇಕಾದಷ್ಟು ಜಾಗವನ್ನು ಮಕ್ಕಳಿಂದ ಕಸಿದುಕೊಂಡನು. 'ಆಮೇಲೆ ಆಮೇಲೆ ' ಎಂದು ಕೇಳಿ ಕೇಳಿ ಸಾಕಾದ ಹುಡುಗರಿಗೆ ಮಂಜಣ್ಣ ''ಕುಂಬಳ ಕಾಯಿ ತಿಂದ '' ಎಂದು ಕಥೆ ಮುಗಿಸಿದಾಗ ಹುಡುಗರಿಗೆ ಸಂತೋಷವಾಯಿತು. ಹಾಗೆಯೇ ಮತ್ತೊಂದು ಕಥೆ ಹೇಳಿದ ; ''ಒಂದೂರಿನಲ್ಲಿ ಒಬ್ಬನಿದ್ದ ಅವನು ಊಟಕ್ಕೆ ಕುಳಿತಿದ್ದ. ಸ್ವಲ್ಪ ಹೊತ್ತಾದ ಮೇಲೆ ಊಟ ಆಯ್ತು, ಬಳ್ಳೆ ಬಿಟ್ಟೆದ್ದ. ಆಮೇಲೆ ನೆಗೆದುಬಿದ್ದ'' ಎಂದನು. ಮತ್ತೊಂದು ದಿನ ಇನ್ನೊಂದು ಕತೆ ಹೇಳಿದ ''ಒಂದೂರಿನಲ್ಲಿ ಒಬ್ಬಳಿದ್ದಳು, ಅವಳು ಬಾವಿಗೆ ನೀರು ಸೇದುವುದಕ್ಕೆ ಹೋದಳು, ಹಗ್ಗ ತುಂಡಾಗಿ ಕೊಡ ನೀರಿಗೆ ಬಿತ್ತು'' ಎಂದ. ಹುಡುಗರು 'ಹೂಂ' ಎಂದರು. ಮಂಜಣ್ಣ 'ಹೂಂ' ಎಂದರೆ ಕೊಡ ಮೇಲೆ ಬರ್ತದೆಯೇ ?'' ಎಂದ. 'ಇಲ್ಲ ' ಎಂದರು. ಇಲ್ಲ ಅಂದರೆ ಬರ್ತದೆಯೇ ? ಎಂದ. ಹುಡುಗರು ಅಳುವವರಂತೆ ನಟಿಸಲು ''ಅತ್ತರೆ ಬರ್ತದೆಯೇ ?'' ಎಂದ. ಅಯ್ಯೋ ! ಎಂದು ಕೂಗಿದರು. ''ಅಯ್ಯೋ ಎಂದರೆ ಬರ್ತದೆಯ ?'' ಎಂದ. ಮೌನವಾದರೆ ಇವನೇನು ಮಾಡುವನೆಂದು ಹುಡುಗರು ಸುಮ್ಮನೆ ಕುಳಿತರು. ''ಸುಮ್ಮನೆ ಕುಳಿತರೆ ಬರ್ತದೆಯೇ ?'' ಎಂದ. ಮಂಜಣ್ಣ ಹೀಗೆ ಹುಡುಗರನ್ನು ಪೀಡಿಸುತ್ತಾ ನಗಿಸುತ್ತಾ ಕಥೆ ಹೇಳುತ್ತಿದ್ದನು.

ಮತ್ತೊಂದು ದಿನ ಕತೆ ಹೇಳಲು ಕಷ್ಟಪಟ್ಟು ಹುಡುಗರೆಲ್ಲ ಒಪ್ಪಿಸಿದರು. ಇನ್ನೇನು ಮಂಜಣ್ಣ ಕತೆ ಹೇಳಲು ಪ್ರಾರಂಭಿಸಬೇಕೆಂದು ಗಂಟಲನ್ನು ಸರಿ ಮಾಡಿಕೊಂಡ. 'ಒಂದೂರಿನಲ್ಲಿ ' ಎನ್ನುವಷ್ಟರಲ್ಲ ಚಿಕ್ಕಮ್ಮ ಬಂದು ಹುಡುಗರನ್ನೆಲ್ಲಾ ಊಟಕ್ಕೆ ಕರೆದರು. ಮಕ್ಕಳು ಊಟ ಮಾಡಿ ಮಂಜಣ್ಣನ ಬಳಿಗೆ ಓಡಿಬಂದರು. ನಂತರ ಮಂಜಣ್ಣನನ್ನು ಊಟಕ್ಕೆ ಕರೆದರು. ಮಂಜಣ್ಣ ಊಟ ಮುಗಿಸಿ ಬಂದು ಎಲೆಯಡಿಕೆ ಚೀಲ ಬಿಚ್ಚಿ ಎಲೆ ಹಾಕಿಕೊಂಡ, ಹುಡುಗರ ಕಾತರ ಹೆಚ್ಚಾಯಿತು. ಅಂತೂ ಕಥೆ ಪ್ರಾರಂಭವಾಯಿತು.

ಪ್ರಬಂಧಕಾರರು ಕತೆಯ ನಡುನಡುವೆಯೇ ಬಾಲ್ಯದ ಮುಗ್ಧತೆಯನ್ನು, ಭವಿಷ್ಯದ ಚಿಂತನೆಯನ್ನು ಸ್ವವಿಮರ್ಶಿಸುತ್ತಾ ಚಿತ್ರಿಸಿದ್ದಾರೆ. ಅವರು ಕೊನೆಯಲ್ಲಿ ಹೀಗೆ ಅಭಿಪ್ರಾಯ ಪಡುತ್ತಾರೆ ''. ದೊಡ್ಡ ಬ್ರಹ್ಮಾಂಡ, ಅದರ ಸ್ವಪ್ನ ಗಂಭೀರವಾದ ಕೇಂದ್ರ ಸ್ಥಾನ ರವಿಯಲ್ಲ, ಶಶಿಯಲ್ಲ, ತಾರಕೆಗಳಲ್ಲ, ನೀಲ ಮೇಘಾಂಧಕಾರ ! ಮಳೆ ನಿರಂತರವಾಗಿ ಸದಾ ಸುರಿಯುತ್ತಿದೆ. ಅದೊಂದು ಮಹಾ ಏಕಾಂತ ! ಅಲ್ಲಿ ಆ ರಹಸ್ಯವಾದ ಬ್ರಹ್ಮ ಕೇಂದ್ರದಲ್ಲಿ ಒಂದು ಮುರ ಬೇಯಿಸುವ ಒಲೆ ! ಅದರಲ್ಲಿ ಸರ್ವದಾ ಝುಗಿಸುವ ಬೆಂಕಿ ! ಅದರ ಮುಂದೆ ಕಿಟ್ಟು ಮಂಜಣ್ಣ , ವಾಸು, ಸೀತೆ ಮತ್ತು ಪ್ರಬಂಧಕಾರರು, ವೃದ್ಧಮೂರ್ತಿ ಕತೆ ಹೇಳುತ್ತಿರುವನು. ನಾವು ಏಕಾಗ್ರಚಿತ್ತವಾಗಿ ಆತನ ಮುಖದ ಕಡೆ ನೋಡುತ್ತಾ ಕತೆ ಕೇಳುತ್ತಿದ್ದೇವೆ. ಎಂದಿಗೂ ಮುಗಿಯದ ಕತೆ ''[2] ಮುಗಿಯದ ಕತೆಯಾದುದರಿಂದ ಮುಕ್ತಾಯವೇ ಇಲ್ಲ. ಇದು ಮಂಜಣ್ಣನ ವ್ಯಕ್ತಿಚಿತ್ರವಾಗಿದೆ. ಕುವೆಂಪು ಅವರು ಚಿತ್ರಿಸಿರುವ ಈ ಚಿತ್ರದಲ್ಲಿ ತಮ್ಮ ಬಾಲ್ಯದ ಅನುಭವವನ್ನು ಮಂಜಣ್ಣನ ವ್ಯಕ್ತಿ ಚಿತ್ರದ ಹಿನ್ನೆಲೆಯಲ್ಲಿ ಸುಂದರವಾಗಿ ವರ್ಣಿಸಿದ್ದಾರೆ. ಇಲ್ಲಿ ಕತೆ ಹೇಳುವವನ ಕಲೆಗಾರಿಕೆ, ಕತೆ ಕೇಳುವವರ ಕುತೂಹಲ, ಬಯಕೆಯನ್ನು ಗಮನಿಸಿದಾಗ ಇಂದಿನ ಪೀಳಿಗೆಯವರಲ್ಲಾದ ಬದಲಾವಣೆಯನ್ನು ಗುರುತಿಸಬಹುದು. ಇಂದಿನ ಮಕ್ಕಳಲ್ಲಿ ಹೀಗೆ ತಾಳ್ಮೆಯಿಂದ ಕುಳಿತು ಬೇರೆಯವರು ಹೇಳುವುದನ್ನು ಕೇಳುವ ಮನೋಭಾವವೇ ಇಲ್ಲದಂತಾಗಿದೆ. ಇದಕ್ಕೆ ಅವರು ಕಾರಣರು ಎನ್ನುವುದಕ್ಕಿಂತ ಅವರ ಸುತ್ತಲಿನ ಪರಿಸರ ಹಾಗೆ ಬೆಳೆಯುವಂತೆ ಮಾಡಿದೆ. ಅಷ್ಟೇ ಅಲ್ಲದೆ ಮಂಜಣ್ಣನಂತೆ ಕತೆಹೇಳುವ ಶೈಲಿಯೂ ಈಗ ಅಪರೂಪವಾಗಿದೆ. ಇದಕ್ಕೆ ಆಧುನಕ ಜೀವನದಲ್ಲಾದ ಅನೇಕ ಬದಲಾವಣೆಗಳು ಕಾರಣ ಎನ್ನಬಹುದು. ದಿನ ಪೂರ್ತಿ ಓದುವುದು, ಬರೆಯುವುದು ಒಂದು ರೀತಿಯಾದರೆ ಸಮಯ ಸಿಕ್ಕಾಗಲೆಲ್ಲಾ ಟಿವಿಯ ಮುಂದೆ ಹಲವಾರು ಚಾನೆಲ್ ನೋಡುತ್ತಾ ಕಾಲ ಕಳೆಯುವುದೇ ಇಂದಿನ ಮಕ್ಕಳ ಜೀವನ ಕ್ರಮವಾಗಿದೆ. ಮಲೆನಾಡಿನಲ್ಲೂ ನಗರದಂತೆ ಇಂದು ಸಾಕಷ್ಟು ಆಧುನೀಕರಣಗೊಂಡಿದೆ.

ಮಲೆನಾಡಿನ ಚಿತ್ರಗಳಲ್ಲಿ ಕುವೆಂಪುರವರು ಚಿತ್ರಿಸಿದ ವ್ಯಕ್ತಿ ಚಿತ್ರಗಳಾದ ರಂಗಯ್ಯ, ಪುಟ್ಟಾಚಾರಿ, ಮಂಜಣ್ಣ , ಅಣ್ಣಪ್ಪ ಇವರೊಂದಿಗೆ ಅಜ್ಜಯ್ಯ, ವಾಸು, ಮಾನು ಇವರೆಲ್ಲರೂ ನಮಗೆ ತೀರ ಹತ್ತಿರದವರು ಎನಿಸುವಂತಿದೆ. ಹಾಗೆ ಇವರ ಸ್ವಭಾವವೂ ನಾವು ಎಲ್ಲೋ

ಕಂಡು ಕೇಳಿದಂತಹದ್ದೇನಲ್ಲ. ನಮಗೆ ತೀರ ಪರಿಚಿತವಾದಂತಹದೇ ಎನ್ನಬಹುದು. ಇಂತಹ ವ್ಯಕ್ತಿ ಚಿತ್ರಗಳು ಕುವೆಂಪು ಬರಹದಲ್ಲಿ ಅವರ ವರ್ಣನೆಯಲ್ಲಿ ಸೊಗಸಾಗಿ ಮೂಡಿಬಂದಿವೆ. ಇಲ್ಲಿ ನಾವು ಬಿಡಿಬಿಡಿಯಾಗಿ ಕಾಣುವ ವ್ಯಕ್ತಿಚಿತ್ರಗಳು ಅವರ ಮುಂದಿನ ಸಾಹಿತ್ಯ ಕೃತಿಗಳಲ್ಲಿ ಒಟ್ಟಾರೆಯಾಗಿ ಒಂದೇ ಜೀವನ ವಿಧಾನದಲ್ಲಿ ಪರಸ್ಪರ ಸಂಬಂಧಿಗಳಾಗಿ ಕಥನದೊಂದಿಗೆ ಒಂದಾಗಿರುವುದನ್ನು ಕಾಣಬಹುದು.

ಕುವೆಂಪು ಚಿತ್ರಿಸಿದ ವ್ಯಕ್ತಿ ಚಿತ್ರಗಳಲ್ಲಿನ ವ್ಯಕ್ತಿಗಳ ವ್ಯಕ್ತಿತ್ವಗಳು ಇಂದು ಕೇವಲ ಕುವೆಂಪುರವರ ಕೃತಿಗಳಲ್ಲಿ ಮಾತ್ರ ಕಾಣಲು ಸಾಧ್ಯ. ಏಕೆಂದರೆ ಮಲೆನಾಡು ಕೇವಲ ಪ್ರಾಕೃತಿಕವಾಗಿ, ಸಾಮಾಜಿಕವಾಗಿ ಮಾತ್ರ ಬದಲಾಗಿಲ್ಲ. ಜೊತೆಗೆ ಅಲ್ಲಿ ಜೀವಿಸುವ ಪ್ರತಿಯೊಂದು ವ್ಯಕ್ತಿಯ ಜೀವನ, ವ್ಯಕ್ತಿತ್ವ ಮಾನವೀಯ ಮೌಲ್ಯಗಳು ಇದಾವುದೂ ಹಿಂದಿನಂತಿಲ್ಲ. ರಂಗಯ್ಯನಲ್ಲಿ ಕಾಣುವ ಧೈರ್ಯವಾಗಲಿ, ಅಣ್ಣಪ್ಪನ ಮಾನವೀಯತೆ, ಋಣ ಮುಕ್ತನಾಗಬೇಕೆಂಬ ಹಂಬಲವಾಗಲಿ, ಮಂಜಣ್ಣನ ಕಲೆಗಾರಿಕೆ, ಪುಟ್ಟಾಚಾರಿಯ ಯಶೋಭಿಲಾಷೆ ಇಲ್ಲದ ಬದುಕಾಗಲಿ ಇಂದು ಕಂಡು ಬರುವುದಿಲ್ಲ. ಹೆಚ್ಚಿನ ಜನರು ಈಗ ಬದುಕುತ್ತಿರುವುದೇ ತಮ್ಮ ತಮ್ಮ ಸ್ವಾರ್ಥ ಸಾಧನೆಗಾಗಿ. ಅದಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧರಾಗಿದ್ದಾರೆ. ಕುವೆಂಪು ಅವರು ಕಂಡಂತ ಪೂರ್ಣದೃಷ್ಟಿ ಈಗಿನವರಲ್ಲಿ ಸ್ವಲ್ಪವಾದರೂ ಇದ್ದಿದ್ದರೆ ಇಂದು ಮಲೆನಾಡು ಮಾತ್ರವಲ್ಲ ನಮ್ಮ ಇಡೀ ಜಗತ್ತು ಹಿಂದಿನ ಸಂಪತ್ತು ಸಂಸ್ಕೃತಿಯನ್ನು ಉಳಿಸಿಕೊಂಡು ಮುಂದಿನ ಆರೋಗ್ಯಕರ ಬೆಳವಣಿಗೆಯತ್ತ ಸಾಗುತ್ತಿತ್ತು.

೪.೨-ಬಾಲ್ಯ ಜೀವನ ಚಿತ್ರ :

ಕುವೆಂಪು ಅವರು ಮಲೆನಾಡಿನ ಚಿತ್ರಗಳಲ್ಲ ತಮ್ಮ ಬಾಲ್ಯ ಜೀವನದ ಕೆಲವೊಂದು ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ. ಬಾಲ್ಯ ಜೀವನ ಮುಗ್ಧತೆ, ಚೇಷ್ಟೆ ಆಟ-ಪಾಠ ಇಂತಹ ವಿಶಿಷ್ಟ ಅನುಭವಗಳಿಂದ ಕೂಡಿರುತ್ತದೆ. ದೊಡ್ಡವರಾದ ನಂತರ ನಾವು ಬದುಕುವ ಯಾಂತ್ರಿಕ ಜೀವನಕ್ಕೆ ಹೋಲಿಸಿದಾಗ ಯಾವುದೇ ಜಂಜಾಟವಿಲ್ಲದೆ ಸ್ವೇಚ್ಛೆಯಾಗಿ ಸ್ವಾತಂತ್ರ್ಯ, ಸಂತೋಷದಿಂದ ಕೂಡಿದ್ದ ಬಾಲ್ಯ ಜೀವನ ನೆನಪಾಗುವುದು ಸಹಜ. ಕುವೆಂಪು ಅವರು ತಮ್ಮ ಬಾಲ್ಯದ ನೆನಪುಗಳನ್ನು 'ರಾಮು ರಾವಣರ ಯುದ್ಧ',

'ಮನೆಯ ಶಾಲೆಯ ಐಗಳ ಮಾಲೆ ' 'ಕತೆಗಾರ ಮಂಜಣ್ಣ ', 'ಅಜ್ಜಯ್ಯನ ಅಭ್ಯಂಜನ ' ಚಿತ್ರಗಳಲ್ಲಿ ಸೊಗಸಾಗಿ ವರ್ಣಿಸಿದ್ದಾರೆ. ಅವರ ಬಾಲ್ಯ ಜೀವನ ಈಗ ಕೇವಲ ನೆನಪಷ್ಟೇ. ಏಕೆಂದರೆ ಮಲೆನಾಡಿನಲ್ಲಾದ ಆಧುನೀಕರಣ ಮಕ್ಕಳ ಜೀವನವನ್ನು ಹೊರತುಪಡಿಸಿಲ್ಲ. ಕುವೆಂಪು ಚಿತ್ರಿಸಿದ ಬಾಲ್ಯ ಜೀವನ ನೆನಪುಗಳು ಎಂತಹದ್ದು ಎಂದು ತಿಳಿದು ನಂತರ ಇಂದು ಏನು ಬದಲಾಗಿದೆ ಎಂಬುದನ್ನು ತಿಳಿಯಬಹುದು.

'ರಾಮ ರಾವಣರ ಯುದ್ಧ ' ಹಾಸ್ಯದೊಂದಿಗೆ ಚಿತ್ರಿತವಾದ ಕುವೆಂಪು ಅವರ ಬಾಲ್ಯದ ನೆನಪು. ಇಂದಿನ ಮಕ್ಕಳ ಬಾಲ್ಯದಾಟಕ್ಕಿಂತ ಭಿನ್ನವಾದ ವಿಶಿಷ್ಟವಾದ ಬಾಲ್ಯವಾಟವನ್ನು ಕುವೆಂಪು ಅವರಲ್ಲಿ ಕಾಣಬಹುದಾಗಿದೆ. ಅವರು ತಮ್ಮ ಬಾಲ್ಯದ ದಿನಗಳನ್ನು ಕಾವ್ಯಾತ್ಮಕವಾಗಿ ವರ್ಣಿಸಿದ್ದಾರೆ.

''ಆ ಕಾಲವೊಂದಿತ್ತು ! ದಿವ್ಯ ತಾನಾಗಿತ್ತು ! ಬಾಲ್ಯವಾಗಿತ್ತು !
ಮಣ್ಣು ಹೊನ್ನಾಗಿ, ಕಲ್ಲೆ ಹೂವಾಗಿ, ನೀರಮೃತವಾಗಿ,
ಮನೆ ಮೇರುವಾಗಿ, ಕವಿಶೈಲ ತಾನೆ ಕೈಲಾಸವಾಗಿ,
ಕಾಡೆನಂದನವಾಗಿ, ನೆಲವೆ ನಾಕವ ನಗುವ ಕಾಲವೊಂದಿತ್ತು !
ಆ ಕಾಲವೊಂದಿತ್ತು ! ದಿವ್ಯ ತಾನಾಗಿತ್ತು ! ಬಾಲ್ಯವಾಗಿತ್ತು !''[೮]

ಕುವೆಂಪು ತಮ್ಮ ಬಾಲ್ಯದಲ್ಲಿ ಕಂಡ ದೃಶ್ಯಗಳಾಗಲಿ, ಪರಿಸರವಾಗಲಿ ಅವರು ವಯಸ್ಕರಾದ ನಂತರ ತಮ್ಮ ಹುಟ್ಟೂರಿಗೆ ಬಂದಾಜಗ ಕಂಡುಬರಲಿಲ್ಲ. ಕುವೆಂಪುರವರು ಇರುವಾಗಲೇ ಇಷ್ಟೊಂದು ಬದಲಾವಣೆ ಹೊಂದಿದೆ ಅಂದ ಮೇಲೆ ಈಗ ಇನ್ನೆಷ್ಟು ಬದಲಾಗಿರಬಹುದು. ಈ ಕುರಿತು ಕುವೆಂಪು ಹೀಗೆ ಹೇಳುತ್ತಾರೆ. ''ಅಂದು ಅಸಾಧ್ಯವೆಂದು ತೋರಿದುದು ಇಂದು ಸಾಧ್ಯವಾಗಿದೆ. ಅಂದು ಸಾಧ್ಯವಾದುದು ಮಾತ್ರ ಇಂದು ಅಸಾಧ್ಯವಾಗಿ ಪರಿಣಮಿಸಿದೆ ''[೯] ಎಂದಿದ್ದಾರೆ.

ಬಾಲ್ಯ ಜೀವನ ಎಂದಾಕ್ಷಣ ನಮಗೆ ನೆನಪಾಗುವುದು ಆಟ. ಅದು ಒಂದೊಂದು ಪೀಳಿಗೆಯವರಲ್ಲಿ, ಒಂದೊಂದು ಪ್ರದೇಶದಲ್ಲಿ ಬೇರೆ ಬೇರೆಯಾಗಿರುವುದು. ಪ್ರಬಂಧಕಾರರ ಬಾಲ್ಯ ಜೀವನದಲ್ಲಿ ಆಡಿದ ಒಂದು ವಿಶಿಷ್ಟ ಬಗೆಯ ಆಟ 'ರಾಮರಾವಣರ ಯುದ್ಧ '. ಬೈಗಿನಿಂದ ಬೆಳಗಿನವರೆಗೆ ಪೆರಡೂರಿನ ಭಾಗವತರ ಆಟ ನೋಡಿ ಬಂದ ಹುಡುಗರು

ಮರುದಿನ ಬೆಳಿಗ್ಗೆ ಕಾಫಿ ಕುಡಿದು ಹರಡುತ್ತಿದ್ದಾಗ ತಾವೂ ಒಂದು ಮೇಳದ ಆಟ ಆಡಬೇಕೆಂದು ನಿರ್ಧರಿಸಿದರು. ಹೊರ ಅಂಗಳದಲ್ಲಿದ್ದ ದೊಡ್ಡ ಬಸರಿಮರ ಹುಣಸೇ ಮರಗಳ ಅಡಿಯೇ ಇವರಿಗೆ ರಂಗಸ್ಥಳವಾಯಿತು. ಆ ಎರಡು ಮರಗಳ ಅಡಿಯಲ್ಲಿ ಆಟವಾಡಿದ, ಜಗಳವಾಡಿದ ದಿನಗಳನ್ನು ನೆನೆದು ಪ್ರಬಂಧಕಾರರು ಮರುಗಿದ್ದಾರೆ. ಏಕೆಂದರೆ ಪ್ರಬಂಧಕಾರರು ಅವರ ತಾತ, ಮುತ್ತಾತರನ್ನಾದರೂ ಮರೆತರು, ಆದರೆ ಆ ಮರಗಳನ್ನು ಮರೆಯಲಾರರು. ಆದರೆ ಸ್ವಲ್ಪ ಕಾಲ ಬಿಟ್ಟು ಅವರು ಬೆಳೆದು ಆಡಿದ ಮನೆಯ ಹತ್ತಿರ ನೋಡಿದಾಗ ಅವೂ ಇರಲಿಲ್ಲ, ಜೊತೆಗೆ ಅವರೊಂದಿಗೆ ಆ ದಿನ ಆಟವಾಡಿದ ಮಕ್ಕಳೂ ಇರಲಿಲ್ಲ. ಅಂದು ರಂಗಸ್ಥಳದ ಆಯ್ಕೆಯಾದ ಮೇಲೆ ರಾಮರಾವಣರ ಯುದ್ಧದ ಪ್ರಸಂಗವನ್ನು ಆಡುವುದು ಎಂದು ನಿರ್ಧಾರವಾಯಿತು. ಮುಂದೆ ಯಾರು, ಯಾರು ಯಾವ ಪಾರ್ಟ್ ಧರಿಸಬೇಕು ಎಂಬುದರ ಚರ್ಚೆಯೇ ದೊಡ್ಡ ರಾಮಾಯಣವಾಯಿತು.

ತಿಮ್ಮು ತಾನು ರಾಮನ ಪಾರ್ಟ್ ಹಾಕುತ್ತೇನೆ ಎಂದ. 'ಓಬು ; ಚೋಟುದ್ದ ಇದಾನೆ, ಇವನಿಗೆ ರಾಮನ ಪಾತ್ರವಂತೆ ' ಎಂದು ಗೇಲಿ ಮಾಡಿದ. ಎಂಕ್ಟು ಸಹ ನಿನ್ನೆ ರಾಮನವೇಷ ಹಾಕಿದ್ದವನು ಭೀಮನ ಹಾಂಗಿದ್ದ ಎಂದ. ವಾಸು ತಾನು ಲಕ್ಷ್ಮಣನಾಗುತ್ತೇನೆ ಎಂದ. ಓಬು ಮತ್ತೆ ಒಂದು ಮಣ ತೂಕಾನೂ ಇಲ್ಲ, ಇವನು ಲಕ್ಷ್ಮಣ ಆಗ್ತಾನಂತೆ ನೀನು ಹನುಮಂತನ ಪಾರ್ಟಿಗೆ ಲಾಯಖ್ಖು ಎಂದ. ವಾಸುವಿಗೆ ಸಿಟ್ಟು ಬಂದು ಓಬುವನ್ನು ಹೊಡೆಯಲು ಹೋದ. ಆದರೆ ಅದರಲ್ಲಿ ಓಬುವೇ ಮೇಲುಗೈಯಾಗಿ ವಾಸು ಸುಮ್ಮನಾದ. ಅಷ್ಟರಲ್ಲಿ ಪ್ರಬಂಧಕಾರರು ರಾಜಿಯನ್ನು ಕುರಿತು ''ನೀನು ಲಂಕಿಣಿ ಆಗು '' ಎಂದರು. ರಾಜಿ ತನಗೆ ಲಂಕಿಣಿ ಪಾರ್ಟು ಬೇಡ ಎಂದು ಹೇಳುವಲ್ಲಿ ಸಾಕ್ಷಾತ್ ಲಂಕಿಣಿಯೇ ಆದಳು. ಮಾನು 'ನಿನಗೆ ಸೀತೆ ಪಾರ್ಟು ಕೊಡುತ್ತಾರೆಯೇ ' ಎಂದ. ಓಬು, 'ಅವಳ ಮುಖ ಕೂಡ ಚೆನ್ನಾಗಿಲ್ಲ ' ಎಂದ. ತಿಮ್ಮು ಓಬುವಿನ ಕಡೆ ತಿರುಗಿ ನೀನು ಯಾವ ವೇಷ ಹಾಕುತ್ತೀಯೋ, ಆ ವೇಷದ ತಂಗಿಯಾಗಲು ಇವಳು ಸರಿಯಲ್ಲ, ಕಡೆಗೆ ಎಲ್ಲರೂ ಮಾನುವೆ ರಾಮನಾಗಲಿ ಎಂದು ತೀರ್ಮಾನಿಸಿದರು. ದಾನಿ ಸೀತೆಯಾಗುವುದೆಂದು ತೀರ್ಮಾನವಾಯಿತು. ಕೊನೆಗೆ ರಾವಣನ ವೇಷಕ್ಕೆ ಪ್ರಬಂಧಕಾರರನ್ನೇ ಆರಿಸಲಾಯಿತು. ಆಗ ತಮಗೆ ಒಂಭತ್ತು ತಲೆ ತಂದುಕೊಡಬೇಕೆಂದು ಹಠ ಹಿಡಿದರು. ಆ ವೇಳೆಗೆ ಹಿಂದಿನ

ದಿನ ಆಟದಲ್ಲಿ ರಾವಣನಾಗಿದ್ದ ಸೀನಪ್ಪಯ್ಯ ಆ ಕಡೆ ಬಂದರು. ಅವರಿಗೆ ಇದ್ದ ಒಂದು ತಲೆಯೂ ಮುಕ್ಕಾಗಿತ್ತು. ಹೀಗಾಗಿ ಪ್ರತ್ಯಕ್ಷ ಪ್ರಮಾಣದ ಮುಂದೆ ತಮ್ಮ ಆಟ ನಡೆಯದೆ ಪ್ರಬಂಧಕಾರರೇ ರಾವಣನಾಗಲು ಒಪ್ಪಿದರು. ಓಬುವೇ ಹನುಮಂತನಾದ. ಅವನು ಸಹಜವಾಗಿಯೇ ಹಾಗಿದ್ದ. ರಾಜಿ ಮನಸ್ಸಿಲ್ಲದ ಮನಸ್ಸಿನಲ್ಲಿ ಲಂಕಿಣಿಯಾಗಲು ಒಪ್ಪಿದಳು.

ರಾಮಾಯಣದಲ್ಲಿ ನ್ಯಾಯವಾಗಿ ಭೀಮ ಬರುವುದಿಲ್ಲ. ಆದರೂ ಚೋಟುದ್ದ ವಾಸು ಭೀಮನಾಗುತ್ತೇನೆ ಎಂದು ಹಠ ಹಿಡಿದ. ಅವನು ಎಂದೋ ಆಟದಲ್ಲಿ ಮಂಡಕ್ಕಿ ಮುಕ್ಕಿದ ಭೀಮನನ್ನು ನೋಡಿದ್ದ. ಹೀಗಾಗಿ ತಾನು ಭೀಮನಾದರೆ ತನಗೂ ಮಂಡಕ್ಕಿ ಸಿಗುತ್ತದೆ ಎಂಬ ಆಸೆ ಅವನಿಗಿತ್ತು. ರಾಮಾಯಣದಲ್ಲಿ ಭೀಮ ಬರುವುದಿಲ್ಲ ಎಂದರೂ ಅವನು ಕೇಳಲಿಲ್ಲ. ಕೊನೆಗೂ ಅವನ ಹಠ ಗೆದ್ದಿತು. ಇದು ಹೊಸ ರಾಮಾಯಣವೇ ಆಯಿತು. ಎಂಕ್ಟು ವಿಭೀಷಣನಾದ, ತಿಮ್ಮು ಕುಂಬಕರ್ಣನಾದ. ರಾಮರಾವಣರು ಯುದ್ಧಕ್ಕೆ ಹೊರಡುವ ಮುನ್ನ 'ಭೀಮಪೂಜೆ ' ಮಾಡಿ, ಬೇಕು ಬೇಕಾದ ಭಕ್ಷ್ಯಭೋಜ್ಯಗಳನ್ನು ನಿವೇದಿಸಬೇಕೆಂದು ವಾಸುವೇ ಸಲಹೆ ಕೊಟ್ಟ. ಹಾಗೆ ರಾಮ ಮತ್ತು ರಾವಣ ಬೇರೆ ಬೇರೆಯಾಗಿ ಬಂದು ಪೂಜೆ ಮಾಡಬೇಕು ಎಂದು ಅಪ್ಪಣೆ ಮಾಡಿದ. ಓಬು ರಾವಣನ ಕಿವಿಯಲ್ಲಿ ಹೇಳಿ ಹುಳುಗಳನ್ನು ತಲೆಯಲ್ಲಿ ಹಾಕಿ ಭೀಮನಿಗೆ ನೈವೇದ್ಯ ಮಾಡು ಎಂದ. ತಾನೇ ಹುಳುಗಳನ್ನೂ ತಂದುಕೊಟ್ಟನು. (ಕಟ್ಟಿರುವೆ, ಗೊದ್ದಗಳು ಇತ್ಯಾದಿಗಳನ್ನು) ಭೀಮ ಕಣ್ಣುಮುಚ್ಚಿ ಕುಳಿತ. ರಾವಣ ನೈವೇದ್ಯ ಮಾಡಿದ. ಭೀಮ ತಿನ್ನಲು ಕೈಹಾಕಿದ. ಕಟ್ಟಿರುವೆ ಕಡಿಯಿತು, ಕಿಟಾರನೆ ಕಿರುಚಿದ ಸದ್ದು ಕೇಳಿದ ಚಿಕ್ಕಮ್ಮ ಸೌಟು ಹಿಡಿದೇ ಅಡಿಗೆ ಮನೆಯಿಂದ ಬಂದು ಭೀಮನನ್ನು ಒಳಕ್ಕೆ ಎಳೆದುಕೊಂಡು ಹೋದರು. ಅಲ್ಲಿ ಸರಿಯಾದ ಭೀಮ ಪೂಜೆ ಆಗಿರಬೇಕಾಗಿ ರಾಮಾಯಣದ ಆಟ ಮುಂದುವರಿಯಿತು. ಸೇತು ಬಂಧನಕ್ಕೆ ಲಂಕಿಣಿ ಸೀತೆ ರಾವಣ ಕುಂಭಕರ್ಣ ಎಲ್ಲರೂ ಸಹಾಯ ಮಾಡಿದರು. ಮುಂದೆ ತಿಮ್ಮು ಶಿವನಾದ, ಲಂಕಿಣಿಯಾಗಿದ್ದ ರಾಜಿ ಪಾರ್ವತಿ ಆದಳು. ಅವರಿಬ್ಬರೂ ಕಲ್ಲು ಚಪ್ಪಡಿ ಮೇಲೆ ಕುಳಿತರು. ಹನುಮಂತನು ಕೈಲಾಸ ಎತ್ತಲು (ಹೊಸ ರಾಮಾಯಣದ ಪ್ರಕಾರ) ಚಪ್ಪಡಿಯ ತಳಕ್ಕೆ ಕೈಹಾಕಿದ, ಮೇಲಿನಿಂದ ಶಿವ ಒತ್ತಿದ. ಹನುಮಂತನ ವೇಷಧಾರಿ ಓಬು ಕಿರಚಿಕೊಂಡು ದೇವರ ದಯದಿಂದ ಚಪ್ಪಡಿಯ ಅಡಿಯಲ್ಲಿ ಸಿಕ್ಕಿದ್ದ ಕೈ ಹನುಮಂತನದು, ರಾವಣನದು ಅಲ್ಲ, ಹಾಗಾಗಿದ್ದರೆ ಈ ಪ್ರಬಂಧ ಬರೆಯಲು 'ನನಗೆ ಆಗುತ್ತಲೇ ಇರಲಿಲ್ಲ' ಎಂದು ಪ್ರಬಂಧಕಾರರು ಹೇಳಿದ್ದಾರೆ. ಓಬುವಿನ ದನಿ ಕೇಳಿ ಕಕ್ಕಯ್ಯ ಓಡಿಬಂದರು. ಶಿವ

ಪಾರ್ವತಿಯರನ್ನು ಎಳೆದು ಹಾಕಿ ಕೈಲಾಸವನ್ನು ಎತ್ತಿ ಹನುಮಂತನನ್ನು ಬಿಡಿಸಿದರು. ಎಲ್ಲರಿಗೂ ಹುಣಸೆ ಬರಲಿನಿಂದ ಎರಡೆರಡು ಛಡಿ ಏಟು ಕೊಟ್ಟು ಹನುಮಂತನನ್ನು ಔಷಧಿ ಹಾಕಲು ಎಳೆದುಕೊಂಡು ಹೋದರು.

ರಾಮ ರಾವಣರ ಯುದ್ಧ ಮುಂದುವರಿಯಿತು. ಇಲ್ಲಿ ರಾಮನೇ ಬಿದ್ದ ರಾವಣನೇ ಗೆದ್ದ. ಕೆಳಗೆ ಬಿದ್ದ ರಾಮನನ್ನು ಬಿಡಿಸಿಕೊಳ್ಳಲು ಲಂಕಿಣಿ ಸೀತೆ ಎಲ್ಲರೂ ಬಂದರು. ಗಾಡಿಯ ಆಳು ಲಿಂಗ ಬಂದು ರಾಮನನ್ನು ಮೇಲಕ್ಕೆ ಎತ್ತಿದರು. ಹೀಗೆ ಈ ಹೊಸ ರಾಮಾಯಣ ಕೊನೆಗೊಂಡಿತು. ಕುವೆಂಪು ಅವರ ಹಾಸ್ಯ ಪ್ರಜ್ಞೆ ಇಲ್ಲಿ ಮುಗಿಲು ಮುಟ್ಟಿತು.

ರಾಮ ರಾವಣರ ಯುದ್ಧದ ಪ್ರಸಂಗವನ್ನು ತಿಳಿದಾಗ ಲೇಖಕರ ಬಾಲ್ಯ ಜೀವನ ಎಷ್ಟೆಲ್ಲ ವೈವಿಧ್ಯತೆಯಿಂದ ಕೂಡಿತ್ತು ಎಂಬುದು ತಿಳಿದು ಬರುತ್ತದೆ. ಅಂದು ಈಗಿನಂತೆ ಟಿ.ವಿ. ಸಿನಿಮಾ ಇಲ್ಲದೇ ಇದ್ದುದರಿಂದ ಅವರು ತಮ್ಮ ಮನೋರಂಜನೆಯಲ್ಲಿ ತಾವೂ ತೊಡಗಿಕೊಳ್ಳುತ್ತಿದ್ದರು. ಹುಡುಗರೆಲ್ಲಾ ಒಂದೆಡೆ ಸೇರಿ ಬೆರೆಯುತ್ತಿದ್ದರು. ಒಟ್ಟಾಗಿ ಆಡುತ್ತಿದ್ದರು. ಜಗಳ ಮಾಡಿಕೊಳ್ಳುತ್ತಾ ಮತ್ತೆ ಒಂದಾಗುತ್ತ ಬಾಲ್ಯವನ್ನು ಸಂತೋಷದಿಂದ ಅರ್ಥಪೂರ್ಣವಾಗಿ ಕಳೆಯುತ್ತಿದ್ದರು. ಲೇಖಕರು ಒಂದು ಅನುಭವವನ್ನು ಇಲ್ಲಿ ತಿಳಿಸಿದ್ದಾರೆ. ಇಂತಹ ಅದೆಷ್ಟು ಅನುಭವಗಳಿಂದ ಕೂಡಿದೆಯೋ ಅವರ ಬಾಲ್ಯ ಜೀವನ. ಅದೇ ಇಂದಿನವರ ಬಾಲ್ಯ ಜೀವನ ಇಂತಹ ಅನುಭವಗಳೊಂದಿಗೆ ಹೋಲಿಸಿದಾಗ ಎಷ್ಟೊಂದು ಬದಲಾಗಿರುವುದು ಕಂಡುಬರುತ್ತದೆ. ಬಯಲಾಟ, ಯಕ್ಷಗಾನದಂತಹ ಜನಪದ ಕಲೆಗಳೇ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ಇವುಗಳನ್ನು ಮಕ್ಕಳು ನೋಡಿ ಅದನ್ನು ಅಭಿನಯಿಸಿವುದು ಕಲ್ಪನೆ ಮಾಡಲು ಅಸಾಧ್ಯ ಎನಿಸುವಂತ ಸ್ಥಿತಿ ಬಂದೊದಗಿದೆ.

ಇದೇ ರೀತಿಯ ಬಾಲ್ಯದ ನೆನಪುಗಳಲ್ಲಿ ಪ್ರಬಂಧಕಾರರು ತಿಳಿಸಿದ ಮತ್ತೊಂದು ಪ್ರಸಂಗ 'ಕತೆಗಾರ ಮಂಜಣ್ಣ ' ನದು. ಇಲ್ಲಿ ಮಂಜಣ್ಣ ಕತೆ ಹೇಳುವವನು. ಕತೆ ಕೇಳುವ ಆಸಕ್ತಿ ಮಕ್ಕಳಲ್ಲಿತ್ತು. ಆತ ಮಕ್ಕಳಿಗೆ ಕೇವಲ ಕತೆಗಾರ ಮಾತ್ರವಲ್ಲ ಅವರ ಗುರು. ಅದೇ ಆ ಮಕ್ಕಳ ಹಿರಿಯರಿಗೆ ಆತ ಆಳು. ಲವಕುಶರಿಗೆ ವಾಲ್ಮೀಕಿಯನ್ನು ಕಂಡರೆ ಯಾವ ಭಾವ

ಉಂಟಾಗುತ್ತಿತ್ತೋ ಅದೇ ಭಾವ ಈ ಮಕ್ಕಳಲ್ಲೂ ಉಂಟಾಗುತ್ತಿತ್ತು. ಲೇಖಕರು ಮುಗ್ಧತೆಯಿಂದ ಹೇಳುತ್ತಾರೆ. ನಾನು ಒಂದೊಂದು ಸಲ ಹೀಗೆಂದು ಯೋಚಿಸುತ್ತಿದ್ದೆ. ''ನಾನು ಯಜಮಾನನಾದರೆ ಮಂಜಣ್ಣನಿಗೆ ಕತೆ ಹೇಳುವ ಕೆಲಸವೊಂದನ್ನೇ! ಕೊಡುವೆನೆಂದು!''[10] ಆಗಿನ್ನೂ ಲೇಖಕರು ಏಳೆಂಟು ವರ್ಷದ ಹುಡುಗ. ಮಂಜಣ್ಣ ಅರವತ್ತು ವರ್ಷದ ಮುದುಕ. ಲೇಖಕರು ಯಜಮಾನನಾಗುವ ತನಕ ಮಂಜಣ್ಣ ಬದುಕಿರಲು ಸಾಧ್ಯವಿಲ್ಲ. ಆದರೂ ಲೇಖಕರು ಆತ ಬದುಕಿರುತ್ತಾನೆ ಎಂದೇ ಭಾವಿಸಿ ಹೀಗೆ ಯೋಚಿಸಿದ್ದರು. ಕತ್ತಲಾದ ನಂತರ ಮಂಜಣ್ಣ ಕತೆ ಹೇಳುತ್ತಿದ್ದರಿಂದ ಹುಡುಗರೆಲ್ಲಾ ಕತ್ತಲಾಗುವುದನ್ನೇ ಎದುರು ನೋಡುತ್ತಾ ಕುಳಿತಿರುತ್ತಿದ್ದರು. ಮಂಜಣ್ಣನೆಂದರೆ 'ಕಥಾ ಸರಿತ್ಸಾಗರ '. ಅವೆಲ್ಲಾ ಕತೆಗಳನ್ನು ಅವನೇ ಸ್ವತಃ ಕಲಿತಿದ್ದನೋ ಅಥವಾ ಬೇರೆಯವರಿಂದ ಕಲಿತವುಗಳೋ ಗೊತ್ತಿರಲಿಲ್ಲ. ಜೊತೆಗೆ ಮಕ್ಕಳ ಮನಸ್ಸಿಗೆ ಸ್ವಂತ-ಅನ್ಯ ಎಂಬ ಪ್ರಭೇದಗಳುಂಟೆಂಬುದೂ ತಿಳಿದಿರಲಿಲ್ಲ. ಮಂಜಣ್ಣ ಕತೆ ಹೇಳೋ ಎಂದು ಹೇಳುವುದೇ ತಡ ಕತೆಯ ಪ್ರವಾಹ ಹಲ್ಲಿಲ್ಲದ ಅವನ ಮುದಿ ಬಾಯಿಂದ ಹೊರಸೂಸುತ್ತಿತ್ತು. ಮಕ್ಕಳೆಲ್ಲಾ ಒಂದೇ ಮನಸ್ಸಿನಿಂದ ಕತೆ ಕೇಳುತ್ತಾ ಕುಳಿತುಬಿಡುತ್ತಿದ್ದರು. ಆದೇ ಇಂದಿನ ಮಕ್ಕಳಲ್ಲಿ ಹೀಗೆ ಕತೆ ಕೇಳುವ ಕುತೂಹಲ, ಆಸಕ್ತಿಯೇ ಇಲ್ಲದಂತಾಗಿದೆ. ಹಾಗೆ ಬಾಲ್ಯದಲ್ಲಿ ಮೇಲು-ಕೀಳು, ಆಳು-ಒಡೆಯ, ಬಡವ-ಶ್ರೀಮಂತ ಇದಾವುದರ ಅಂತರವೂ ಗೊತ್ತಿಲ್ಲದೆ ಮುಗ್ಧತೆಯಿಂದ ಬದುಕುತ್ತಿರುತ್ತಾರೆ. ಕುವೆಂಪುರವರು ತಮ್ಮ ಬಾಲ್ಯದ ಅನುಭವಗಳನ್ನು ಹೇಳಿಕೊಳ್ಳುವ ಜೊತೆಗೆ ಪರೋಕ್ಷವಾಗಿ ಸಮಾಜದಲ್ಲಿನ ಕಥನ ಪರಂಪರೆಯನ್ನು, ಆ ಮೂಲಕ ಒಂದು ಬಗೆಯ ಸಂಸ್ಕೃತಿಯನ್ನು ನೀತಿಬೋಧೆಯನ್ನು ನಮ್ಮ ಮುಂದೆ ತೆರೆದಿಡುತ್ತಾರೆ.

'ಮನೆಯ ಶಾಲೆಯ ಐಗಳ ಮಾಲೆ ' ಪ್ರಬಂಧದಲ್ಲಿ ಪ್ರಬಂಧಕಾರರು ತಮ್ಮ ಬಾಲ್ಯ ಶಿಕ್ಷಣದ ನೆನಪುಗಳು, ಆಗಿನ ಶಿಕ್ಷಣ ಪದ್ಧತಿಯನ್ನು ಅಲ್ಲಿ ಮಕ್ಕಳ ತುಂಟಾಟವನ್ನು, ಹಾಸ್ಯ ಮಿಶ್ರಿತ ಶೈಲಿಯಲ್ಲಿ ವಿವರಿಸಿದ್ದಾರೆ. ಐಗಳು ಅಕ್ಷರಾಭ್ಯಾಸಕ್ಕೆ ತಿಳಿಸಿ ಕೋಣೆಗೆ ಹೋಗಿ ಮಲಗಿದಾಗ, ಮಹಡಿ ಮೇಲಿದ್ದ ಹುಡುಗರು ಶಬ್ದ ಮಾಡದೆ ಮೆಟ್ಟಿಲಿಳಿದು ಹೋಗಿ ಹಲಸಿನ ಹಣ್ಣು ತಿನ್ನಲು ಓಡುತ್ತಿದ್ದರು. ಲೇಖಕರು ಎರಡನೆಯ ತರಗತಿಗೆ ಬರುವಷ್ಟರಲ್ಲಿಯೆ ಸುಮಾರು ಹತ್ತು ಹದಿನೈದು ಜನ ಐಗಳ ಗುಂಪು ಬಂದು ಹೋಗಿತ್ತು.

ಸಾಧಾರಣವಾಗಿ ಐಗಳೆಲ್ಲಾ ಹೇಳದೆ ಕೇಳದೆ ಓಡಿ ಹೋಗುತ್ತಿದ್ದರು. ಇದಕ್ಕೆ ಕಾರಣ ಸಾಮಾನ್ಯವಾಗಿ ಮಲೆನಾಡಿಗೆ ಬರುತ್ತಿದ್ದ ಐಗಳೆಲ್ಲಾ ಘಟ್ಟದ ಕೆಳಗಿನವರಾಗಿದ್ದು, ಅವರಿಗೆ ಇಲ್ಲಿನ ಪರಿಸರ ಹೊಂದಿಕೆಯಾಗದೆ ಹೋಗುತ್ತಿದ್ದರು. ಇನ್ನೂ ಕೆಲವೊಮ್ಮೆ ಮಕ್ಕಳ ಕಾಟ ತಾಳಲಾರದೆ ಹೋಗುತ್ತಿದ್ದರು. ಐಗಳು ಇಲ್ಲದಿದ್ದರೆ ಮಕ್ಕಳಿಗೆಲ್ಲಾ ರಜ, ಆಟವಾಡಿಕೊಂಡಿರುತ್ತಿದ್ದರು. ಯಾರಾದರೂ ಹೊಸ ಐಗಳು ಬಂದರೆ ಅವರು ವಾಪಾಸು ಹೋಗಲೆಂದು ತೋಟದಾಚೆ ಭೂತನಿಗೆ ಹರಕೆ ಹೇಳಿಕೊಳ್ಳುವುದು, ನಂತರ ಅದನ್ನು ಮರೆತು ಬಿಡುವುದು, ಅಜ್ಜರಂತೆ ಹುಡುಗರೂ ನಶ್ಯ ಹಾಕುವುದು, ಬೆಲ್ಲ ಕದಿಯುವುದು, ಇಂತಹ ಸಾಕಷ್ಟು ಚೇಷ್ಟೆಗಳನ್ನು ಮಾಡುತ್ತಾ ಮರಳಿನಿಂದ, ಸ್ಲೇಟ್ ಕಡ್ಡಿ, ಅಲ್ಲಿಂದ ಇಂಗ್ಲಿಷ್ ಅಕ್ಷರ ಮಾಲೆ ಹೀಗೆ ಬಾಲ್ಯದ ತುಂಟಾಟಗಳೊಂದಿಗೆ ಆಧುನಿಕತೆಗೆ ಹೊಂದಿಕೊಳ್ಳುತ್ತಾ ಹೊಸ ಹೊಸ ಪ್ರಯೋಗಗಳ ಮೂಲಕ ಬೇರೆ ಬೇರೆ ಐಗಳಿಂದ ಅಕ್ಷರಾಭ್ಯಾಸ ಮಾಡಿದ್ದುದನ್ನು ಪ್ರಬಂಧಕಾರರು ಸುಂದರವಾಗಿ ವಿವರಿಸಿದ್ದಾರೆ.

ಕುವೆಂಪುರವರು ಚಿಕ್ಕವರಿರುವಾಗ ತಮ್ಮ ಮನೆಯಲ್ಲಿ ನಡೆಯುತ್ತಿದ್ದ 'ಅಭ್ಯಂಗ 'ದ ಬಗೆಗೆ 'ಅಜ್ಜಯ್ಯನ ಅಭ್ಯಂಜನ ' ಪ್ರಬಂಧದಲ್ಲಿ ಸ್ವಾರಸ್ಯಪೂರ್ಣವಾಗಿ ಚಿತ್ರಿಸಿದ್ದಾರೆ. ಪ್ರಬಂಧಕಾರರು ಚಿಕ್ಕವರಿರುವಾಗ ಅವರ ಮನೆಯಲ್ಲಿ ಅಭ್ಯಂಜನ ನಡೆಯುತ್ತಿತ್ತು. ಅಂದರೆ ಎಣ್ಣೆ , ಸೀಗೆಕಾಯಿ, ಬಿಸಿನೀರು ಮೂಲಕ ದಿನ ಪೂರ್ತಿ ಸ್ನಾನ ಮಾಡುವುದು. ಈ ಆಚಾರಗಳೆಲ್ಲ ಈಗ ಪರಿವರ್ತನೆಯಾಗಿವೆ. ಲೇಖಕರು ಚಿಕ್ಕವರಿರುವಾಗ ಅವರ ಮನೆಯಲ್ಲಿ ಅಭ್ಯಂಗ ಎಂದರೆ ಅವರಿಗೆಲ್ಲ ಜನನ, ಮರಣ, ವಿವಾಹ, ಪೊಲೀಸರ ಕಾಟ, ಜಮಾಬಂದಿ ಎಲ್ಲವೂ ಒಟ್ಟಿಗೆ ಬಂದ ಹಾಗೆ ಅನುಭವವಾಗುತ್ತಿತ್ತಂತೆ. ಲೇಖಕರು ಆಗ ವಿದ್ಯಾರ್ಥಿಯಾಗಿದ್ದರು, ಅವರಿಗೆ ಮೇಷ್ಟ್ರುರಾದರೂ ಅವರ ಹಿರಿಯರಿಗೆ ಐಗಳು ಕೂಲಿಯಾಳಾಗಿರುತ್ತಿದ್ದರು. ಐಗಳು ಅ,ಆ,ಇ,ಈ ಹೇಳಿಕೊಡುವುದರ ಜೊತೆಗೆ ಎಣ್ಣೆ ಹಚ್ಚುವುದು, ಸ್ನಾನ ಮಾಡಿಸುವುದು, ಸಮಯ ಬಿದ್ದರೆ ಬಟ್ಟೆ ಒಗೆದುಕೊಡುವುದು, ಯಜಮಾನರ ಕೂಸನ್ನು ಆಡಿಸುವುದು, ಆಳು ಲೆಕ್ಕ ಇಡುವುದು, ದೇವರ ಪೂಜೆ ಮಾಡುವುದು ಇತ್ಯಾದಿ ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು. ಮಕ್ಕಳಿಗೆಲ್ಲಾ ಭಾನುವಾರ ರಜಾ ಎಂದು ತಿರುಗಾಡಿ, ಹಣ್ಣು-ಗಿಣ್ಣು ಕಿತ್ತು, ಮರ-ಗಿಡ ಹತ್ತಿ, ಕಲ್ಲುಗಿಲ್ಲು ಹೊಡೆದು ಏನಾದರೂ ಸಾಹಸ ಗೀಹಸ ಮಾಡಿ ಬೇಜಾರು ಕಳೆದುಕೊಳ್ಳೋಣವೆಂದರೆ ಆ ದಿನ

ಅಭ್ಯಂಜನದ ಸಜಾ. ಬೆಳಗಿನ ಆರು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೂ ಎಣ್ಣೆಸ್ನಾನ. ಅದೂ ಒಬ್ಬಿಬ್ಬರಲ್ಲ, ಮನೆಯ ಮಂದಿಗೆಲ್ಲ ಆ ದಿನ ಅಭ್ಯಂಗ. ಹೀಗೆ ಈ ಅಭ್ಯಂಜನದ ರೀತಿ-ನೀತಿಗಳನ್ನು ಸ್ವಾರಸ್ಯಕರವಾಗಿ ವಿವರಿಸುತ್ತಾ ತಮ್ಮ ಬಾಲ್ಯವನ್ನು ನೆನಪಿಸಿಕೊಳ್ಳುತ್ತಾರೆ. ಲೇಖಕರು ಚಿತ್ರಿಸಿದ ಬಾಲ್ಯ ಚಿತ್ರಗಳಲ್ಲಿ ಆಟ ಪಾಠಗಳೊಂದಿಗೆ ಅಂದಿನ ಆಚರಣೆ ಸಂಪ್ರದಾಯಗಳನ್ನು ತಿಳಿಸುತ್ತಾ ಅವು ಇಂದು ಆಚರಣೆಯಲ್ಲಿರದಿದ್ದರ ಕುರಿತು ವಿಶ್ಲೇಷಿಸುತ್ತಾರೆ. ''ಅವರ ಕಾಲ ಮುಗಿದು ಹೋಯಿತು, ಅವರೊಡನೆ ಆ ಅಭ್ಯಂಜನ ಮಹೋತ್ಸವವೂ ಮರೆತು ಹೋಯಿತು ''[60] ಎನ್ನುವ ಪ್ರಬಂಧದ ಕೊನೆಯ ವಾಕ್ಯ ಹಿಂದಿನ ಕಾಲದ ಆ ವೈಭವ ಅಂದಿಗೇ ಕೊನೆಗೊಂಡಿತೇ ಎಂಬುದನ್ನು ಧ್ವನಿಸುತ್ತದೆ.

ಕುವೆಂಪುರವರು ತಮ್ಮ ಮಲೆನಾಡಿನ ಚಿತ್ರಗಳು ಪ್ರಬಂಧ ಸಂಕಲನದಲ್ಲಿ ಕಾಡಿನ ಹರಟೆಗಳ ರೂಪದಲ್ಲಿ ತಮ್ಮ ಅನುಭವಗಳನ್ನು ಚಿತ್ರಿಸುತ್ತಾ ಅದರೊಂದಿಗೆ ನಾವು ಮೇಲೆ ತಿಳಿದಂತಹ ಕೆಲವೊಂದು ಬಾಲ್ಯ ಜೀವನ ಚಿತ್ರಗಳನ್ನು ಹಾಸ್ಯದೊಂದಿಗೆ ನವಿರಾಗಿ ನಿರೂಪಿಸಿದ್ದಾರೆ. ಅಲ್ಲಿನ ಬಾಲ್ಯ ಜೀವನ ಚಿತ್ರಗಳಿಗೂ ಪ್ರಸ್ತುತ ಸಮಾಜದಲ್ಲಿನ ಮಕ್ಕಳ ಬಾಲ್ಯ ಜೀವನಕ್ಕೂ ಎಷ್ಟೊಂದು ಅಜಗಜಾಂತರ ಬದಲಾವಣೆಯನ್ನು ಕಾಣಬಹುದು. ಅಂದು ಇದ್ದಂತಹ ಕತೆ ಕೇಳುವ ಕುತೂಹಲವಾಗಲಿ, ರಾಮ-ರಾವಣರ ಯುದ್ಧ ದಂತಹ ಆಟಗಳಾಗಲಿ, ಅಭ್ಯಂಜನದಂತಹ ಆಚರಣೆಗಳಾಗಲೀ, ಅಂದಿನ ಶಿಕ್ಷಣ ಕ್ರಮವಾಗಲಿ ಇಂದಿನ ಮಕ್ಕಳಲ್ಲಿ ಕಾಣಸಿಗುವುದು ತುಂಬಾ ಅಪರೂಪ. ಶಿಕ್ಷಣ ಕ್ರಮವಂತೂ ಈಗ ಸಂಪೂರ್ಣ ಆಧುನೀಕರಣಗೊಂಡಿದೆ. ಸಮಾಜವಾಗಲಿ, ಜೀವನ ಕ್ರಮವಾಗಲಿ ಇದ್ದ ಹಾಗೆ ಇರಲು ಸಾಧ್ಯವಿಲ್ಲ, ಯಾವುದೋ ಒಂದು ರೀತಿಯಲ್ಲಿ ಹೊಸ ಹೊಸ ಬದಲಾವಣೆಗೆ ಒಳಪಡಲೇಬೇಕಾಗುತ್ತದೆ. ಇಂತಹ ಬದಲಾವಣೆ ನಡುವೆಯೂ ಮಕ್ಕಳ ಮನಸ್ಸು ತುಂಬಾ ಸೂಕ್ಷ್ಮವಾಗಿರುವುದರಿಂದ ಅವರನ್ನು ಬೆಳೆಸುವಲ್ಲಿ ಹಿರಿಯರಾದವರು ಕಾಳಜಿ ವಹಿಸುವುದು ಅವಶ್ಯಕ. ಏಕೆಂದರೆ ನಮ್ಮ ಹಿಂದಿನಿಂದ ಬಂದ ಅಗತ್ಯವಾದ, ಅನುಸರಿಸುವಂತಹ ಆಚಾರ-ವಿಚಾರಗಳನ್ನು ಮಕ್ಕಳಲ್ಲಿ ಮೂಡಿಸುತ್ತಾ ಅದರೊಂದಿಗೆ ಬೆರೆತು ಬೆಳೆಯುವಂತೆ ಪ್ರೋತ್ಸಾಹಿಸಬೇಕಾಗುತ್ತದೆ. ಕುವೆಂಪು ಅವರೇ ತಮ್ಮ ಬಾಲ್ಯದ ಅನುಭವಗಳನ್ನು ತಿಳಿಸುತ್ತಲೇ ಅವರು ದೊಡ್ಡವರಾಗುವಷ್ಟರಲ್ಲೇ ಆಗಿರುವ ಸಾಕಷ್ಟು ಪರಿವರ್ತನೆಗಳನ್ನು ಕಂಡು ಮರುಗಿದ್ದಾರೆ. ಅಂದ ಮೇಲೆ ಇಂದು ಆಗಿರುವ ಬದಲಾವಣೆಯನ್ನು ಆಗಿನ

ಬಾಲ್ಯ ಜೀವನದೊಂದಿಗೆ ಹೋಲಿಸುವುದೇ ಬೇಡವೆನಿಸುತ್ತದೆ. ಆದರೆ ಈಗಿನ ಯಾಂತ್ರಿಕ ಜೀವನದ ನಡುವೆ ಅಂದಿನ ಸುಂದರ ಬಾಲ್ಯ ಜೀವನವನ್ನು ಎಲ್ಲೋ ಕಳೆದುಕೊಳ್ಳುತ್ತಿದ್ದೇವೆಯೋ ಎಂದೆನಿಸುತ್ತದೆ.

೪.೩-ನಂಬಿಕೆ, ಆಚರಣೆ, ಬದುಕು : ಮಲೆನಾಡಿನಲ್ಲಿನ ನಂಬಿಕೆ, ಆಚರಣೆ, ಬದುಕುವ ಕ್ರಮ ಇದೆಲ್ಲವೂ ತನ್ನದೇ ಆದವುತಹ ಒಂದು ವೈಶಿಷ್ಟ್ಯತೆಯನ್ನು ಪಡೆದುಕೊಂಡಿದೆ. ಈ ಕುರಿತು ಕುವೆಂಪುರವರ ಸಾಹಿತ್ಯ ಕೃತಿಗಳನ್ನು ಗಮನಿಸಿದರೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಅವರ 'ಮಲೆಗಳಲ್ಲಿ ಮದುಮಗಳು ', 'ಕಾನೂರು ಹೆಗ್ಗಡತಿ' ಎರಡೇ ಕೃತಿಗಳು ಸಾಕು ಇಡೀ ಮಲೆನಾಡಿನ ಜನಜೀವನ, ಆಚರಣೆ, ನಂಬಿಕೆಯನ್ನು ತಿಳಿಯಲು. ಈ ಕೃತಿಗಳಲ್ಲಿ ಪ್ರತಿಯೊಂದು ಸಂಗತಿಗಳನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ಈ ಕಾದಂಬರಿಗಳನ್ನು ರಚಿಸುವ ಮೊದಲೇ ಮಲೆನಾಡಿನ ಸಾಂಸ್ಕೃತಿಕ ಜೀವನದ ಬಗೆಗೆ ಬಿಡಿ ಬಿಡಿಯಾದ ಪ್ರಬಂಧಗಳ ಮೂಲಕ ತಮ್ಮ 'ಮಲೆನಾಡಿನ ಚಿತ್ರಗಳಲ್ಲಿ ' ಸ್ವಲ್ಪ ಮಟ್ಟಿಗೆ ತಿಳಿಸಲು ಪ್ರಯತ್ನಿಸಿದ್ದಾರೆ. 'ಅಜ್ಜಯ್ಯನ ಅಭ್ಯಂಜನ ' 'ತೋಟದಾಚೆಯ ಭೂತ ' 'ಮಲೆನಾಡಿನ ಗೋಪಾಲಕರು ' ಇಂತಹ ಚಿತ್ರಗಳ ಮೂಲಕ ನಂಬಿಕೆ, ಆಚರಣೆ, ಬದುಕುವ ಬೇರೆ ಬೇರೆ ಚಿತ್ರಗಳನ್ನು ಸಂಕ್ಷಿಪ್ತವಾಗಿ ಅರ್ಥವತ್ತಾಗಿ ಹಾಸ್ಯಮಿಶ್ರಿತ ಶೈಲಿಯೊಂದಿಗೆ ಕುವೆಂಪು ಚಿತ್ರಿಸಿದ್ದಾರೆ.

'ತೋಟದಾಚೆಯ ಭೂತ ' ಮಲೆನಾಡಿನ ಹಳೆಯ ಕಾಲದ ಹಳ್ಳಿಗಾಡಿನ ಮುಗ್ಧ ಜೀವಿಗಳ, ವಿಶೇಷವಾಗಿ ಓದು ಬರಹ ಕಲಿಯದವರ ಭೂತಾರಾಧನೆಯ ನಂಬಿಕೆಯ ನೆರಳಿನಲ್ಲಿ ಬದುಕಿದವರ ಚಿತ್ರಣವಾಗಿದೆ. ಲೇಖಕರು ಇಲ್ಲಿ ಭೂತರಾಯನ ಮಹಿಮೆಯನ್ನು ಕುರಿತು ಹೇಳಿದ್ದಾರೆ. ಹಾಗೆ ಪ್ರಬಂಧದ ಮೊದಲಲ್ಲೇ ಇದು ತಮ್ಮ ಅಜ್ಜಮ್ಮನ ಅನುಭವ ವಿಶೇಷತೆಯಿಂದ ಕೇಳಿ ತಿಳಿದದ್ದು ಎಂದು ಓದುಗನೊಂದಿಗೆ ಹರಟುತ್ತಾ ಪ್ರಬಂಧವನ್ನು ನಿರೂಪಿಸಿದ್ದಾರೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ ಎಲ್ಲರೂ ಈ ಭೂತರಾಯನನ್ನು ನಂಬುತ್ತಾರೆ. ಹಾಗೆಯೇ ಪ್ರತೀ ವರ್ಷ ಹರಕೆ ಸಲ್ಲಿಸುತ್ತಾರೆ. ಸಾಮಾನ್ಯವಾಗಿ ತೋಟದ ಅಂಚಿನಲ್ಲಿ ದಟ್ಟವಾಗಿ ಬೆಳೆದ ಮರಗಳ ಒಂದು ಗುಂಪು ಕಂಡುಬರುತ್ತದೆ. ಆ ತೋಪೇ 'ಭೂತರಾಯನ ಬನ ', ಅಲ್ಲಿ ಅಂತಹ ವಿಶೇಷವೇನೂ ತೋರುವುದಿಲ್ಲ, ಒಂದು ದೊಡ್ಡ

ಮರದ ಬುಡದಲ್ಲಿ ಕಾಡು ಕಲ್ಲು ಕಂಡುಬರುತ್ತದೆ. ಅದನ್ನೇ ಭೂತರಾಯನ ಪ್ರತಿನಿಧಿಯೆಂದು ಭಾವಿಸಿ ಪ್ರತಿವರ್ಷ ಹರಕೆ ಸಲ್ಲಿಸುತ್ತಾರೆ. ಆಗ ಅನೇಕ ಕುರಿ, ಕೋಳಿಗಳ ಬಲಿಯಾಗುವುದು. ಭೂತಕ್ಕೆ ಬಲಿ ಎಂದರೆ ಬಹಳ ವಿಶ್ವಾಸವಂತೆ. ಊರಿನವರೆಲ್ಲಾ ಕನ್ನಡ ಜಿಲ್ಲೆಯಿಂದ ಬಂದ ಕೂಲಿಯಾಳುಗಳೂ ಸೇರಿ ಅದಕ್ಕೆ ಪರಮ ಭಕ್ತರು. ದನಕರುಗಳಿಗೆ ರೋಗ ಬಂದರೆ ಒಂದು ಕೋಳಿಯನ್ನೋ ಅಥವಾ ತೆಮುಗಿನ ಕಾಯಿಯನ್ನೋ ಅಥವಾ ಮೂರು ಕಾಸನ್ನೋ ರೋಗಿಯಾದ ಪ್ರಾಣಿಗೆ ಪ್ರದಕ್ಷಿಣೆ ಬರಿಸಿ, ಭೂತರಾಯನಿಗೆ ಹೇಳಿಕೊಂಡು ಮಡುಪು ಕಟ್ಟುವರು. ರೋಗಕ್ಕೆ ಅನೇಕ ಔಷಧಿಗಳನ್ನು ಕೊಡುವರು. ಔಷಧಿಯಿಂದ ರೋಗ ಗುಣವಾದರೂ ಕೀರ್ತಿಯೆಲ್ಲಾ ಭೂತರಾಯನಿಗೆ ಸಲ್ಲುತ್ತಿತ್ತು.

ಪ್ರಬಂಧಕಾರರು ಭೂತರಾಯನ ಮಹಿಮೆಯನ್ನು ಕುರಿತು ಉದಾಹರಣೆಗೆ ಒಂದು ಸಂಗತಿಯನ್ನು ಹೇಳುತ್ತಾರೆ. ಲೇಖಕರು ಉಪ್ಪರಿಗೆಯಲ್ಲಿ ಕುಳಿತು ಏನನ್ನೋ ಓದುತ್ತಿದ್ದಾಗ ಪುಟ್ಟಣ್ಣ ಕೋವಿ ನಳಿಗೆ ಉಜ್ಜಿ ಎಣ್ಣೆ ಹಚ್ಚುತ್ತಿದ್ದ. ಹಠಾತ್ತಾಗಿ ಬಾಣಸಿಗ ಭೀಮ ಎಂಬುವವನು ಬಂದು ''ಒಂದು ಎಮ್ಮೆ ಕರು ಸಾಯಲಿಕ್ಕಾಗಿದೆ, ಬಿದ್ದು ಒದ್ದುಕೊಳ್ಳುತ್ತಿದೆ'' ಎಂದು ಬಹಳ ಗಾಬರಿಯಿಂದ ನುಡಿದ. ಲೇಖಕರು, ಪುಟ್ಟಣ್ಣ ಇಬ್ಬರೂ ಹೋಗಿ ನೋಡಿದಾಗ ಅದರ ಸ್ಥಿತಿ ಶೋಚನೀಯವಾಗಿತ್ತು. ಅಲ್ಲಿಗೆ ಬಂದ ಲೇಖಕರ ದೊಡ್ಡಮ್ಮನವರು ''ಇದು ಭೂತರಾಯ ಚೇಷ್ಟೆ, ಒಂದು ಕಾಯಿ ಸುಳಿದಿಟ್ಟು ಹೇಳಿಕೊಳ್ಳಿ'' ಎಂದರು. ಪುಟ್ಟಣ್ಣ ಕರುವಿನ ಕೂದಲು ಹಿಡಿದೆಳೆದು ಅದರ ಮುಸುಡಿಯನ್ನು ತನ್ನ ಮೂಗಿನ ಬಳಿ ಇಟ್ಟುನೋಡಿ ''ಇದು ಮತೇನೂ ಅಲ್ಲ, ಬಳ್ಳಿ ಮುಟ್ಟಿದ್ದು'' ಎಂದು ಗುಡ್ಡದ ಕಡೆ ಓಡಿ ಹೋದ. ಬಳ್ಳಿ ಮುಟ್ಟಿದ್ದು ಎಂದರೆ ಹಾವು ಕಡಿಯುವುದು ಎಂದರ್ಥ! ಹಾವು ಕಡಿದಿದೆ ಎಂದು ಹೇಳುವುದು ಅಮಂಗಳಕರವೆಂಬ ಭೀತಿಯಿಂದ ''ಬಳ್ಳಿ ಮುಟ್ಟಿದೆ'' ಎನ್ನುತ್ತಾರೆ. ಪುಟ್ಟಣ್ಣ ಗುಡ್ಡದಿಂದ ಔಷಧ ತರುವಷ್ಟರಲ್ಲಿ ನಂಜ ಮುಡುಪು ಕಟ್ಟಿದ. ಅಲ್ಲೇ ನಿಂತಿದ್ದವರೆಲ್ಲರೂ '' ಈಗ ಕರು ಸ್ವಲ್ಪ ಒದ್ದಾಟ ಕಡಿಮೆ ಮಾಡಿತು, ಭೂತರಾಯನ ಚೇಷ್ಟೆಯೇ ಹೌದು''[೧] ಎಂದು ಒಬ್ಬರ ಮಾತನ್ನು ಒಬ್ಬರು ಸಮರ್ಥಿಸಿದರು. ಅಷ್ಟರಲ್ಲಿ ಪುಟ್ಟಣ್ಣ ಬಾಯಿಯಲ್ಲಿ ಏನನ್ನೋ ಅಗಿಯುತ್ತಾ ಬಂದು ಕರುವಿನ ನಾಸಿಕ ದ್ವಾರದೊಳಗೂ ಕಣ್ಣಿನೊಳಗೂ ಏನಿದು, ಬಾಲವನ್ನು ಎಳೆದು ಬೆನ್ನೆಲುಬನ್ನು ಚೆನ್ನಾಗಿ ನೀಳ ಮಾಡಿ ನೀವಿದನು. ಕರು ಐದು ನಿಮಿಷದೊಳಗಾಗಿ ಎದ್ದು

ನಿಂತಿತು. ಎಲ್ಲರೂ ಭೂತರಾಯನ ಶಕ್ತಿಯನ್ನೇ ಕುರಿತು ಸಂಭಾಷಣೆ ಮಾಡುತ್ತಾ ತೆರಳಿದರು. ಪುಟ್ಟಣ್ಣನ ಔಷಧವನ್ನು ಮಾತ್ರ ಮರೆತು ಬಿಟ್ಟರು. ಅದು ಅವರ ಮೆದುಳಿಗೆ ಹತ್ತಲಿಲ್ಲ. ಎಲ್ಲರೂ ಹೊರಟು ಹೋದ ಮೇಲೆ ಲೇಖಕರು ಅದೇನು ಎಲೆಯೋ ನೀನು ಅಗಿಯುತ್ತಾ ಬಂದದ್ದು ಎಂದು ಕೇಳಿದರು. ಅದಕ್ಕೆ ಅವನು ''ಔಷಧದ ಹೆಸರು ಯಾವಾಗಲೂ ಹೇಳಬಾರದು, ಹೇಳಿದರೆ ಅವರ ಶಕ್ತಿಯೇ ಹೋಗಿಬಿಡುತ್ತದೆ ''[05] ಎಂದನು. ಲೇಖಕರು ಭೂತರಾಯನ ಮಹಿಮೆ ಆಧುನಿಕ ಕಾಲದಲ್ಲಿ ಹೀನತರ ಸ್ಥಿತಿಗೆ ತಲುಪಿದುದರ ಬಗೆಗೂ ವಿಶ್ಲೇಷಣೆ ನೀಡುತ್ತಾರೆ. ಕಲಿರಾಯನ ನಿರಂಕುಶ ಪ್ರಭುತ್ವದಿಂದ ನಮ್ಮ ಭೂತ ರಾಯನಿಗೂ ಕೂಡ ಉಳಿಗತಿ ಇಲ್ಲದಂತಾಗಿದೆ ಎಂದು ಆಧುನೀಕತೆಯ ಪ್ರಭಾವವನ್ನು ಪ್ರಸ್ತಾಪಿಸುತ್ತಾರೆ.

ಭೂತರಾಯನ ಮಹಿಮೆ ಬಗೆಗೆ ಲೇಖಕರ ಅಜ್ಜಮ್ಮ ಸಾಕಷ್ಟು ಕತೆಗಳನ್ನು ಹೇಳುತ್ತಿದ್ದರಂತೆ. ಮನೆಯಿಂದ ದೂರವಿದ್ದ ಕಣದಲ್ಲಿನ ಭತ್ತವನ್ನು ಕದಿಯಲು ಬಂದು ಕಳ್ಳರು ಭೂತರಾಯನ ಕಾವಲಿನಿಂದ ಸಿಕ್ಕಿ ಬಿದ್ದು ಅಜ್ಜಯ್ಯನಿಂದ ಹೊಡೆಸಿಕೊಂಡಿದ್ದರಂತೆ. ಹೀಗೆ ಮತ್ತೊಮ್ಮೆ ಲೇಖಕರ ಮನೆಯಲ್ಲಿ ಯಾರಿಗೋ 'ಅಮ್ಮ ' (ಸಿಡುಬು) ಆದಾಗ ಎಲ್ಲರೂ ಮನೆಬಿಟ್ಟು ಬೇರೆ ಕಡೆ ಇದ್ದರಂತೆ. ಆಗ ತೋಟಕ್ಕೆ ಭೂತರಾಯನೇ ಕಾವಲಿದ್ದು ವೀಳ್ಯದೆಲೆ ಕೊಯ್ಯಲು ಬಂದ ಕಳ್ಳನನ್ನು ತಡೆಯಿತು. ಹಾಗೆ ಮನೆಯನ್ನು ಕೊಳ್ಳೆ ಹೊಡೆಯಲು ಬಂದ ದರೋಡೆಕೋರರಿಗೆ ಹೆದರಿಸಿ ಓಡಿಸಿತಂತೆ. ಇಂತಹ ಅನೇಕ ಕಥೆಗಳು ಭೂತರಾಯನನ್ನು ಕುರಿತು ಲೇಖಕರು ತಮ್ಮ ಅಜ್ಜಮ್ಮನಿಂದ ಕೇಳಿ ತಿಳಿದಿದ್ದರಂತೆ. ಪ್ರಬಂಧಕಾರರೇ ಕೊನೆಯಲ್ಲಿ ಈ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಾನು ನೀನು ಅಂದರೆ ಓದುಗ ನಂಬದಿದ್ದರೂ, ಹಳ್ಳಿಯಲ್ಲಿ ಪ್ರತಿಯೊಬ್ಬನೂ ಭೂತದ ಮಹಿಮೆಯಲ್ಲಿ ನಮ್ಮಿಂದ ಗ್ರಹಿಸಲಾಗದಷ್ಟು ನಂಬಿಕೆ ಇಟ್ಟಿದ್ದಾನೆ. ಕೊನೆಯಲ್ಲಿ ಹಳ್ಳಿಯ ಜನರನ್ನು ಮೂಢರೆಂದು ತಿರಸ್ಕರಿಸಬಾರದೆಂದೂ ಮುಕ್ಕಾಲು ಪಾಲು ಜಗತ್ತಿನ ಜನರನ್ನು ಮೌಢ್ಯವೇ ಆನಂದಗೊಳಿಸುತ್ತದೆ ಎಂದೂ ಪ್ರಬಂಧಕಾರರು ಹೇಳಿದ್ದಾರೆ.

ಕುವೆಂಪು ಮೇಲೆ ಹೇಳಿದಂತಹ ನಂಬಿಕೆಗಳು ಅವರ ಸಮಕಾಲೀನ ಸಂದರ್ಭದಲ್ಲಿ ಸಾಕಷ್ಟು ವ್ಯಾಪಕವಾಗಿದ್ದವು. ಜನಾಂಗೀಯ ಲಕ್ಷಣಗಳಾದ ಇವು ಕಾಲ, ಪ್ರದೇಶಗಳ ಭಿನ್ನತೆ

ಹೊಂದಿರುತ್ತವೆ. ಸಾಮಾನ್ಯ ನಂಬಿಕೆಗಳಾಗಿ ಬರುವ ಸಂಗತಿಗಳು ಮಲೆನಾಡನ್ನು ಬಿಟ್ಟು ಬೇರೆ ಕಡೆಗಳಲ್ಲೂ ಕಾಣಿಸಬಹುದಾದರೂ, ಒಂದು ನಂಬಿಕೆಯ ವ್ಯಾಪಕತೆ, ಗ್ರಹಿಕೆ ಮೊದಲಾದ ದೃಷ್ಟಿಕೋನಗಳಿಂದ ಮುಖ್ಯವಾಗುತ್ತದೆ. ಉದಾಹರಣೆಗೆ ಗರ್ಭಿಣಿಯರು ಸ್ಮಶಾನಕ್ಕೆ ಶವ ಸಂಸ್ಕಾರಕ್ಕೆ ಹೋಗಬಾರದೆಂಬುದು ಒಂದು ನಂಬಿಕೆ. ಆಕೆಯ ಮನಃಸ್ಥಿತಿ ಸೂಕ್ಷ್ಮವಾಗಿರುತ್ತದೆ. ಸ್ಮಶಾನ ಕುರಿತಾಗಿ ಮೊದಲಿನಿಂದಲೂ ಇರುವ ಭಯ, ಭೀಕರತೆಗಳು ಅಲ್ಲಿಗೆ ಹೋದಾಗ ಬರಬಹುದು. ಇದರಿಂದ ಆಕೆಗಷ್ಟೇ ಅಲ್ಲ , ಅವಳ ಗರ್ಭದಲ್ಲಿರುವ ಮಗುವಿಗೂ ಒಳಿತಲ್ಲವೆಂಬ ಮನಃಶಾಸ್ತ್ರೀಯ ಅರಿವು ಈ ನಂಬಿಕೆ ಹಿಂದೆ ಇರುವುದನ್ನು ಕಾಣಬಹುದು. ಹಾಗೆಯೇ ಬಾಣಂತಿಯರ ಕೋಣೆಗೆ ಕೈಕಾಲು ತೊಳೆದುಕೊಂಡೇ ಪ್ರವೇಶಿಸಬೇಕೆಂಬ ನಂಬಿಕೆಯೂ ಆರೋಗ್ಯಕ್ಕೆ ಸಂಬಂಧಪಡುವಂತಿದೆ. ಇಂತಹ ಅನೇಕ ನಂಬಿಕೆಗಳು ಕೆಲವು ಸಲ ಮೇಲ್ನೋಟಕ್ಕೆ ನಿರರ್ಥಕ, ಅನಗತ್ಯ ಎನ್ನಿಸಿದರೂ ಕೆಲವೊಮ್ಮೆ ಇವು ಸಾಮಾಜಿಕ ಸ್ವಾಸ್ಥ್ಯವನ್ನು, ವ್ಯಕ್ತಿಗಳ ಸಂಬಂಧಗಳ ಮಿತಿ ಮೇರೆಗಳನ್ನು ನಿಯಂತ್ರಿಸುತ್ತವೆ.

ಮಲೆನಾಡಿನ ಜನರು ಕುವೆಂಪು ತಮ್ಮ 'ತೋಟದಾಚೆಯ ಭೂತ ' ಪ್ರಬಂಧದಲ್ಲಿ ಹೇಳಿದಂತಹ ಹತ್ತು ಹಲವು ಭೂತಗಳನ್ನು ಆರಾಧಿಸುತ್ತಿದ್ದರು. ಅಣ್ಣಪ್ಪ , ಪಂಜ್ರೊಳ್ಳಿ, ಜಕಣಿ, ಚೌಡಿ, ಮುಸಣಿ, ಕಲ್ಕುಟ್ಕ ... ಇತ್ಯಾದಿ ಭೂತಗಳನ್ನು ಪೂಜಿಸಿ ಆಗಾಗ ಹರಕೆ, ಬಲಿ ಸಲ್ಲಿಸುತ್ತಿದ್ದರು. ಈ ಭೂತಗಳಿಗೆ ಪ್ರತ್ಯೇಕವಾಗಿ ದೇವಾಲಯಗಳೇನು ಇರುತ್ತಿರಲಿಲ್ಲ. ಮನೆಯ ಸುತ್ತಮುತ್ತ, ದೊಡ್ಡ ದೊಡ್ಡ ಗಿಡಮರಗಳ ಬುಡದಲ್ಲಿ, ಮನೆಯ ಹಿಂದೆ ಮುಂದೆ ಇರುವ ತೆಂಗಿನ ಅಡಿಕೆಯ ತೋಟಗಳಲ್ಲಿ ಅವು ವಾಸಿಸುತ್ತವೆ ಎಂಬ ನಂಬಿಕೆಯಿತ್ತು. ಅಡಿಕೆ, ತೆಂಗಿನ ತೋಟಗಳಲ್ಲಂತೂ ಭೂತಗಳು ಸದಾಕಾಲ ವಾಸಿಸುತ್ತವೆ ಮತ್ತು ರಾತ್ರಿ ಸಂಚರಿಸುತ್ತವೆ ಎಂದು ಗಾಢವಾಗಿ ನಂಬಲಾಗುತ್ತಿತ್ತು. ಇಂಥ ಭೂತದ ಬನಕ್ಕೆ ಪ್ರವೇಶಿಸುವವರು ಮಡಿಯಾಗಿರಬೇಕು. ಇಲ್ಲದಿದ್ದರೆ ಹಾನಿ ಸಂಭವಿಸುತ್ತದೆ ಎಂಬ ನಂಬಿಕೆ ಜನರಲ್ಲಿತ್ತು. ಭೂತಗಳಿಗೆ ಚಿಕ್ಕ ಪುಟ್ಟ ಪೂಜೆಗಳು ಆಗಾಗ ನಡೆಯಬಹುದಾದರೂ, ವರ್ಷಕ್ಕೆ ಒಂದು ಸಲ ನಡೆಯುತ್ತಿದ್ದ 'ದಯ್ಯದ ಹರಕೆ ' ಮುಖ್ಯವಾಗಿತ್ತು. ವ್ಯವಸಾಯದ ಕೆಲಸಕಾರ್ಯಗಳು ಮುಗಿದು ವಿರಾಮದ ದಿನಗಳು ಬಂದಾಗ ಇದನ್ನು ಏರ್ಪಡಿಸುತ್ತಿದ್ದರು. ವರ್ಷಪೂರ್ತಿ ಬೇರೆ ಬೇರೆ ಸಮಯ ಸನ್ನಿವೇಶಗಳಲ್ಲಿ ಹೇಳಿಕೊಳ್ಳುವ

ಹರಕೆಗಳನ್ನು, ಸುಳಿದಿಟ್ಟ ಪ್ರಾಣಿಗಳನ್ನು ಭೂತಕ್ಕೆ ಆಗ ಅರ್ಪಿಸುತ್ತಿದ್ದರು.

ದೈವ-ಭೂತಗಳಲ್ಲಿಯ ನಂಬಿಕೆ ವಿಶ್ವಾಸಗಳು ಎಲ್ಲೆಡೆ ಸಾಮಾನ್ಯ. ಹಾಗಾಗಿ ಮಲೆನಾಡಿನಲ್ಲಿಯೂ ಅವು ಪ್ರಾಚೀನ ಕಾಲದಿಂದಲೂ ಇದ್ದಿರುವಂತಹವು. ಒಂದು ಆಚರಣೆಯನ್ನು ಜನ ಸಮುದಾಯ ಒಪ್ಪಿಕೊಂಡರೆ, ತಲೆಮಾರುಗಳವರೆಗೆ ಉಳಿದುಕೊಂಡರೆ ಮುಂದೆ ಅದೊಂದು ಅನಿವಾರ್ಯ ಪದ್ಧತಿಯಾಗಿ, ನಂಬಿಕೆಯಾಗಿ ಬಿಡುತ್ತದೆ. ಪೂರ್ವಜರು ಅನುಸರಿಸುತ್ತಿದ್ದರು ಎಂಬ ಕಾರಣದಿಂದ ಇಂದಿಗೂ ಹಲವು ಇಂಥ ಪದ್ಧತಿಗಳು ಹಾಗೇ ಮುಂದುವರಿದುಕೊಂಡು ಬಂದಿರುವುದನ್ನು ಗಮನಿಸಬಹುದು. ಮಲೆನಾಡಿನಲ್ಲಿ ಆಧುನೀಕತೆ ಪ್ರವೇಶಿಸಿ ಸಾಕಷ್ಟು ಬದಲಾವನೆಗಳಾದರೂ ಇಂದಿಗೂ ಅಲ್ಲಿನ ಹಳ್ಳಿಗಳಲ್ಲಿ 'ಭೂತಾರಾಧನೆ 'ಯ ನಂಬಿಕೆ ಉಳಿದುಕೊಂಡು ಬಂದಿರುವುದು ನೋಡಬಹುದು.

ಮಲೆನಾಡಿನ ಜನಜೀವನದಲ್ಲಿ ಹಲವಾರು ರೀತಿಯ ಆಚರಣೆಗಳು, ವಿಧಿಗಳು ಕಂಡುಬರುತ್ತವೆ. ಇದನ್ನು ಕುವೆಂಪು ಅವರ ಸಾಹಿತ್ಯದ ಮೂಲಕ ತಿಳಿಯಬಹುದು. ಅವರ 'ಮಲೆನಾಡಿನ ಚಿತ್ರಗಳಲ್ಲಿನ 'ಅಜ್ಜಯ್ಯನ ಅಭ್ಯಂಜನ ' ಎಂಬ ಪ್ರಬಂಧದಲ್ಲಿ ಮಲೆನಾಡಿನಲ್ಲಿ ಪ್ರಚಲಿತದಲ್ಲಿದ್ದ ಒಂದು ವಿಶಿಷ್ಟ ಬಗೆಯ ಆಚರಣೆಯನ್ನು ಕುರಿತು ಚಿತ್ರಿಸಿದ್ದಾರೆ. ಈ ಪ್ರಬಂಧದ ಮೊದಲಲ್ಲೇ ಅದರ ವಿಶೇಷತೆ ಬಗೆಗೆ ತಿಳಿಸಿದ್ದಾರೆ. ಯಾವಾಗಲೂ ಶಾಂತವಾಗಿರುತ್ತಿದ್ದ ಮಲೆನಾಡಿನಲ್ಲೂ ಕ್ರಾಂತಿ ವಿಷಯವಿದೆ ಎಂದು ಹೇಳಿ ಆ ಕ್ರಾಂತಿಗೆ ಕಾರಣ ಅಭ್ಯಂಜನ ಎನ್ನುತ್ತಾರೆ. ಮಲೆನಾಡಿನಲ್ಲಿ ಅಭ್ಯಂಜನವೆಂದರೆ ಮಹಾಕಾರ್ಯ. ಅಭ್ಯಂಜನದ ದಿನ ಯಾರು ಸಾಯುತ್ತಾರೆ ? ಯಾರು ಉಳಿಯುತ್ತಾರೆ? ಯಾರು ಮೂರ್ಛೆ ಬೀಳುತ್ತಾರೆ ? ಹೇಳುವುದೇ ಕಷ್ಟ. ಆ ದಿನ ಮನೆಯಲ್ಲಿ ಗಲಭೆಯೋ ಗಲಭೆ ಎಂದು ಅಭ್ಯಂಜನದ ಭೀಕರತೆಯನ್ನು ಪೀಠಿಕಾ ರೂಪದಲ್ಲಿ ವಿವರಿಸುತ್ತಾರೆ.

ಅಭ್ಯಂಜನ ಮಲೆನಾಡಿನಲ್ಲಿ ಹಿಂದೆ ಇದ್ದಂತಹ ಒಂದು ಆಚರಣೆ. ಮಲೆನಾಡಿನಲ್ಲಿ ಇರುವುದೆಲ್ಲ ಕಾಡೇ. ಆದ್ದರಿಂದ ಸೌದೆಗೆ ಬರವಿಲ್ಲ, ಸೀಗೆಕಾಯಿ ಮೆಳೆಗಳೂ ಹೇರಳ, ನೀರೂ ಹೇರಳ. ಜನರೂ ಸಾಮಾನ್ಯವಾಗಿ ಪೇಟೆಯ ಗೌಜು ಗದ್ದಲ, ಗಲಿಬಿಲಿ ಇಲ್ಲದೆ

ಪ್ರಶಾಂತವಾಗಿ ಇರತಕ್ಕವರು. ಮನೆಮಂದಿಯೆಲ್ಲ ಅಭ್ಯಂಜನ ಮಾಡುವುದು ಅವರ ಜೀವನದಲ್ಲಿ ಒಂದು ಉತ್ಕ್ರಾಂತಿಯಂತೆ ನಡೆಯುತ್ತಿತ್ತು. ದೊಡ್ಡ ಒಲೆಯಲ್ಲಿ ಕುಂಟೆಗಳನ್ನು ಒಡ್ಡಿ ಒಲೆಯಲ್ಲಿ ಹೂಳಿದ್ದ ಎರಡು ಹಂಡೆಗಳಲ್ಲಿ ನೀರನ್ನು ಕೊತ ಕೊತ ಕುದಿಸುತ್ತಾರೆ, ಆ ಮೇಲೆ ಮನೆಯ ಶಾಲೆಯಲ್ಲಿ ಓದುಬರಹ ಕಲಿಸುವ ಐಗಳು ಎಂದರೆ ಪ್ರಿನ್ಸಿಪಾಲರು. ಸಣ್ಣಸಣ್ಣ ಮಕ್ಕಳಿಗೆ ಎಣ್ಣೆ ತಿಕ್ಕಿ ತಿಕ್ಕಿ ಹಚ್ಚುತ್ತಾರೆ. ಆ ಕಾಲಕ್ಕೆ ಮಕ್ಕಳ ತಲೆಯ ಕಜ್ಜಿ ಮೈಗಾಯ ಇವುಗಳು ಇತರರಿಗೆ ಗೋಚರವಾಗಿ ಅನುಬಂಧದ ಆರೈಕೆಯೂ ಹುಡುಗರಿಗೆ ಸ್ಥಳದಲ್ಲಯೇ ನಡೆಯುತ್ತದೆ. ಆಮೇಲೆ ಒಬ್ಬರು ಆಳುಗಳು ದೊಡ್ಡ ದೊಡ್ಡ ಕಡಾಯಿಗಳಿಗೆ ಸುಡುವ ನೀರನ್ನು ತೋಡಿ ತಣ್ಣೀರು ಸೇರಿಸಿ ಹದ ಮಾಡುತ್ತಾರೆ. ಒಂದು ದೊಡ್ಡ ದೋಣಿಗೆ ನೀರು ತೋಡಿ ಹದಮಾಡುತ್ತಾರೆ. ಮಕ್ಕಳನ್ನು ಎತ್ತಿ ಎತ್ತಿ ದೋಣಿಯ ನೀರಿನಲ್ಲಿ ಮಲಗಿಸಿ ಆ ದೋಣಿಯ ನೀರನ್ನೇ ಮೊಗೆದು ಮೊಗೆದು ತಲೆ ಮೈಕೈಗಳಿಗೆ ಸುರಿಯುತ್ತಾರೆ. ಆಮೇಲೆ ಕೆಳಕ್ಕೆ ಇಳಿಸಿ ಸೀಗೆಪುಡಿಯಿಂದ ಅವರ ದೇಹವನ್ನು ಉಜ್ಜಿ ಎಣ್ಣೆ ತೆಗೆದು ಮತ್ತೆ ಕಡಾಯಿಯ ಬಿಸಿ ನೀರನ್ನು ತಲೆಗೆ ಸುರಿದು, ಬಚ್ಚಲಿನಿಂದ ಮೇಲಕ್ಕೆ ಎತ್ತಿ ಮೈ ಒರಸಿ ಕಂಬಳಿ, ಶಾಲು, ರಗ್ಗು ಹೊದಿಸಿ ಹಾಸಿಗೆಯಲ್ಲಿ ಉರುಳಿಸುತ್ತಾರೆ.

ಮಕ್ಕಳ 'ಅಭ್ಯಂಗ ' ಆದ ಮೇಲೆ ದೊಡ್ಡವರ ಸರದಿ. ಅವರ ಎಣ್ಣೆ ಸ್ನಾನದ ರೀತಿಯೂ ಹೀಗೆಯೇ. ಆದರೆ ಇನ್ನಷ್ಟು ಉಗ್ರ ರೀತಿಯಲ್ಲಿ ನಡೆಯುತ್ತದೆ. ಅವರದೆಲ್ಲ ಆದ ಮೇಲೆ ಅಜ್ಜಯ್ಯನ ಅಭ್ಯಂಜನ. ಅವರಿಗೆ ಅಭ್ಯಂಜನ ಬಹಳ ಪ್ರಿಯವಾದ ಕರ್ಮ. ಅದರ ವರ್ಣನೆ ಬಹಳ ಸ್ವಾರಸ್ಯವಾಗಿ ನಿರೂಪಿತವಾಗಿದೆ. ಅವರು ಎಣ್ಣೆ ಹಚ್ಚಿಸಿಕೊಳ್ಳುವ ಕ್ರಮ, ಅವರು ಸತ್ತ ಚಿರಂಜೀವಿಗಳನ್ನು ನೆನೆಯುವ ಕ್ರಮ. ಪೈಲುವಾನರಂತಹ ಆಳುಗಳು ಅವರಿಗೆ ಎಣ್ಣೆ ಹಚ್ಚಿ ದೇಹದ ಒಳಕ್ಕೆ ಇಳಿಯುವಂತೆ ತಿಕ್ಕುವ ರೀತಿ. ನೆತ್ತಿಗೆ ಎಣ್ಣೆ ಹಚ್ಚಿ ರಪರಪ ನೆತ್ತಿಯನ್ನು ಬಡಿದು ಮಿದುಳಿಗೆ ತಂಪು ಮಾಡುವ ಕ್ರಮ-ಇವೆಲ್ಲ ಅತ್ಯದ್ಭುತವಾದುವು. ಆಮೇಲೆ ಅವರು ಸುಡು ನೀರಿನಲ್ಲಿ ಮಲಗುವುದು. ಆಳುಗಳು ಇಬ್ಬಿಬ್ಬರು ನೀರು ಹೊಯ್ಯುವುದು. ಆಗಾಗ ಅವರು ಮೂರ್ಛೆ ಹೋಗುವುದು, ನಡುನಡುವೆ ಪಾನಕ ಕುಡಿಸುವುದು, ದೇವರು ದಿಂಡರಿಗೆ ಹರಕೆ ಹೊರುವುದು, ನಡುವೆ ಅಜ್ಜಮ್ಮ ಒಳಗಿನಿಂದ ಬಂದು ನೋಡಿ ಹೋಗುವುದು ಇವೆಲ್ಲ ದೊಡ್ಡ ಸಂಭ್ರಮದ ಕಾರ್ಯಗಳು.

'ಅಜ್ಜಯ್ಯನ ಅಭ್ಯಂಜನ ' ಒಂದು ಸುಂದರ ಚಿತ್ರ. ಇಲ್ಲಿ ಮಲೆಯ ಮಕ್ಕಳ ಸ್ನಾನದ ಸಡಗರದ ಚಿತ್ರ ಮೂಡಿಬಂದ ರೀತಿಯಲ್ಲಿ ಕುವೆಂಪು ಅವರ ಪ್ರತಿಭೆ ಮಿಂಚಿದ ಬಗೆ ಓದುಗರನ್ನು ಬೆರಗುಗೊಳಿಸುತ್ತದೆ. ಈ ಪ್ರಬಂಧದ ಕೊನೆಯಲ್ಲಿ ಕುವೆಂಪುರವರೇ ಹೇಳಿದ್ದಾರೆ. ''ಅವರ ಕಾಲ ಮುಗಿದುಹೋಯಿತು. ಅವರೊಡನೆ ಆ ಅಭ್ಯಂಜನದ ಮಹೋತ್ಸವವು ಮರೆತು ಹೋಯಿತು ''[೧೪] ಎಂದಿದ್ದಾರೆ. ಕುವೆಂಪುರವರು ಇರುವಾಗಲೇ ಅವರ ಚಿಕ್ಕಂದಿನಲ್ಲಿ ನೋಡಿದ, ಅನುಭವಿಸಿದ ಇಂತಹ ಸಾಕಷ್ಟು ಅನುಭವಗಳು ಆಚರಣೆಗಳು ಮರೆಯಾಗಿದೆ ಎಂದ ಮೇಲೆ ಅವರ ನಂತರದ ಒಂದು ದಶಕದ ಅವಧಿ ಯಲ್ಲಿ ಮಲೆನಾಡು ಎಷ್ಟು ಬದಲಾಗಿರಬಹುದು ಎಂಬುದನ್ನು ನಾವೇ ಊಹಿಸಬಹುದು. ಇಂದಿನ ಜನರಲ್ಲಿ ಇಷ್ಟೊಂದು ದೀರ್ಘಾವಧಿ ಅಭ್ಯಂಜನ ಮಾಡುವ ವ್ಯವದಾನವೇ ಇಲ್ಲದಂತಾಗಿದೆ. ಸ್ನಾನದಲ್ಲೇ ಅಷ್ಟೊಂದು ಸಡಗರ, ಸಂಭ್ರಮ ಕಾಣುತ್ತಿದ್ದ ಅಂದಿನ ಆಚರಣೆಗಳು ಇಂದು ಕೇವಲ ನೆನಪುಗಳಷ್ಟೇ. ಎಷ್ಟೋ ಮಂದಿಗೆ ಇಂತಹ ಆಚರಣೆಗಳ ಕಲ್ಪನೆಯೇ ಇಲ್ಲದಂತಾಗಿದೆ. ನಮ್ಮ ಹಿಂದಿನ ತಲೆಮಾರಿನವರು ಆಚರಿಸುತ್ತಿದ್ದ ಅನೇಕ ಹಬ್ಬ ಹರಿದಿನಗಳನ್ನೇ ಇಂದು ಆಚರಿಸುತ್ತಿಲ್ಲ ಅಂದ ಮೇಲೆ ಅಭ್ಯಂಜನದಂತಹ ಆಚರಣೆಗಳನ್ನು ಆಚರಿಸುವುದು ಇಂದಿನ ಯಾಂತ್ರಿಕ ಜೀವನದಲ್ಲಿ ಸಾಧ್ಯವಿಲ್ಲದ ಮಾತು. ಆ ಗತಕಾಲದ ವೈಭವ ಅಲ್ಲಿಗೆ ಮುಗಿದು ಹೋಯಿತು ಎನ್ನಬಹುದು.

ಕುವೆಂಪುರವರ ಸಾಹಿತ್ಯವನ್ನು ಪ್ರವೇಶಿಸಿದರೆ ಅಂದಿನ ಮಲೆನಾಡಿನ ಜನರು, ಅವರ ಜೀವನ ಕ್ರಮ, ಅನುಸರಿಸುತ್ತಿದ್ದ ಪದ್ಧತಿಗಳು, ನಂಬಿಕೆಗಳು ಎಲ್ಲ ತಮ್ಮ ಗುಣ ರೂಪಗಳೊಂದಿಗೆ ನಮ್ಮ ಕಣ್ಮುಂದೆ ಪರಿಚಿತವಾಗುತ್ತವೆ. ಹಾಗೆ ಅಷ್ಟೇ ಆತ್ಮೀಯವಾಗುತ್ತವೆ. ಇಂತಹ ಜೀವನ ಕ್ರಮ ಅವರ ಕಾದಂಬರಿಗಳಲ್ಲಿ ದಟ್ಟವಾಗಿ ಮೂಡಿಬಂದಿದೆ. ಕಾದಂಬರಿಗಳಿಗೆ ಪೀಠಿಕೆ ಎನ್ನುವಂತೆ ರಚನೆಗೊಂಡ 'ಮಲೆನಾಡಿನ ಚಿತ್ರಗಳಲ್ಲಿ ' ಎಲ್ಲೋ ಒಂದು ರೀತಿಯ ಜೀವನ ಚಿತ್ರ ವ್ಯಕ್ತವಾಗಿದೆ. ಅದು 'ಮಲೆನಾಡಿನ ಗೋಪಾಲಕರು' ಎಂಬ ಪ್ರಬಂಧದಲ್ಲಿ. ಇಲ್ಲಿ ಕುವೆಂಪು ಅವರು ಮಲೆನಾಡಿನ ಗೋಪಾಲಕರನ್ನು ಅವರ ಬದುಕಿನ ಶೈಲಿಯನ್ನು ಸೂಕ್ಷ್ಮವಾಗಿ ನಮಗೆ ಪರಿಚಯಿಸಿಕೊಟ್ಟಿದ್ದಾರೆ.

ಮಲೆನಾಡಿನ ಗೋಪಾಲಕರು ದಿಟ್ಟರು, ಕೆಚ್ಚೆದೆಯಾಳುಗಳು, ಅಲ್ಲದೇ ಕಷ್ಟ

ಸಹಿಷ್ಣುಗಳು. ಗಿರಿವನಗಳಲ್ಲಿ ಮಳೆ ಬಿಸಿಲೆನ್ನದೆ ಅಲೆದು ಅಲೆದು ಗಟ್ಟಿ ಮುಟ್ಟಾಗಿರುವವರು ಎಂದಿದ್ದಾರೆ. ಅವರ ಉಡುಪು ಸಹ ತೀರ ಸರಳ. ಮೊಳಕಾಲು ಮೀರದ ಕೊಳಕಾದ ಪಂಚೆ ಒಂದು, ಯಾರಾದರೂ ಪುಣ್ಯಾತ್ಮರು ಧರ್ಮ ಮಾಡಿದ ಹರಕು ಅಂಗಿ ಒಂದು, ಒಂದು ಕಂಬಳಿ ಅವರ ಜೊತೆ ಇದ್ದೇ ಇರುತ್ತದೆ. ಸೊಂಟಕ್ಕೆ ಒಡ್ಯಾಣವೆಂಬ ಪಟ್ಟಿ ಆ ಪಟ್ಟಿಗೆ ಒಂದು ಕೊಕ್ಕೆ, ಕೊಕ್ಕೆಯಲ್ಲಿ ಒಂದು ಕತ್ತಿ ಸಿಕ್ಕಿಸಿರುತ್ತದೆ. ಬಣ್ಣದಲ್ಲಿ ಅವರು ಕಪ್ಪು. ಅವರಿಗೆ ಗರ್ವ ಇಲ್ಲ, ಬಹಳ ವಿನಯಪರರು. ಬಂದುದನ್ನು ತಿಂದುಂಡು ಸುಖದಲ್ಲಿ ಕಾಲಕಳೆಯುವವರು. ಅವರು ದಿನವೂ ಬೆಳಿಗ್ಗೆ ಗಂಜಿ ಉಂಡು ಬರುವರು. ದಣಿಗಳ ಮನೆಗೆ ಹೋಗಿ ಹಾಲು ಕರೆದು ಹಸುಗಳನ್ನು ಮೇಯಿಸಲು ಗುಡ್ಡಗಾಡುಗಳಿಗೆ ಹೊಡೆದುಕೊಂಡು ಹೋಗುವರು. ಅವರು ಮರಳಿ ಹಸು ಹೊಡೆದುಕೊಂಡು ಬರುವುದು ಸಾಯಂಕಾಲ ಐದು ಗಂಟೆಗೆ. ಬೇಸಿಗೆಯಲ್ಲಿ ನೆರಳಿರುವ ಕಡೆ ದನಗಳನ್ನು ಮೆಲುಕು ಹಾಕಲು ಬಿಡುವರು. ತಾವು ಹಲಸಿನ ಹಣ್ಣನ್ನೋ, ಮತ್ತೊಂದು ಹಣ್ಣನ್ನೋ ತಿಂದು ಕೊಳಲೂದುತ್ತ ವಿಶ್ರಮಿಸಿಕೊಳ್ಳುವರು.

'ಹಿರಗ ' ಎಂಬ ದನಕಾಯುವವನನ್ನು ಲೇಖಕರು ಪರಿಚಯಿಸಿಕೊಡುತ್ತಾರೆ. ಅವನ ನಿಜವಾದ ಹೆಸರು ಹಿರಿಯಣ್ಣ. ಮೇಲುಜಾತಿಯವರು ಕೀಳು ಜಾತಿಯವರನ್ನು ಹಾಗೆ ಕರೆಯಲು ಸಂಕೋಚಪಟ್ಟು ಹಿರಗ ಎಂದು ಕರೆಯುತ್ತಿದ್ದರು. ಕೊಳಲು ಪ್ರತಿಯೊಬ್ಬ ದನಗಾಹಿಯ ಪರಮ ಗೆಳೆಯ. ಅದಿಲ್ಲದಿದ್ದರೆ ದನಕಾಯುವ ಪದವಿಗೆ ಗೌರವ ಕಡಿಮೆ. ಹಿರಗ ಕೊಳಲೂದುವುದರಲ್ಲಿ ನಿಸ್ಸೀಮ. ತಾವೇ ಅವನ ಕೊಳಲಗಾನಕ್ಕೆ ಮಾರುಹೋಗಿರುವುದಾಗಿ ಪ್ರಬಂಧಕಾರರು ಹೇಳುತ್ತಾರೆ. ಮಕ್ಕಳಿಗೆ ಹಿರಗನನ್ನು ಕಂಡರೆ ಬಹಳ ಆಸೆ. ಅವನು ಹಿಂದಿರುಗಿ ಬರುವಾಗ ಒಬ್ಬರು ತನಗೆ ಒಂದು ಕೊಳಲು ಮಾಡಿಕೊಂಡು ಬಾ ಎನ್ನುತ್ತಾರೆ. ಮತ್ತೊಬ್ಬರು ತನಗೆ ಒಂದು ಪೆಟ್ಲಂ ಮಾಡಿಕೊಂಡು ಬಾ ಎನ್ನುತ್ತಾರೆ. ಮಗದೊಬ್ಬರು ತನಗೆ ಕಲ್ಲು ಸಂಪಗೆಹಣ್ಣು ಬೇಕು ಎನ್ನುತ್ತಾರೆ. ಬೇರೊಬ್ಬರು ತನಗೆ ಸೀತಾಳಿ ದಂಡೆ ಬೇಕು ಎನ್ನುತ್ತಾರೆ. ಎಲ್ಲರಿಗೂ 'ಹೂಂ ಹೂಂ' ಎಂದು ಹೇಳಿ ಹಿರಗ ಸಾಧ್ಯವಾದಷ್ಟನ್ನು ಸಂಜೆ ತಂದುಕೊಡುತ್ತಾನೆ. ತಾನು ಹೇಳಿದ್ದನ್ನು ತರಲಿಲ್ಲ ಎಂದು ಬಯ್ಯುವವರೂ ಇದ್ದಾರೆ.

ಗೋಪಾಲಕರಿಗೆ ಕಷ್ಟಗಳು ಬರುವುದೂ ಉಂಟು. ಶುಂಟದನಗಳು ಹಿಂದಿನಿಂದ ಬೇರೆಯಾಗಿ ಕಂಡವರ ಗದ್ದೆ ತೋಟಗಳಿಗೆ ನುಗ್ಗಿ ಹಾವಳಿ ಮಾಡುವುದುಂಟು. ಅಂತಹ ದನಗಳನ್ನು ಪಳಗಿಸುವುದು ಕಷ್ಟವೇ. ಅದರ ಕೊರಳಿಗೂ, ಒಂದು ಕಾಲಿಗೂ ಮೊಳದುದ್ದ ಹಗ್ಗ ಕಟ್ಟಿ ಮೇಯಲು ಬಿಡುವುದು ಉಂಟು. ಕೊರಳಿಗೆ ಬಿದಿರಿನ ದೊಂಟೆ ಕಟ್ಟುವುದುಂಟು. ದನಗಳನ್ನು ಹುಲಿ ಹಿಡಿಯುವುದೂ ಉಂಟು. ಇಂತಹ ಸಂದರ್ಭಗಳಲ್ಲಿ ದಣಿಗಳಿಂದ ಗೋಪಾಲಕರು ಬೈಸಿಕೊಳ್ಳಬೇಕಾಗುತ್ತದೆ. ದನಗಳನ್ನು ದೊಡ್ಡಿಗೆ ಕಟ್ಟುತ್ತಾರೆ. ದಂಡ ಕೊಟ್ಟು ದನ ಬಿಡಿಸಿಕೊಂಡು ಬರಬೇಕು. ಆಗಲೂ ಗೋಪಾಲಕರಿಗೆ ಬೈಗಳು ತಪ್ಪಿದ್ದಲ್ಲ. ಮಳೆಗಾಲದಲ್ಲಿ ದನ ಮೇಯಿಸುವುದು ಕಷ್ಟದ ಕೆಲಸ. ಮಳೆಯಲ್ಲಿ ನೆನೆದು ತೊಪ್ಪೆಯಾಗಿ ಗೋಪಾಲಕರು ಮರಳುತ್ತಾರೆ. ಕೆಲವರು ಕಳ್ಳ ಗೋಪಾಲಕರೂ ಇದ್ದಾರೆ. ತಮಗೆ ಬೇಡವಾದ ಹಸುಗಳನ್ನು ಕಾಡಿನಲ್ಲಿ ತಾವೇ ನಿರ್ಮಿಸಿದ ದೊಡ್ಡಿಗೆ ಕೂಡಿ ಬರುವುದೂ ಉಂಟು. ಅದು ಗೊತ್ತಾದಾಗ ದಣಿಯಿಂದ ಒದೆ ತಿಂದುದೂ ಉಂಟು. ಒಟ್ಟಿನಲ್ಲಿ ಎಲ್ಲರಂತೆ ಇವರಿಗೂ ಜೀವನದಲ್ಲಿ ಸುಖವೂ ಇದೆ, ದುಃಖವೂ ಇದೆ.

ಪ್ರಾಣಿಗಳನ್ನು ಸಾಕುವುದು ಮಲೆನಾಡಿನಲ್ಲಿ ಒಂದು ಮುಖ್ಯ ಹವ್ಯಾಸ ಅಥವಾ ವೃತ್ತಿ ಎಂದೇ ಹೇಳಬಹುದು. ದನ, ಎಮ್ಮೆ, ಎತ್ತು, ಆಡು, ಕುರಿ, ಕೋಳಿ, ನಾಯಿ, ಹಂದಿಗಳನ್ನು ಮಲೆನಾಡಿಗರು ಸಾಕುತ್ತಿದ್ದರು. ಹಾಲಿಗಾಗಿ, ಗೊಬ್ಬರಕ್ಕಾಗಿ ವ್ಯವಸಾಯದ ಉಪಯೋಗಳಿಗಾಗಿ ಸಾಕುತ್ತಿದ್ದರು. ನಾಯಿಗಳು ಮನೆಕಾವಲು, ಬೇಟೆ ಇಂತಹ ಕಾರಣಕ್ಕಾಗಿ ಸಾಕಲಾಗುತ್ತಿತ್ತು. ತೇಜಸ್ವಿ ಅವರು 'ಅಣ್ಣನ ನೆನಪಿನಲ್ಲಿ ' ಹೇಳಿದ್ದಾರೆ. ''ಮಲೆನಾಡಿನ ಹೆಂಗಸರಿಗೆ ಹಸು, ಎಮ್ಮೆ, ಹಾಲು ಕೊಡಲಿ, ಬಿಡಲಿ ಕೊಟ್ಟಿಗೆ ತುಂಬ ದನಕರುಗಳಿರಬೇಕೆಂಬುದು ಒಂದು ಚಾಳಿ''[೧೫] ಎಂದಿದ್ದಾರೆ. ದನಕರುಗಳ ಪಾಲನೆ, ಪೋಷಣೆಯನ್ನು ನಡೆಸುತ್ತಿದ್ದ ಗೋಪಾಲಕರು ಮಲೆನಾಡಿನಲ್ಲಿರುತ್ತಿದ್ದರು. ಇವರ ಜೀವನ ಶೈಲಿ ಬಗೆಗೆ ನಾವು 'ಮಲೆನಾಡಿನ ಗೋಪಾಲಕರು ' ಪ್ರಬಂಧದ ವಿಶ್ಲೇಷಣೆಯಲ್ಲಿ ತಿಳಿದಿದ್ದೇವೆ.

ಇಂದು ಮಲೆನಾಡಿನಲ್ಲಿ ಸಂಪೂರ್ಣ ಜನಜೀವನವೇ ಬದಲಾಗಿದೆ. ಅದರಲ್ಲಿ ಗೋಪಾಲಕರ ಜೀವನವೂ ಸಹ ಸಾಕಷ್ಟು ಮಟ್ಟಿಗೆ ಬದಲಾಗಿದೆ. ಬದಲಾಗಿದೆ ಎನ್ನುವುದಕ್ಕಿಂತ ಗೋಪಾಲಕರೇ ಕಾಣಸಿಗುವುದು ಅಪರೂಪ ಎನ್ನಬಹುದು. ಏಕೆಂದರೆ

ಈಗ ಮೊದಲಿನಂತೆ ಕೊಟ್ಟಿಗೆ ತುಂಬ ದನಕರುಗಲನ್ನು ಸಾಕುವವರು ಕಡಿಮೆ. ತಮ್ಮ ಗೃಹೋಪಯೋಗಕ್ಕಾಗಿ, ಹಾಲಿಗಾಗಿ ದನಗಳನ್ನು ಸಾಕುತ್ತಾರಾದರೂ ತಳಿಯ ಹಸುಗಳನ್ನು ಸಾಕುತ್ತಾರೆ. ಅದು ಒಂದೋ, ಎರಡೋ ಅಷ್ಟೆ. ಈಗ ಎಲ್ಲರೂ ರಾಸಾಯನಿಕ ಗೊಬ್ಬರವನ್ನೇ ಹೆಚ್ಚಾಗಿ ಬಳಸುವುದರಿಂದ ಹಸುಗಳ ಸಗಣಿ-ಸೊಪ್ಪು, ಗೊಬ್ಬರಕ್ಕಾಗಿ ಸಾಕುವುದು ಕಡಿಮೆಯಾಗಿದೆ. ಅಷ್ಟೇ ಅಲ್ಲದೆ ಮೊದಲಿನಂತೆ ದನಕರುಗಳನ್ನು ಮೇಯಿಸಲು ಬೇಕಾದ ಬೆಟ್ಟ, ಗುಡ್ಡಗಳು, ಬಯಲು ಸ್ಥಳಗಳು ಈಗ ಕಾಣಸಿಗುವುದೇ ಇಲ್ಲ. ಏಕೆಂದರೆ ಈಗ ಎಲ್ಲಿ ನೋಡಿದರೂ ಅಡಿಕೆ ತೋಟ, ಇಲ್ಲವೇ ಅಕೇಶಿಯಾ ಫಾರೆಸ್ಟ್‌ಗಳೇ ಕಂಡುಬರುತ್ತಿವೆ. ಈಗ ದನಗಳನ್ನು ಸಾಕಿದರೂ ಮನೆಯಲ್ಲೇ ಕಟ್ಟಿ ಸಾಕುತ್ತಾರೆ. ಇದರ ಜೊತೆಗೆ ಆಗ ಇರುವಂತೆ ದನಕರುಗಳನ್ನು ಕಾಯಲು ಈಗ ಬಾಲಕರೂ ಸಿಗುವುದಿಲ್ಲ. ಅವರೆಲ್ಲಾ ಹಳ್ಳಿಯಲ್ಲಿ ಕಷ್ಟದ ಜೀವನ ನಡೆಸುವುದಕ್ಕಿಂತ ಈಗ ನಗರ ಪ್ರದೇಶಗಳ ಕಡೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಇದರಿಂದ ನಾವು ತಿಳಿದಂತಹ ಗೋಪಾಲಕರ ಜೀವನ ಕ್ರಮ ಕೊಳಲೂದುವಾಗ ಕೇಳುವ ಇಂಪಾದ ಧ್ವನಿ ಈಗ ಕೇವಲ ನೆನಪಾಗಿ ಮಾತ್ರ ಉಳಿಯುವಂತಹ ಪರಿಸ್ಥಿತಿ ಬಂದೊದಗಿದೆ ಎನ್ನಬಹುದು.

ಅಡಿ ಟಿಪ್ಪಣಿಗಳು :

೧. ಕುವೆಂಪು, ಮಲೆನಾಡಿನ ಚಿತ್ರಗಳು, ಬಂದನಾ ಹುಲಿರಾಯ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೪೬-೪೭

೨. ಕುವೆಂಪು, ಮಲೆನಾಡಿನ ಚಿತ್ರಗಳು, ಪುಟ್ಟಾಚಾರಿಯ ಕಾಡುಕೋಳಿ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೪೯.

೩. ಕುವೆಂಪು, ಮಲೆನಾಡಿನ ಚಿತ್ರಗಳು, ಪುಟ್ಟಾಚಾರಿಯ ಕಾಡುಕೋಳಿ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೫೦.

೪. ಕುವೆಂಪು, ಮಲೆನಾಡಿನ ಚಿತ್ರಗಳು, ಅಣ್ಣಪ್ಪನ ರೇಶ್ಮೆ ಖಾಯಿಲೆ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೭೪.

೫. ಕುವೆಂಪು, ಮಲೆನಾಡಿನ ಚಿತ್ರಗಳು, ಅಣ್ಣಪ್ಪನ ರೇಶ್ಮೆ ಖಾಯಿಲೆ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೭೪.

೬. ಕುವೆಂಪು, ಮಲೆನಾಡಿನ ಚಿತ್ರಗಳು, ಅಣ್ಣಪ್ಪನ ರೇಶ್ಮೆ ಖಾಯಿಲೆ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೭೬.

೭. ಕುವೆಂಪು, ಮಲೆನಾಡಿನ ಚಿತ್ರಗಳು, ಕತೆಗಾರ ಮಂಜಣ್ಣ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೯೯.

೮. ಕುವೆಂಪು, ಮಲೆನಾಡಿನ ಚಿತ್ರಗಳು, ರಾಮು ರಾವಣರ ಯುದ್ಧ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೧೧೧.

೯. ಕುವೆಂಪು, ಮಲೆನಾಡಿನ ಚಿತ್ರಗಳು, ರಾಮು ರಾವಣರ ಯುದ್ಧ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೧೧೧.

೧೦. ಕುವೆಂಪು, ಮಲೆನಾಡಿನ ಚಿತ್ರಗಳು, ಕತೆಗಾರ ಮಂಜಣ್ಣ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೯೪.

೧೧. ಕುವೆಂಪು, ಮಲೆನಾಡಿನ ಚಿತ್ರಗಳು, ಅಜ್ಜಯ್ಯನ ಅಭ್ಯಂಜನ
ಉದಯರವಿ ಪ್ರಕಾಶನ, ಮೈಸೂರು, ೨೦೦೬ ಪುಟ-೩೮.

೧೨. ಕುವೆಂಪು, ಮಲೆನಾಡಿನ ಚಿತ್ರಗಳು, ತೋಟದಾಚೆಯ ಭೂತ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೬೯.

೧೩. ಕುವೆಂಪು, ಮಲೆನಾಡಿನ ಚಿತ್ರಗಳು, ತೋಟದಾಚೆಯ ಭೂತ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೬೯.

೧೪. ಕುವೆಂಪು, ಮಲೆನಾಡಿನ ಚಿತ್ರಗಳು, ಅಜ್ಜಯ್ಯನ ಅಭ್ಯಂಜನ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೩೮.

೧೫. ಪೂರ್ಣಚಂದ್ರ ತೇಜಸ್ವಿ, ಅಣ್ಣನ ನೆನಪು, ಪುಸ್ತಕ ಪ್ರಕಾಶನ, ಮೈಸೂರು, ೨೦೦೩, ಪುಟ-೩೪.

ಅಧ್ಯಾಯ -೫

ಆಧುನೀಕರಣದತ್ತ ಮಲೆನಾಡು

ಇಂದು ಇಡೀ ಜಗತ್ತೇ ಆಧುನೀಕರಣ ಕ್ಕೊಳಗಾಗಿ ಸಾಕಷ್ಟು ಬದಲಾವಣೆಗೊಳಗಾಗಿದೆ. ಪ್ರತಿಯೊಬ್ಬ ವ್ಯಕ್ತಿಯಿಂದ ಪ್ರಾರಂಭವಾಗಿ ಇಡೀ ಸಾಮಾಜಿಕ ವ್ಯವಸ್ಥೆಯನ್ನೇ ಒಳಗೊಂಡಂತೆ ಈ ಬದಲಾವಣೆ ಕಂಡುಬರುತ್ತದೆ. ಮನುಷ್ಯನ ನಂಬಿಕೆಗಳಲ್ಲಿ , ಆತನ ಮೌಲ್ಯಗಳಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ವೈಜ್ಞಾನಿಕವಾಗಿ ಹೀಗೆ ಪ್ರತಿಯೊಂದರಲ್ಲೂ ಆಧುನೀಕತೆಯ ಪ್ರಭಾವವನ್ನು ಗಮನಿಸಬಹುದು. ಇಂತಹ ಸಂದರ್ಭದಲ್ಲಿ ಮಲೆನಾಡು ಸಹ ಆಧುನೀಕತೆಗೆ ತೆರೆದುಕೊಂಡಿದೆ. ಮಲೆನಾಡಿನ ಪೂರ್ಣ ಪರಿಚಯವಾಗಿರುವುದು ಕುವೆಂಪು ಸಾಹಿತ್ಯದ ಮೂಲಕ. ಅಲ್ಲಿನ ಮಲೆನಾಡಿನ ಚಿತ್ರಣವನ್ನು ಮನಸ್ಸಿನಲ್ಲಿಟ್ಟುಕೊಂಡು ಯಾರಾದರೂ ಇಂದು ಮಲೆನಾಡಿಗೆ ಬಂದರೆ ಅವರಿಗೆ ಖಂಡಿತ ದಿಗ್ಭ್ರಮೆಯಾಗದೆ ಇರಲು ಸಾಧ್ಯವೇ ಇಲ್ಲ ಎನ್ನಬಹುದು. ಏಕೆಂದರೆ ಅಷ್ಟರ ಮಟ್ಟಿಗೆ ಇಲ್ಲಿನ ಜನಜೀವನ, ಪ್ರಕೃತಿ, ಪರಿಸರ ಎಲ್ಲವೂ ಹೊಸ ರೂಪ ಪಡೆದಿರುವುದನ್ನು ಗಮನಿಸಬಹುದು.

ಆಧುನೀಕತೆ ಎಂಬುದು ಬ್ರಿಟೀಷರ ಆಗಮನದೊಂದಿಗೆ ನಮ್ಮಲ್ಲಿಗೆ ಪ್ರವೇಶಿಸಿತು ಎಂಬುದು ಎಲ್ಲರಿಗೂ ತಿಳಿದಂತಹ ವಿಷಯವೇ. ಮಲೆನಾಡಿಗೂ ಸಹ ಆಗಲೇ ಬಂದಿರುವುದು. ಇದನ್ನು ಕುವೆಂಪು ಸಾಹಿತ್ಯದಲ್ಲೇ ತಿಳಿಯಬಹುದು. ಅದೆಲ್ಲಕ್ಕಿಂತ ಮುಖ್ಯವಾಗಿ ಸ್ವತಃ ಕುವೆಂಪು ಅವರೇ ಆಧುನಿಕ ಯುಗದ ಪ್ರಾರಂಭದ ಕಾಲದಲ್ಲಿನ ಪ್ರಮುಖ ಬರಹಗಾರರಾಗಿದ್ದಾರೆ. ಅವರೇ ಪರಂಪರೆ ಮತ್ತು ಆಧುನಿಕತೆಯೊಂದಿಗೆ ಮುಖಾಮುಖಿಯಾಗಿ ತಮ್ಮ ಸಾಹಿತ್ಯ ಕೃಷಿ ನಡೆಸಿದ್ದಾರೆ. ಕ್ರಿಶ್ಚಿಯನ್ ಮಿಷನರಿಗಳ ಪ್ರಭಾವ ಮಲೆನಾಡಿನ ಮೇಲೆ ಆಗಿರುವುದನ್ನು 'ಮಲೆಗಳಲ್ಲಿ ಮದುಮಗಳು ' ಕಾದಂಬರಿಯಲ್ಲಿ ಸ್ಪಷ್ಟವಾಗಿ ಗಮನಿಸಬಹುದು. ಆದರೂ ಕುವೆಂಪು ಅವರ ಸಾಹಿತ್ಯದ ಹೆಚ್ಚು ಭಾಗ ಆಧುನೀಕತೆ ಪ್ರವೇಶಕ್ಕೂ ಹಿಂದಿನ ಮಲೆನಾಡಿನ ವರ್ಣನೆಯನ್ನು ಕುರಿತಾದದ್ದೇ ಆಗಿದೆ. ಕುವೆಂಪು ಅವರ ಹಿಂದಿನ ತಲೆಮಾರು ಹಾಗೂ ಕುವೆಂಪು ಕಂಡ ಮಲೆನಾಡು ಅಲ್ಲಿ ಚಿತ್ರಣವಾಗಿರುವುದು. ಅವರೇ ಅದೇ ಮಲೆನಾಡನ್ನು 'ಕಾನೂರು ಹೆಗ್ಗಡತಿ ' ಕತೆಯ

ಕಾಲದ ನಂತರ ಹತ್ತು ವರ್ಷಗಳಾದ ಮೇಲೆ ಬಂದು ನೋಡಿದಾಗ, ಆಗ ಅವರಿಗಾದ ಅನುಭವವನ್ನು ಅದೇ ಕಾದಂಬರಿಯ ಕೊನೆಯ ಭಾಗವಾದ 'ಹತ್ತು ವರ್ಷಗಳಾದ ಮೇಲೆ' ಎಂಬ ಭಾಗದಲ್ಲಿ ಚಿತ್ರಿಸಿರುವುದನ್ನು ಗಮನಿಸಿದರೆ ನಮಗೆ ತಿಳಿಯುತ್ತದೆ ಎಷ್ಟು ವೇಗವಾಗಿ ಇಂತಹ ಬದಲಾವಣೆಗಳಾಗುತ್ತಿವೆ ಎಂಬುದು. ಅಂದ ಮೇಲೆ ಕುವೆಂಪು ಕಂಡ ಮಲೆನಾಡಿಗೂ ಇಂದಿನ ಮಲೆನಾಡಿಗೂ ಎಷ್ಟೊಂದು ಸ್ಥಿತ್ಯಂತರಗಳಾಗಿರಬಹುದು. ಆ ಕುರಿತು ಇಲ್ಲಿ ಚರ್ಚಿಸಲಾಗಿದೆ.

೫.೧: ಜನಜೀವನ :

ಕುವೆಂಪು ಅವರು ತಮ್ಮ ಗದ್ಯ ಸಾಹಿತ್ಯದಲ್ಲಿ ಮಲೆನಾಡಿನ ಜನಜೀವನವನ್ನು ಕುರಿತು ಸಮಗ್ರ ನೋಟವನ್ನು ಚಿತ್ರಿಸಿದ್ದಾರೆ. ಅಲ್ಲಿನ ಅನೇಕ ಜಾತಿ, ಪಂಗಡ, ವರ್ಗ ವಿಶೇಷಗಳ ಜನರು, ಅವರ ಉದ್ಯೋಗ, ವೃತ್ತಿ, ಪ್ರವೃತ್ತಿ, ಸಂಪ್ರದಾಯ, ನಂಬಿಕೆ, ಬೇಟೆ, ಬಲಿ, ಹರಕೆ, ಉಡುಗೆ-ತೊಡುಗೆ, ಆಹಾರ, ಪ್ರತಿಯೊಂದು ಸೂಕ್ಷ್ಮ ಭಾವನೆಗಳನ್ನೂ ಒಳಗೊಂಡಂತೆ ಸಂಪೂರ್ಣ ಜೀವನ ಚಿತ್ರಣ ಅವರ ಸಾಹಿತ್ಯದ ಮುಖೇನ ತಿಳಿಯುತ್ತದೆ. ಈ ಕುರಿತು ಅವರ 'ಕಾನೂರು ಹೆಗ್ಗಡತಿ ' ಕಾದಂಬರಿಗೆ ಸಂಬಂಧಿಸಿದಂತೆ ಕೀರ್ತಿನಾಥ ಕುರ್ತಕೋಟಿಯವರು ತಮ್ಮ 'ಯುಗಧರ್ಮ ಮತ್ತು ಸಾಹಿತ್ಯ ವಿಕಾಸ ' ಎಂಬ ವಿಮರ್ಶಾ ಸಂಕಲನದಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ. ''ಸಮಗ್ರತೆಯೊಂದಿಗೆ ಜೀವನದ ಸಂಕೀರ್ಣತೆಯೂ ಇಲ್ಲಿ ಚೆನ್ನಾಗಿ ವ್ಯಕ್ತವಾಗಿದೆ. ಒಂದು ತಲೆಮಾರಿನ ಕೆಚ್ಚು, ಛಲ, ಜೀವನೋತ್ಸಾಹ, ಅಜ್ಞಾನ, ಬಡತನ ಇವೆಲ್ಲವುಗಳು ತಮ್ಮ ಸಂಕೀರ್ಣತೆಯೊಂದಿಗೆ, ಬಣ್ಣ ವಾಸನೆಗಳ ವಿವರಗಳೊಂದಿಗೆ ಓದುಗನ ಮನಸ್ಸನ್ನು ಮುತ್ತಿಬಿಡುತ್ತವೆ. ಇಲ್ಲಿಯ ವ್ಯಕ್ತಿಗಳನ್ನು ನಿಜ ಜೀವನದಲ್ಲಿ ಅಕಸ್ಮಾತಾಗಿ ಭೇಟಿಯಾದರೆ ಕಾನೂರು ಮುತ್ತಳ್ಳಿಗಳ ಕ್ಷೇಮ ಸಮಾಚಾರಗಳನ್ನು ಕೇಳಬೇಕೆಂದು ಮನಸ್ಸಾಗುತ್ತದೆ ''[೧] ಎಂದು ಹೇಳಿದ್ದಾರೆ. ಇದು ಕುವೆಂಪು ಅವರ ಸಮಗ್ರ ಸಾಹಿತ್ಯಕ್ಕೂ ಅನ್ವಯಿಸುವಂತಹದು.

ಮಲೆನಾಡಿನ ಜನರ ಬದುಕಿನ ಎಲ್ಲಾ ಮುಖಗಳನ್ನು ಆಗು-ಹೋಗುಗಳನ್ನು ಅದ್ಭುತವಾಗಿ ಗ್ರಹಿಸಿ, ಕಾಲದೇಶಗಳ ಹಿನ್ನೆಲೆಯಲ್ಲಿ ಚಿತ್ರಿಸಿರುವುದನ್ನು ಅವರ ಗದ್ಯ ಕೃತಿಗಳಿಂದ ತಿಳಿಯಬಹುದು. ಚಿಕ್ಕ ಪುಟ್ಟ ದೃಶ್ಯಗಳ ವರ್ಣನೆಯಲ್ಲಿ, ತೀರ ಸಾಮಾನ್ಯ

ಪಾತ್ರಗಳ ಸ್ವಭಾವ ನಿರೂಪಣೆಯಲ್ಲಿ, ಕಥನ ಕ್ರಮದಲ್ಲಿ, ಜೀವನ ಸಂಘರ್ಷದಲ್ಲ, ಸಂಕೀರ್ಣತೆಯಲ್ಲಿ ಆಧ್ಯಾತ್ಮಿಕ ದರ್ಶನದಲ್ಲಿ ಕುವೆಂಪು ಪ್ರತಿಭೆ ಮತ್ತೆ ಮತ್ತೆ ನಮ್ಮ ಗಮನಕ್ಕೆ ಬರುತ್ತದೆ. ಮಲೆನಾಡಿನ ಒಂದು ಕಾಲದ ಜನಾಂಗವನ್ನು, ಜೀವಂತ ಜೀವನ ವಿಧಾನದೊಂದಿಗೆ ಅವರ ಸಾಹಿತ್ಯದಿಂದ ಕಾಣಬಹುದು. ಇದೇ ಜನಾಂಗ ತನ್ನ ಮುಂದಿನ ತಲೆಮಾರಿನಲ್ಲಿ ಕೆಲವೇ ದಶಕಗಳ ಅಂತರದಲ್ಲಿ ಜೀವನ ವಿಧಾನದಲ್ಲಿ ಅನೇಕ ಬದಲಾವಣೆಗೊಳಗಾಗಿರಬಹುದು, ಕೆಲವೊಂದು ಜೀವನ ಕ್ರಮಗಳು ಹಾಗೆಯೇ ಉಳಿದುಕಕೊಂಡು ಬಂದಿರಬಹುದು. ಇಂತಹ ಬದಲಾವಣೆಗಳು ಒಂದು ರೀತಿಯಲ್ಲಿ ಸಂಸ್ಕೃತಿ ವಿಕಾಸದ ಹಂತವಾಗಿ ಉತ್ತಮ ಬೆಳವಣಿಗೆಗಳಾದರೆ ಇನ್ನು ಕೆಲವೊಂದು ಮಾರಕವಾಗಿ ಸಹ ಪರಿಣಮಿಸಿರಬಹುದು.

ಕುವೆಂಪು ಸಾಹಿತ್ಯದಲ್ಲಿ ಮಲೆನಾಡಿನ ಒಂದು ಕಾಲದ ಬದುಕು ತನ್ನ ಸಮಗ್ರತೆಯೊಂದಿಗೆ ಕಾಣಿಸಿಕೊಂಡಿದೆ. ಸಂಪರ್ಕ ಸಾಧನಗಳ ಅಲಭ್ಯತೆಯಿಂದಾಗಿ ಮತ್ತು ದಟ್ಟ ಕಾಡಿನ ನಡುವೆ ವಾಸಿಸಬೇಕಾದ ಕಾರಣ ಅಲ್ಲಿನ ಜನರು ಪರಂಪರಾಗತ ಆಚಾರ-ವಿಚಾರಗಳನ್ನು ಉಳಿಸಿಕೊಂಡು ಬಂದಿದ್ದರು. ಆದರೆ ಇಂದಿನ ಮಲೆನಾಡ ಜೀವನವನ್ನು ಅಂದಿಗೆ ಹೋಲಿಸಿಕೊಂಡು ನೋಡಿದರೆ ಆಶ್ಚರ್ಯವಾಗುವುದರಲ್ಲಿ ಸಂಶಯವಿಲ್ಲ. ಸಂಪರ್ಕ ಸಾಧನಗಳೇ ಇಲ್ಲದ, ಬೈಸಿಕಲ್ಲೇ ವಿಶೇಷವಾಗಿ ಕಂಡಂತಹ ಆ ದಿನಗಳಿಗೂ, ಈ ದಿನಗಳಿಗೂ ಎಷ್ಟೊಂದು ಅಂತರ ! ಇಂದು ಮಲೆನಾಡಿನ ಹೆಚ್ಚಿನ ಜನರ ಬಳಿ ಮೋಟಾರ್ ಬೈಕ್, ಕಾರ್, ಜೀಪ್‌ನಂತಹ ದುಬಾರಿ ವಾಹನಗಳು ಇರುವುದು ಸಾಮಾನ್ಯವಾಗಿದೆ. ರಸ್ತೆಗಳೇ ಇಲ್ಲದ ಹಳ್ಳಿಗಳಿಗೆ ಟಾರ್ ರಸ್ತೆಗಳು ಬಸ್‌ನಂತಹ ಸಾರ್ವಜನಿಕ ವಾಹನಗಳು ಪ್ರವೇಶಿಸಿವೆ. ಕುವೆಂಪುರವರು ಚಿತ್ರಿಸಿದಂತೆ ಊರಿಗೊಂದೇ ಮನೆಯ ಮಾದರಿಯಲ್ಲೇ ದೊಡ್ಡ ದೊಡ್ಡ ಬಂಗಲೆಗಳು ನಿರ್ಮಾಣವಾಗಿರುವುದರಿಂದ ಪ್ರತೀ ಮನೆಗೂ ಬಸ್ ಸಂಪರ್ಕ ಕೊಡಲು ಸಾಧ್ಯವಿಲ್ಲ. ಆದ್ದರಿಂದ ಈಗ ಮಲೆನಾಡಿನಲ್ಲಿ ತಮ್ಮ ವೈಯಕ್ತಿಕ ಕೆಲಸಗಳಿಗಾಗಿ ಸಾಮಾನ್ಯವಾಗಿ ಎಲ್ಲರೂ ಸ್ವಂತ ವಾಹನಗಳನ್ನು ಇಟ್ಟುಕೊಂಡಿರುತ್ತಾರೆ.

ಮನೆಗಳನ್ನು ಕುರಿತು ಹೇಳುವುದಾದರೆ ಅಂದು ಸಾಮಾನ್ಯವಾಗಿ ಸೋಗೆ, ಹುಲ್ಲಿನ ಮನೆಗಳು ಕಂಡು ಬರುತ್ತಿದ್ದವು. ಇಂತಹ ಮನೆಗಳು ಇಪ್ಪತ್ತೈದು-ಮೂವತ್ತು ವರ್ಷಗಳ

ಹಿಂದೆ ಅಲ್ಲೊಂದು ಇಲ್ಲೊಂದು ಎಂಬಂತೆ ವಿರಳವಾಗಿಯಾದರೂ ಕಾಣಸಿಗುತ್ತಿದ್ದವು. ಆದರೆ, ಇಂದು ಅಂತಹದ್ದನ್ನು ಕಾಣಲು ಸಾಧ್ಯವೇ ಇಲ್ಲ. ಹೆಂಚಿನ ಮನೆಗಳು ಹೆಚ್ಚಾಗಿ ಕಂಡುಬರುತ್ತಿದ್ದವು. ಇತ್ತೀಚೆಗೆ ಟಾರಸಿ ಮನೆಗಳನ್ನು ಕಟ್ಟಿಸುವವರೇ ಹೆಚ್ಚು. ಇದಕ್ಕೆ ಕಾರಣ ಕಾಡು ನಾಶವಾಗುತ್ತಿರುವುದು. ಆಧುನೀಕತೆಯ ಪ್ರಭಾವದಿಂದ ವ್ಯವಹಾರದ ಪೈಪೋಟಿಯಲ್ಲಿ ಅಗ್ಗದ ಬೆಲೆಯಲ್ಲಿ ಸಿಮೆಂಟ್‌ನಂತಹ ಆಧುನಿಕ ಸಾಮಗ್ರಿಗಳು ದೊರೆಯುತ್ತಿರುವುದು, ಹಾಗೆ ನಗರ ಜೀವನದ ಪ್ರಭಾವವೂ ಇಂತಹ ಬದಲಾವಣೆಗೆ ಕಾರಣವಾಗಿದೆ ಎನ್ನಬಹುದು. ವಿದ್ಯುತ್ ಸೇವೆ ಮಲೆನಾಡಿಗೆ ಬಂದ ನಂತರ ಜೀವನ ಕ್ರಮದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ನಮಗೆ ತಿಳಿದೇ ಇದೆ ಮಲೆನಾಡಿನಲ್ಲಿ ಕುವೆಂಪು ಚಿತ್ರಿಸಿದ ಜೀವನ ಚಿತ್ರಣದಲ್ಲೆಲ್ಲೂ ವಿದ್ಯುತ್ ಬಳಕೆಯ ಪ್ರಸ್ತಾಪ ಅಷ್ಟಾಗಿ ಕಂಡುಬಂದಿಲ್ಲ. ದೊಂದಿ, ಸೀಮೆಎಣ್ಣೆ ದೀಪ ಅಥವಾ ಲ್ಯಾಟೀನ್ ಬೆಳಕನ್ನು ಬಳಸುತ್ತಿದ್ದರು. ಈಗ ಒಂದು ಇಪ್ಪತ್ತು ವರ್ಷದ ಹಿಂದೆ ನನಗೆ ತಿಳಿದಂತೆ ವಿದ್ಯುತ್ ಮನೆ ಮನೆಗೆ ನೀಡಲಾಯಿತು. ಇಂದು ಮಲೆನಾಡಿನ ಕಡು ಬಡವರ ಮನೆಯಲ್ಲೂ ವಿದ್ಯುತ್ ದೀಪ, ಟಿ.ವಿ. ಇದ್ದೇ ಇರುತ್ತದೆ.

ಮಲೆನಾಡಿನಲ್ಲೂ ಇಂದು ನಗರಗಳಂತೆ ಯಾಂತ್ರಿಕ ಜೀವನವನ್ನೇ ಬದುಕುತ್ತಿದ್ದಾರೆ. ವಾಹನಗಳು, ಟಿವಿ, ಫೋನ್, ಮಿಕ್ಸಿ, ಮೊಬೈಲ್ ಇವು ಅಗತ್ಯ ಅಂಗಗಳಾಗಿ ಹೋಗಿವೆ. ಅದು ಎಷ್ಟರ ಮಟ್ಟಿಗೆ ಎಂದರೆ ಈ ಕುರಿತು ನಾನು ಬರೆಯುವುದೇ ತುಂಬ ನೀರಸ ಎನಿಸುವಷ್ಟರ ಮಟ್ಟಿಗೆ ! ಹಿಂದೆ ಅಡುಗೆಗೆ ಕಾರವನ್ನು ಕಲ್ಲಿಗೆ ಹಾಕಿ ರುಬ್ಬಬೇಕಿತ್ತು. ಅದೇ ಈಗ ಮಿಕ್ಸಿ, ಗ್ರೈಂಡರ್‌ಗಳು. ಪತ್ರಿಕೆಗಳೇ ಇಲ್ಲದ ಸ್ಥಿತಿಯಲ್ಲಿದ್ದ ಮಲೆನಾಡಿನಲ್ಲಿ ಇಂದು ಟಿವಿ, ಕೇಬಲ್ ನೆಟ್‌ವರ್ಕ್‌ಗಳು ಹಾಗೆಯೇ ಈಗಿನ ಡಿಜಿಟಲ್ ಮಾಧ್ಯಮಗಳಾದ ಕಂಪ್ಯೂಟರ್, ಮೊಬೈಲ್‌ಗಳು ಮಲೆನಾಡಿಗರ ಮೇಲೆ ಸಾಕಷ್ಟು ಪ್ರಭಾವ ಬೀರಿವೆ. ಇಂದು ಕೂಲಿ ಮಾಡುವವನಾದರೂ ಆತನ ಬಳಿ ಮೊಬೈಲ್ ಇದ್ದೇ ಇರುತ್ತದೆ. ಉಡುಗೆ, ತೊಡುಗೆಗೆ ಸಂಬಂಧಿಸಿದಂತೆ ಹಿಂದೆ ಗೊಬ್ಬೆ ಹಾಕಿ ಸೀರೆ ಉಡುತ್ತಿದ್ದರು, ಲಂಗ, ದಾವಣಿ ಹಾಕುತ್ತಿದ್ದರು. ಅದು ಈಗ ಎಷ್ಟೋ ಜನರಿಗೆ ತಿಳಿದೇ ಇಲ್ಲ ಎನ್ನಬಹುದು. ಎಲ್ಲೋ ಹಳೆಯ ಫೋಟೋಗಳಲ್ಲೇನಾದರೂ ನೋಡಬಹುದು. ಅದೇ ಇಂದು ಮಲೆನಾಡಿನಲ್ಲಿ ಬೆಂಗಳೂರು, ಮಂಗಳೂರಿನಂತಹ ಮುಂದುವರಿದ ನಗರದಲ್ಲಾದ ಹೊಸ ಹೊಸ ಫ್ಯಾಶನ್

ಉಡುಗೆಗಳು ಅಷ್ಟೇ ವೇಗದಲ್ಲಿ ಇಲ್ಲಿನವರ ಮೇಲೂ ಪ್ರಭಾವ ಬೀರುತ್ತವೆ. ಇಂತಹ ಅನೇಕ ಆಧುನಿಕ ಪರಿಣಾಮಗಳನ್ನು ಇಂದಿನ ಜನಜೀವನದ ನಿತ್ಯದ ವೈಯಕ್ತಿಕ ಬದುಕಿನಲ್ಲಿ ಕಾಣಬಹುದು.

ಸಾಮಾಜಿಕ ವ್ಯವಸ್ಥೆಯಲ್ಲೂ ಮಲೆನಾಡು ಆಧುನೀಕರಣದತ್ತ ಮುಖ ಮಾಡಿದೆ. ಕುವೆಂಪು ಕಥನಗಳಲ್ಲಿ ಸಾಮಾಜಿಕ ಜೀವನದ ವಿವರ, ವರ್ಣನೆಗಳನ್ನು ಅಂದಿನ ಕಾಲದ ಸಮಾಜ ಜೀವನದ ಹಿನ್ನೆಲೆಯಿಂದ ತಿಳಿದಿದ್ದೇವೆ. ಸಾಮಾಜಿಕ ವ್ಯವಸ್ಥೆ ಎಂದಾಗ ತಕ್ಷಣ ನೆನಪಿಗೆ ಬರುವುದು ಜಾತಿ ಪದ್ಧತಿ. ಬ್ರಾಹ್ಮಣ, ಒಕ್ಕಲಿಗ, ಹಳೆಪೈಕ, ಕಂಬಾರ, ಬೇಲ, ಹಲಸ, ಬಿಲ್ಲವ ಇತ್ಯಾದಿ ಅನೇಕ ಜಾತಿ-ಉಪಜಾತಿ ಜನರ ಕುರಿತು ಹಾಗೆ ಕ್ರಿಶ್ಚಿಯನ್, ಇಸ್ಲಾಂ ಮತದ ಅನುಯಾಯಿಗಳನ್ನು ಕುರಿತು ಕುವೆಂಪು ಕೃತಿಗಳಲ್ಲಿ ಪ್ರಸ್ತಾಪವಿರುವುದನ್ನು ಓದಿ ತಿಳಿದಿದ್ದೇವೆ. ಭಿನ್ನ ಭಿನ್ನ ಸಾಮಾಜಿಕ ಸ್ತರಗಳು ಸಹಜವಾಗಿ ತಲೆಮಾರುಗಳಿಂದ ಬಂದ ಜೀವನ ವಿಧಾನ, ನಂಬಿಕೆ, ಆಚರಣೆಗಳು, ಸಾಮಾಜಿಕ ಸ್ಥಾನಮಾನ, ವರ್ತನೆ, ವ್ಯವಹಾರಗಳಿಂದ ವಿಶಿಷ್ಟತೆಯನ್ನು ಪ್ರಕಟಿಸುತ್ತವೆ. 'ಜಾತೀಯತೆ ' ಎಂಬುದನ್ನು ಜನರು ಪ್ರಜ್ಞಾಪೂರ್ವಕ ಆಚರಿಸುತ್ತಿದ್ದರು. ಈ ಕಾರಣಕ್ಕೆ ಬ್ರಾಹ್ಮಣರು ಜನವರ್ಗದ ಜೊತೆಗೆ ಬದುಕುತ್ತಿದ್ದರೂ, ಮಡಿ-ಮೈಲಿಗೆಗಳಿಂದಾಗಿ ಸಾಮಾನ್ಯ ಜನರಿಂದ ದೂರಕ್ಕೆ ಉಳಿಯುತ್ತಿದ್ದರು. ದೇವಾಲಯಗಳಲ್ಲಿ ಜಗುಲಿಯ ಮೇಲೆ ಬ್ರಾಹ್ಮಣರು, ಕೆಳ ಜಗುಲಿಯಲ್ಲಿ ಇತರರು ಪೂಜೆಗೆ ಪ್ರತ್ಯೇಕ ಕೂತುಕೊಳ್ಳುತ್ತಿದ್ದರು. ಬ್ರಾಹ್ಮಣರಿಗೆ ಸಂತರ್ಪಣೆ ಆದ ನಂತರ ಉಳಿದುದನ್ನು ಅನ್ಯರಿಗೆ ಊಟಕ್ಕೆ ಹಾಕುತ್ತಿದ್ದರು. ಇಲ್ಲೆಲ್ಲಾ ಬ್ರಾಹ್ಮಣರು ಶ್ರೇಷ್ಠರಾಗಿ ವರ್ತಿಸುವುದನ್ನು ಕಾಣಬಹುದು. ಪ್ರಸಾದ ಹೂವು, ಹಣ್ಣು ಕುಂಕುಮ ಕೊಡುವಾಗ ಕೈಗೆ ತಾಗದಂತೆ ಮೇಲಿನಿಂದ ಎಸೆಯುತ್ತಿದ್ದರು. ಶೂದ್ರರ ಮನೆಗೆ ಅನಿವಾರ್ಯವಾಗಿ ಹೋಗಬೇಕಾದಾಗ ಅಲ್ಲಿ ಹಣ್ಣು, ನೀರು ಮಾತ್ರ ಸೇವಿಸುತ್ತಿದ್ದರು. ಶೂದ್ರರ ಮನೆಯ ಒಳಗೂ ಬರುವಂತಿರಲಿಲ್ಲ. ಬ್ರಾಹ್ಮಣರ ನಂತರದ ಸಾಮಾಜಿಕ ಸ್ಥಾನಮಾನ ಒಕ್ಕಲಿಗರಿಗಿರುತ್ತಿತ್ತು. ಕುವೆಂಪುರವರು ಚಿತ್ರಿಸಿದ ಜೀವನ ಬಹುಪಾಲು ಇವರದೇ ಆಗಿದೆ. ಹಳೆಪೈಕದವರು ನಂತರದ ಸ್ಥಾನದಲ್ಲಿರುತ್ತಿದ್ದರು. ಹಳೆಪೈಕದವರಿಗೆ ಒಕ್ಕಲಿಗರೆಂದರೆ 'ಬ್ರಾಹ್ಮಣ'ರ ಹಾಗೆ. ಹಾಗಾಗಿ ಸಹಜವಾಗಿ ಬ್ರಾಹ್ಮಣರು ಒಕ್ಕಲಿಗರನ್ನು ಕೀಳಾಗಿ ಭಾವಿಸುವಂತೆ, ಒಕ್ಕಲಿಗರು ಇತರರನ್ನು ಹೀನಾಯವಾಗಿ ಕಾಣುತ್ತಿದ್ದರು. ಇದರಿಂದ

ಕೆಳವರ್ಗದ ಜನರು ತಮಗೆ ಮೇಲೆಂದು ತೋರುತ್ತಿದ್ದವರನ್ನು ಅನುಕರಿಸುವುದು ಸಾರ್ವತ್ರಿಕ ಎಂದು ತಿಳಿಯುತ್ತದೆ. ತಾವೂ ಮೇಲ್ವರ್ಗಕ್ಕೆ ಏರಬೇಕೆಂಬ ಅವರ ಪ್ರಯತ್ನಗಳು ಇದರಿಂದ ಆರಂಭಗೊಳ್ಳುತ್ತವೆ. ಪರಿಣಾಮವಾಗಿ ಅವರು ಕ್ರಮೇಣ ತಮ್ಮ ಪರಂಪರಾಗತ ಆಚರಣೆ, ಪದ್ಧತಿಗಳಿಂದ ಬಿಡಿಸಿಕೊಂಡು ಮೇಲು ವರ್ಗದವರ ಆಚರಣೆ ಪದ್ಧತಿಯನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಈ ಬದಲಾವಣೆ ಸಮಾಜದ ಒಳಗೇ ತುಂಬಾ ಸೂಕ್ಷ್ಮವಾಗಿ ನಡೆದಿರುತ್ತದೆ. ಇದಕ್ಕೆ ಉತ್ತಮ ಉದಾಹರಣೆಯಾಗಿ ಈ ಎರಡು ಮೂರು ತಿಂಗಳ ಹಿಂದೆಯಷ್ಟೇ ನಮ್ಮ ಗ್ರಾಮದಲ್ಲೇ ನಡೆದ ಒಂದು ಘಟನೆಯನ್ನು ತಿಳಿಯಬಹುದು. ಸಾಮಾನ್ಯವಾಗಿ ಕೆಳಜಾತಿಯವರು ದೇವಾಲಯ, ಪೂಜಾ ಕಾರ್ಯಗಳಿಂದ ಸಾಧ್ಯವಾದಷ್ಟು ದೂರದಲ್ಲಿರಬೇಕಾಗಿತ್ತು. ಆದರೆ ಇಲ್ಲಿ ಕೆಳಜಾತಿಯವರೇ ನಾಗರ ಪ್ರತಿಷ್ಠಾಪನೆ ಮಾಡಿಸಿ, ದೇವಾಲಯ ನಿರ್ಮಿಸಿ ಪೂಜಾ ಕಾರ್ಯ ನೆರವೇರಿಸಿದರು. ಪುರೋಹಿತರು ಇಂದು ಮಡಿ-ಮೈಲಿಗೆ ಬಿಟ್ಟು ಆರ್ಥಿಕ ಉದ್ದೇಶದಿಂದ ಕೆಳಜಾತಿಯವರ ಕೇರಿಗೂ ಬಂದು ಪೂಜಾವಿಧಿಗಳನ್ನು ನೆರವೇರಿಸಿಕೊಟ್ಟರು. ನಾಗ ಪ್ರತಿಷ್ಠಾಪನೆ ಮಲೆನಾಡಿನಲ್ಲಿ ಇತ್ತೀಚೆಗೆ ಹೆಚ್ಚು ಪ್ರಚಲಿತದಲ್ಲಿರುವ ಧಾರ್ಮಿಕ ನಂಬಿಕೆಯಾಗಿದೆ. ನಾಗದೋಷ ಪರಿಹಾರಕ್ಕಾಗಿ ಮೇಲ್ವರ್ಗದವರು, ಮಧ್ಯಮ ವರ್ಗದವರು, ಕೆಳವರ್ಗದವರು ಎಲ್ಲರೂ ಈ ನಾಗರ ಪ್ರತಿಷ್ಠಾಪನೆ ಮಾಡಿಸುತ್ತಿದ್ದಾರೆ. ಮಡಿ-ಮೈಲಿಗೆಗಳು ಸ್ವಲ್ಪ ಮಟ್ಟಿಗೆ ದೂರವಾಗುತ್ತಿವೆ ಎಂದುಕೊಳ್ಳುವಷ್ಟರಲ್ಲಿ ಹೊಸದೊಂದು ಧಾರ್ಮಿಕ ನಂಬಿಕೆ ಹುಟ್ಟು ಪಡೆದಿರುತ್ತದೆ. ಇಲ್ಲಿ ಕೆಳಜಾತಿಯವರಿಗೆ ನಾವು ದೇವರನ್ನು ಹತ್ತಿರದಲ್ಲೇ ಕಾಣಬಹುದು, ಪೂಜಿಸಬಹುದು ಎಂಬ ಭಾವನೆಯಿಂದ ಮೇಲ್ಜಾತಿಯವರ ನಡುವಿನ ಅಂತರವನ್ನು ಕಡಿಮೆ ಮಾಡಿಕೊಂಡ ಅನುಭವ ಉಂಟಾದರೆ, ಮೇಲ್ಜಾತಿಯವರಲ್ಲಿ ಧಾರ್ಮಿಕ ನಂಬಿಕೆಗಳಿಗಿಂತ ಆರ್ಥಿಕವಾಗಿ ಎಲ್ಲಿಂದ ಹಣ ಸಿಗುವುದೋ ಅದೇ ಮುಖ್ಯವಾಗಿ, ಜಾತಿ, ಮಡಿ-ಮೈಲಿಗೆಗಳು ಅವರಲ್ಲಿ ಗೌಣವೆನಿಸುತ್ತವೆ. ಕೆಳಜಾತಿಯವರಿಗೆ ದೇವಾಲಯದೊಳಗೆ ಪ್ರವೇಶವೇ ಇಲ್ಲದ ಸ್ಥಿತಿ ಇಂದು ಬದಲಾಗಿ ಅವರೇ ಸತ್ಯನಾರಾಯಣ ಪೂಜೆಯಂತಹ ಧಾರ್ಮಿಕ ಆಚರಣೆಗಳನ್ನು ತಮ್ಮ ಮನೆಯಲ್ಲೇ ಮಾಡಿಸುತ್ತಿದ್ದಾರೆ. ಕುವೆಂಪುರವರು ಇಂತಹ ಆಚರಣೆಗಳು ಬದಲಾಗಿ ಕೆಳಜಾತಿಯವರಲ್ಲಿ ವೈಚಾರಿಕತೆ ಮೂಡಿಸಲು ಪ್ರಯತ್ನಿಸಿದರೆ, ಇಂದು ಮಲೆನಾಡಿನಲ್ಲಿ ಈ ಆಚರಣೆಗಳು ಜಾತಿಯ ಎಲ್ಲೆಯನ್ನು ಮೀರಿ ಆವರಿಸಿಕೊಳ್ಳುತ್ತಿವೆ. ಸಮಾಜ ಬದಲಾಗುತ್ತಿದೆ ನಿಜ, ಆದರೆ ಅದು ಯಾವ ರೀತಿಯಲ್ಲಿ ಎಂಬುದು ಇಲ್ಲಿ ಮುಖ್ಯವಾಗಿ

ಗಮನಿಸಬೇಕಾಗುತ್ತದೆ.

ಜನರು ಬಳಸುವ ಭಾಷೆಯಲ್ಲಿಯೂ ಜಾತಿಯ ಅಂತರಗಳನ್ನು ಗಮನಿಸಬಹುದಾಗಿದೆ. ಭಾಷೆ ಕೂಡ ಜಾತೀಯತೆಯನ್ನು ಸೂಚಿಸಬಲ್ಲ ಸೂಕ್ಷ್ಮಗಳನ್ನು ಒಳಗೊಂಡಿರುತ್ತದೆ. ಮೇಲ್ಜಾತಿಯವರು ಕೆಳಜಾತಿಯವರನ್ನು ಕರೆಯುವಲ್ಲಿ ಸಹ ತಮ್ಮ ಮೇಲ್ಮೆಯನ್ನು ಉಳಿಸಿಕೊಳ್ಳುತ್ತಿದ್ದರು. 'ಮಲೆನಾಡಿನ ಚಿತ್ರಗಳು ' ಕೃತಿಯ 'ಮಲೆನಾಡಿನ ಗೋಪಾಲಕರು' ಪ್ರಬಂಧದಲ್ಲಿ ದನ ಕಾಯುವವನ ನಿಜವಾದ ಹೆಸರು ಹಿರಿಯಣ್ಣ ಎಂದು, ಆದರೆ ಮೇಲು ಜಾತಿಯವರು ಕೀಳು ಜಾತಿಯವರನ್ನು 'ಹಿರಿಯಣ್ಣ ' ಎಂದು ಕರೆಯಲು ಸಂಕೋಚಪಟ್ಟು 'ಹಿರಗ ' ಎಂದು ಕರೆಯುತ್ತಾರೆ ಎಂಬುದನ್ನು ಕುವೆಂಪು ಅವರೇ ಪ್ರಸ್ತಾಪಿಸಿದ್ದಾರೆ. ಕೆಳಜಾತಿಯವರ ಹೆಸರುಗಳು ಅಂದು ಜಾತಿ ಸೂಚಕ ಎಂಬಂತೆ ತೋರುತ್ತಿದ್ದವು. ಐತ, ಪೀಂಚಲು, ಗುತ್ತಿ, ಮಂಜ ಹೀಗೆ ಇರುತ್ತಿದ್ದವು. ಆದರೆ ಆಧುನಿಕತೆ ಪ್ರವೇಶಿಸಿದಂತೆ ಇಂದು ಎಷ್ಟೇ ಕೆಳಜಾತಿಯವರಾದರೂ ತಮತಮಗೆ ಇಷ್ಟವಾಗುವಂತಹ ಹೆಸರನ್ನಿಟ್ಟುಕೊಳ್ಳುವ ಸ್ವಾತಂತ್ರ್ಯ ಪಡೆದಿದ್ದಾರೆ.

ಜಾತಿ ಪದ್ಧತಿ ಎಷ್ಟು ಪ್ರಬಲವಾಗಿತ್ತೆಂದರೆ ಅದು ಅಲ್ಲಿಯ ಚಿಕ್ಕ ಮಕ್ಕಳಲ್ಲಿಯೂ ಆವರಿಸಿಕೊಂಡಿತ್ತು. 'ಕತೆಗಾರ ಮಂಜಣ್ಣ 'ದಲ್ಲಿ ಸಿದ್ದ , ಪುಟ್ಟ ಬಂದು ''ಒಂದೀಟು ಜಾಗ ಬಿಡಿ, ಅಯ್ಯ ! ಮಳೇಲಿ ನೆಂದು ಬಂದೀವಿ, ಒಂದೀಟು ಚಳಿ ಕಾಸ್ಕೊಂಡು ಹೋತೀವಿ''[೨] ಎಂದಾಗ ಮಕ್ಕಳೆಲ್ಲಾ ''ಜಾಗ ಇಲ್ಲ, ಹೋಗ್ರೋ ! ನಮಗೂ ಚಳಿ ''[೩] ಎನ್ನುತ್ತಾರೆ. ಇಲ್ಲಿ ವಯಸ್ಸಿನಿಂದ ಹಿರಿಯರಾದರೂ ಮಕ್ಕಳನ್ನೂ 'ಅಯ್ಯಾ, 'ಚಿಕ್ಕಗೌಡರು ' 'ಚಿಕ್ಕಮ್ಮನೋರು' ಹೀಗೆ ಕರೆಯುತ್ತಿದ್ದರು. ಇದು ಇಂದಿಗೂ ಅಕ್ಷರಜ್ಞಾನ ಇಲ್ಲದ ಕೆಳಜಾತಿಯವರಲ್ಲಿ ಹಾಗೇ ಉಳಿದುಕೊಂಡು ಬಂದಿದೆ. ಆದರೆ ಶಿಕ್ಷಣ ಪಡೆದ ಕೆಳಜಾತಿಯವರು ಇಂತಹ ಕೆಲವೊಂದು ಜೀವನ ಕ್ರಮವನ್ನು ಬದಲಾಯಿಸಿಕೊಂಡಿದ್ದಾರೆ.

ಮಲೆನಾಡಿನಲ್ಲಿ ಹಿಂದೆ ಮತ್ತು ಈಗಲೂ ಸ್ವಲ್ಪ ಮಟ್ಟಿಗೆ ಆಯಾ ಜಾತಿಗಳ ಜನರು ವಾಸಿಸುತ್ತಿದ್ದ ರೀತಿಗಳಿಗನುಗುಣವಾಗಿ ಅಗ್ರಹಾರ, ಮನೆ, ಗುಡಿಸಲು, ಬಿಡಾರ, ಕೇರಿಗಳೆಂದು ಅವರ ನಿವಾಸ ಸ್ಥಾನಗಳನ್ನು ನಿರ್ದೇಶಿಸಲಾಗುತ್ತಿತ್ತು. ಇವು ಜನರಲ್ಲಿ ಹೆಚ್ಚು

ಹೆಚ್ಚು ಬಳಕೆಯಲ್ಲಿದ್ದವು. ಇಂದು ಅಂತಹ ವ್ಯತ್ಯಾಸವೇನೂ ಕಾಣುವುದಿಲ್ಲ. ಬ್ರಾಹ್ಮಣರು, ಒಕ್ಕಲಿಗರು ಸ್ವಲ್ಪ ದೊಡ್ಡದಾದ ಮನೆಗಳಲ್ಲಿ ವಾಸವಾಗಿದ್ದರೆ ಕೂಲಿಯಾಳುಗಳು ಹೊಲೆಯರು ಚಿಕ್ಕದಾದ ಮನೆಗಳಲ್ಲಿರಬಹುದು. ಆದರೆ ಕೆಲವು ಹಳ್ಳಿಗಳಲ್ಲಿ ಇಂದಿಗೂ ಆಯಾ ಜಾತಿಯವರೇ ಒಂದೊಂದು ನಿರ್ದಿಷ್ಟ ಪ್ರದೇಶದಲ್ಲಿ ಗುಂಪಾಗಿ ಜೀವಿಸುತ್ತಿದ್ದಾರೆ. ಅಲ್ಲದೇ ಇಂದು ಗುಡಿಸಲು, ಬಿಡಾರ ಇವೆಲ್ಲ ಕಡಿಮೆಯಾಗಿ ಸರ್ಕಾರವೇ ಉಚಿತ ವಸತಿ, ನೀರು, ವಿದ್ಯುತ್ ಸೌಲಭ್ಯ ಒದಗಿಸಿರುವುದರಿಂದ ಹಿಂದಿನಂತೆ ಕಡುಕಷ್ಟದ ಬಾಳು ಬದುಕುತ್ತಿಲ್ಲ. ಅವರ ಜೀವನ ಕ್ರಮದಲ್ಲೂ ಸಾಕಷ್ಟು ಸುಧಾರಣೆಯಾಗಿರುವುದು ಕಂಡುಬರುತ್ತಿದೆ.

ಜಾತಿ-ಜಾತಿಗಳ ನಡುವಿನ ಕಟ್ಟುಪಾಡುಗಳನ್ನೆಲ್ಲಾ ಕೆಳಜಾತಿಯವರು, ಮೇಲ್ಜಾತಿಯವರು ಕಟ್ಟುನಿಟ್ಟಾಗಿ ಅಂದು ಆಚರಿಸುತ್ತಿದ್ದರು. ಹೊಲೆಯರಿಗೆ ಒಕ್ಕಲಿಗರ ಹತ್ತಿರ ಕೆಲಸವಿದ್ದರೆ ಅಂಗಳದವರೆಗೆ ಹೋಗಿ ನಿಂತು, ಕೂಗಿ ಕರೆಯಬಹುದಾಗಿತ್ತು. ಆದರೆ ಇಂದು ಒಕ್ಕಲಿಗರ ಮನೆಯ ಜಗುಲಿವರೆಗೆ ಬರುತ್ತಾರೆ. ಹೊಸ್ತಿಲನ್ನು ದಾಟಿ ಒಳಗೆ ಪ್ರವೇಶಿಸುವಂತಿರಲಿಲ್ಲ. ಈ ನಿಯಮ ಇಂದಿಗೂ ಸ್ವಲ್ಪ ಮಟ್ಟಿಗಿದೆ. ಮೇಲ್ಜಾತಿಯವರೇ ಕರೆದರೂ ಕೆಳಜಾತಿಯವರು ಒಳಗೆ ಪ್ರವೇಶಿಸಲು ಒಪ್ಪುವುದಿಲ್ಲ. ಅದೇ ರೀತಿ ಒಕ್ಕಲಿಗರು ತಮ್ಮ ಕೆಲಸಕ್ಕಾಗಿ ಹೊಲೆಯ ಕೇರಿಯ ಅಂಚಿನವರೆಗೂ ಹೋಗಬಹುದಿತ್ತು. ಕೆಲಸ ಕಾರ್ಯಗಳಿಗಾಗಿ ಕೂಲಿನಾಲಿಗಾಗಿ ಹೊಲೆಯರನ್ನು ಕಾಣಲು ಬರುತ್ತಿದ್ದ ಒಕ್ಕಲಿಗರು, ಹಳಪೈಕದವರು ಆ ಕೇರಿಯ ಹೊರಗಿನ ಗೊತ್ತುಪಡಿಸಲಾದ ಸ್ಥಳದಲ್ಲಿ ನಿಂತು ಕೂಗಬೇಕಾಗಿತ್ತು. ಆದರೆ ಇಂತಹ ಪದ್ಧತಿಗಳು ಇಂದು ಅಷ್ಟಾಗಿ ಕಂಡುಬರುವುದಿಲ್ಲ. ಕೆಲವೊಮ್ಮೆ ಕೆಳಜಾತಿಯವರ ಮನೆಯ ಕಾರ್ಯಕ್ರಮಗಳಿಗೆ ಹೋಗಿ ಊಟ ಮಾಡಿ ಬಂದಂತಹ ನಿದರ್ಶನಗಳೂ ಇಂದು ಕಂಡುಬರುತ್ತವೆ.

ಕೆಳಜಾತಿಯವರ ಕೇರಿಗೆ ಹೋಗುವುದು ತಮ್ಮ ಅಂತಸ್ತಿಗೆ ಕುಂದು ಎಂದು ಮೇಲ್ಜಾತಿಯವರು ಭಾವಿಸಿದರೆ, ಮೇಲ್ಜಾತಿಯವರು ತಮ್ಮ ಕೇರಿ ನುಗ್ಗಿದರೆ ಅನಾಹುತ ವಾಗುತ್ತದೆಂದೂ ಕೆಳಜಾತಿಯವರು ಭಾವಿಸುತ್ತಿದ್ದರು. ಇದಕ್ಕೆ ನಿದರ್ಶನಗಳು ಕುವೆಂಪು ಕಾದಂಬರಿಗಳಲ್ಲಿ ಕಂಡುಬರುತ್ತವೆ. ಹಾಗೆಯೇ ಅಂದು ಕೆಳಜಾತಿಯವರಲ್ಲಿ ಕಂಡುಬರುತ್ತಿದ್ದ

ಮಾನವೀಯ ಮೌಲ್ಯಗಳು ಇಂದು ಕಂಡುಬರುತ್ತಿಲ್ಲ. ಇಂದಿನವರಲ್ಲಿ ಸ್ವಾರ್ಥ, ಹಣಗಳಿಕೆ, ದ್ರೋಹ, ಮೋಸದಂತಹ ಕೆಟ್ಟ ಗುಣಗಳು ಹೆಚ್ಚು ಕಂಡುಬರುತ್ತಿವೆ. 'ಮಲೆನಾಡಿನ ಚಿತ್ರಗಳಲ್ಲಿ ' ಬರುವ ಅಣ್ಣಪ್ಪನಂತಹ ಒಕ್ಕಲುಗಳು ಇಂದು ಬಹಳ ಅಪರೂಪ ಎನ್ನಬಹುದು. ಸಾಯುವ ಸ್ಥಿತಿಯಲ್ಲಿದ್ದರೂ ತಾನು ಮಾಡಿದ ಸಾಲ ತೀರಿಸಬೇಕು, ಯಜಮಾನರಿಗೆ ಗೌರವ ಕೊಡಬೇಕು ಎಂಬ ಮನೋಭಾವ ಇಂದಿನವರಲ್ಲಿ ತುಂಬಾ ವಿರಳ. ಇಂದೂ ಸಹ ಹಿಂದಿನಂತೆ ಮದುವೆ ಮುಂಜಿಗಳಿಗಾಗಿ ಸಾಲ ಪಡೆಯುತ್ತಾರೆ. ಆದರೆ ಅದನ್ನು ತೀರಿಸಬೇಕೆಂಬ ಮನೋಭಾವ ಇಲ್ಲದಾಗಿದೆ. ಇಂದು ಮಲೆನಾಡಿನಲ್ಲಿ ಒಕ್ಕಲುಗಳಾಗಿ ಇರುವವರೇ ಕಡಿಮೆಯಾಗಿದ್ದಾರೆ. ಎಲ್ಲರೂ ಹೆಚ್ಚಾಗಿ ನಗರ ಪ್ರದೇಶಗಳ ಕಡೆಗೆ ಆಕರ್ಷಿತರಾಗುತ್ತಿದ್ದಾರೆ.

ಈ ಎಲ್ಲಾ ವಿಶ್ಲೇಷಣೆಯಿಂದ ಜಾತಿಪದ್ಧತಿ ಮಲೆನಾಡಿನ ಜನರಲ್ಲಿ ಪರಂಪರೆಯಿಂದ ಬಂದಿದ್ದು, ಅಷ್ಟೇ ಬಲಿಷ್ಠವಾಗಿ ಬೇರೂರಿರುವಂತಹದ್ದು ಎಂಬುದು ಕಂಡುಬರುತ್ತದೆ. ಹಾಗೆಯೇ ಜಾತೀಯತೆಯಾಗಲೀ, ಅಸ್ಪೃಶ್ಯತೆಯಾಗಲೀ ಇವು ಏಕಪಕ್ಷೀಯವಾಗಿರದೆ ಸಮಾಜದಲ್ಲಿ ದ್ವಿಮುಖ ಚಲನೆಯನ್ನು ಪಡೆದಿತ್ತು. ಜಾತೀಯತೆಯ ಆಚರಣೆ ಘೋರವೆಂಬುದಾಗಲೀ, ಮಾನವೀಯತೆಗೆ ಬಗೆಯುವ ಅಪಚಾರವೆಂಬುದಾಗಲೀ ಭಾವಿಸುವ ಒಂದು ಭಾವನೆಯನ್ನೂ ಅಲ್ಲಿ ಕಾಣಲಾರೆವು. ಅದು ತಲೆಮಾರುಗಳಿಂದ ಬಂದಿದ್ದೆಂದೂ, ಅದರ ಕಟ್ಟಳೆಗಳಿಗೆ ತಮ್ಮನ್ನು ಒಪ್ಪಿಸಿಕೊಂಡು ಜನರು ಬದುಕುವುದನ್ನು ಮಲೆನಾಡಿನಲ್ಲಿ ಕಾಣಬಹುದಾಗಿತ್ತು. ಮತಾಂತರದಂತಹ ಕಲ್ಪನೆಯನ್ನು ಅಂದು ಜನರು ವಿರೋಧಿಸುತ್ತಿದ್ದುದನ್ನು ಕುವೆಂಪು ಕೃತಿಗಳ ಮೂಲಕ ತಿಳಿದಿದ್ದೇವೆ. ಇಂದಿಗೂ ಕೆಲವರಲ್ಲಿ ಅದೇ ಭಾವನೆ ಮುಂದುವರೆದಿದೆ. ಆದರೆ ಮಲೆನಾಡಿನಲ್ಲಿ ಇತ್ತೀಚೆಗೆ 'ಲವ್ ಜಿಹಾದ್ ' ಎಂಬ ಅಂತರ್ಜಾತೀಯ ವಿವಾಹಗಳು ಹೆಚ್ಚು ಕಂಡುಬರುತ್ತಿವೆ.

'ಮತಾಂತರ 'ವನ್ನು ಕುರಿತ ಹಾಗೆ ಕುವೆಂಪುರವರ ಕಾದಂಬರಿಗಳಲ್ಲಿ ನಾವು ಸಾಕಷ್ಟು ವಿವರಗಳನ್ನು ಓದಿ ತಿಳಿದಿದ್ದೇವೆ. ಅದು ಪ್ರಾರಂಭದ ಹಂತವಾಗಿತ್ತು. ಅದೇ ಇಂದು ಮಲೆನಾಡಿನಲ್ಲಿ ಮತಾಂತರ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ತಿಳಿಯುವುದು ಇಲ್ಲಿ ಮುಖ್ಯವಾಗುತ್ತದೆ. ಈ ಕುರಿತು ಲೇಖಕ ಸರ್ಜಾಶಂಕರ್ ಹರಳೀಮಠ ಇವರು ತಮ್ಮ 'ಬೆಚ್ಚಿ ಬೀಳಿಸಿದ ಬೆಂಗಳೂರು ' ಕೃತಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡುತ್ತಾರೆ.

''ಮತಾಂತರ ಆಗುವ ಮನುಷ್ಯನ ಹಿಂದೆ ಆತ ತನ್ನ ಧರ್ಮದಲ್ಲಿ ಅನುಭವಿಸುವ ಅವಮಾನ, ನಿಂದನೆ, ಅಸಮಾನತೆ ತುಂಬಾ ಮುಖ್ಯವಾಗಿ ಕೆಲಸ ಮಾಡುತ್ತವೆ. ಹಿಂದೂ ಧರ್ಮದಲ್ಲಿರುವ ಸಾವಿರಾರು ಜಾತಿಗಳು, ಆ ಜಾತಿಗಳ ನಡುವಿನ ಕಲಹಗಳು ದಿನನಿತ್ಯದ ಸುದ್ದಿಗಳು, ನಾವು ದಲಿತರೊಂದಿಗೆ ಹೇಗೆ ಜೀವನ ನಡೆಸುತ್ತಿದ್ದೇವೆ ? ಹರಿಜನ ಕೇರಿಗೆ ಸರ್ಕಾರದಿಂದ ಬರುವ ತೆಂಗಿನ ಸಸಿಗಳೂ, ಹೆಂಚುಗಳೂ ಇತ್ಯಾದಿ ಸವಲತ್ತುಗಳು ಅರ್ಧ ಬೆಲೆಗೆ ಊರ ಮುಖಂಡರ ಮನೆಗೆ ಸೇರುತ್ತವೆ. ಮಸೀದಿಗಳಿಗೆ, ಚರ್ಚುಗಳಿಗೆ ನಿರಾಳವಾಗಿ ಹೋಗಬಹುದಾದ ಜನರು ಹರಿಜನರ ಮನೆಯ ಹೊಸ್ತಿಲು ತುಳಿಯುತ್ತಾರೆಯೇ ? ಆದರೆ, ಹಿಂದೂ ಧರ್ಮದ ರಕ್ಷಣೆಯ ವಿಚಾರ ಬಂದಾಗ ನಾವು ಇದನ್ನೆಲ್ಲಾ ಮರೆತು ಚರ್ಚು, ಮಸೀದಿಗಳ ಮೇಲೆ ದಾಳಿಗೆ ಹೋಗುತ್ತೇವೆ. ಈ ವಾಸ್ತವ ಸಂಗತಿಗಳನ್ನೆಲ್ಲ ಮರೆಮಾಚಿ ನಾವು ಮತಾಂತರದ ವಿಚಾರಕ್ಕೆ ಹೋಗಬಾರದು. ಹಿಂದೂ ಧರ್ಮ ಒಂದಾದರೂ ಎಲ್ಲಾ ಕಡೆಗಳಲ್ಲಿ ಇರುವಂತೆ ತೀರ್ಥಹಳ್ಳಿಯಲ್ಲೂ ಅನೇಕ ಜಾತಿಯ ಸಂಘಟನೆಗಳಿವೆ. ಈ ಎಲ್ಲಾ ಜಾತಿಯ ಸಂಘಟನೆಗಳೂ ಒಂದಾಗಿ ಯಾವತ್ತಾದರೂ ಎಲ್ಲಾ ಹಿಂದೂಗಳಿಗೆ ಒಳಿತಾಗುವ ಒಂದಾದರೂ ಕಾರ್ಯಕ್ರಮ ಮಾಡಿದ್ದಾವೆಯೇ ? ಕನಿಷ್ಠ ಪಕ್ಷ ತಮ್ಮ ತಮ್ಮ ಜಾತಿಯ ಬಡವರಿಗಾದರೂ ಉಪಕಾರ ಮಾಡಿವೆಯೇ ? ಜಾತಿಯ ಹುಡುಗನೊಬ್ಬನಿಗೆ ವರ್ಷದಲ್ಲೊಂದು ಬಾರಿ ಸ್ಕಾಲರ್‌ಶಿಪ್ ನೀಡಿ ಪತ್ರಿಕೆಯಲ್ಲಿ ಪ್ರಚಾರ ಗಿಟ್ಟಿಸಿಬಿಟ್ಟರೆ ಈ ಸಂಘಗಳ ಕೆಲಸ ಮುಗಿಯಿತು.

ಎಲ್ಲಾ ಕಡೆಯೂ ಆಗುವಂತೆ ತೀರ್ಥಹಳ್ಳಿಯಲ್ಲಿಯೂ ಆಗುತ್ತಿದೆ. ಎಲ್ಲಾ ಜಾತಿಯ ಸಂಘಟನೆಗಳು ಆಯಾಯ ಜಾತಿಯ ಭೂ ಮಾಲೀಕರ, ಶ್ರೀಮಂತರ, ವರ್ತಕರ ರಕ್ಷಣೆಗಾಗಿ ಮಾತ್ರ ಇವೆ. ಇಲ್ಲಿ ಯಾರಿಗಾದರೂ ಉಪಯೋಗವಾದರೆ ಅದು ಆ ಜಾತಿಯ ಶ್ರೀಮಂತರ ಮಕ್ಕಳಿಗೆ ಮಾತ್ರ. ಈ ಜಾತಿಯ ದೊಡ್ಡ ಮನುಷ್ಯರು ಮಾಡಬಾರದ ಪಾಪಗಳಲ್ಲಿ ಪಾಲುದಾರರಾದಾಗ ಅವರನ್ನು ರಕ್ಷಿಸಲು ಈ ಸಂಘಟನೆಗಳಿವೆ. ಸಮಸ್ತ ಒಕ್ಕಲಿಗರ ಉದ್ಧಾರಕ್ಕೆಂದು ತೀರ್ಥಹಳ್ಳಿಯಲ್ಲಿ ಆರಂಭವಾದ ಒಕ್ಕಲಿಗ ಸಂಘ ನಡೆಸುವ ಶಾಲೆಗೆ ಯಾವ ಬಡ ಒಕ್ಕಲಿಗರ ಮಕ್ಕಳನ್ನು ಸೇರಿಸಿಕೊಳ್ಳಲಾಗುತ್ತದೆ ಎಂದು ಪರೀಕ್ಷಿಸಿ ನೋಡಿ, ಸತ್ಯ ನಿಮಗೆ ತಿಳಿಯುತ್ತದೆ ''.

ಈ ಮೇಲಿನ ಅಭಿಪ್ರಾಯ ನಮ್ಮ ಈಗಿನ ಮಲೆನಾಡಿನಲ್ಲಿ ನಡೆಯುತ್ತಿರುವ ಮತಾಂತರದ, ಜಾತಿ ವ್ಯವಸ್ಥೆಯ ವಾಸ್ತವ ಸ್ಥಿತಿಯಾಗಿದೆ. ಮತಾಂತರದಿಂದ ಪ್ರಯೋಜನ ಇರುವಂತೆ ದುಷ್ಪರಿಣಾಮಗಳೂ ಇದೆ. ಬಲಾತ್ಕಾರದಿಂದ ಮತಾಂತರ ಸರಿಯಲ್ಲ, ಆದರೆ ಮನಃಪೂರ್ವಕವಾಗಿ ಯಾರಾದರೂ ಬೇರೆ ಧರ್ಮಕ್ಕೆ ಮತಾಂತರ ಹೋದುತ್ತೇನೆ ಎಂದರೆ ಅದು ಅವರ ಸ್ವಂತ ವಿಚಾರ. ಈ ವಿಚಾರವನ್ನು ಧರ್ಮ ಕಲಹವಾಗಿ ಹಬ್ಬಿಸಿ ಸಾಮಾನ್ಯ ಜನರ ನೆಮ್ಮದಿ ಕೆಡಿಸುವುದು ಯಾವ ಧರ್ಮವನ್ನೂ ಉದ್ಧಾರ ಮಾಡಲಾರದು.

ಮದುವೆಯನ್ನು ಕುರಿತಂತೆ ಮಲೆನಾಡಿನಲ್ಲಿ ವಿಶಿಷ್ಟವಾದ ಸಂಪ್ರದಾಯಗಳ ಅಸ್ತಿತ್ವದಲ್ಲಿವೆ. ಅವು ಕಾಲಾಂತರದಲ್ಲಿ ಬದಲಾಗುತ್ತಿರುವುದನ್ನು ಗಮನಿಸಬಹುದು. ಕುವೆಂಪು ಕೃತಿಗಳಲ್ಲಿ ಮಲೆನಾಡಿನ ಮದುವೆ ಕುರಿತಂತೆ ದೀರ್ಘವಾದ ವಿವರಣೆಯನ್ನೊಳಗೊಂಡ ಚಿತ್ರಣವನ್ನು ನೋಡಬಹುದು. ಇಲ್ಲಿ ಬಹುಸಂಖ್ಯಾತರಾದ ಒಕ್ಕಲಿಗರ ವಿವಾಹದ ಆಚರಣೆಯ ಹಲವಾರು ವಿಧಿ-ವಿಧಾನಗಳನ್ನು ಕಾಣಬಹುದು. ಮದುವೆಯ ಗಂಡು ಮತ್ತು ಹೆಣ್ಣಿನ 'ಸಾಲಾವಳಿ ' ನೋಡಿಸುವುದರಿಂದ ಸಿದ್ಧತೆ ಆರಂಭಗೊಂಡು, ಕನ್ಯೆ ಮತ್ತು ವರಗಳಿಬ್ಬರ 'ಬಳಿ ' ಭಿನ್ನವಾಗಿರಬೇಕಿತ್ತು, ಒಂದೇ ಆಗಿದ್ದರೆ ವಿವಾಹವೇರ್ಪಡುತ್ತಿರಲಿಲ್ಲ, ಜಾತಕ, ಜಾತಿ ಎಲ್ಲ ಕೂಡಿಬಂದು ಸರಿ ಎನ್ನಿಸಿದರೆ ಗಂಡಿನ ಕಡೆಯವರು ಹೆಣ್ಣಿನ ಮನೆಗೆ ತೆರಳಿ ತಮ್ಮ ಒಪ್ಪಿಗೆ ಸೂಚಿಸಿ ವೀಳ್ಯ ನೀಡಿ ಬರುತ್ತಾರೆ. ಇದನ್ನು 'ಒಪ್ಪು ವೀಳ್ಯ ' ಎಂದು ಕರೆಯುತ್ತಾರೆ. ನಂತರ ಹೆಣ್ಣಿನ ಮನೆಯಲ್ಲಿ 'ಹೂ ಮುಡಿಸುವ ಶಾಸ್ತ್ರ ' ನಡೆಯುತ್ತದೆ. ಅಂದು ಗಂಡಿನ ಕಡೆಯ ಕೆಲವು ಪ್ರಮುಖರು ಬಂದು ವಿವಾಹಕಾಲಕ್ಕೆ ಹೆಣ್ಣು ಧರಿಸಬೇಕಾದ ಸೀರೆ, ಆಭರಣ, ಮಾಂಗಲ್ಯಗಳನ್ನು ನೀಡುತ್ತಾರೆ. ವಿವಾಹದ ಹಿಂದಿನ ದಿನ ಮದುವೆಯ ಮನೆಯ ಮುಂದೆ ವಿಸ್ತಾರವಾದ ಚಪ್ಪರ ಹಾಕುತ್ತಾರೆ. ನಡುವೆ ಸೊಗಸಾದ ಮದುವೆ ಮಂಟಪ ರಚಿಸುತ್ತಿದ್ದರು. ಬಣ್ಣಗಳಿಂದ ಮತ್ತು ಚಿತ್ತಾರಗಳಿಂದ 'ಹಸೆಗೋಡೆ'ಯ ಅಲಂಕಾರ ಮಾಡುತ್ತಿದ್ದರು. ವಿವಾಹವು ಹೆಣ್ಣಿನ ಮನೆಯಲ್ಲಿ ನಡೆಯುವುದು ಸಾಮಾನ್ಯವೆನಿಸಿತ್ತು. ಹಾಗಾಗಿ ಗಂಡಿನವರು 'ದಿಬ್ಬಣ' ತೆಗೆದುಕೊಂಡು ಹೋಗುತ್ತಿದ್ದರು. ಈಗ ಹೆಣ್ಣಿನ ಮನೆಯಲ್ಲಿ ಮದುವೆ ಮಾಡುವುದೇ ಅಪರೂಪವಾಗಿದೆ. ಅನುಕೂಲವಾಗುವ ನಗರಗಳಲ್ಲಿರುವ ಛತ್ರಗಳಲ್ಲಿ, ದೇವಸ್ಥಾನದಲ್ಲಿ

ಇಂದು ವಿವಾಹ ಕಾರ್ಯಕ್ರಮವಿರುತ್ತದೆ. ಅವರವರ ಸಾಧ್ಯತೆಗೆ ತಕ್ಕಂತೆ ಖರ್ಚು ಮಾಡಿ ಆಡಂಬರಯುತವಾಗಿ ಮದುವೆ ಮಾಡುತ್ತಾರೆ. ಈ ಆಡಂಬರ ಕುರಿತು ಕುವೆಂಪು ಅವರ 'ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ ' ಕೃತಿಯಲ್ಲಿ 'ಮಲೆನಾಡಿನ ಯುವಕರಲ್ಲಿ ' ಲೇಖನದಲ್ಲಿ ತಿಳಿಸಿದ್ದಾರೆ. ಅತಿವ್ಯಯ ಮಾಡುವುದು ಒಳ್ಳೆಯದಲ್ಲ. ''ಮದುವೆಗೆ ಮದುವೆಯ ಸಂಭ್ರಮವೇ ಗುರಿಯಲ್ಲ , ಮುಂದಿನ ಸುಖ, ಸಮಾಜ ಸೇವೆ ಇತ್ಯಾದಿಗಳು ಅದರ ಗುರಿ. ವಿವಾಹವು ನಡೆಯುವ ಹಾದಿಯೆ ಹೊರತು, ಸೇರುವ ಮನೆಯಲ್ಲ. ಆದ್ದರಿಂದ ಜನರು ವಿವಾಹ ಕಾಲದಲ್ಲಿ ಆಗುವ ದುಂದನ್ನು ಕಡಿಮೆ ಮಾಡಿ, ದಂಪತಿಗಳ ಜೀವನ ಮುಂದೆ ಋಣಭಾರದಿಂದ ಕುಗ್ಗಿ ಪಾತಾಳಗತವಾಗದಂತೆ ನೋಡಿಕೊಳ್ಳಬೇಕು''[೫] ಎಂಬ ತಿಳುವಳಿಕೆಯನ್ನು ಕುವೆಂಪು ಹೇಳಿದ್ದಾರೆ.

ಮದುವೆಯ ಆಡಂಬರ ಮಲೆನಾಡಿನಲ್ಲಿ ಹಿಂದಿನಿಂದಲೂ ನಡೆದುಬಂದಿದೆ. ಇದು ಸರಿಯಲ್ಲ, ಇದರಿಂದ ಸಾಲ, ಖರ್ಚುಗಳು ಹೆಚ್ಚಾಗಿ ಮುಂದಿನ ಜೀವನ ಕಷ್ಟದಾಯಕವಾಗುತ್ತದೆ ಎಂದು ಕುವೆಂಪುರವರು ತಿಳಿಸಿ ಅದಕ್ಕೆ ಪರಿಹಾರವನ್ನು ಸೂಚಿಸಿದ್ದಾರೆ. 'ಮಂತ್ರ ಮಾಂಗಲ್ಯ 'ಎಂಬ ಕ್ರಮದಲ್ಲಿ ವಿವಾಹವಾಗುವುದು ಸೂಕ್ತ ಎಂದು ಹೇಳಿದ್ದಾರೆ. ಇಂದು ಮಲೆನಾಡಿನಲ್ಲಿ ಮದುವೆ ಕ್ರಮದಲ್ಲಿದ್ದ ಆಚರಣೆ, ವಿಧಿ-ವಿಧಾನಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಕೆಲವೊಂದು ಆಚರಣೆ, ಶಾಸ್ತ್ರಗಳನ್ನು ಮರೆತೇ ಬಿಟ್ಟಿದ್ದಾರೆ. ಒಳ್ಳೆಯ ಛತ್ರ, ಊಟ, ವಿಜೃಂಭಣೆಯಿಂದ ಮದುವೆ ಮಾಡಿ ತಮ್ಮ ದೊಡ್ಡಸ್ತಿಕೆ ತೋರಿಸುವುದೇ ಮುಖ್ಯವಾಗಿದೆ. ಇನ್ನು ಕೆಲವರು ಕುವೆಂಪು ಹೇಳಿದಂತೆ ಮಂತ್ರ ಮಾಂಗಲ್ಯ ವಿವಾಹವನ್ನೇ ಆಗುತ್ತಾರೆ. ಅಲ್ಲಿನ ಸರಳತೆ, ನಿರಾಡಂಬರ ಪಾಲಿಸುವ ಬದಲಾಗಿ ಅದೇ ದಿನ ಸಂಜೆ ಆಡಂಬರಯುತವಾಗಿಯೇ ಸಮಾರಂಭ ಮಾಡುತ್ತಾರೆ. ಅಲ್ಲಿ ಪುರೋಹಿತರ ಬದಲಾಗಿ ಯಾರಾದರೂ ವಿಚಾರವಂತರು ಮಂತ್ರ ಮಾಂಗಲ್ಯ ಸೂತ್ರಗಳನ್ನು ಹೇಳುತ್ತಾರೆ. ಇದರಿಂದ ಪೂರ್ಣವಾಗಿ ಕುವೆಂಪು ಅವರ ಆದರ್ಶಗಳನ್ನು ಪಾಲಿಸಿದಂತಾಗುವುದಿಲ್ಲ. ಕುವೆಂಪುರವರು ಕಾದಂಬರಿಗಳಲ್ಲಿ ಬ್ರಾಹ್ಮಣರಲ್ಲಿ ಬಾಲ್ಯ ವಿವಾಹ ಚಾಲ್ತಿಯಲ್ಲಿದ್ದುದನ್ನು ತಿಳಿದಿದ್ದೇವೆ. ಇದು ಇಂದು ಬದಲಾಗಿದೆ. ಇತ್ತೀಚೆಗೆ ಬ್ರಾಹ್ಮಣರಲ್ಲಿ ಗಂಡಿಗಿಂತ ಹೆಣ್ಣಿನ ಸಂಖ್ಯೆ ಕಡಿಮೆಯಾಗಿ ಗಂಡಿಗೆ ಹೆಣ್ಣು ಹುಡುಕಿ ಮದುವೆ ಮಾಡುವುದೇ ಕಷ್ಟವಾಗಿದೆ. ಇಂತಹ ಸಂದರ್ಭದಲ್ಲಿ ವಿಧಿ-ವಿಧಾನಗಳನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿದ್ದವರೇ ಇಂದು ಅಂತರ್ಜಾತೀಯ

ವಿವಾಹದ ಮೊರೆ ಹೋಗಬೇಕಾಗಿದೆ. ವರದಕ್ಷಿಣೆ ಈಗ ಹತ್ತು ವರ್ಷ ಹಿಂದಿನಿಂದ ಪಡೆಯುತ್ತಿದ್ದರೂ ಬ್ರಾಹ್ಮಣರಲ್ಲಿ ಸ್ವಲ್ಪ ಕಡಿಮೆಯೇ ಇದ್ದಿತ್ತು. ಆದರೆ ಈಗ ಹಿಂದೆ ಹೆಣ್ಣನ್ನು ಮದುವೆಯಾಗುವಾಗ ತೆರ ನೀಡಿ ಮದುವೆ ಆಗಬೇಕಿತ್ತು. ಇದು ನಂತರ ಬದಲಾಗಿ ಆಧುನಿಕ ಸಮಾಜದಲ್ಲಿ 'ವರದಕ್ಷಿಣೆ ' ನೀಡುವುದು ಕಂಡುಬಂದಿತು. ಇದು ಈಗಲೂ ಅಸ್ತಿತ್ವದಲ್ಲಿದೆ. ಜೊತೆಗೆ ಕೆಲವು ಜಾತಿಗಳಲ್ಲಿ ಹೆಣ್ಣಿನ ತೆರ ಕೊಡಬೇಕಾದ ಹಿಂದಿನ ಸ್ಥಿತಿಯೇ ಬಂದರೂ ಬರಬಹುದು. ಏಕೆಂದರೆ ಇಂದು ಹೆಣ್ಣು-ಗಂಡಿನ ಅನುಪಾತದಲ್ಲಿ ಅಂತರ ಏರ್ಪಟ್ಟಿರುವುದು ಇಂತಹ ಬೆಳವಣಿಗೆಗೆ ಕಾರಣವಾಗಿದೆ.

ಮಲೆನಾಡಿನ ಸ್ತ್ರೀಯರ ಸ್ಥಾನಮಾನಗಳನ್ನು ಗಮನಿಸಿದರೆ ಅಂದು ಬ್ರಾಹ್ಮಣ ಸ್ತ್ರೀಯರಿಗೆ ಒಕ್ಕಲಿಗ -ಕೆಳಜಾತಿಯ ಸ್ತ್ರೀಯರಿಗೆ ಹೋಲಿಸಿದರೆ ಸ್ವಾತಂತ್ರ್ಯ ಕಡಿಮೆ ಇದ್ದಿತು. ಆದೇ ಒಕ್ಕಲಿಗ ಸ್ತ್ರೀ ಪೂರ್ತಿ ಸ್ವಾತಂತ್ರ್ಯ- ಸಮಾನತೆಗಳನ್ನು ಪಡೆಯದಿದ್ದರೂ ಅತಿಯಾದ ನಿರ್ಬಂಧನೆಗಳಿಗೆ ಒಳಗಾಗಲಿಲ್ಲ. ಇವರಿಗಿಂತಲೂ ಕೆಳಜಾತಿಯ ಸ್ತ್ರೀಯರು ಇನ್ನೂ ಸ್ವತಂತ್ರ್ಯ ವ್ಯಕ್ತಿತ್ವ ಪಡೆದಿದ್ದರು. ಇಲ್ಲಿ ದುಡಿಮೆಯ ಅವಕಾಶವಿರುವ ಸ್ತ್ರೀಯರು ಸ್ವಂತಿಕೆ ಹಾಗೂ ಹೆಚ್ಚು ಸ್ವಾತಂತ್ರ್ಯ ಸಮಾನತೆ ಹೊಂದಿರುವುದು ಕಂಡುಬರುತ್ತದೆ. ಆದೇ ಇಂದಿನ ಮಹಿಳೆಯರಲ್ಲಿ ಹಿಂದಿನದಕ್ಕಿಂತ ಹೆಚ್ಚು ಸ್ವತಂತ್ರ್ಯವಾದ ಬದುಕನ್ನು ಕಾಣಬಹುದು. ಹೆಚ್ಚಿನ ಸ್ತ್ರೀಯರು ಶಿಕ್ಷಿತರಾಗಿದ್ದಾರೆ. ಸ್ತ್ರೀಪರ ಸ್ವಸಹಾಯ ಸಂಘಗಳಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಿದ್ದಾರೆ. ಹಾಗೆ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮಲೆನಾಡಿನ ಸ್ತ್ರೀಯರು ಇಂದು ಪುರುಷನಿಗೆ ಸರಿಸಮಾನವಾದ ಬದುಕನ್ನು ಬಾಳುತ್ತಿದ್ದಾರೆ.

ಮಕ್ಕಳ ಆಟಪಾಠಗಳು ಹಿಂದಿಗಿಂತ ಇಂದು ಸಾಕಷ್ಟು ಬದಲಾಗಿರುವುದನ್ನು ಗುರುತಿಸಬಹುದು. ಮಲೆನಾಡಿನ ಚಿತ್ರಗಳಲ್ಲಿನ ರಾಮ-ರಾವಣರ ಯುದ್ಧ 'ಕತೆಗಾರ ಮಂಜಣ್ಣ'ದಲ್ಲಿ ಬರುವ ಮಕ್ಕಳ ಗುಂಪು ಆಟಗಳು, ಕತೆ ಕೇಳುವ ಪ್ರವೃತ್ತಿ ಇಂದು ಕಾಣಸಿಗುವುದು ಅಪರೂಪ. ಅಂದು ಮಕ್ಕಳು ಗುಂಪಾಗಿ ಮುಗ್ಧತೆಯಿಂದ ಕೇವಲ ಮನಃಸಂತೋಷಕ್ಕಾಗಿ ಯಾರದೂ ಬಲಾತ್ಕಾರವಿಲ್ಲದೆ ಸ್ವಚ್ಛಂದವಾಗಿ ಆಟ ಆಡಿಕೊಂಡು ಕಾಲ ಕಳೆಯುತ್ತಿದ್ದರು. ಆದರೆ ಇಂದು ಮಕ್ಕಳು ಆಡುವ ಆಟಗಳೆಂದರೆ ನಿಯಮ ಬದ್ಧವಾಗಿ ಗೆಲುವಿನ ಗುರಿ ಇಟ್ಟುಕೊಂಡು ಆಡುವ ಆಟಗಳನ್ನಷ್ಟೇ ಆಡಬೇಕು. ಅದು

ಸೀಮಿತ ಅವಧಿಯಲ್ಲಿ ಮಾತ್ರ. ಅಂದರೆ ಈ ಆಧುನಿಕ ಯುಗದಲ್ಲಿ ಒಂದು ಮಗು ಹುಟ್ಟಿದಂದಿನಿಂದಲೇ ಈ ಪೈಪೋಟಿ ಯುಗಕ್ಕೆ ಹೊಂದಿಕೊಳ್ಳುವಂತೆ ಯಾಂತ್ರಿಕವಾಗಿ ಬದುಕುವುದನ್ನು ಅದಕ್ಕೆ ಕಲಿಸಿಕೊಡಲಾಗುತ್ತದೆ. ಬಾಲ್ಯ ಎಂದರೆ ಇಂದು ಓದುವುದು, ಈಗ ಪರಸ್ಪರ ಸಂಬಂಧಗಳಿಗೆ, ಗೆಳೆತನಕ್ಕೆ ಬೆಲೆಯೇ ಇಲ್ಲದ ಸ್ಥಿತಿ ಬಂದೊದಗಿದೆ. ಹಿಂದೆ ಸಾಯುವ ವಯಸ್ಸಿನಲ್ಲೂ ಕಣ್ಣು ಮಂದವಾಗದೆ ಇರುತ್ತಿತ್ತು. ಇಂದು ಓದುವುದು, ಕಂಪ್ಯೂಟರ್ ಬಳಕೆ ಹೆಚ್ಚಿ ಚಿಕ್ಕ ವಯಸ್ಸಿನಲ್ಲೇ ಚಿಕ್ಕ ಮಕ್ಕಳಲ್ಲೇ ದೃಷ್ಟಿದೋಷದ ಸಮಸ್ಯೆಯನ್ನು ಹೆಚ್ಚಾಗಿ ಕಾಣಬಹುದು. ಇದು ಒಂದು ಉದಾಹರಣೆ. ಇಂತಹ ಅನೇಕ ಸ್ಥಿತಿಗತಿಗಳನ್ನು ಇಂದಿನ ಜನ ಜೀವನದಲ್ಲಿ ಗುರುತಿಸಬಹುದು. ಈ ಆಧುನೀಕತೆಯ ಪ್ರಭಾವ ಮಲೆನಾಡಿನ ಜನಜೀವನವನ್ನು ಅತ್ಯಂತ ವೇಗದಲ್ಲಿ ಬದಲಾಯಿಸಿ ಹೊಸ ಆವಿಷ್ಕಾರಗಳಿಗೆ ಈ ಜನರನ್ನು ಅಭಿಮುಖವಾಗುವಂತೆ ಮಾಡಿದುದರ ಜೊತೆಗೆ ಅಷ್ಟೇ ಮಟ್ಟಿಗೆ ಮಾನವೀಯ ಮೌಲ್ಯಗಳ ಬದುಕಿನ ಸಾಮರಸ್ಯಗಳ ಪತನಕ್ಕೂ ಕಾರಣವಾಗಿದೆ.

ಮಲೆನಾಡಿನಲ್ಲಿ ಕುವೆಂಪು ವರ್ಣನೆಯಲ್ಲಿ ಬರುವಂತೆ ಹಿಂದೆ ಊರಿಗೊಂದೇ ಮನೆಯಿರುತ್ತಿತ್ತು. ಅದೇ ಈಗ ಈ ಒಂದು ಮನೆಯಿಂದಲೇ ಅದೇ ಊರಿನಲ್ಲಿ ಮೂವತ್ತು ನಲವತ್ತು ಮನೆಗಳಿರುವುದನ್ನು ಕಾಣಬಹುದು. ಇಂದಿನ ಮಲೆನಾಡಿನಲ್ಲಿ ಅವಿಭಕ್ತ ಕುಟುಂಬಗಳು ಸಾಕಷ್ಟು ಮಟ್ಟಿಗೆ ಕಣ್ಮರೆಯಾಗುತ್ತಾ ಬಂದಿವೆ. ಈಗ ಕುಟುಂಬ ಎಂದರೆ ಗಂಡ, ಹೆಂಡತಿ, ಮಕ್ಕಳು ಅಷ್ಟೇ. ಬೇರೆ ಯಾವ ಸಂಬಂಧಗಳಿಗೂ ಅಲ್ಲಿ ಅವಕಾಶವಿಲ್ಲ. ಆಧುನಿಕತೆ ಬೆಳೆದಂತೆ ಸಂಬಂಧಗಳ ಕೊಂಡಿ ಕಳಚಿಕೊಳ್ಳುತ್ತಾ ಬಂದಿರುವುದನ್ನು ಕಾಣಬಹುದು. ಅದು ಎಷ್ಟರ ಮಟ್ಟಿಗೆ ಎಂದರೆ ಸ್ವಂತ ತಂದೆ-ಮಗ, ಅಣ್ಣ-ತಮ್ಮಂದಿರೆ ಒಟ್ಟಿಗೆ ಬದುಕಲಾರದಷ್ಟು ಇಂದು ಸಂಬಂಧಗಳ ನಡುವೆ ಬಿರುಕು ಬಿಟ್ಟಿದೆ. ಹೀಗೆ ಮುಂದುವರಿದರೆ ಮುಂದೊಂದು ದಿನ ಪ್ರಾಚೀನ ಕಾಲದಂತೆ ಮನುಷ್ಯ ಏಕಾಂಗಿಯಾಗಿ ಕಾಡು ಮೃಗದಂತೆ ಬದುಕುವ ಸ್ಥಿತಿ ಬರಬಹುದು.

ಒಟ್ಟಿನಲ್ಲಿ ಮಲೆನಾಡಿನ ಕುವೆಂಪು ಕೃತಿಗಳಲ್ಲಿ ಚಿತ್ರಿತವಾಗಿರುವ ಜನಜೀವನಕ್ಕೂ ಇಂದು ಆಧುನೀಕರಣದ ತೀವ್ರ ಪ್ರಭಾವಕ್ಕೊಳಗಾದ ಜನಜೀವನಕ್ಕೂ ಸಾಕಷ್ಟು ಬದಲಾವಣೆಯನ್ನು ಗಮನಿಸಬಹುದು. ಇದು ಜೀವನದ ಪ್ರತಿಯೊಂದು ಸೂಕ್ಷ್ಮ

ಸಂಗತಿಯಲ್ಲೂ ಕಂಡು ಬರುವಂತಹದ್ದು. ಸಾಮಾಜಿಕವಾಗಿ ಈ ಮೇಲೆ ತಿಳಿದಂತೆ ಪ್ರತಿಯೊಂದು ಜೀವನ ಕ್ರಮದಲ್ಲೂ ಆಧುನಿಕತೆಯು ಪ್ರವೇಶ ಆಗಿರುವುದನ್ನು ಗ್ರಹಿಸಲಾಯಿತು. ಇದೇ ರೀತಿ ಆರ್ಥಿಕವಾಗಿ ಸಾಕಷ್ಟು ಬದಲಾವಣೆಗೆ ಒಳಗಾಗಿದೆ. ಕುವೆಂಪು ಕೃತಿಗಳಲ್ಲಿ ತಿಳಿದ ಹಾಗೆ ಹಿಂದೆ ಮಲೆನಾಡಿನಲ್ಲಿ ಒಡೆಯ-ಆಳು, ಒಕ್ಕಲು, ಜಮೀನ್ದಾರರು ಇಂತಹ ಪದ್ಧತಿ ಕಂಡುಬರುತ್ತಿತ್ತು. ಅದೇ ಈಗ ಭೂ ಸುಧಾರಣಾ ಚಳುವಳಿಯ ನಂತರ 'ಉಳುವವನೇ ಹೊಲದೊಡೆಯ ' ಕಾನೂನು ಬಂದು ಒಕ್ಕಲಾಗಿದ್ದವರು, ಕೂಲಿಯಾಳಾಗಿದ್ದವರು ಸ್ವಂತ ಭೂಮಿ ಪಡೆದು ವ್ಯವಸ್ಥಿತವಾದ ಜೀವನ ಸಾಗಿಸುತ್ತಿದ್ದಾರೆ. ಹಾಗೆ ಹಿಂದೆ ಇದ್ದಂತೆ ನ್ಯಾಯ ತೀರ್ಮಾನ ಪದ್ಧತಿಯೂ ಈಗ ಕಂಡುಬರುವುದಿಲ್ಲ. ಆಗ ಊರ ಗೌಡ ಪಂಚಾಯಿತಿ ಮಾಡಿ ನ್ಯಾಯ ತೀರ್ಮಾನ ಮಾಡುತ್ತಿದ್ದ. ಅದೇ ಈಗ ಚಿಕ್ಕ ಚಿಕ್ಕ ತೊಂದರೆ ಬಂದರೂ ಕಾನೂನಿನ ಮೊರೆ ಹೋಗಿ ಕೋರ್ಟ್‌ಗಳಿಗೆ ಹೋಗುತ್ತಾರೆ. ಇಂದು ಹಣವಿದ್ದವರ ಪರ ನ್ಯಾಯವಿರುತ್ತದೆ. ಒಟ್ಟಿನಲ್ಲಿ ಇಂದು ಜಗತ್ತನ್ನು ಹೇಗೆ ಹಣವಿರುವವರು ಆಳುತ್ತಿದ್ದಾರೋ ಅದೇ ಸ್ಥಿತಿ ಮಲೆನಾಡಿನಲ್ಲೂ ಇರುವುದನ್ನು ಕಾಣಬಹುದಾಗಿದೆ. ಹೀಗೆ ಮಲೆನಾಡಿನ ಜನಜೀವನದ ಪ್ರತಿಯೊಂದು ಹಂತಗಳಲ್ಲೂ ಸಂಪೂರ್ಣವಾಗಿ ಆಧುನೀಕತೆಯ ಪರಿಣಾಮವನ್ನು ಗುರುತಿಸಬಹುದಾಗಿದೆ.

ನಂಬಿಕೆ ಮತ್ತು ವಿಧಿಕ್ರಿಯೆಗಳು ಜನಾಂಗೀಯ ಲಕ್ಷಣಗಳಾಗಿದ್ದು ಅವು ಕಾಲ, ಪ್ರದೇಶಗಳ ಭಿನ್ನತೆ ಹೊಂದಿರುತ್ತವೆ. ಮಲೆನಾಡಿನಲ್ಲೂ ಇಂತಹ ವಿಶಿಷ್ಟ ನಂಬಿಕೆ, ಆಚರಣೆಗಳಿದ್ದು ಅವು ಪರಂಪರೆಯಿಂದ ಬಂದವುಗಳಾಗಿ ಅವುಗಳಲ್ಲಿ ಆಳವಾದ ಶ್ರದ್ಧೆ ವಿಶ್ವಾಸವನ್ನು ಹೊಂದಿದ್ದರು. ಇಂತಹ ಪರಂಪರೆ ಆಧುನಿಕತೆಯೊಂದಿಗೆ ಎದುರಾಗಬೇಕಾದ ಸಂದರ್ಭ ಇಡೀ ಭಾರತಕ್ಕೆ ಬಂದಂತೆ ಮಲೆನಾಡಿನಲ್ಲೂ ಇಂತಹ ಸಂಕ್ರಮಣ ಸ್ಥಿತಿ ಉಂಟಾಯಿತು. ಇದರ ಪ್ರಭಾವ ಈಗ ಮಲೆನಾಡಿನಲ್ಲಿ ತೀವ್ರತರವಾಗಿದೆ. ಉತ್ತಮರು ಕೇರಿಗೆ ಹೋಗದಿರುವುದು, ಹಾವನ್ನು ಬಳ್ಳಿ ಎನ್ನುವುದು, ದೇವರ ಮೀನನ್ನು ತಿನ್ನಬಾರದು ಹೀಗೆ ಮಲೆನಾಡಿನ ಜನರಲ್ಲಿಯ ನಂಬಿಕೆಗಳಿಗೆ ಇತಿಮಿತಿ ಇರಲಿಲ್ಲ. ಆದರೆ ಇಂದು ಇಂತಹ ನಂಬಿಕೆಗಳು ಜನರ ಅರಿವಿನಿಂದ ದೂರವಾದರೂ ಪೂರ್ತಿಯಾಗಿ ದೂರವಾಗಿಲ್ಲ ಎನ್ನಬಹುದು. ಮಾಟ-ಮಂತ್ರಗಳು, ಜ್ಯೋತಿಷ್ಯ ಕೇಳುವುದು, ಜಾತಕ ತೋರಿಸುವುದು, ದೇವರು-ದೆವ್ವಗಳ ಕುರಿತ ಅವೈಚಾರಿಕತೆ ಅಂದಿನ ಜನರಲ್ಲಿ ಹೆಚ್ಚು ಇದ್ದಿದ್ದನ್ನು

ತಿಳಿಯಬಹುದು. ಇಂದು ಇದೆಲ್ಲಾ ವಿದ್ಯಾವಂತರಲ್ಲಿ ಸ್ವಲ್ಪ ಮಟ್ಟಿಗೆ ಕಡಿಮೆಯಾದರೂ, ವೈಜ್ಞಾನಿಕವಾಗಿ ಚಿಂತಿಸುವವವರೇ ಹೆಚ್ಚಾಗಿ ಇತ್ತೀಚೆಗೆ ಇಂತಹ ನಂಬಿಕೆಗಳತ್ತ ಮನಸ್ಸು ಕೊಡುತ್ತಿರುವುದು ಆಘಾತಕಾರಿ ವಿಷಯವಾಗಿದೆ. ಎಷ್ಟೇ ಆಧುನಿಕತೆ ಪ್ರವೇಶಿಸಿದರೂ ಇಂದಿಗೂ ಜ್ಯೋತಿಷ್ಯ, ಜಾತಕ, ದೇವರು-ದೆವ್ವಗಳಲ್ಲಿ ನಂಬಿಕೆ ಹೊರಟುಹೋಗಿಲ್ಲ. ನಾವು ಯಾವುದೇ ಟಿವಿ ಚಾನಲ್‌ಗಳನ್ನು ಬದಲಿಸಿದರೂ ದಿನ ಬೆಳಿಗ್ಗೆ ಎಲ್ಲದರಲ್ಲೂ ಭವಿಷ್ಯ, ಜ್ಯೋತಿಷ್ಯ ಹೇಳುವವರೇ ಕಂಡುಬರುತ್ತಾರೆ. ಇದಕ್ಕೆ ಪ್ರೇರೇಪಿಸುತ್ತಿರುವುದು ಜನರೇ. ಜ್ಯೋತಿಷಿಗಳು ಒಂದೊಂದು ಸಮಸ್ಯೆ ಹೇಳಿ ಪರಿಹಾರ ಮಾರ್ಗ ಸೂಚಿಸುವುದು ಆ ಸಮಸ್ಯೆಯನ್ನು ಎಷ್ಟೇ ಕಷ್ಟವಾದರೂ ಸಾಲ ಮಾಡಿಯಾದರೂ ಬಗೆಹರಿಸಿಕೊಳ್ಳುವುದು ಇಂದಿನ ಜೀವನ ಕ್ರಮ. ಕೈಯಲ್ಲಿ ಸ್ಟೆತಾಸ್ಕೋಪ್ ಹಿಡಿದ ಡಾಕ್ಟರೇ ಹಣೆಯಲ್ಲಿ ವಿಭೂತಿ ಪಟ್ಟಿ ಹಾಕಿರುವುದು ಇಂದಿನ ಸ್ಥಿತಿಗೆ ಹಿಡಿದ ಕನ್ನಡಿಯಂತಿರುತ್ತದೆ.

ಪ್ರತಿಯೊಬ್ಬರ ಜೀವನದಲ್ಲೂ ಕೆಲವು ಸಂಸ್ಕಾರ, ವಿಧಿಗಳು ಇರುವಂತೆ ಮಲೆನಾಡಿನಲ್ಲೂ ಇದ್ದವು. ಮಗು ಹುಟ್ಟಿದಾಗ 'ತೊಟ್ಟಿಲಿಗೆ ಹಾಕುವುದು ', ವಿವಾಹ ವಿಧಿಗಳು, ಮರಣಾ ನಂತರ ವಿಧಿಗಳು ವಿಶಿಷ್ಟತೆಯಿಂದ ಕೂಡಿದ್ದವು. ಈಗಲೂ ಇಂತಹ ಕೆಲವು ವಿಧಿಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಹಿಂದೆ ಸ್ಮಶಾನ ಸ್ಥಳಗಳು ಆಯಾ ಜಾತಿಯವರಿಗೆ ಬೇರೆ ಬೇರೆ ಇರುತ್ತಿತ್ತು. ಅದೇ ಈಗ ಸ್ಮಶಾನ ಸ್ಥಳಗಳೂ ಹೊಲಗದ್ದೆಗಳಾಗಿ ಬೇಲಿ ಹಾಕಿಕೊಳ್ಳಲಾಗಿದೆ. ಇದರಿಂದ ಶವಸಂಸ್ಕಾರಕ್ಕೂ ಜಾಗವಿಲ್ಲದಂತಹ ಸ್ಥಿತಿ ಈಗ ಮಲೆನಾಡಿನಲ್ಲಿದೆ. ವೈದ್ಯಕೀಯಕ್ಕೆ ಸಂಬಂಧಿಸಿದಂತೆ ಹಿಂದೆ ದೇಸೀ ವೈದ್ಯರು ಇರುತ್ತಿದ್ದರು. ಸಣ್ಣಪುಟ್ಟ ರೋಗಗಳಿಗೆ ಅವರೇ ಔಷಧಿ ಮಾಡಿಕೊಳ್ಳುತ್ತಿದ್ದರು. ಆದರೆ ಈಗ ಮಲೆನಾಡಿನಲ್ಲಿ ಒಂದೇ ರಸ್ತೆಯಲ್ಲಿ ಹತ್ತಾರು ಕ್ಲಿನಿಕ್‌ಗಳು, ಆಸ್ಪತ್ರೆಗಳು ನಿರ್ಮಾಣವಾಗಿವೆ. ಅಂದಿಗಿಂತ ಇಂದು ಸ್ವಚ್ಛತೆ ಬಗೆಗೆ ಹೆಚ್ಚು ಅರಿವು ಮೂಡಿದೆ. ಹಿಂದೆ ವಾರಕ್ಕೊಂದು ಸ್ನಾನ ಮಾಡುತ್ತಿದ್ದವರು ಈಗ ಸೋಪು, ಶ್ಯಾಂಪು ಬಳಸಿ ಪ್ರತಿನಿತ್ಯ ಸ್ನಾನ ಮಾಡಿ ಮೈಕೈಯನ್ನು ಶುಚಿಯಾಗಿಟ್ಟುಕೊಳ್ಳುತ್ತಿದ್ದಾರೆ. ಇದರಿಂದ ಅನೇಕ ರೋಗಗಳು ದೂರವಾಗಿವೆ. ಯಂತ್ರ-ತಂತ್ರಗಳ ಬೆಳವಣಿಗೆಯಿಂದ ಹೊಸ ಹೊಸ ರೋಗಗಳು ಹುಟ್ಟಿಕೊಳ್ಳುತ್ತಿವೆ. ವೈದ್ಯರನ್ನು ಆಗಿನ ವೈದ್ಯಕೀಯ ನಂಬಿಕೆ ಕುರಿತು ಕುವೆಂಪು ತಮ್ಮ ಮಲೆನಾಡಿನ ಚಿತ್ರಗಳಲ್ಲೇ ಸೂಕ್ಷ್ಮವಾಗಿ ತಿಳಿಸಿದ್ದರು. ಅಣ್ಣಪ್ಪನ ರೇಷ್ಮೆ ಕಾಯಿಲೆಗೆ ಸಂಬಂಧಿಸಿದಂತೆ ಹೇಳುವಾಗ

ಮಲೆನಾಡಿನ ಜನರ ಮೊದಲು ಮಾಟಮಂತ್ರ ಮಾಡಿಸಿ, ನಂತರ ದೇಶಿ ವೈದ್ಯರಿಗೆ ತೋರಿಸಿ ಕೊನೆಗೆ ಇಂಗ್ಲೀಷ್ ಡಾಕ್ಟರರ ಬಳಿ ಹೋಗುತ್ತಿದ್ದುದರ ಬಗೆಗೆ ಚಿತ್ರಿಸಿದ್ದಾರೆ. ಆರ್ಥಿಕವಾಗಿ ಆಗ ಕೂಲಿಯಾಳುಗಳು ದವಸ ಧಾನ್ಯಗಳನ್ನು ಸಂಭಾವನೆ ರೂಪದಲ್ಲಿ ಪಡೆಯುತ್ತಿದ್ದರು. ಈಗ ಅಕ್ಕಿ ಕೊಟ್ಟು ನೂರೈವತ್ತು ರೂಪಾಯಿಗಳವರೆಗೆ ಸಂಬಳ ಕೊಡಬೇಕಾಗಿದೆ. ಆಗಿದ್ದ ಹಾಗೆ ವಸ್ತು ವಿನಿಮಯವೆಲ್ಲ ಈಗ ಹೊರಟು ಹೋಗಿದೆ. ಅಷ್ಟೇ ಏಕೆ ಆಗ ಮಲೆನಾಡಿನಲ್ಲಿ ತಮ್ಮ ದಿನನಿತ್ಯದ ಬಳಕೆಗೆ ಬೇಕಾದ ತರಕಾರಿ-ಸೊಪ್ಪು, ಕಟ್ಟಿಗೆ ಇಂತಹದ್ದನ್ನೆಲ್ಲಾ ತಾವೇ ಬೆಳೆದು, ಹುಡುಕಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಅದೇ ಈಗ ಪ್ರತಿಯೊಂದು ಅಂಗಡಿಯಿಂದಲೇ ಬರಬೇಕು. ಹೆಂಗಸರು ಅಡುಗೆ ಮಾಡಬೇಕು. ಹೀಗೆ ಮಲೆನಾಡ ಸ್ತ್ರೀಯರು ಒಂದು ರೀತಿಯಲ್ಲಿ ಸೋಮಾರಿಗಳಾಗುತ್ತಿದ್ದಾರೆ. ಇದಕ್ಕೂ ಸಹ ಕಾರಣ ಆಧುನೀಕರಣದ ಪ್ರಭಾವವಾಗಿದೆ.

೫.೨: ಬೇಸಾಯ ಕ್ರಮ :

ಪ್ರಾಚೀನ ಕಾಲದಿಂದಲೂ ಬೇಸಾಯ ಅಥವಾ ಒಕ್ಕಲುತನ ಭಾರತೀಯರ ಪ್ರಮುಖ ಉದ್ಯೋಗವಾಗಿದೆ. ಈ ಕಾರಣದಿಂದ ಇಲ್ಲಿನ ಜನರು ಭೂಮಿಯೊಂದಿಗೆ ಮೊದಲಿನಿಂದಲೂ ಬಿಡಲಾರದ ಗಟ್ಟಿಯಾದ ಸಂಬಂಧ ಹೊಂದಿದ್ದಾರೆ. ಪ್ರತಿಯೊಂದು ಪ್ರದೇಶಕ್ಕೂ ಬೇರೆ ಬೇರೆ ವಿಧಾನಗಳಿಂದ ಒಕ್ಕಲುತನವನ್ನು ನಡೆಯಿಸಿಕೊಂಡು ಬಂದಿದ್ದಾರೆ. ಮಲೆನಾಡಿನಲ್ಲಿ ತುಂಬಾ ಹಿಂದೆ 'ಬೇಟೆ ' ವೃತ್ತಿಯಾಗಿದ್ದರೂ, ಕ್ರಮೇಣ ಬರುಬರುತ್ತ ಕೃಷಿಯೇ ಅಲ್ಲಿನ ಮುಖ್ಯ ವೃತ್ತಿಯಾಗಿ ಕಂಡುಬಂದಿದೆ. ಹಾಗೆ ಇಂದಿಗೂ ಕಂಡುಬರುತ್ತಿದೆ. ಬಿಡುವಿನ ದಿನಗಳಲ್ಲಿ ಜನರು ಬೇಟೆಯಾಡುತ್ತಿದ್ದರು. ಕೃಷಿಯನ್ನೇ ಮುಖ್ಯ ಉದ್ಯೋಗವಾಗಿಸಿಕೊಂಡಿದ್ದರೂ ಆಗಾಗ ಇವರೂ ಬೇಟೆಯಾಡುವುದು ಸಾಮಾನ್ಯವಾಗಿತ್ತು.

ಮಲೆನಾಡಿನಲ್ಲಿ ಮೊದಲು ಕೃಷಿ ಮಾಡಲು ಸಾಕಷ್ಟು ಭೂಮಿ ಇರುತ್ತಿರಲಿಲ್ಲ, ಏಕೆಂದರೆ ದಟ್ಟವಾದ ಕಾಡುಗಳಿಂದ ಕೂಡಿದ್ದು, ಒಕ್ಕಲುತನಕ್ಕೆ ಭೂಮಿಯನ್ನು ಸಿದ್ಧಗೊಳಿಸುವುದು ಸಾಧ್ಯವಾಗುತ್ತಿರಲಿಲ್ಲ. ನಾಗರೀಕತೆ ಬೆಳೆದಂತೆಲ್ಲ ಕಾಡನ್ನು ಕಡಿದು ಉಳುಮೆಗೆ ಯೋಗ್ಯವಾದ ಭೂಮಿಯನ್ನು ಸಿದ್ಧಗೊಳಿಸುತ್ತಾ ಬಂದರು. ಇದು ಅಲ್ಲಿ ಜನಸಂಖ್ಯೆ ಹೆಚ್ಚಾದಂತೆ ಅನಿವಾರ್ಯವೂ ಆಗಿತ್ತು. ಅದೇ ಇಂದು ಮಲೆನಾಡಿನಲ್ಲಿ ಅಂಗೈ

ಅಗಲ ಭೂಮಿಯೂ ಖಾಲಿ ಉಳಿದಿರುವುದು ಕಂಡುಬರುವುದಿಲ್ಲ. ಕಾಡುಗಳೆಲ್ಲಾ ಕೃಷಿ ಉದ್ದೇಶಕ್ಕಾಗಿ ಕಡಿದು ನಾಶವಾಗುತ್ತಿವೆ. ಖಾಲಿ ಇರುವ ಜಾಗಕ್ಕೆಲ್ಲಾ 'ಉಳುವವನೇ ಭೂಮಿಯ ಒಡೆಯ ' ಎಂಬ ಭೂ ಸುಧಾರಣಾ ಕಾನೂನು ಬಂದ ನಂತರ ಬೇಲಿ ಹಾಕಿಕೊಂಡು ಗದ್ದೆ-ತೋಟಗಳನ್ನು ಮಾಡಿಕೊಳ್ಳಲಾಯಿತು. ಈ ಸಮಯದಲ್ಲಿ ಬ್ರಾಹ್ಮಣ ಜಾತಿಯವರಿಗಿಂತ ಒಕ್ಕಲಿಗರಲ್ಲೇ ಪ್ರಬಲರಾದವರು ಈ ಉಪಯೋಗವನ್ನು ಸರಿಯಾಗಿ ಬಳಸಿಕೊಂಡರು. ಆದ್ದರಿಂದ ಇಂದು ಮಲೆನಾಡಿನಲ್ಲಿ ಮೇಲ್ಜಾತಿಯವರಾದ ಬ್ರಾಹ್ಮಣರು ಹಿಂದೆ ಎಷ್ಟು ಭೂಮಿ ಹೊಂದಿದ್ದರೋ ಅದಕ್ಕಿಂತ ಕಡಿಮೆಯೇ ಹೊರತು ಹೆಚ್ಚು ಭೂಮಿಯನ್ನು ಹೊಂದಿಲ್ಲ. ಎಲ್ಲೋ ಒಬ್ಬಿಬ್ಬರು ಹೆಚ್ಚು ಜಮೀನು ಮಾಡಿರಬಹುದು. ಅದೇ ಒಕ್ಕಲಿಗರಲ್ಲಿ ಇಂದು ಬಹಳಷ್ಟು ಜನ ಹಿಂದೆ ಯಜಮಾನರ ಮನೆಯಲ್ಲಿ , ಬ್ರಾಹ್ಮಣರ ಮನೆಯಲ್ಲಿ ಒಕ್ಕಲಾಗಿದ್ದವರು, ಕೂಲಿಯಾಳಾಗಿದ್ದವರು ದೊಡ್ಡ ದೊಡ್ಡ ಶ್ರೀಮಂತರಾಗಿದ್ದಾರೆ. ಇವರು ದೊಡ್ಡ ಶ್ರೀಮಂತರಾಗುವುದರ ಭರಾಟೆಯಲ್ಲಿ ಸಾಮಾನ್ಯರು ಮೊದಲಿನಂತೇ ಉಳಿದಿದ್ದಾರೆ. ಆಧುನಿಕತೆಯ ಪ್ರಭಾವ ಕೆಳವರ್ಗದ ಜನರು ಮೊದಲು ಕಡಿಮೆ ಇದ್ದಿತು. ಹೀಗೆ ಮಲೆನಾಡಿನ ಜನರಲ್ಲಿ ಹೆಚ್ಚು ಹೆಚ್ಚು ಶ್ರೀಮಂತರಾಗುತ್ತಾ ಹೋದಂತೆ ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಾ ಬಂದಿರುವುದನ್ನು ಗಮನಿಸಬಹುದು.

ಮಲೆನಾಡಿನಲ್ಲಿ ಬಹುಸಂಖ್ಯಾತರಾಗಿದ್ದ 'ಒಕ್ಕಲಿಗರು ' ಒಕ್ಕಲುತನವನ್ನು ಮುಖ್ಯ ವೃತ್ತಿಯಾಗಿಟ್ಟುಕೊಂಡ ಕೃಷಿಕರಾಗಿದ್ದರು. ಮೊದಲು ಒಕ್ಕಲು ಮಾಡುವವರಿಂದಲೇ ವೃತ್ತಿ ದೃಷ್ಟಿಯಿಂದ ಅದೊಂದು ಜಾತಿಯಾಗಿ ಕಂಡುಬಂದಿತು. ನಂತರ ಬರುಬರುತ್ತ ಇತರ ಜಾತಿಯವರೂ ಒಕ್ಕಲನ್ನೇ ಅನುಸರಿಸಿದ್ದರಿಂದ ಇಂದು ಒಕ್ಕಲುತನಕ್ಕೂ, ಜಾತಿಗೂ ಯಾವುದೇ ಸಂಬಂಧವಿಲ್ಲದಂತಾಗಿದೆ. ಬ್ರಾಹ್ಮಣರಲ್ಲೂ ವಿರಳವಾಗಿ ಒಕ್ಕಲುತನವಿದ್ದುದು ಮಲೆನಾಡಿನಲ್ಲಿ ಕಂಡುಬರುತ್ತದೆ.

ಮಲೆನಾಡಿನಲ್ಲಿ ಪ್ರಾಕೃತಿಕ ಲಕ್ಷಣಗಳಿಗೆ ಅನುಗುಣವಾಗಿ ಅಲ್ಲಿ ಬೆಳೆಯುತ್ತಿದ್ದ ಬೆಳೆಗಳು ವಿಶಿಷ್ಟವಾಗಿದ್ದವು. ದಟ್ಟವಾದ ಕಾಡುಪ್ರದೇಶ, ಸಮುದ್ರ ಮಟ್ಟದಿಂದ ಗಣನೀಯವಾಗಿ ಎತ್ತರದಲ್ಲಿರುವ ಕೃಷಿ ಭೂಮಿ, ಧಾರಾಕಾರವಾಗಿ ಸುರಿಯುವ ಮಳೆ,

ಆಹ್ಲಾದಕರ ತಂಪು ಹವಾಮಾನಗಳಿಂದಾಗಿ ಭತ್ತ, ಅಡಿಕೆಗಳನ್ನು ಮುಖ್ಯವಾಗಿ ಬೆಳೆಯುತ್ತಿದ್ದರು. ಕೆಲವೆಡೆಗಳಲ್ಲಿ ಕಬ್ಬು, ತೆಂಗು, ಬಾಳೆಯನ್ನು ಬೆಳೆಯುತ್ತಿದ್ದರು. ಇಂದಿನ ಮಲೆನಾಡಿನಲ್ಲೂ ಭತ್ತವೇ ಮುಖ್ಯ ಆಹಾರ ಬೆಳೆ. ಆದರೆ ಅದು ಅಂದು ಅಗತ್ಯಕ್ಕಿಂತ ಹೆಚ್ಚು ಬೆಳೆದು ಮಾರುತ್ತಿದ್ದರು. ಅದರ ಬೆಲೆ ಕಡಿಮೆಯಾಗಿ, ಕೆಲಸ ಹೆಚ್ಚಾದುದರಿಂದ ಈಗ ಆ ಒಂದು ವರ್ಷದ ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಭತ್ತದ ಗದ್ದೆ ಇಟ್ಟುಕೊಂಡು, ಉಳಿದ ಜಾಗಕ್ಕೆಲ್ಲಾ ಅಡಿಕೆ ಹಾಕಲಾಯಿತು. ಮಲೆನಾಡಿನ ಅಡಿಕೆಗೆ ಇಂದಿಗೂ ಉತ್ತಮ ಬೆಲೆ ಇರುವುದರಿಂದ ಈಗ ಮಲೆನಾಡಿಗೆ ಬಂದರೆ ದಟ್ಟವಾದ ಕಾಡಿನ ಬದಲಿಗೆ ಎಲ್ಲೆಡೆಯಲ್ಲೂ ದಟ್ಟವಾದ ಅಡಿಕೆ ತೋಟಗಳು ಕಾಣ ಸಿಗುತ್ತವೆ. ಈ ಅಡಿಕೆ ತೋಟದ ಒಳಗೇ ಕಾಫಿ, ಕಾಳು ಮೆಣಸು, ಬಾಳೆ ಮೊದಲಾದ ಬೆಳೆಗಳನ್ನು ಇಂದಿಗೂ ಬೆಳೆಯುತ್ತಿದ್ದಾರೆ.

ಭತ್ತ ಇಂದಿಗೂ ಮಲೆನಾಡಿನಲ್ಲಿ ಮುಖ್ಯ ಆಹಾರ ಬೆಳೆಯಾಗಿ ಬಳಸುತ್ತಿರುವುದೇನೋ ನಿಜ, ಆದರೆ ಭತ್ತ ಬೆಳೆಯುವ ಕ್ರಮದಲ್ಲಿ ಭತ್ತದ ಬೀಜಗಳಲ್ಲೆಲ್ಲಾ ಇಂದು ಆಧುನಿಕತೆಯ, ಕೈಗಾರಿಕೆಗಳ, ಜಾಗತೀಕರಣದ ದಟ್ಟ ಪರಿಣಾಮಗಳನ್ನು ಕಾಣಬಹುದು. ಹಿಂದೆ ಹಸುಗಳ ಕೊಟ್ಟಿಗೆ ಗೊಬ್ಬರ ಬಳಸಿ, ತಾವೇ ಹಿಂದಿನ ವರ್ಷವೇ ಸಂಗ್ರಹಿಸಿಟ್ಟ ಭತ್ತದ ಬೀಜಗಳನ್ನು ಹಾಕಿ ನೇಗಿಲಿನಿಂದ ಹೂಳಿ ನಾಟಿ ಮಾಡುತ್ತಿದ್ದರು. ಈ ಬಗೆಗೆ ಕುವೆಂಪು ಅವರ ಕಾದಂಬರಿಗಳಲ್ಲಿ ಹೆಚ್ಚಿನ ವಿವರಗಳು ತಿಳಿದುಬರುತ್ತವೆ. ಅಂದು ಆ ಸನ್ನಿವೇಶ ನೋಡುವುದೇ ಸೊಗಸಾಗಿತ್ತು. ಗೊರಬು, ಎತ್ತುಗಳು, ಕಂಬಳಿಕೊಪ್ಪೆ, ನೇಗಿಲು, ಸಾಲಾಗಿ ಹೆಂಗಸರು ನಾಟಿ ಮಾಡುವುದು, ಜಿನುಗುವ ಮಳೆ ಆ ನೋಟವೇ ಸುಂದರವಾಗಿರುತ್ತಿತ್ತು. ಇಂದು ಕಾಲಕ್ಕೆ ಸರಿಯಾಗಿ ಮಳೆಯೂ ಆಗುತ್ತಿಲ್ಲ, ಜೊತೆಗೆ ವಿವಿಧ ಕಂಪನಿಗಳ ರಾಸಾಯನಿಕ ಗೊಬ್ಬರಗಳು. ಇಂದಿನ ಭತ್ತದ ತಳಿ ಎಷ್ಟರ ಮಟ್ಟಿಗೆ ವಿಷಯುಕ್ತ ಎಂದರೆ ಬೀಜಗಳ ಸಂರಕ್ಷಣೆಗೇ ರಾಸಾಯನಿಕ ಬೆರೆಸಿರುತ್ತಾರೆ. ನಂತರ ಸಸಿಗಳಾದಾಗ, ಸ್ವಲ್ಪ ಹಸಿರಾಗಿ ಬೆಳೆದ ನಂತರ, ಭತ್ತ ಮೊಳೆಯುವ ಸಂದರ್ಭ, ಏಡಿ, ಮೀನುಗಳಿಗಾಗಿ, ಕ್ರಿಮಿ ಕೀಟಗಳಿಗಾಗಿ ಹೀಗೆ ಪ್ರತಿಯೊಂದು ಹಂತದಲ್ಲೂ ರಾಸಾಯನಿಕ ಗೊಬ್ಬರ, ಔಷಧಿಗಳ ಪ್ರಭಾವವನ್ನು ಕಾಣಬಹುದು. ಅಷ್ಟೇ ಅಲ್ಲದೆ ಹೊಸ ಹೊಸ ಭತ್ತದ ತಳಿಗಳು. ಆ ಬೀಜಗಳು ಅದೇ ವರ್ಷ ಬೆಳೆದು ತಿನ್ನಲು ಮಾತ್ರ. ಮುಂದಿನ ವರ್ಷ ಅದನ್ನು ನೆನೆಸಿದರೆ

ಮೊಳಕೆಯೇ ಬರುವುದಿಲ್ಲ. ಮತ್ತೆ ರೈತ ಹೆಚ್ಚು ಹಣ ಕೊಟ್ಟು ಅದೇ ಕಂಪನಿಯಲ್ಲೇ ಬೀಜ ತರಬೇಕು. ಈ ರೀತಿ ಮುಗ್ಧ ರೈತರನ್ನು ಬಲಿಷ್ಠ ರಾಷ್ಟ್ರಗಳು ತಮ್ಮ ಕೈಗೊಂಬೆಯಾಗಿ ಮಾಡಿಕೊಂಡಿದ್ದಾರೆ.

ಅಡಿಕೆ ಮಲೆನಾಡಿನ ಇನ್ನೊಂದು ಮುಖ್ಯ ಬೆಳೆ. ಭತ್ತ ಆಹಾರ ಸೇವನೆಯ ಅಗತ್ಯವನ್ನು ಪೂರೈಸಿದರೆ, ಇದು ಇಲ್ಲಿನ ಮುಖ್ಯ ವಾಣಿಜ್ಯ ಬೆಳೆಯಾಗಿದೆ. ಅಡಿಕೆ ಮರಗಳ ಅಂಕಿ-ಸಂಖ್ಯೆಗಳು ಚಪ್ಪರದ ವಿಸ್ತೀರ್ಣದ ಮೇಲೆ ಆ ಮನೆಯ ಆದಾಯ ಲೆಕ್ಕ ಹಾಕಲಾಗುತ್ತಿತ್ತು. ಇಂದಿಗೂ ಇಂತಹ ನಂಬಿಕೆಗಳು ಮುಂದುವರಿದುಕೊಂಡು ಬಂದಿವೆ. ಅಡಿಕೆಯ ಕೊಯ್ಲು ಕೂಡ ಸಂಭ್ರಮದ ಸಮಯವಾಗಿರುತ್ತಿತ್ತು. ರಾತ್ರಿ ಹನ್ನೊಂದು ಹನ್ನೆರಡು ಗಂಟೆಯವರೆಗೆ ಅಡಿಕೆ ಸುಲಿಯುತ್ತಿದ್ದರಿಂದ ಆ ವೇಳೆಯಲ್ಲಿ ಗಾದೆ ಮಾತುಗಳು, ಒಗಟುಗಳು, ಜಾನಪದ ಹಾಡುಗಳು, ಕತೆ, ಊರಿನ ಸಮಾಚಾರ ಇಂತಹ ಅನೇಕ ಸಾಂಸ್ಕೃತಿಕ ವಿಚಾರಗಳು, ದಿನನಿತ್ಯದ ಪ್ರಾದೇಶಿಕ ವಾರ್ತೆಗಳು ಅಲ್ಲಿ ಚರ್ಚೆಯಾಗುತ್ತಿದ್ದವು. ಆಧುನಿಕತೆಯ ಪ್ರಭಾವ ಇಂದು ಇಲ್ಲಿಯೂ ಕಾಣುತ್ತಿದೆ. ಆಗಿನಂತೆ ಮಾತುಗಳಿಗೆ ಕಡಿವಾಣವೇ ಇಲ್ಲದಂತೆ ಹರಡುತ್ತಿದ್ದ ದಿನಗಳು ಇಂದಿಲ್ಲ. ಈಗ ಎಲ್ಲರೂ ಮೌನವಾಗಿ ತಮ್ಮ ಕೆಲಸ ಮಾಡುತ್ತಿರುತ್ತಾರೆ. ಕಣ್ಣುಗಳು ಮಾತ್ರ ಟಿ.ವಿ.ಯ ಕಡೆಗೆ, ಟಿ.ವಿ. ಒಂದೇ ಈಗ ಮಾತನಾಡುತ್ತಿರುತ್ತದೆ. ಇದು ಎಷ್ಟರಮಟ್ಟಿಗೆ ಎಂದರೆ ಎಲ್ಲಿ ಟಿ.ವಿ. ಕೇಬಲ್ ಇರುತ್ತದೆಯೋ ಅಂತವರ ಮನೆಗೆ ಮಾತ್ರ ಈಗ ಅಡಿಕೆ ಸುಲಿಯಲು ಜನ ಸೇರುತ್ತಾರೆ. ಕೊಳಗ, ಬುಟ್ಟಿ, ಡಬ್ಬದ ಲೆಕ್ಕದಲ್ಲಿ ಕಾಲಕ್ಕೆ ತಕ್ಕಂತೆ ಸಂಬಳವೂ ಬದಲಾಗುತ್ತಿದೆ. ಹಿಂದೆ ದೀಪದ ಬೆಳಕಿತ್ತು ಇಂದು ವಿದ್ಯುತ್ ಬೆಳಕು ಅಡಿಕೆ ಸುಲಿಯುವುದು ಇತ್ತೀಚೆಗೆ ಬಹಳ ಕಷ್ಟದ ಕೆಲಸವಾಗಿ ಈಗ ಆಳುಗಳೂ ಸಿಗದೆ ಸುಲಿಯುವ ಯಂತ್ರಗಳ ಸಂಶೋಧನೆಯೂ ಆಗಿದೆ, ಆಗುತ್ತಾ ಇದೆ. ಮರ ಹತ್ತಲು ಏಣಿ, ಔಷಧಿ ಹೊಡೆಯಲು ಮಿಷನ್, ಬೇಯಿಸಿ ಒಣಗಿಸಲು ಡ್ರೈಯರ್‌ಗಳು, ಹೊಸ ಬಗೆಯ ಒಲೆಗಳು, ಒಣಗಿಸಲು ಹಿಂದೆ ಓಟೆಯಿಂದ ಮಾಡಿದ ತಟ್ಟಿ ಬಳಸುತ್ತಿದ್ದರು. ಈಗ ತಗಡಿನಿಂದ ಮಾಡಿದ ತಟ್ಟೆಗಳು ಹೀಗೆ ಆಧುನಿಕತೆ ಬೆಳೆದಂತೆ ಬೆಲೆ ಹೆಚ್ಚಾದಂತೆ ಇಂತಹ ಹೊಸ ಹೊಸ ಆವಿಷ್ಕಾರಗಳು ಒಂದೆಡೆಯಿಂದ ಆಗುತ್ತಿದ್ದರೆ, ಇನ್ನೊಂದೆಡೆ ಸಂಪ್ರದಾಯ, ಸಂಸ್ಕೃತಿಗಳು ವಿನಾಶದ ಅಂಚಿಗೆ ಹೋಗುತ್ತಿದ್ದು ಹೊಸ ಸಂಸ್ಕೃತಿ ರೂಪುಗೊಳ್ಳುತ್ತಿದೆ.

ಮಲೆನಾಡಿನಲ್ಲಿ ಭತ್ತ, ಅಡಿಕೆ, ಜೊತೆಗೆ ಕಾಫಿ, ತೆಂಗು, ಕಾಳು ಮೆಣಸು, ಬಾಳೆ, ಏಲಕ್ಕಿ ಇಂತಹ ಬೆಳೆಗಳನ್ನು ಮೊದಲಿನಿಂದಲೂ ಹೆಚ್ಚಲ್ಲದಿದ್ದರೂ ಕೊನೆಯ ಪಕ್ಷ ತಮ್ಮ ತಮ್ಮ ಮನೆಯ ಬಳಕೆಗೆ ಸಾಕಾಗುವಷ್ಟು ಬೆಳೆಯುತ್ತಿದ್ದರು. ಈಗಲೂ ಬೆಳೆಯುತ್ತಾರೆ. ತರಕಾರಿ, ಸೊಪ್ಪು ಇಂತಹವುಗಳು ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದರು. ಆದರೆ ಈಗ ಎಲ್ಲೋ ಕೆಲವೊಬ್ಬರು ಇಂತಹ ಬೆಳೆಗಳನ್ನೆಲ್ಲಾ ಬೆಳೆಯುತ್ತಿದ್ದಾರೆ. ಹೆಚ್ಚಿನ ಜನ ಅಂಗಡಿ, ಮಾರುಕಟ್ಟೆಯಿಂದ ತೆಗೆದುಕೊಂಡು ಬಂದೇ ಮಾಡುತ್ತಾರೆ. ಆಧುನಿಕ ಪ್ರಭಾವದ ನಂತರ ಜಾಗತಿಕ ಮಾರುಕಟ್ಟೆ ಇದ್ದುದರಿಂದ ಕೃಷಿಕರು ಉತ್ಪಾದಿಸುವ ಬೆಳೆಗಳೂ ಬದಲಾದವು. ಮೊದಲು ಭತ್ತ ಬೆಳೆಯುತ್ತಿದ್ದ ಗದ್ದೆಗಳಿಗೆ, ಖಾಲಿ ಉಳಿದಿದ್ದ ಜಾಗಗಳಿಗೆಲ್ಲಾ ರಬ್ಬರ್, ಅಕೇಶಿಯಾ ಅಂತಹ ವಾಣಿಜ್ಯ ಬೆಳೆಗಳನ್ನು ಹಾಕುತ್ತಿದ್ದಾರೆ. ಇದರಿಂದ ಕಡಿಮೆ ಅವಧಿಯಲ್ಲಿ ಹೆಚ್ಚು ಲಾಭ ಪಡೆಯಬಹುದು ಎಂಬ ಆಸೆ ಇಂದಿನವರಲ್ಲಿ ಹೆಚ್ಚಾಗಿ ಕಂಡುಬರುತ್ತಿರುವುದನ್ನು ಗಮನಿಸಬಹುದು.

ಮಲೆನಾಡಿನಲ್ಲಿ ಈ ಎರಡು ವರ್ಷಗಳ ಹಿಂದೆ ಹೆಚ್ಚು ಕಂಡುಬರುತ್ತಿದ್ದ ವಾಣಿಜ್ಯ ಬೆಳೆ ಎಂದರೆ ವೆನಿಲ್ಲಾ. ಇದರಿಂದ ಮಲೆನಾಡಿನಲ್ಲಿ ಕೆಲವರು ಆಗರ್ಭ ಶ್ರೀಮಂತರಾದರೆ, ಇನ್ನೂ ಕೆಲವರು ಕುಟುಂಬ ಸಮೇತವಾಗಿ ಪ್ರಾಣ ಕಳೆದುಕೊಂಡಂತಹ ಘಟನೆಗಳೂ ನಡೆದಿವೆ. ಕಾರಣ ವೆನಿಲ್ಲಾ ಬೆಳೆಗಿದ್ದ ಅಪಾರ ಬೆಲೆ. ಅದು ಎಷ್ಟರ ಮಟ್ಟಿಗೆ ಅಂದರೆ ಪ್ರತಿ ಕೆ.ಜಿ.ಗೆ ೪-೫ ಸಾವಿರ ರೂಪಾಯಿ. ಇದರಿಂದ ಎಲ್ಲರೂ ಮನೆಯ ಸುತ್ತಮುತ್ತಲಿದ್ದ ತರಕಾರಿ, ಹೂವಿನಗಿಡ, ಕೆಲವರು ಗದ್ದೆಗಳಲ್ಲೂ ವೆನಿಲ್ಲಾ ಬೆಳೆಸಲು ಪ್ರಾರಂಭಿಸಿದರು. ಸಾಕು ಪ್ರಾಣಿಗಳಾದ ಕೋಳಿಗಳನ್ನೆಲ್ಲಾ ಸಾಕುವುದೇ ನಿಲ್ಲಿಸಿದರು. ಕೇವಲ ಎರಡು ವರ್ಷ ಮಾತ್ರ ಈ ಬೆಲೆ ಇದ್ದಿದ್ದು ನಂತರ ಕೆ.ಜಿ.ಗೆ ೬೦-೭೦ ರೂ.ಗೆ ಇಳಿಯಿತು. ನಂತರ ವೆನಿಲ್ಲಾವನ್ನು ಕೇಳುವವರೇ ಇಲ್ಲದಂತ ಸ್ಥಿತಿಯೂ ಉಂಟಾಯಿತು. ಇಂತಹ ವಾಣಿಜ್ಯ ಬೆಳೆಗಳ ಜೊತೆಗೆ ರಬ್ಬರ್, ತಾಳೆಯಂತಹ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇವೆಲ್ಲಾ ಹಣದ ಆಸೆಗಾಗಿ ಮಾತ್ರ ಬೆಳೆಯುವ ಬೆಳೆಗಳಾಗಿವೆ.

ಮಲೆನಾಡಿನಲ್ಲಿ ಇಷ್ಟೆಲ್ಲಾ ಬೆಳೆಗಳನ್ನು ಬೆಳೆಯುತ್ತಾ ಬೇಸಾಯವನ್ನು ಇಲ್ಲಿ ಮುಖ್ಯ ಕಸುಬಾಗಿ ನಂಬಿಕೊಂಡಿದ್ದರೂ, ಇತ್ತೀಚೆಗೆ ಕೃಷಿಯ ಬಗೆಗಿನ ಆಸಕ್ತಿ ಕಡಿಮೆಯಾಗುತ್ತಾ

ಬಂದಿದೆ. ಕಾರಣ ನಗರೀಕರಣ. ಈಗ ನಗರಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚು ಲಭ್ಯವಿರುವುದರಿಂದ ಗ್ರಾಮೀಣ ಪ್ರದೇಶದವರು ಆ ಕಡೆಗೆ ಆಕರ್ಷಿತರಾಗುತ್ತಿದ್ದಾರೆ. ಇಂದು ಮಲೆನಾಡಿನ ಶ್ರೀಮಂತ ವರ್ಗದವರು ತಮ್ಮ ಮಕ್ಕಳಿಗೆ ಎಷ್ಟೇ ಹಣ ಖರ್ಚು ಮಾಡಿಯಾದರೂ ಒಳ್ಳೆಯ ವಿದ್ಯಾಭ್ಯಾಸ ಕೊಡಿಸುತ್ತಾರೆ. ಮಕ್ಕಳು ನಗರದಲ್ಲೇ ಕೆಲಸಕ್ಕೆ ಸೇರಿಕೊಳ್ಳುತ್ತಾರೆ. ನಂತರ ಅವರ ಮುಂದಿನ ಪೀಳಿಗೆ, ತಂದೆ-ತಾಯಿ ಎಲ್ಲರನ್ನೂ ಅಲ್ಲಿಗೇ ಕರೆಸಿಕೊಳ್ಳುತ್ತಾರೆ. ಇದರಿಂದ ಈಗ ಮಲೆನಾಡಿನಲ್ಲಿ ಹೆಚ್ಚು ಹೆಚ್ಚು ಜಮೀನಿದ್ದವರೆಲ್ಲಾ ಮಾರಾಟ ಮಾಡಿ ನಗರಕ್ಕೆ ಹೋಗಲು ಸಿದ್ಧರಾಗಿದ್ದಾರೆ. ಇನ್ನು ಕೆಳವರ್ಗದವರು, ಬಡವರು ಇಲ್ಲಿ ದಿನಪೂರ್ತಿ ಕಷ್ಟಪಟ್ಟು ದುಡಿಯುವ ಬದಲು ನಗರಗಳಿಗೆ ಹೋಗಿ ಕಷ್ಟವಿಲ್ಲದೆ ದುಡಿಯುವ ಉದ್ಯೋಗಗಳನ್ನು ಹುಡುಕಿಕೊಳ್ಳುತ್ತಿದ್ದಾರೆ. ಇದರಿಂದ ಜಮೀನು ಹೊಂದಿದವರು ಮತ್ತು ದುಡಿಯುವ ವರ್ಗ ಎರಡೂ ಇತ್ತೀಚೆಗೆ ಮಲೆನಾಡಿನಲ್ಲಿ ಕಡಿಮೆಯಾಗುತ್ತಾ ಬಂದಿದೆ. ಮಧ್ಯಮ ವರ್ಗದವರು ಸ್ವಲ್ಪ ಹೆಚ್ಚಾಗಿ ಈಗ ಕೃಷಿಯನ್ನೇ ಅವಲಂಬಿಸಿಕೊಂಡಿರುವುದು ಕಂಡುಬರುತ್ತಿದೆ. ಇವರಿಗೂ ದುಡಿಯಲು ಕಷ್ಟ , ಕೆಲಸದ ಆಳುಗಳೂ ಸಿಗುವುದಿಲ್ಲ, ಇದರಿಂದ ಬೇಸಾಯ ಬೇಸರ ತರುವ ಸ್ಥಿತಿ ಉಂಟಾಗಿದೆ.

ಆಧುನಿಕ ಮಲೆನಾಡಿನಲ್ಲಿ ಇಂದು ಇಂತಹ ಸಾಕಷ್ಟು ಬದಲಾವಣೆಗಳಾಗುತ್ತಿದ್ದು ಈ ನಡುವೆಯೂ ಕೆಲವು ಪ್ರಗತಿಪರ ರೈತರು ಹೊಸ ಹೊಸ ಪ್ರಯೋಗಗಳ ಮೂಲಕ ಬೇಸಾಯದಲ್ಲೇ ಅಧಿಕ ಲಾಭ ಪಡೆಯುವತ್ತ ಪ್ರಯತ್ನಿಸುತ್ತಿದ್ದಾರೆ. ಸಾವಯವ ಗೊಬ್ಬರ ಬಳಕೆ, ಹೈನುಗಾರಿಕೆ, ಮೀನುಗಾರಿಕೆ, ಕೋಳಿ ಸಾಕಾಣಿಕೆ, ಹೊಸ ಯಂತ್ರಗಳ ಆವಿಷ್ಕಾರ ಇಂತಹ ಹಲವಾರು ಪ್ರಯತ್ನಗಳು ವ್ಯವಸಾಯದ ಜೊತೆಗೆ ನಡೆಯುತ್ತಿರುವುದು ಕಂಡುಬಂದಿದೆ. ಇರುವುದರಲ್ಲಿಯೇ ಉಪಯುಕ್ತವಾಗಿ ಬಳಸಿಕೊಂಡು ಸುಖವಾಗಿ ಬದುಕಲು ಇಂದಿನ ಮಲೆನಾಡಿನ ಪ್ರಜ್ಞಾವಂತರು ಪ್ರಯತ್ನಿಸುತ್ತಿದ್ದಾರೆ. ಇದು ನಿಜವಾಗಿಯೂ ಆಶಾದಾಯಕವಾದದ್ದು ಎನಿಸುತ್ತದೆ.

೫.೩: ಶಿಕ್ಷಣ ಕ್ರಮ :

ಪ್ರಾಚೀನ ಕಾಲದಿಂದಲೂ ಶಿಕ್ಷಣ ಪದ್ಧತಿ ಎಂಬುದು ನಮ್ಮ ನಡುವೆ ಇರುವುದನ್ನು ಹಾಗೆ ಅದು ಮೊದಲು ಅಗ್ರಹಾರ, ಬ್ರಹ್ಮಪುರಿ, ಮಠ, ದೇವಾಲಯಗಳ ಮೂಲಕ

ಜನರಿಗೆ ತಲುಪುತ್ತಿದ್ದುದನ್ನು ಶಾಸನಗಳಿಂದ, ಕಾವ್ಯಗಳಿಂದ ತಿಳಿಯಬಹುದು. ಶಿಕ್ಷಣ ಹಿಂದಿನಿಂದಲೂ ಕಂಡುಬಂದರೂ ಅದು ಎಲ್ಲರಿಗೂ ಮುಕ್ತವಾಗಿ ದೊರೆಯುತ್ತಿರಲಿಲ್ಲ. ಸಾಮಾಜಿಕ ಮತ್ತು ಐತಿಹಾಸಿಕ ಕಾರಣಗಳಿಂದಾಗಿ ಶಿಕ್ಷಣ ಒಂದು ವರ್ಗದ ಜನರ ಸ್ವತ್ತಾಗಿ, ಸಾಮಾನ್ಯ ಜನರಿಗೆ ಕೈಗೆಟುಕದ ಸ್ಥಿತಿಯಾಗಿತ್ತು. ನಂತರ ನಡೆದ ಅನೇಕ ಚಳುವಳಿ, ಹೋರಾಟದ ಪ್ರಭಾವದಿಂದ ಮಧ್ಯಮ ವರ್ಗದವರಿಗೆ ಶಿಕ್ಷಣ ಲಭ್ಯವಾಯಿತು. ಆಮೇಲೆ ನಡೆದ ಹಲವಾರು ಪ್ರಯತ್ನಗಳ ಫಲವಾಗಿ ಬ್ರಿಟೀಷರ ಆಳ್ವಿಕೆ ಕೊನೆಗೊಂಡು ಕೆಲವು ವರ್ಷಗಳ ನಂತರ ಕೆಳ ವರ್ಗದವರಿಗೂ ಶಿಕ್ಷಣ ಪಡೆಯಲು ಸಾಧ್ಯವಾಯಿತು.

ಈ ಮೇಲಿನ ಎಲ್ಲಾ ಅಂಶಗಳೂ ಮಲೆನಾಡಿನಲ್ಲೂ ಕಂಡುಬಂದವು. ಕುವೆಂಪು ಕೃತಿಗಳ ಕಥೆಯ ಕಾಲದಲ್ಲಿ ಬದಲಾವಣೆಗೆ ಮುಖಾಮುಖಿಯಾದ, ಆದರೆ ಹಳೆಯ ವಿಧಾನಗಳನ್ನು ಸ್ವಲ್ಪ ಮಟ್ಟಿಗೆ ಉಳಿಸಿಕೊಂಡಿದ್ದ ಶಿಕ್ಷಣ ಪದ್ಧತಿಯನ್ನು ಕಾಣುತ್ತೇವೆ. ದುಡಿಯುವ ವರ್ಗದವರಲ್ಲಿ ಶಿಕ್ಷಣದ ಕುರಿತಾದ ಆಲೋಚನೆಗಳು ಆ ಕಾಲದಲ್ಲಿ ಬರದಿದ್ದರೂ ಮೇಲ್ಜಾತಿ ಹಾಗೂ ಮಧ್ಯಮ ವರ್ಗದವರಲ್ಲಿ ಕೆಲವರು ಆಧುನಿಕತೆಯಿಂದ ದೂರವಿದ್ದೂ ವಿದ್ಯೆಯ ಬಗೆಗೆ ಆಸಕ್ತಿ ತೋರಿದರು. ಇನ್ನೂ ಕೆಲವರು ಆಧುನಿಕ ಶಿಕ್ಷಣದೊಂದಿಗೆ ಬೆರೆತು ನಂತರ ಪುನಃ ಹಳ್ಳಿಯ ಜೀವನವನ್ನು ಮುಖಾಮುಖಿಯಾಗಿಸಿಕೊಂಡರು. ಇದಕ್ಕೆ ಉತ್ತಮ ಉದಾಹರಣೆಯಾಗಿ 'ಕಾನೂರು ಹೆಗ್ಗಡತಿ ' ಯಲ್ಲಿನ 'ಹೂವಯ್ಯ ', 'ರಾಮಯ್ಯ 'ರ ಪಾತ್ರಗಳನ್ನು ತಿಳಿಯಬಹುದು. ಅವರು ಮೈಸೂರಿನಿಂದ ಶಿಕ್ಷಣ ಪಡೆದು ಬಂದು ಹಳ್ಳಿಯಲ್ಲಿ ಬದುಕನ್ನು ಸಾಗಿಸುವುದು ಈ ಕಾದಂಬರಿಯ ಪ್ರಾರಂಭದಲ್ಲೇ ಕಂಡುಬರುತ್ತದೆ.

ಮಲೆನಾಡಿನಲ್ಲಿ ಶಿಕ್ಷಣ ಕುರಿತು ಹಿಂದೆ ಕೆಲವು ಸಾಂಪ್ರದಾಯಿಕ ಭಾವನೆಗಳು ಮನೆ ಮಾಡಿಕೊಂಡಿದ್ದವು. ಸಾಮಾನ್ಯರು, ಕೆಳ ಜಾತಿಯವರು ಶಿಕ್ಷಣವನ್ನು ಪಡೆಯುವುದು ಒಳಿತಲ್ಲ, ಅನಿಷ್ಟಕರ ಎಂದು ಮೊದಲು ಭಾವಿಸುತ್ತಿದ್ದರು. ಬ್ರಾಹ್ಮಣರಿಗೆ ವಿದ್ಯಾಭ್ಯಾಸದ ಅನುಕೂಲತೆಗಳಿರುತ್ತಿದ್ದು, ಇತರರು ಆ ಹಕ್ಕನ್ನು ಪಡೆಯಬಾರದೆಂದು ಅವರು ಆಶಿಸುತ್ತಿದ್ದರು. ಶೂದ್ರಾದಿಗಳು ಹಾಗೆ ವಿದ್ಯೆ ಪಡೆದರೆ ಉದ್ಧಾರವಾಗದೆ ನಾಶವಾಗುತ್ತಾರೆಂದು ಬಲವಾಗಿ ನಂಬಿದ್ದರು. 'ಕಾನೂರು ಹೆಗ್ಗಡತಿ ' ಕಾದಂಬರಿಯಲ್ಲಿ ಈ

ಕುರಿತ ನಿದರ್ಶನಗಳು ಕಂಡುಬರುತ್ತವೆ. ಶಿಕ್ಷಣ ಪಡೆಯುತ್ತಿದ್ದ ಕಾನೂರಿನ ಹೂವಯ್ಯ ರಾಮಯ್ಯರ ಬಗ್ಗೆ ಜೋಯಿಸರು ಚಂದ್ರಯ್ಯಗೌಡರ ಹತ್ತಿರ ಹೇಳುವ ಮಾತುಗಳಿವು "ನಾನು ಹೇಳಿದ್ದೆ ನಿಮಗೆ ಮೊದಲೇ ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳುಮಾಡಿ ಬಿಡುತ್ತದೆ ಎಂದು ! ದೇವರು ದಿಂಡಿರು, ಭಕ್ತಿ-ಗಿಕ್ತಿ ಎಲ್ಲ ನಿರ್ನಾಮ ! ಜೊತೆಗೆ ನೂರಾರು ಹವ್ಯಾಸಗಳನ್ನು ಕೂಡ ಕಲಿತುಬಿಡುತ್ತಾರೆ. ನಿನ್ನ ಮನೆ, ಜಮೀನು ಉಳಿಯಬೇಕಾದರೆ ಅವರ ಓದು ನಿಲ್ಲಿಸಿ, ಮದುವೆ-ಗಿದುವೆ ಮಾಡಿ ಕೆಲಸಕ್ಕೆ ಹಚ್ಚು "[೬]. ಎಷ್ಟೋ ಶತಮಾನಗಳಿಂದ ಶಿಕ್ಷಣದಿಂದ ವಂಚಿತರಾದ ಜನರು ಮೈಕೊಡವಿಕೊಂಡು ಮೇಲೇಳಲು ಮತ್ತು ವಿದ್ಯೆಯನ್ನು ಕಲಿಯಲು ಪ್ರಯತ್ನವನ್ನು ಕಂಡು ಆತಂಕಗೊಂಡಿದ್ದವರ ಮನಃಸ್ಥಿತಿ ಈ ಮಾತಿನ ಮೂಲಕ ತಿಳಿಯಬಹುದು "ಈ ಶೂದ್ರ ಮಕ್ಕಳಿಗೆಲ್ಲ ಉಪನಿಷತ್ತು, ಭಗವದ್ಗೀತೆ ಗಂಧವಾದರೂ ಗೊತ್ತಾಗುತ್ತದೆಯೇ ?...... ಅದನ್ನೆಲ್ಲಾ ಓದಿ ಮನೆ ಹಾಳು ಮಾಡಿಕೊಳ್ಳುತ್ತಾರೆ ಅಷ್ಟೆ ! "[೭] ಇಂತಹ ಸಾಕಷ್ಟು ರೋಗಗ್ರಸ್ಥ ಮನಃಸ್ಥಿತಿಯನ್ನು ಕುವೆಂಪು ಕಾದಂಬರಿಗಳಲ್ಲಿ ಹೆಚ್ಚಾಗಿ ಕಾಣಬಹುದು. ಈ ಮನಃಸ್ಥಿತಿ ಕೇವಲ ಮೇಲ್ವರ್ಗ ದವರದ್ದಾಗಿರದೆ ಕೆಳವರ್ಗದವರೂ ಯಾವುದೇ ಪ್ರಶ್ನೆಗಳಿಲ್ಲದೆ ಇಂತಹ ಮನಃಸ್ಥಿತಿಯನ್ನೇ ಹೊಂದಿದ್ದರು. ತಮ್ಮ ಮಕ್ಕಳೂ ನಾವು ಮಾಡುವ ಕೆಲಸವನ್ನೇ ಮಾಡಿಕೊಂಡು ಇದ್ದರೆ ಸಾಕು ಓದು-ಬರಹ ಕಲಿತು ಏನು ಮಾಡಬೇಕು ? ಎಂಬ ಭಾವನೆ ಅಂದು ಮಲೆನಾಡಿನಲ್ಲಿ ಸಾರ್ವತ್ರಿಕವಾಗಿತ್ತು.

ಗಂಡು ಮಕ್ಕಳ ಓದನ್ನು ಕುರಿತೇ ಇಂತಹ ಅಭಿಪ್ರಾಯ ಇದ್ದ ಮೇಲೆ, ಇನ್ನು ಹೆಣ್ಣು ಮಕ್ಕಳು ಮಲೆನಾಡಿನಲ್ಲಿ ಶಿಕ್ಷಣ ಪಡೆಯುವ ಸಾಧ್ಯತೆಗಳೇ ಕಡಿಮೆ ಇತ್ತೆನ್ನಬಹುದು. ಹೆಣ್ಣು ಮಕ್ಕಳು ವಿದ್ಯೆಯನ್ನು ಪಡೆಯಬೇಕೆಂಬುದು ಕಾನೂರಿನ ಹೂವಯ್ಯನ ಆಧುನಿಕ ಮನೋಧರ್ಮವಾಗಿತ್ತು. ಆದರೆ ಇದಕ್ಕೆ ಯಾವುದೇ ಮಾನ್ಯತೆ ಇರಲಿಲ್ಲ. ಹೆಂಗಸರೂ ಓದು ಬರಹ ಕಲಿಯಬಹುದು ಎಂಬುದನ್ನು ಅಂದು ಮಲೆನಾಡಿನಲ್ಲಿ ಕಂಡೂ ಇರಲಿಲ್ಲ, ಕೇಳಿಯೂ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿಯೂ ಕುವೆಂಪುರವರ ಚಿಕ್ಕವರಿರುವಾಗ ಮಲೆನಾಡಿನಲ್ಲಿ ಸಾಂಪ್ರದಾಯಿಕವಾದ ಶಿಕ್ಷಣ ಕ್ರಮ ಅಸ್ತಿತ್ವದಲ್ಲಿದ್ದುದರ ಬಗೆಗೆ ಅವರ 'ನೆನಪಿನ ದೋಣಿಯಲ್ಲಿ' 'ಮಲೆನಾಡಿನ ಚಿತ್ರಗಳಲ್ಲಿ' ಕುವೆಂಪು ಅವರೇ ಹೇಳಿದ್ದಾರೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಲೆನಾಡಿನಲ್ಲಿ ಇಷ್ಟೆಲ್ಲಾ ತೊಂದರೆಗಳಿದ್ದರೂ ಕೆಲವೊಬ್ಬರಲ್ಲಿ ಇದ್ದ ಆಸಕ್ತಿಯ ಪರಿಣಾಮವಾಗಿ 'ಐಗಳ ಮಠ ' ಕಂಡುಬಂದಿತು. ಐಗಳು ವಾಸಿಸುತ್ತಿದ್ದ ಸ್ಥಳಕ್ಕೆ ಮಠ ಎಂದು ಕರೆಯುತ್ತಿದ್ದರು. ಇದು ಹೆಚ್ಚಾಗಿ ಅನುಕೂಲಸ್ಥರ, ಶ್ರೀಮಂತರ ಮನೆಯೇ ಆಗಿರುತ್ತಿತ್ತು. ಮಲೆನಾಡಿನ ದುರ್ಗಮ ಸ್ಥಳಕ್ಕೆ ಐಗಳು ಬಂದು ಅಕ್ಷರಾಭ್ಯಾಸ ನಡೆಸುವಲ್ಲಿಯ ತೊಂದರೆಗಳು, ಐಗಳ ಮತ್ತು ಮಕ್ಕಳ, ಐಗಳು ಮತ್ತು ಮನೆಯವರ ಸಂಬಂಧಗಳು, ಪಾಠ ಅಧ್ಯಯನಗಳು, ಮಲೆನಾಡಿನಲ್ಲಿ ಆ ಕಾಲದಲ್ಲಿ ಹೇಗಿರುತ್ತಿದ್ದವು ಎಂಬುದಕ್ಕೆ ಕುವೆಂಪು ಅವರ 'ಮಲೆನಾಡಿನ ಚಿತ್ರಗಳಲ್ಲಿನ 'ಮನೆಯ ಶಾಲೆಯ ಐಗಳ ಮಾಲೆ ' ಪ್ರಬಂಧದಲ್ಲಿ ಉಪಯುಕ್ತ ಮಾಹಿತಿ ನೀಡಿದ್ದಾರೆ.

ಕುವೆಂಪುರವರು ತಮ್ಮ ಬಾಲ್ಯದಲ್ಲಿನ ಶಿಕ್ಷಣ ಕ್ರಮವನ್ನು ಈ ಪ್ರಬಂಧದಲ್ಲಿ ಹಂಚಿಕೊಂಡಿದ್ದಾರೆ. ಈ ಮೂಲಕ ಅಂದಿನ ಶಿಕ್ಷಣ ಪದ್ಧತಿಯನ್ನು ತಿಳಿಯಬಹುದು. ಕುವೆಂಪು ಸರ್ಕಾರಿ ಸ್ಕೂಲ್‌ಗೆ ತೀರ್ಥಹಳ್ಳಿಗೆ ಸೇರುವುದಕ್ಕಿಂತ ಮುಂಚೆ ಮನೆ ಮಹಡಿಯ ಕಾಲೇಜಿನಲ್ಲಿ ಪಾಂಡಿತ್ಯ ಸಂಪಾದನೆ ಮಾಡುತ್ತಿದ್ದರು. ಇಲ್ಲಿಗೆ ಬರುತ್ತಿದ್ದ ಐಗಳು ದಕ್ಷಿಣ ಕನ್ನಡ ಜಿಲ್ಲೆಯಿಂದ ಘಟ್ಟ ಹತ್ತಿ ಬರುತ್ತಿದ್ದರು. ಇವರು ವಿದ್ಯಾವಂತರಾಗಿರುತ್ತಿದ್ದರು. ಪ್ರತಿಷ್ಠಿತ ಒಕ್ಕಲಿಗ ಮುಖಂಡರು, ಶ್ರೀಮಂತರು ತಮ್ಮ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲು ಐಗಳನ್ನು ಗೊತ್ತುಪಡಿಸುತ್ತಿದ್ದರು. ಐಗಳು ಶಿಕ್ಷಣ ನೀಡುತ್ತ, ಆ ಮನೆಯ ಒಬ್ಬ ಸದಸ್ಯರಂತೆ ಇದ್ದು ಇನ್ನಿತರ ಕೆಲಸ ಕಾರ್ಯಗಳಲ್ಲಿ ಸಹಾಯ ಸಹಕಾರ ನೀಡುತ್ತಿದ್ದರು. ಇದಕ್ಕೆ ಅವರು ನಿಗದಿತ ಪ್ರಮಾಣದಲ್ಲಿ ಧನ-ಧಾನ್ಯಗಳನ್ನು , ಬಟ್ಟೆ ಬರೆಗಳನ್ನು ಪಡೆಯುತ್ತಿದ್ದರು. ವರ್ಷಕ್ಕೆ ಇಂತಿಷ್ಟು ಧಾನ್ಯ, ಬಟ್ಟೆ ಕೊಡುವುದರಿಂದಾಗಿ ಕೂಲಿಮಠ ಎಂಬ ಹೆಸರಿನಿಂದಲೂ ಐಗಳ ಶಾಲೆಯನ್ನು ಕರೆಯುತ್ತಿದ್ದರು. ಮನೆಯ ಮಕ್ಕಳನ್ನು ಒಂದು ಒಳ್ಳೆಯ ಮುಹೂರ್ತ ಗೊತ್ತುಪಡಿಸಿ ಅಕ್ಷರಾಭ್ಯಾಸಕ್ಕೆ ತೊಡಗಿಸುತ್ತಿದ್ದರು. ಆ ಮನೆಯಲ್ಲಿ ಸಂಭ್ರಮದ ವಾತಾವರಣವಿರುತ್ತಿತ್ತು. ಬೆಳಿಗ್ಗೆ ಮಕ್ಕಳನ್ನು ಬೇಗ ಎಬ್ಬಿಸಿ ಅಭ್ಯಂಜನ ಸ್ನಾನ ಮಾಡಿಸಿ ಹೊಸ ಪಂಚೆ ತೊಡಿಸಿ, ತುಳಸಿಕಟ್ಟೆಗೆ, ಹಿರಿಯರಿಗೆ ಅಡ್ಡಬೀಳಿಸಿ ಗುರುಗಳ ಹತ್ತಿರ ಕಳಿಸುತ್ತಿದ್ದರು. ಐಗಳು ಒಬ್ಬೊಬ್ಬರಿಗೆ ಒಂದೊಂದು ಕಡೆ ಸ್ಲೇಟಿನ ರೀತಿಯಲ್ಲಿ ಮರಳನ್ನು ಹರಡುತ್ತಿದ್ದರು. ಪೂಜೆ ನಡೆದ ನಂತರ ಬಾಲಕರ ಕೈಹಿಡಿದು ಮರಳಿನಲ್ಲಿ ದೊಡ್ಡದಾದ 'ಶ್ರೀಕಾರ ' ಬರೆಯಿಸುತ್ತಿದ್ದರು. ಅದನ್ನವರು ಐದು-ಹತ್ತು ಬಾರಿ ತಿದ್ದಬೇಕಿತ್ತು. ನಂತರ ನಿಗದಿತ

ಸಮಯದಲ್ಲಿ ಐಗಳು ಆ ಮಕ್ಕಳಿಗೆ ಮರಳಿನಲ್ಲಿ ಅಕ್ಷರಾಭ್ಯಾಸ ಮಾಡಿಸುತ್ತ ಹೋಗುತ್ತಿದ್ದರು. ಈ ಐಗಳು ಮಲೆನಾಡಿನಲ್ಲಿ ಹೆಚ್ಚು ದಿನ ಇರುತ್ತಿರಲಿಲ್ಲ. ಕುವೆಂಪು ಎರಡನೆಯ ತರಗತಿಗೆ ಬರುವಷ್ಟರಲ್ಲಿಯೇ ಸುಮಾರು ಹತ್ತು ಹದಿನೈದು ಜನ ಐಗಳ ಗುಂಪು ಬಂದು ಹೋಗಿತ್ತು ಎಂದಿದ್ದಾರೆ.

ಐಗಳ ಶಾಲೆಯಲ್ಲಿ ಕಲಿಯುವ ವೇಳೆಯಲ್ಲೇ ಮಲೆನಾಡಿಗೆ ಕ್ರೈಸ್ತ ಮತ ಪ್ರಚಾರಕರು ಬರುವುದರ ಜೊತೆಗೆ ಆಧುನಿಕತೆಯೂ ಆಧುನಿಕ ವಿಚಾರಗಳು ಯಂತ್ರಗಳೂ ಪ್ರವೇಶ ಪಡೆದವು. ಶಿಕ್ಷಣದ ದೃಷ್ಟಿಯಿಂದ ಈ ಸಮಯದಲ್ಲಿ ಎರಡು ಮುಖ್ಯ ಬದಲಾವಣೆಗಳಾದವು. ಮೊದಲನೆಯದಾಗಿ ಎಲ್ಲರೂ ಸಾಕ್ಷರರಾಗಬೇಕು ಎಂಬ ವಿಚಾರವನ್ನು ಮತ ಪ್ರಚಾರಕರು ಒತ್ತಿಹೇಳಿದರು. ಓದು-ಬರಹದ ಬಗೆಗೆ ಅಸಡ್ಡೆಯಿಂದ ಇದ್ದ ಜನರಿಗೆ ಅದರ ಅಗತ್ಯತೆಯನ್ನು ಮಹತ್ವವನ್ನು ಮನಗಾಣಿಸಿದರು. ಎರಡನೆಯದಾಗಿ ಅಂಥ ಸಾರ್ವತ್ರಿಕ ಸಾಕ್ಷರತೆಯ ಪ್ರಯೋಗವನ್ನು ತಾವೇ ಆರಂಭಿಸಿದರು. ಆಧುನಿಕ ವಿದ್ಯಾಭ್ಯಾಸದ ಪರಿಚಯ ನೀಡಿದರು. ಇವುಗಳಿಂದಾಗಿ ಮಲೆನಾಡಿನಲ್ಲಿ ಆವರೆಗೆ ಇದ್ದಂತ ಓದು ಬರಹಗಳ ಬಗೆಗಿನ ತಿಳುವಳಿಕೆಗಳು ಬದಲಾವಣೆಗೊಂಡವು.

ಈ ಮೇಲೆ ತಿಳಿದಂತಹ ಎಲ್ಲಾ ಬೆಳವಣಿಗೆಗಳನ್ನು ಕುವೆಂಪು ಸಾಹಿತ್ಯ ಕೃತಿಗಳಲ್ಲಿನ ಸನ್ನಿವೇಶಗಳ ಮೂಲಕ ತಿಳಿಯಬಹುದು. ಕ್ರೈಸ್ತ ಮಿಶನರಿಗಳ ಮೂಲಕ ಮಲೆನಾಡನ್ನು ಪ್ರವೇಶಿಸಿದ ಶಿಕ್ಷಣ ಇಂದು ವ್ಯಾಪಕವಾಗಿ ವಿಸ್ತರಿಸಲ್ಪಟ್ಟಿದೆ. ಅಂದು ಸಂಖ್ಯೆಯ ದೃಷ್ಟಿಯಿಂದ ತುಂಬಾ ಕಡಿಮೆ ಇದ್ದ ಶಾಲಾ ಕಾಲೇಜುಗಳು ಇಂದು ಊರೂರಿಗೊಂದರಂತೆ ತಲೆ ಎತ್ತಿವೆ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ 'ಕಾನೂರು ಹೆಗ್ಗಡತಿ 'ಯಲ್ಲಿ ನೋಡಿದಂತೆ ಹೂವಯ್ಯ ರಾಮಯ್ಯರು ಮೈಸೂರಿನಂತಹ ದೂರದ ಊರಿಗೆ ಹೋಗಬೇಕಾದ ಪರಿಸ್ಥಿತಿ ಅಂದು ಇದ್ದಿತ್ತು. ಆದರೆ ಈಗ ಹಳ್ಳಿಗಳಲ್ಲೇ ಶಾಲೆಗಳು ಪ್ರಾರಂಭವಾಗಿವೆ. ಕುವೆಂಪು ಅವರೇ 'ಮನೆಯ ಶಾಲೆಯ ಐಗಳ ಮಾಲೆ 'ಯಲ್ಲಿ ಹೇಳಿದ್ದಾರೆ. ತಮ್ಮ ಊರಿನಿಂದ ತೀರ್ಥಹಳ್ಳಿಗೆ ಸರ್ಕಾರಿ ಶಾಲೆಗೆ ಹೋಗುತ್ತಿದ್ದೆವು ಎಂದು. ಈಗ ಹಳ್ಳಿಗಳಲ್ಲಿ ಮಕ್ಕಳ ಅನುಕೂಲಕ್ಕೆಂದು ಶಾಲೆಗಳು ನಿರ್ಮಾಣವಾಗಿದ್ದರೂ ಇತ್ತೀಚೆಗೆ ತೀರ್ಥಹಳ್ಳಿ -ಶಿವಮೊಗ್ಗದಂತಹ ಪಟ್ಟಣ ಪ್ರದೇಶಗಳ ಕಡೆಗೇ ವಿದ್ಯಾರ್ಥಿಗಳು-ಪೋಷಕರು ಆಕರ್ಷಿಸಲ್ಪಡುತ್ತಿರುವುದು

ಚಿಂತಾಜನಕವಾಗಿದೆ. ಇದರಿಂದ ಹಳ್ಳಿಗಳಲ್ಲಿನ ಶಾಲೆಗಳನ್ನು ಮುಚ್ಚಬೇಕಾದ ಪರಿಸ್ಥಿತಿ ಬಂದಿದೆ. ಇದಕ್ಕೆ ಕಾರಣ ಆಧುನಿಕರಣದ ಪ್ರಭಾವವಾಗಿದೆ. ಇತ್ತೀಚೆಗೆ ದಿನಪತ್ರಿಕೆಯೊಂದರಲ್ಲಿ ಪ್ರಕಟವಾದ ಸುದ್ದಿಯ ಪ್ರಕಾರ ಶಿವಮೊಗ್ಗದ ಐದು ಶಾಲೆಗಳನ್ನು ವಿದ್ಯಾರ್ಥಿಗಳಿಲ್ಲದೆ ಮುಚ್ಚಬೇಕಾಗಿದೆ ಎಂದು ವರದಿಯಾಗಿತ್ತು. ಅದರಲ್ಲೂ ತೀರ್ಥಹಳ್ಳಿ ತಾಲ್ಲೂಕಿನ ಮೂರು ಶಾಲೆಗಳು ಮುಚ್ಚಲ್ಪಟ್ಟಿವೆ ಎಂಬ ಸುದ್ದಿ ಇಂದಿನ ಮಲೆನಾಡಿನ ಶೈಕ್ಷಣಿಕ ವ್ಯವಸ್ಥೆ ಕುರಿತಂತೆ ಆತಂಕಕಾರಿ ವಿಷಯವಾಗಿದೆ. ಇದಕ್ಕೆ ಕಾರಣ ನಗರೀಕರಣದಿಂದ ಹೆಚ್ಚಿನ ವಿದ್ಯಾರ್ಥಿಗಳು ಆಂಗ್ಲ ಮಾಧ್ಯಮ, ಕಂಪ್ಯೂಟರ್ ಕೋರ್ಸ್ ಇಂತಹ ಆಧುನಿಕ ಸೌಲಭ್ಯಗಳು ಹೆಚ್ಚು ಇರುವ ನಗರಗಳ ಶಾಲೆಗಳಿಗೆ ಹೋಗುತ್ತಿದ್ದಾರೆ. ಪ್ರಾಥಮಿಕ, ಪ್ರೌಢಶ ಶಿಕ್ಷಣ ಪಡೆದ ನಂತರ ಮುಂದಿನ ವಿದ್ಯಾಭ್ಯಾಸಕ್ಕೆ ಮಲೆನಾಡಿನ ಹೆಚ್ಚಿನ ವಿದ್ಯಾರ್ಥಿಗಳು ಅದರಲ್ಲೂ ಆರ್ಥಿಕವಾಗಿ ಸ್ವಲ್ಪ ಪ್ರಬಲವಾಗಿರುವಂತಹ ಕುಟುಂಬದವರು ಉಜಿರೆ, ಮೂಡಬಿದ್ರೆ, ನಿಟ್ಟೆ , ಬೆಂಗಳೂರು, ಮಂಗಳೂರು ಇಲ್ಲಿನ ಪ್ರತಿಷ್ಠಿತ ಕಾಲೇಜುಗಳಿಗೆ ಸೇರಿಕೊಳ್ಳುತ್ತಾರೆ. ಹಾಗೆ ಸ್ವಲ್ಪ ಬುದ್ಧಿವಂತ ಮಕ್ಕಳು ಹೆಚ್ಚಾಗಿ ಇಂತಹ ಶಾಲಾ ಕಾಲೇಜುಗಳಿಗೆ ಸೇರುತ್ತಾರೆ. ಹೀಗಿದ್ದಾಗ ಇಲ್ಲಿನ ಶೈಕ್ಷಣಿಕ ಫಲಿತಾಂಶ ಕಡಿಮೆಯಾಗುವುದು ಸಹಜ. ಇಂತಹ ಪರಿಸ್ಥಿತಿಯ ನಡುವೆಯೂ ಮಲೆನಾಡಿನ ಉತ್ತಮ ಶಿಕ್ಷಣ ಇತರೆ ಸೌಲಭ್ಯಗಳಿರುವ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೇನು ಕಡಿಮೆಯಾಗಿಲ್ಲ. ಆದರೆ ಹಳ್ಳಿಗಳಲ್ಲಿರುವ ಶಾಲಾ ಕಾಲೇಜುಗಳು ಇಂತಹ ಪರಿಸ್ಥಿತಿಯನ್ನೆದುರಿಸುತ್ತಿವೆ. ಇನ್ನೊಂದು ವಿಶೇಷವೆಂದರೆ ಕುವೆಂಪು ಚಿತ್ರಸಿದ ಅಂದಿನ ಮಲೆನಾಡಿನ ಶಿಕ್ಷಣ ಪದ್ಧತಿ ಪ್ರಕಾರ ಹೆಣ್ಣು ಮಕ್ಕಳು ಓದು-ಬರಹ ಕಲಿಯುವುದೇ ಅಪರಾಧವಾಗಿತ್ತು. ಆದರೆ ಈಗ ಮಲೆನಾಡಿನ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಗಮನಿಸಿದರೆ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಿರುವುದು ಕಂಡುಬರುತ್ತದೆ. ಅದೇ ರೀತಿ ಪರೀಕ್ಷಾ ಫಲಿತಾಂಶಗಳಲ್ಲೂ ಹೆಣ್ಣು ಮಕ್ಕಳೇ ಮೇಲುಗೈ ಸಾಧಿಸಿರುವುದನ್ನು ಕಾಣಬಹುದು. ಇದು ಒಂದು ರೀತಿಯಲ್ಲಿ ಉತ್ತಮವಾದ ಬೆಳವಣಿಗೆಯಾಗಿದೆ.

ಮಲೆನಾಡಿನಲ್ಲಿ ಇಂದು ಎಷ್ಟೇ ಕಡು ಬಡವರಾದರೂ, ಕೆಳಜಾತಿಯವರಾದರೂ ಶಿಕ್ಷಣದ ಮಹತ್ವವನ್ನು ಅರಿತುಕೊಂಡಿದ್ದಾರೆ. ಆದ್ದರಿಂದ ಎಲ್ಲರೂ ತಮ್ಮ ಮಕ್ಕಳು ವಿದ್ಯಾವಂತರಾಗಬೇಕೆಂದು ಬಯಸುತ್ತಾರೆ. ಹಾಗೆ ಒಳ್ಳೆಯ ಶಾಲಾ ಕಾಲೇಜುಗಳಿಗೆ ಕೂಲಿ

ಮಾಡಿಯಾದರೂ ಹಣ ಹೊಂದಿಸಿ ಕಳಿಸುತ್ತಾರೆ. ಆಧರೆ ಇಂದಿನ ಮಕ್ಕಳು ತಮ್ಮ ಕರ್ತವ್ಯವನ್ನು ಮರೆತು ತಂದೆ-ತಾಯಿಯರ ಕಷ್ಟವನ್ನು ಅರಿಯದೆ ಇಂದಿನ ಆಧುನಿಕ ಜೀವನದಲ್ಲಿ ಮನಃಸ್ಥಿತಿಯನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಕೆಟ್ಟ ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಓದುವ ಸಮಯದಲ್ಲಿ ಕಂಪ್ಯೂಟರ್, ಮೊಬೈಲ್‌ಗಳಲ್ಲಿ ಆಡುವುದು, ತರಗತಿಗಳಿಗೆ ಕೂರದೆ ಸಹವಾಸ ದೋಷದಿಂದ ಸುತ್ತುವುದು, ಗೈರುಹಾಜರಾಗುವುದು, ಆಪಘಾತದಂತಹ ಅನಾಹುತಗಳಿಗೆ ಒಳಗಾಗುವುದು, ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುವುದು, ಇದರಿಂದ ಚಿಕ್ಕ ವಯಸ್ಸಿನಲ್ಲೇ ಆತ್ಮಹತ್ಯೆ ಮಾಡಿಕೊಳ್ಳುವುದು ಇಂತಹ ಅನೇಕ ಅನಾಚಾರಗಳಿಗೆ ಇಂದಿನ ಮಕ್ಕಳು ತೀವ್ರವಾಗಿ ಒಳಗಾಗುತ್ತಿದ್ದಾರೆ. ಕುವೆಂಪು ಅವರು ತಮ್ಮ ಕಥನ ಗದ್ಯದಲ್ಲಿ ಮಲೆನಾಡಿಗೆ ಶಿಕ್ಷಣ ಪ್ರವೇಶಿಸಿದರ ಕುರಿತು ಹೇಳಿದರೆ, ನಂತರದ ಅವರ ವೈಚಾರಿಕ ಕೃತಿಗಳಲ್ಲಿ ವಿದ್ಯಾರ್ಥಿಯಾದವನು ಹೇಗಿರಬೇಕು ಎಂಬುದನ್ನು ಹೇಳಿದ್ದಾರೆ. ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ' ಕೃತಿಯಲ್ಲಿನ 'ವಿದ್ಯಾರ್ಥಿಗಳಲ್ಲಿ ಮತಿಗೌರವದ ಅವಶ್ಯಕತೆ ' 'ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ ' ಪ್ರಬಂಧಗಳಲ್ಲಿ ವಿದ್ಯಾರ್ಥಿಗಳಿಗೆ ಕೆಲವು ಕಿವಿಮಾತುಗಳನ್ನು ಹೇಳಿದ್ದಾರೆ. ವಿದ್ಯಾರ್ಥಿ ಜೀವನವೂ ಒಂದು ತಪಸ್ಸಿನಂತೆ, ಪ್ರತಿಯೊಬ್ಬ ವಿದ್ಯಾರ್ಥಿಯು ತಪಸ್ವಿ ಇದ್ದಹಾಗೆ. ವಿದ್ಯಾರ್ಜನೆಯ ಸಮಯವೆಂದರೆ ಆತ್ಮಶಕ್ತಿ ಸಂಗ್ರಹದ ಕಾಲವಿದ್ದಂತೆ ಎಂದು ಕುವೆಂಪು ಅವರು ಹೇಳುತ್ತಾರೆ. ಆದರೆ ಇಂದಿನ ವಿದ್ಯಾರ್ಥಿಗಳು ಹೆಚ್ಚಿನವರು ವಿದ್ಯಾರ್ಥಿ ಜೀವನ ಎಂದರೆ ಮೋಜಿನಿಂದ ಕಳೆಯುವುದೆಂದು ತಿಳಿದಿದ್ದಾರೆ. ಇದು ಇಂದಿನ ಸ್ಥಿತಿಯಾಗಿದೆ. 'ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ' ಎಂಬ ಭಾಷಣದಲ್ಲಿ ದೇಹ, ಭಾವ, ಬುದ್ಧಿ ಈ ಎಲ್ಲಾ ಶ್ರೀಗಳಿಗೂ ಶ್ರೀಯಾಗಿರುವ ಆತ್ಮಶ್ರೀಯ ಮಹತ್ವವನ್ನು ಕುರಿತು ಹೇಳುತ್ತಾರೆ. ಅಂದರೆ ವಿದ್ಯಾರ್ಥಿಯೂ ತಪಸ್ವಿಯಾಗಬೇಕು. ''ಆತ್ಮಶ್ರೀಯನ್ನು ಬಯಸುವ ವಿದ್ಯಾರ್ಥಿ ಮೌನ, ಧ್ಯಾನ, ಏಕಾಂತತೆಯನ್ನು ತಕ್ಕಮಟ್ಟಿಗಾದರೂ ಆಶ್ರಯಿಸಲೇಬೇಕಾಗುತ್ತದೆ ''[೮] ಕುವೆಂಪು ಅವರೇ ಹೇಳುತ್ತಾರೆ, ''ಪ್ರಾಚೀನ ಕಾಲದ ಅರಣ್ಯಾಶ್ರಮಗಳ ವಿದ್ಯಾರ್ಥಿಗೆ ಋಷಿಗುರುಗಳ ಸನ್ನಿಧಿಯಲ್ಲಿ ಯಾವುದು ತನಗೆ ತಾನೇ ಲಭಿಸುತ್ತಿತ್ತೋ ಆ ಸನ್ನಿವೇಶ, ಪ್ರಶಾಂತ ಈ ಯಂತ್ರ ನಾಗರೀಕತೆಯಲ್ಲಿ ದುರ್ಲಭ. ಆದರೂ ಕಷ್ಟಸಾಧ್ಯ. ಆ ಪುಣ್ಯಾಶ್ರಮಗಳ ವಿದ್ಯಾರ್ಥಿಯೇ ನಮ್ಮ ಆತ್ಮಶ್ರೀ ಸಾಧನೆಯ ಪಥದಲ್ಲಿ ನಮಗೆ ಮಾರ್ಗದರ್ಶಿಯಾಗುವ

ಅರ್ಹತೆ ಪಡೆದಿದ್ದಾನೆ "[4] ಎಂದು ಕುವೆಂಪು ಹೇಳಿರುವ ಮಾತು ಇಂದಿಗೂ ಪ್ರಸ್ತುತ ಎನಿಸುತ್ತದೆ.

ಈ ಮೇಲಿನ ಅನೇಕ ವಿಷಯಗಳಿಂದ ಇಂದು ಮಲೆನಾಡು ಹೇಗೆ ತನ್ನ ಜನಜೀವನದಲ್ಲಿ, ಬೇಸಾಯ ಕ್ರಮದಲ್ಲಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಆಧುನೀಕರಣದತ್ತ ಸಾಗುತ್ತಿದೆ ಎಂಬುದನ್ನು ತಿಳಿಯಲಾಯಿತು. ಹಾಗೆ ಆಧುನೀಕರಣದ ಪ್ರಭಾವದಿಂದ ಆದಂತಹ ಬದಲಾವಣೆಗಳನ್ನು ಅನುಕೂಲ-ಅನಾನುಕೂಲಗಳನ್ನು ವಿಶ್ಲೇಷಿಸಲಾಯಿತು. ಇದನ್ನೆಲ್ಲಾ ಗಮನಿಸಿದಾಗ ಮಲೆನಾಡು ತನ್ನ ಹಿಂದಿನ ಸ್ಥಿತಿಯಿಂದ ಹೇಗೆ ಸ್ಥಿತ್ಯಂತರಗೊಂಡಿದೆ, ಇದು ಉತ್ತಮ ಬೆಳವಣಿಗೆಯೇ ಅಥವಾ ಅಲ್ಲವೇ ಎಂಬ ಪ್ರಶ್ನೆ ಮೂಡುತ್ತದೆ. ಕುವೆಂಪುರವರು ಹೇಳಿದಂತೆ ಅಂದು ಅಸಾಧ್ಯವೆಂದು ತೋರಿದುದು ಇಂದು ಸಾಧ್ಯವಾಗಿದೆ. ಅಂದು ಸಾಧ್ಯವಾದುದು ಮಾತ್ರ ಇಂದು ಅಸಾಧ್ಯವಾಗಿ ಪರಿಣಮಿಸಿದೆ. ಈ ಮಾತನ್ನು ಕುವೆಂಪುರವರು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿದ ಮಲೆನಾಡು ಮತ್ತು ತಾವು ಕಾಣುತ್ತಿದ್ದ ಮಲೆನಾಡಿಗೂ ಹೋಲಿಸಿ ಅವರ ಕಾಲದಲ್ಲೇ ಹೇಳಿದ್ದಾರೆ. ಅಂದಮೇಲೆ ಇಂದು ಅವರ ನಂತರದ ತಲೆಮಾರಿನಲ್ಲಿ ಎಷ್ಟೊಂದು ಬದಲಾವಣೆ ಆಗಿದೆ ಎಂಬುದನ್ನು ನಮ್ಮ ಸಮಕಾಲೀನ ಸ್ಥಿತಿಯಿಂದ ತಿಳಿಯಬಹುದಾಗಿದೆ. ಹಾಗೆ ಆಧುನೀಕರಣದಿಂದ ಅಗತ್ಯವಾದ ಬದಲಾವಣೆಯನ್ನು ಸ್ವೀಕರಿಸುತ್ತಾ, ಸಂಸ್ಕೃತಿ, ಸಮಾಜ ಜೀವನಕ್ಕೆ ಧಕ್ಕೆಯಾಗುವಂತಹದ್ದನ್ನು ನಿರಾಕರಿಸುತ್ತಾ ಬದುಕನ್ನು ಉತ್ತಮ ರೀತಿಯಲ್ಲಿ ರೂಢಿಸಿಕೊಳ್ಳುವುದು ಇಂದು ಮುಖ್ಯವಾಗಿದೆ.

ಅಡಿ ಟಿಪ್ಪಣಿಗಳು :

೧. ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಮತ್ತು ಸಾಹಿತ್ಯ ವಿಕಾಸ, ೧೯೬೨, ಪುಟ : ೨೨೬-೨೨೯

೨. ಕುವೆಂಪು, ಮಲೆನಾಡಿನ ಚಿತ್ರಗಳು, ಕತೆಗಾರ ಮಂಜಣ್ಣ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೯೫.

೩. ಕುವೆಂಪು, ಮಲೆನಾಡಿನ ಚಿತ್ರಗಳು, ಕತೆಗಾರ ಮಂಜಣ್ಣ
ಉದಯರವಿ ಪ್ರಕಾಶನ, ಮೈಸೂರು, ೨೦೦೬, ಪುಟ-೯೫.

೪. ಸರ್ಜಾಶಂಕರ್ ಹರಳೀಮಠ, ಬೆಟ್ಟ ಬೀಳಿಸಿದ ಬೆಂಗಳೂರು
ನಮ್ಮ ನಾಡು ಪ್ರಕಾಶನ, ಶಿವಮೊಗ್ಗ ೨೦೦೨, ಪುಟ್ಟ -೧೮.

೫. ಕುವೆಂಪು, ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ, ಉದಯರವಿ ಪ್ರಕಾಶನ, ಮೈಸೂರು, ೧೯೯೮, ಪುಟ-೧೭

೬. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ-೭೮.

೭. ಕುವೆಂಪು, ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪುಟ-೭೮.

೮. ಕುವೆಂಪು, ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ, ಉದಯರವಿ ಪ್ರಕಾಶನ, ಮೈಸೂರು, ೧೯೯೮, ಪುಟ-೪೩

೯. ಕುವೆಂಪು, ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ, ಉದಯರವಿ ಪ್ರಕಾಶನ, ಮೈಸೂರು, ೧೯೯೮, ಪುಟ-೪೩

ಅಧ್ಯಾಯ -೬
ಮಲೆನಾಡು ಅಂದು-ಇಂದು

'ಮಲೆನಾಡು' ಈ ಹೆಸರೇ ಸೂಚಿಸುತ್ತದೆ ಇಲ್ಲಿನ ಪರಿಸರ ವ್ಯವಸ್ಥೆ. ಬೆಟ್ಟಗುಡ್ಡಗಳಿಂದ, ದಟ್ಟ ಹಸಿರಿನಿಂದ, ಧಾರಾಕಾರ ಮಳೆಯಿಂದ ಕೂಡಿದೆ ಎಂಬುದನ್ನು. ಇದರ ಸ್ಪಷ್ಟ ಚಿತ್ರಣ ನಮ್ಮ ಕಣ್ಮುಂದೆ ಬರುವುದು ಕುವೆಂಪುರವರ ಕಾದಂಬರಿಗಳಲ್ಲಿ, ಕಥೆಗಳಲ್ಲಿ ಕವನಗಳಲ್ಲಿ ಹಾಗೂ ಮಲೆನಾಡಿನ ಚಿತ್ರಗಳಲ್ಲಿ. ಈ ಎಲ್ಲಾ ಕಥನಗಳ ಪ್ರಧಾನ ಪಾತ್ರವೇ ನಿಸರ್ಗ. ನಿಸರ್ಗವಿಲ್ಲದೆ ಬೇರಾವುದಕ್ಕೂ ಇಲ್ಲಿ ಅರ್ಥವಿಲ್ಲ. ಪ್ರಕೃತಿಯಲ್ಲಿನ ಎಲ್ಲಾ ಜೀವಿಗಳ ಜೀವನದಂತೆಯೇ ಮನುಷ್ಯನು ಅದರೊಂದಿಗೆ ಬೆರೆತು ಹೋಗಿದ್ದಾನೆ. ಇಂತಹ ಪ್ರಕೃತಿ ಸಹಜ ಜೀವನದಲ್ಲಿ ನಿಧಾನಕ್ಕೆ ಪ್ರವೇಶಿಸುವ ಅನ್ಯ ಸಂಸ್ಕೃತಿ ಮತ್ತು ಆಧುನಿಕತೆಗಳು ಮಲೆನಾಡಿನಲ್ಲಿಯೂ ಅನೇಕ ತಲ್ಲಣಗಳನ್ನು ಹುಟ್ಟುಹಾಕಿವೆ.

ಅರಣ್ಯ, ಗಿಡ-ಮರ, ಬಳ್ಳಿ, ಹೂವು, ಪ್ರಾಣಿ, ಪಕ್ಷಿ, ಕ್ರಿಮಿಕೀಟ, ನದಿ, ಸಮುದ್ರ, ಸೂರ್ಯ-ಚಂದ್ರ ಇತ್ಯಾದಿಗಳೆಲ್ಲಾ ಸಹಜ ಚೆಲುವಿನಿಂದ ಸಮೃದ್ಧಿಯಿಂದ, ನಿಷ್ಕಳಂಕಿತವಾಗಿದ್ದರೆ ಮಾತ್ರ ಪರಿಸರ ಸಮತೋಲನದಿಂದ ಇರಬಹುದೆಂದೂ, ಅಲ್ಲಿ ಮನುಷ್ಯನೂ ಸುಖವಾಗಿ ಬಾಳಬಹುದೆಂದೂ ಪರಿಸರವಾದಿಗಳು ಅಭಿಪ್ರಾಯಪಡುತ್ತಾರೆ. ಭಾರತದಲ್ಲಿ ಇಪ್ಪತ್ತನೇ ಶತಮಾನದಿಂದ ಪ್ರಕೃತಿ ನಾಶ ವೇಗವಾಗಿ ಸಾಗುತ್ತಿದೆ. ಆಧುನಿಕತೆಯ ಪ್ರವೇಶದಿಂದಾಗಿ ನಾಗರೀಕ ಬದುಕಿನ ಅಗತ್ಯದಿಂದಾಗಿ, ಮನುಷ್ಯ ಸ್ವಾರ್ಥಿಯಾಗಿ ಅವಿವೇಕದಿಂದ ವರ್ತಿಸುತ್ತಿದ್ದಾನೆ. ಹೀಗೇ ಮುಂದುವರೆದರೆ ಮುಂದಿನ ಪೀಳಿಗೆಯವರು ಕಾಂಕ್ರೀಟ್ ಕಾಡುಗಳನ್ನು ನೋಡುವಂತಾಗುತ್ತದೆ. ಮನುಷ್ಯನ ಈ ವರ್ತನೆಯನ್ನು ಕುರಿತಂತೆ ಸಂಸ್ಕೃತಿಯ ಕಾಳಜಿಯಿಂದ ಡಾ. ಹಿ.ಚಿ.ಬೋರಲಿಂಗಯ್ಯ ಅವರು 'ಕಾಡಿನ ಸಂಸ್ಕೃತಿಯೂ ಕಾಂಕ್ರೀಟ್ ಸಂಸ್ಕೃತಿಯೂ' ಲೇಖನದಲ್ಲಿ ಪ್ರಕೃತಿಗೆ ಸೃಷ್ಟಿಸುವ ಸಂಸ್ಕೃತಿ ಇದ್ದರೆ ಮನುಷ್ಯರಿಗೆ ಭೋಗಿಸುವ ಸಂಸ್ಕೃತಿ ಇದೆ ಎನ್ನುತ್ತಾರೆ. ಕಾಡಿನ ಸೌಲಭ್ಯಗಳು ನವ ವಸಾಹತುಶಾಹಿ ಸಂದರ್ಭದಲ್ಲಿ ನಗರದ ಜನಕ್ಕಾಗಿ ಮಾತ್ರ ಎಂಬ ಧೋರಣೆಯನ್ನು ಲೇಖಕರು ಪ್ರತಿಭಟಿಸುತ್ತಾರೆ. ಸಣ್ಣ ಸಣ್ಣ ಕೆರೆಕಟ್ಟೆಗಳ ನಿರ್ಮಾಣ ಬಿಟ್ಟು ಬೃಹತ್ ಆಣೆಕಟ್ಟುಗಳ ಕಾಂಕ್ರೀಟ್ ಸಂಸ್ಕೃತಿಯಿಂದಾದ ಜೈವಿಕ ನಾಶ-ಪರಿಸರ

ಅಸಮತೋಲನ-ಕೃಷಿ ಕೂಲಿಕಾರರ ನಾಶ-ಸಾಂಸ್ಕೃತಿಕ ದುರಂತದ ಕಡೆ ಲೇಖಕರು ಇಲ್ಲಿ ಗಮನ ಹರಿಸಿದ್ದಾರೆ. ಇಂದು ಭೂಮಿ, ಸಮುದ್ರದಿಂದ ಸೌರವ್ಯೂಹದವರೆಗೂ ಮನುಷ್ಯನ ಅವಿವೇಕದಿಂದ ಅಸಮತೋಲನ ಏರ್ಪಟ್ಟಿರುವುದನ್ನು ನಾವು ನೋಡುತ್ತಿದ್ದೇವೆ. ಇದು ಜಗತ್ತಿನಾದ್ಯಂತ ಇರುವ ಸ್ಥಿತಿಯಾಗಿದೆ. ಹೀಗೆ ಮುಂದುವರಿದರೆ ಯಾವುದೇ ಜೀವಿಯೂ ಕ್ಷೇಮವಾಗಿ ಬದುಕಲು ಸಾಧ್ಯವಿಲ್ಲ.

ಕುವೆಂಪುರವರು ಕಂಡ ಮಲೆನಾಡು ಇಂದಿಲ್ಲ. ಅವರು ಸಾಹಿತ್ಯದಲ್ಲಿ ಚಿತ್ರಿಸಲ್ಪಟ್ಟ ಮಲೆನಾಡಿಗೂ ಹಾಗೂ ಅವರ ಕಾಲದಲ್ಲಿದ್ದ ಮಲೆನಾಡಿಗೂ, ತೇಜಸ್ವಿಯವರ ಕಾಲದ ಮಲೆನಾಡಿಗೂ ಅಜಗಜಾಂತರ ಬದಲಾವಣೆಗಳಾಗಿವೆ. ತೇಜಸ್ವಿಯವರೇ ತಮ್ಮ 'ಜುಗಾರಿ ಕ್ರಾಸ್ ' ಕಾದಂಬರಿಯ ಮುನ್ನುಡಿಯಲ್ಲಿ ತಮ್ಮ ಹಿಂದಿನ ತಲೆಮಾರಿನ ಕಾಡುಗಳಿಗೂ ಇಂದಿನ ಕಾಡುಗಳಿಗೂ ಇರುವ ವ್ಯತ್ಯಾಸವನ್ನು ಹೇಳುತ್ತಾರೆ. ಅವರು ಹೇಳುವ ಪ್ರಕಾರ 'ಕುವೆಂಪುರವರ ಕಾನೂರು ಹೆಗ್ಗಡತಿ, ಕಾರಂತರ ಮರಳಿ ಮಣ್ಣಿಗೆ ಕಾಲದ ಸಹ್ಯಾದ್ರಿಯ ಕಾಡುಗಳಿಗೂ ಇವತ್ತಿನ ಪರಿಸ್ಥಿತಿಗೂ ಇರುವ ಅಜಗಜಾಂತರ ವ್ಯತ್ಯಾಸಕ್ಕೆ ಈ ಕಾದಂಬರಿ ಉದಾಹರಣೆ ' ಎಂದು ತಮ್ಮ 'ಜುಗಾರಿ ಕ್ರಾಸ್' ಬಗೆಗೆ ಹೇಳುತ್ತಾರೆ.

ತೇಜಸ್ವಿ ಅವರು ಮಲೆನಾಡಿನ ಇಂದಿನ ಪರಿಸ್ಥಿತಿಯನ್ನು ಕುರಿತು ಹೇಳಿರುವ ಕೆಲವು ಮಾತುಗಳು ಈ ಕೆಳಗಿನಂತಿವೆ.

> ''ಕಾಡುಗಳು ಇವತ್ತು ಬಾಗಿಲು ತೆರೆದಿಟ್ಟ ಖಜಾನೆಗಳಾಗಿವೆ. ಈ ಕಾಡುಗಳ ಒಂದೊಂದೇ ಮರ ಎರಡು ಮೂರು ಲಕ್ಷ ಬೆಲೆಬಾಳುತ್ತದೆ. ಕಲ್ಲು ಕಳ್ಳರಿಗೆ, ಮರಗಳ್ಳರಿಗೆ, ಗಂಧ ಚಕ್ಕೆ ಕಳ್ಳ ಸಾಗಾಣಿಕೆ ಮಾಡುವ ಖದೀಮರಿಗೆ ಕಣ್ಣು ಹರಿಸಿದಲ್ಲೆಲ್ಲಾ ಹಣ ರಾಶಿ ಬಿದ್ದಿರುವಂತೆ ಕಾಣುತ್ತದೆ. ದುಡ್ಡು ಈ ರೀತಿ ಕೋಡಿ ಬಿದ್ದಿರುವಲ್ಲೆಲ್ಲಾ ಏನೇನು ರೂಪುಗೊಳ್ಳುತ್ತದೆಯೋ ಅದೆಲ್ಲ ಸಹ್ಯಾದ್ರಿಯ ಕಾಡಿನೊಳಗೆ ಶುರುವಾಗಿದೆ. ಇಲ್ಲಿ ಕಟ್ಟುವ ಆಣೆಕಟ್ಟುಗಳಾಗಲೀ, ಮುಳುಗಡೆಯಾಗುವ ಕಾಡುಗಳಾಗಲೀ, ಕಲ್ಲು, ಅದಿರುಗಳನ್ನು ತೆಗೆಯುವುದಾಗಲೀ ಜನಗಳಿಗಿಂತ ಹೆಚ್ಚಾಗಿ ರಾಜಕಾರಣಿಗಳ ರಾಜಕೀಯಕ್ಕೂ ಅಗತ್ಯವಾಗತೊಡಗಿದೆ. ಕಾಳವ್ಯವಹಾರಗಳ ವಿಷವೃತ್ತ ಈ ಮಟ್ಟ ತಲುಪಿದ ಮೇಲೆ ಕಾನೂನು ಮತ್ತು ನ್ಯಾಯಾಲಯಗಳು ಇದನ್ನು

ಪ್ರತಿರೋಧಿಸಲಾರವು. ಜನ ಸಮಷ್ಟಿಯ ದೃಢ ನಿಶ್ಚಯ ಒಂದೇ ರಕ್ಷೆ, ಅನೇಕ ಪರಿಸರ ಆಂದೋಳನಗಳಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಭಾಗಿಯಾದ ಮೇಲೆ ಈ ಚಿಕ್ಕ ಚಿಕ್ಕ ಗುಂಪುಗಳು, ಅನೇಕ ವೇಳೆ ಯಾವುದಕ್ಕೂ ಸಂಬಂಧಿಸದ ಮುಗ್ಧರು ಕೂಡ ಎಂತಹ ಪ್ರಾಣಾಪಾಯದ ಅಂಚಿನಲ್ಲಿ ಕಾಲ ಹಾಕಬೇಕಾಗುತ್ತದೆನ್ನುವುದು ನನ್ನ ಸ್ವಾನುಭವಕ್ಕೆ ಬಂತು ''[9]

ತೇಜಸ್ವಿಯವರಿಗೆ ಇಂದು ಕಂಡುಬರುತ್ತಿರುವ ಮಲೆನಾಡಿಗೂ ಕುವೆಂಪು ಅವರು ಅಂದು ವರ್ಣಿಸಿದ ಆ ಪರ್ವತ ಶ್ರೇಣಿಗಳು, ಆ ವಿಶಾಲ ನಿಲುಗಗನ, ಅಪಾರ ಅರಣ್ಯರಾಸಿ, ಆ ಸಹಸ್ರ ಪಕ್ಷಿಗಳ ವಸಂತಗಾನ, ಆ ಹಸುರಿಗೆ ಹೆಮ್ಮೆ, ಆ ಗಂಭೀರ ಮೌನ ಇವೆಲ್ಲವುಗಳಿಗೂ ಸಾಮ್ಯತೆಯೇ ಕಂಡುಬರದಂತಹ ಸ್ಥಿತಿ ಉಂಟಾಗಿದೆ. ಅದೂ ಕೇವಲ ಒಂದು ತಲೆಮಾರಿನ ಅಂತರದಲ್ಲಿ ಎಂದರೆ ನಿಜವಾಗಿಯೂ ಇದು ಆತಂಕದ ವಿಷಯವಾಗಿದೆ. ಕುವೆಂಪುರವರ ಸಾಹಿತ್ಯಕ್ಕೆ ಮೂಲ ಪ್ರೇರಣೆಯಾದ, ಸ್ಫೂರ್ತಿಯಾದ ಮಲೆನಾಡು, ಇಂದು ಆಧುನಿಕತೆಯ ಪ್ರಭಾವಕ್ಕೊಳಗಾಗಿ ತನ್ನ ಮೂಲ ರೂಪವನ್ನು ಹಸುರನ್ನು ಕಳೆದುಕೊಂಡಿದೆ. ಸ್ವಾರ್ಥ ಸಾಧಕರಿಂದ, ಕಳ್ಳ ಸಾಗಾಣಿಕೆಯಿಂದ, ಕಳ್ಳ ಬೇಟೆಯಿಂದ, ಮರಮುಟ್ಟುಗಳ ನಾಶದಿಂದ ಕಾಡು, ಪ್ರಾಣಿ, ಪಕ್ಷಿಗಳು ವಿನಾಶದ ಅಂಚಿನಲ್ಲಿವೆ. ಹಿಂದೆಯೂ ಬೇಟೆಯಾಡುತ್ತಿದ್ದರು. ಅದು ಅಂದಿನ ಕಾಲಕ್ಕೆ ಸಹಜವಾಗಿತ್ತು ಮತ್ತು ಪರಿಸರ ಸಮತೋಲನಕ್ಕೆ ಅಗತ್ಯವಾಗಿತ್ತು. ಆದರೆ ಇಂದು ಅಂತ ವಾತಾವರಣವಿಲ್ಲ. ಕಾಡಿನ ಬದುಕು ದೂರವಾಗಿ ಆಧುನಿಕ ಸರ್ವ ಅನುಕೂಲತೆಗಳ ನಡುವೆ ಮನುಷ್ಯ ಬದುಕತೊಡಗಿದ್ದಾನೆ. ಆದರೂ ಕಾಡಿಗೆ, ಕಾಡಿನ ಜೀವಿಗಳಿಗೆ ಅವನಿಂದ ಬಿಡುಗಡೆಯಿಲ್ಲ. ಇಂದಿನ ಆಧುನಿಕ ಅಸ್ತ್ರಗಳಿಂದ ಎಂತಹ ಕ್ರೂರ ಪ್ರಾಣಿಯನ್ನಾದರೂ ಕೊಲ್ಲಬಹುದು. ಇಂದಿನ ಸ್ಥಿತಿಯಲ್ಲಿ ಕಾಡು ಪ್ರಾಣಿಗಳ ಅಸ್ತಿತ್ವವನ್ನು ಕಾಪಾಡುವುದು ಅಗತ್ಯವಾಗಿದೆ. ಪ್ರತಿಯೊಂದು ಪ್ರಾಣಿಗಳ ಉಳಿವು 'ಪರಿಸರ ಸಮತೋಲನದ ದೃಷ್ಟಿಯಿಂದ ಮುಖ್ಯವಾದುದಾಗಿದೆ.

ಮಲೆನಾಡಿನ ಅಂದಿನ ಬದುಕು ಕಾಡಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿತ್ತು. ಹಿಂದಿನ ಕಾಲಕ್ಕೆ ಅಡಿಗೆಗಾಗಿ ಸೌದೆ ಬೇಕಿತ್ತು. ಮನೆಗಳನ್ನು ಕಟ್ಟಲು ದೊಡ್ಡ

ದೊಡ್ಡ ಮರಗಳು ಬೇಕಾಗುತ್ತಿತ್ತು. ಅಂದು ಸಾಕಷ್ಟು ಮರಗಿಡಗಳಿದ್ದರೂ ಅವರು ಅದಕ್ಕಾಗಿ ಹೇಗೆ ಬೇಕೋ ಹಾಗೆ ಇಡೀ ಕಾಡನ್ನೂ ಇಂದಿನಂತೆ ನಾಶ ಮಾಡುತ್ತಿರಲಿಲ್ಲ. ಅವರು ಬೇಸಿಗೆಯಲ್ಲಿ ವಿರಾಮದ ದಿನಗಳಲ್ಲಿ ಒಣಗಿದ ಮತ್ತು ಕೆಳಕ್ಕೆ ಬೀಳುತ್ತಿದ್ದ ರೆಂಬೆ ಕೊಂಬೆಗಳನ್ನು, ಎಲೆಬಳ್ಳಿಗಳನ್ನು ಆಯ್ದು ಸೌದೆ ಕಟ್ಟಿಗೆಯಾಗಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ದೇವರ ಬನ, ಭೂತದ ಬನಗಳಲ್ಲಂತೂ ಒಂದು ಹುಲ್ಲುಕಡ್ಡಿಯನ್ನೂ ಮುಟ್ಟುತ್ತಿರಲಿಲ್ಲ. ಹಾಗಾಗಿ ದೇವರು ದೆವ್ವಗಳ ಹೆಸರಿನಲ್ಲಿ ಭಯದಲ್ಲಿ ಕಾಡು ಸಂರಕ್ಷಿತವಾಗಿ ಉಳಿದಿರುತ್ತಿತ್ತು. ದೊಡ್ಡ ಮರಗಳಲ್ಲಿ ಭೂತಗಳು ವಾಸಿಸುತ್ತಿವೆ ಎಂಬ ನಂಬಿಕೆಯಿಂದ ಅವುಗಳ ತಂಟೆಗೆ ಹೋಗುತ್ತಿರಲಿಲ್ಲ. ದೈತ್ಯ ಗಾತ್ರದ ವೃಕ್ಷಗಳು ನೂರಾರು ವರ್ಷಗಳ ಕಾಲ ತಲೆಯೆತ್ತಿ ನಿಂತಿರುತ್ತಿದ್ದವು. ಹಾಗೆ ಅಂತಹ ದೊಡ್ಡ ದೊಡ್ಡ ಮರಗಳನ್ನು ಉರುಳಿಸುವುದು ಅಂದು ಅಷ್ಟು ಸುಲಭವಾಗಿರಲಿಲ್ಲ. ಹತ್ತಾರು ಜನರು, ಹಲವಾರು ದಿನಗಳು ಬೇಕಾಗುತ್ತಿತ್ತು. ಜೊತೆಗೆ ಅಷ್ಟೊಂದು ದೊಡ್ಡ ಮರಗಳನ್ನು ಆ ದಟ್ಟ ಅರಣ್ಯದ ನಡುವೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕೊಂಡೊಯ್ಯುವುದೂ ಕಷ್ಟವಾದುದಾಗಿತ್ತು. ಆದರೆ ಇಂದು ಆಧುನಿಕತೆಯ ಪ್ರಭಾವದಿಂದ ಆಧುನಿಕ ಉಪಕರಣಗಳಿಂದ ಎಷ್ಟೇ ದೊಡ್ಡ ಮರಗಳಾಗಲಿ, ಕೆಲವೇ ನಿಮಿಷಗಳಲ್ಲಿ ಉರುಳಿಸಿ, ಬೇಕಾದಲ್ಲಿಗೆ ತಕ್ಷಣ ಸಾಗಿಸಬಹುದಾದ ಸೌಲಭ್ಯಗಳಿವೆ. ಈ ಅನುಕೂಲಗಳು ಕಾಡಿನ ಸಮೃದ್ಧಿಗೆ, ಹಸಿರಿಗೆ ಶಾಪವಾಗಿ ಪರಿಣಮಿಸಿವೆ.

ಇಂದು ತೀವ್ರಗತಿಯಲ್ಲಿ ಬದಲಾಗುತ್ತಿರುವ ಪರಿಸರದ ಸ್ಥಿತಿಗತಿಗಳನ್ನು ಗಮನಿಸಿದರೆ ಅಂದಿನ ಕಾಲದ ವಿವರಗಳು ಕಾಡಿನ ಬಗೆಗಿನ ತಿಳುವಳಿಕೆ ಮುಂದೆ ಬಹುಕಾಲ ಉಳಿಯಲಾರದೆನ್ನಿಸುತ್ತದೆ. ಮುಂದಿನ ಪೀಳಿಗೆಯವರಿಗೆ ಕೇವಲ ಪುಸ್ತಕಗಳಲ್ಲಿ ಓದಿ ಹೀಗೂ ಇತ್ತೇ ಎಂದೆನಿಸುವ ಸ್ಥಿತಿ ಬರುವುದರಲ್ಲಿ ಸಂಶಯವಿಲ್ಲ. ಅಂದು ಮಲೆನಾಡಿನಲ್ಲಿದ್ದ ಕೆಲವು ವಿಶಿಷ್ಟ ಜೀವಿಗಳ ಸಂತತಿ ಕಡಿಮೆಯಾಗುತ್ತಿದೆ. ಕೆಲವು ನಾಶವಾಗುತ್ತಿವೆ. ಮುಸಿಯ, ಬರ್ಕ, ಕುರ್ಕ, ಕಾಡುಹಂದಿ, ಹುಲಿಬೆಕ್ಕು, ಕಬ್ಬೆಕ್ಕು, ಚಿಟ್ಟುಕೋಳಿ, ಕಣೆಹಂದಿ, ಇಂಬಳ, ಕಾಜಾಣ, ಮಿಂಚುಳ್ಳಿ, ಮಡಿವಾಳ ಹಕ್ಕಿ, ತೇನೆಹಕ್ಕಿ, ಮಂಗಟ್ಟೆ ಹಕ್ಕಿ, ಹೊರಸಲ ಹಕ್ಕಿ, ಮುರುಗುಂಡು, ಅವಲುಮೀನು, ಗಿರಲು ಮೀನು, ಕೊಚ್ಚಲಿಮೀನು ಮೊದಲಾದ ವಿಶಿಷ್ಟ ಜೀವಿಗಳು ಇಂದು ವಿನಾಶದ ಅಂಚಿನಲ್ಲಿವೆ. ಆದರೆ ಇಂದಿನ ಪೀಳಿಗೆಯವರಿಗೆ ಇಂತಹ ಜೀವಿಗಳೂ ಇದೆಯೇ ಎಂಬುದೇ ಪ್ರಶ್ನೆಯಾಗಿದೆ. ಅಲ್ಲದೇ ಈ ಹೆಸರುಗಳೇ ಸಾಕಷ್ಟು

ಇಂದಿನವರಿಗೆ ತಿಳಿದಿರುವುದಿಲ್ಲ. ಈಗಿನ ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಹಿಂದೆ ಹುಲ್ಲಿನ ಮನೆಗಳಲ್ಲಿ ಗೂಡು ಕಟ್ಟಿ ವಾಸವಿರುತ್ತಿದ್ದ ಗುಬ್ಬಚ್ಚಿ, ಪಾರಿವಾಳಗಳ ಸಂತತಿ ಕಡಿಮೆಯಾಗುತ್ತಿವೆ. ಮೊಬೈಲ್, ರೇಡಿಯೋ ವಿಕಿರಣಗಳ ಪ್ರಭಾವದಿಂದ ಇವು ಬದುಕುವುದೇ ಕಷ್ಟವಾಗಿದೆ. ಕೇವಲ ಜೀವಿಗಳು ಮಾತ್ರವಲ್ಲ, ಎಷ್ಟೋ ಬಗೆಯ ಮರಗಿಡಗಳ ಬಗೆಗೆ ಇಂದು ಮಲೆನಾಡಿನಲ್ಲೇ ಸಾಕಷ್ಟು ಜನರು ತಿಳಿದಿರುವುದಿಲ್ಲ. ಗುರುಗೆ, ಧೂಪದ ಮರ, ಮತ್ತಿಮರ, ಹಾಲಿವಾಣ, ಬೂರಗ ಮರ, ಹುಳಿಚೊಪ್ಪು ಬಗನಿಮರ, ಬೆಮ್ಮಾರಲು ಮೊದಲಾದವು, ಕಾಡಿನ ಹೂವು, ಹಣ್ಣು, ಔಷಧೀಯ ಗುಣಗಳು ಇದೆಲ್ಲಾ ವಿಷಯಗಳು ಇಂದಿನ ಆಧುನಿಕ ಯುಗದಲ್ಲಿ ನಮಗೆ ಮುಖ್ಯ ಎಂದೆನಿಸುತ್ತಲೇ ಇಲ್ಲ. ಆಧುನಿಕತೆಯ ಪ್ರಭಾವ ಮಲೆನಾಡಿನಲ್ಲಿ ಬೇರೆಲ್ಲೂ ಬೇಡ, ಕುವೆಂಪುರವರ ಸಾಹಿತ್ಯದಲ್ಲಿ ವರ್ಣಿಸಲ್ಪಟ್ಟ , ಅವರಿಗೆ ಸ್ಫೂರ್ತಿಯಾದ ಅವರ ಹುಟ್ಟೂರಲ್ಲೇ ಗಮನಿಸಿದರೆ ತಿಳಿಯುತ್ತದೆ. ಮಲೆನಾಡಿನ ಚಿತ್ರಗಳಲ್ಲಿ ಕುವೆಂಪು ಅವರು ತಮ್ಮ ಊರಿಗೆ ಕುಪ್ಪಳಿ ಎಂಬ ಹೆಸರು ಬರಲು ಕಾರಣ ಹೇಳಿದ್ದಾರೆ. ''ಕುಪ್ಪಳಿಸಿಕೊಂಡು ಬರಬೇಕಾದ್ದುದರಿಂದ ಆ ಮನೆಗೆ 'ಕುಪ್ಪಳಿ ' ಎಂದು ಹೆಸರಾಯ್ತು ''[3] ಎಂದಿದ್ದಾರೆ. ಅದೇ ಇಂದು ಕುವೆಂಪು ಅವರ ಮನೆಯವರೆಗೂ, ಕವಿಶೈಲಕ್ಕೂ ಟಾರ್ ರಸ್ತೆಗಳಾಗಿರುವುದನ್ನು ಕುಪ್ಪಳಿಯಿಂದ ಬೆಂಗಳೂರಿಗೆ ಬಸ್ ಸಂಪರ್ಕ ಇರುವುದನ್ನು ಗಮನಿಸಬಹುದಾಗಿದೆ. ಆಧುನಿಕತೆಯ ಸಂಪರ್ಕವೇ ಇಲ್ಲದ ಅಂದಿನ ಮಲೆನಾಡಿಗೆ ಇಂದು ಎಲ್ಲಾ ರೀತಿಯ ಡಿಜಿಟಲ್ ಮಾಧ್ಯಮಗಳು, ಐಷಾರಾಮಿ ವಾಹನಗಳು, ಸರ್ಕಾರದಿಂದ ಕುಪ್ಪಳಿಯಂತದ ಒಂದೇ ಊರಿನ ಅಭಿವೃದ್ಧಿಗಾಗಿ ಲಕ್ಷಗಟ್ಟಲೆ ಹಣ ಮಂಜೂರಾತಿ ಇಂತಹ ಅನೇಕ ಆಧುನಿಕ ಪ್ರಭಾವಗಳನ್ನು ಕಾಣಬಹುದಾಗಿದೆ. ಈ ಎಲ್ಲಾ ಪ್ರಭಾವಗಳ ನಡುವೆ ಮಲೆನಾಡಿನ ಪ್ರಕೃತಿ, ಜನಜೀವನ, ಅಲ್ಲಿನ ಸಂಸ್ಕೃತಿ ಹೇಗೆ ಬದಲಾಗುತ್ತಿದೆ ಎಂಬುದು ಅಷ್ಟೇ ಮುಖ್ಯವಾಗುತ್ತದೆ. ಇಂದಿನ ಯಾಂತ್ರಿಕ ಜೀವನದಲ್ಲಿ ಮುಳುಗಿ ಹೋದುದರಿಂದ ಮಾನವೀಯ ಮೌಲ್ಯಗಳು ನಾಶವಾಗುತ್ತಿವೆ. ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧದಲ್ಲಿ ಬಿರುಕುಂಟಾಗುತ್ತಿದೆ. ಜನಜೀವನದಲ್ಲಿ ಏರುಪೇರುಗಳಾಗುತ್ತಿರುವುದು ಗಮನಿಸಬಹುದಾಗಿದೆ. ಪ್ರಕೃತಿ ಸಹಜ ಸೌಂದರ್ಯ ಕಳೆದುಕೊಂಡು ನೀರಸ ಅನುಭವ ಉಂಟು ಮಾಡುವಂತಾಗಿದೆ.

ಕುವೆಂಪು ಸಾಹಿತ್ಯದಲ್ಲಿ ಕಂಡುಬರುವ ಆ ದಟ್ಟ ಅರಣ್ಯಗಳು ಇಂದು ಕಾಣಸಿಗುತ್ತಿಲ್ಲ.

ಎಲ್ಲೋ ಕೆಲವು ಭಾಗಗಳಲ್ಲಿ ಸ್ವಲ್ಪ ಮಟ್ಟಿಗೆ ಕಾಣಬಹುದು. ಅಲ್ಲಿಗೂ ಮನುಷ್ಯನ ಆಕ್ರಮಣ ಪ್ರಾರಂಭವಾಗಿದೆ. ಇಂದು ಬೇರೆಡೆಗೆ ಹೋಲಿಸಿಕೊಂಡರೆ ಮಲೆನಾಡಿನ ಚಿಕ್ಕಮಗಳೂರು, ಕೊಪ್ಪ, ಆಗುಂಬೆ, ಶೃಂಗೇರಿ ಭಾಗದಲ್ಲಿ ಸ್ವಲ್ಪ ಮಟ್ಟಿಗೆ ಕಾಡುಗಳಿರುವುದು ಗಮನಿಸಬಹುದು. ಆದರೆ, ಇಲ್ಲಿಗೂ ಮನುಷ್ಯ ನಕ್ಸಲೈಟ್ ರೂಪದಲ್ಲಿ ಆಕ್ರಮಣ ಮಾಡಿದ್ದಾನೆ. ಇನ್ನು ಕೆಲವೆಡೆ ಕಾಡುಗಳೇ ನಾಶದ ಹಂತದಲ್ಲಿವೆ. ಇಂದು ಕಂಡು ಬರುವ ಕಾಡುಗಳು ಅಕೇಶಿಯಾ, ರಬ್ಬರ್‌ನಂತಹ ಮರಗಳಿಂದ ಕೂಡಿದ ಕೃತಕ ಕಾಡುಗಳು. ಇವು ಮನುಷ್ಯ ಹಣದ ಆಸೆಗಾಗಿ ನೆಟ್ಟು ಬೆಳೆಸಿದ ಕಾಡುಗಳು. ಅಕೇಶಿಯಾದಂತ ಮರಗಳ ಬುಡದಲ್ಲಿ ಬೇರೆ ಯಾವ ಗಿಡ-ಮರಗಳು ಬದುಕಲು ಸಾಧ್ಯವೇ ಇಲ್ಲದ ಸ್ಥಿತಿ ಇಂದಿನ ಕಾಡುಗಳದ್ದು. ಇನ್ನು ಮಲೆನಾಡಿನ ಹಳ್ಳಿಗಳಲ್ಲಿ ಚಿಕ್ಕ ಚಿಕ್ಕ ಕಾಡುಗಳಿದ್ದರೂ ಅವು ಕೆಲವೊಬ್ಬರ ಸ್ವತ್ತುಗಳು. ಅವರು ತಮ್ಮ ಉಪಯೋಗಕ್ಕಾಗಿ ಬೇಲಿ ಹಾಕಿ ರಕ್ಷಿಸಿಕೊಂಡಿರುವ ಕಾಡುಗಳು. ಇಲ್ಲಿನ ಕಟ್ಟಿಗೆ, ಮರ, ಸೊಪ್ಪು ಅವರಿಗೆ ಮಾತ್ರ ಸೀಮಿತವಾಗಿರುತ್ತವೆ. ಬೇಕೆಂದಾಗ ಕಡಿಯುವ ಸ್ವಾತಂತ್ರ್ಯ ಅದರ ಮೇಲೆ ಹಕ್ಕಿರುವವರಿಗೆ ಇರುತ್ತದೆ. ಮಲೆನಾಡಿನ ಯಾವುದೇ ಕಾಡುಗಳಲ್ಲೂ ಇಂದು ಶ್ರೀಗಂಧದ ಮರಗಳು ಕಂಡುಬರುವುದಿಲ್ಲ, ಏಕೆಂದರೆ ಮನುಷ್ಯ ಅವು ಇನ್ನೂ ಬೆಳೆದು ಮರಗಳಾಗುವ ಮೊದಲೇ ಕಿತ್ತು ಮಾರುತ್ತಿದ್ದಾನೆ. ಮನೆಯ ಕಾಂಪೌಂಡ್ ಒಳಗಿದ್ದರೂ ಗಂಧದ ಮರಗಳನ್ನು ಇಂದು ರಕ್ಷಿಸಲಾಗದ ಪರಿಸ್ಥಿತಿ ಮಲೆನಾಡಿನಲ್ಲಿದೆ. ಕಾಡುಗಳ ನಾಶದ ನಿರಂತರತೆಯಿಂದ ಇಲ್ಲಿನ ಭೂಮಿಯ ಫಲವತ್ತತೆಯೂ ಕಡಿಮೆಯಾಗುತ್ತಿದೆ. ನೀರಾವರಿ ಸೌಲಭ್ಯದ ಬಗೆಗೆ ಮಲೆನಾಡಿನಲ್ಲಿ ಆದಂತಹ ಬದಲಾವಣೆ ಬಗೆಗೆ ಹೇಳುವುದಾದರೆ ಇಲ್ಲಿ ಹರಿಯುವ ತುಂಗಾ ನದಿಯಲ್ಲಿ ಒಂದು ಕಿಲೋಮೀಟರ್ ಅಂತರದಲ್ಲಿ ಕನಿಷ್ಠ ನಲವತ್ತು- ಐವತ್ತು ವಿದ್ಯುತ್ ಮೋಟಾರ್‌ಗಳಂತೂ ಇದ್ದೇ ಇರುತ್ತವೆ. ಇಂದು ನದಿಯಿಂದ ಸುಮಾರು ಹತ್ತು-ಹದಿನೈದು ಕಿಲೋಮೀಟರ್‌ವರೆಗೆ ತಮ್ಮ ತೋಟ-ಮನೆಗಳಿಗಾಗಿ ನೀರನ್ನು ಪೈಪ್‌ಗಳ ಮೂಲಕ ಮೋಟಾರಿನಿಂದ ಕೊಂಡೊಯ್ಯಲಾಗಿದೆ. ಇದರಿಂದಲೇ ತಿಳಿಯಬಹುದು, ಮಲೆನಾಡು ಇಂದು ಎಷ್ಟರ ಮಟ್ಟಿಗೆ ಆಧುನೀಕರಣಕ್ಕೊಳಗಾಗಿ ಬದಲಾಗಿದೆ ಎಂಬುದನ್ನು. ಇದರಿಂದ ರಾಜ್ಯದಲ್ಲಿ ಹೆಚ್ಚು ಮಳೆಯಾಗುವ ಮಲೆನಾಡಿನಲ್ಲೂ ಸಹ ಬೇಸಿಗೆಯಲ್ಲಿ ವರ್ಷಪೂರ್ತಿ ತುಂಬಿ ಹರಿಯುವ ತುಂಗಾ ನದಿ ಬತ್ತಿ ಹೋಗುವ ಸ್ಥಿತಿ ಬಂದೊದಗಿದೆ.

ಹೀಗೆ ಮಲೆನಾಡಿನಲ್ಲಿ ಪ್ರತಿಯೊಂದು ವಸ್ತು, ಪ್ರಾಣಿ, ಪಕ್ಷಿ, ಪ್ರಕೃತಿ ಎಲ್ಲವೂ ಇಂದು ಸ್ಥಿತ್ಯಂತರಗೊಂಡಿದೆ. ತೀರ್ಥಹಳ್ಳಿ ಸಮೀಪದಲ್ಲಿರುವ ಕುರುವಳ್ಳಿಯ ಅಷ್ಟು ದೊಡ್ಡದಾದ ಕಲ್ಲು ಬಂಡೆಯೇ ಇಂದು ಎಲ್ಲೋ ಸ್ವಲ್ಪ ಭಾಗ ಉಳಿದಿದೆ ಎಂದ ಮೇಲೆ ಕಲ್ಲನ್ನೇ ಕರಗಿಸಿದ ಮನುಷ್ಯ ಇನ್ನು ಏನನ್ನು ಉಳಿಸುತ್ತಾನೆ ? ನಿಜವಾಗಿಯೂ ಇಂದಿನ ಪರಿಸರದ ಸ್ಥಿತಿಗತಿಗಳನ್ನು ಗಮನಿಸಿದರೆ ಮನುಷ್ಯ ಹೋಗುತ್ತಿರುವ ವೇಗದ ದಾರಿಯನ್ನು ನೋಡಿದರೆ, ಈ ಆಧುನಿಕತೆಯ ತೀವ್ರವಾದ ಬೆಳವಣಿಗೆ ಕೊನೆಯಲ್ಲಿ ಯಾವ ಹಂತ ತಲುಪಬಹುದು ಎಂಬುದು ಆತಂಕಕಾರಿ ವಿಷಯವಾಗಿ ತೋರುತ್ತಿದೆ. ಇಂದು ಪ್ರಕೃತಿ ಎಂತಹ ಸ್ಥಿತಿ ತಲುಪಿದೆ ಎಂದರೆ ಕಾಲಕಾಲಕ್ಕೆ ಆಗಬೇಕಾದದ್ದು ವೈಪರೀತ್ಯಕ್ಕೊಳಗಾಗಿದೆ. ಮಳೆಗಾಲದಲ್ಲಿ ಬಿಸಿಲು, ಬೇಸಿಗೆಯಲ್ಲಿ ಮಳೆ ಹೀಗೆ ಯಾವಾಗ ಏನಾಗುತ್ತದೆ ಎಂದು ಊಹಿಸುವುದೂ ಸಾಧ್ಯವಾಗುತ್ತಿಲ್ಲ. ಮಲೆನಾಡಿನ ಅಂದಿನ ಸಹಜ ಸೊಬಗು, ವಿಶಿಷ್ಟ ಸಂಸ್ಕೃತಿ ಇಂದು ಬದಲಾಗಿದ್ದು ತೀವ್ರವಾಗಿ ಆಧುನೀಕರಣದ ಪ್ರಭಾವಕ್ಕೊಳಗಾಗಿದೆ. ಕುವೆಂಪು ಕೃತಿಗಳನ್ನು ಓದಿದಾಗ ಯಾರಿಗಾದರೂ ಮಲೆನಾಡನ್ನೊಮ್ಮೆ ನೋಡಬೇಕು, ಅಲ್ಲಿ ಸುತ್ತಾಡಬೇಕು ಎಂಬ ಆಸೆ ಹುಟ್ಟುತ್ತದೆ. ಆದರೆ ಈಗ ಮಲೆನಾಡು ಖಂಡಿತ ಅಂದಿನಂತೆ ಉಳಿದಿಲ್ಲ. ಕುವೆಂಪುರವರ ನೆನಪುಗಳ ಚಿತ್ರಮಾಲೆಯಿಂದಲೇ ಸಂತೃಪ್ತರಾಗಬೇಕು. ಅವು ಕಳೆದ ಕಾಲ, ದೇಶಗಳನ್ನು ,ಆ ಸೊಬಗನ್ನು ಪುನಃ ನಮ್ಮಲ್ಲಿ ಸೃಜಿಸಬಲ್ಲ ಶಕ್ತಿ ಪಡೆದಿವೆ. ಅಂದಿನ ಮಲೆನಾಡನ್ನು ಉಳಿಸಿಕೊಳ್ಳಲಾಗಲಿಲ್ಲ, ಆದರೆ ಈಗ ಉಳಿದಿರುವ ಅಲ್ಪಸ್ವಲ್ಪ ಸೌಂದರ್ಯ, ಸಂಪತ್ತನ್ನಾದರೂ ಉಳಿಸಿಕೊಳ್ಳುವ ಕಾಳಜಿ ಇಂದಿನ ಪೀಳಿಗೆಯವರ ಕರ್ತವ್ಯ ಎಂಬುದನ್ನು ಅರಿತುಕೊಳ್ಳುವುದು ಇಂದು ಅವಶ್ಯಕವಾಗಿದೆ.

ಅಡಿ ಟಿಪ್ಪಣಿಗಳು :

೧. ಜುಗಾರಿ ಕ್ರಾಸ್, ಮುನ್ನುಡಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೦೯.

೨. ಮಲೆನಾಡಿನ ಚಿತ್ರಗಳು, ಹಾಸ್ಯದ ಚಟಾಕಿ, ಕುವೆಂಪು, ಪುಟ : ೧೦
ಉದಯರವಿ ಪ್ರಕಾಶನ, ಮೈಸೂರು,೨೦೦೬

ಅಧ್ಯಾಯ -೭
ಸಮಾರೋಪ

ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿ ಪರಂಪರೆಯಲ್ಲಿ ಕುವೆಂಪು ಅವರು ಅನೇಕ ಕಾರಣಗಳಿಗಾಗಿ ವಿಶಿಷ್ಟರಾಗುತ್ತಾರೆ. ಅವರು ಕಂಡುಕೊಂಡ ನಿಸರ್ಗದ ಜೊತೆಗಿನ ಅವಿನಾಭಾವ ಸಂಬಂಧ, ಆ ಚೆಲುವಿನ ಒಳಗೇ ಅಂತರ್ಗತಗೊಂಡ ಶ್ರೇಣೀಕೃತ ವ್ಯವಸ್ಥೆಯ ಕರಾಳ ಬದುಕು, ಅನ್ಯ ಸಂಸ್ಕೃತಿಯ ಪ್ರವೇಶದಿಂದಾಗಿ ತಲೆದೋರಿದ ಮತಾಂತರ ಸಮಸ್ಯೆ, ಪರೋಕ್ಷವಾಗಿ ಕಾಡುತ್ತಿದ್ದ ಬ್ರಿಟೀಷ್ ವಸಾಹತುಶಾಹಿ ಆಕ್ರಮಣ, ಕಾಲಾಂತರದಿಂದ ಬಿಡಿಸಲಾಗದಷ್ಟು ಹಿಡಿತ ಸಾಧಿಸಿದ್ದ ಪುರೋಹಿತಶಾಹಿತ್ವ, ರಾಷ್ಟ್ರೀಯತೆ ಎಂಬ ಪ್ರಜ್ಞೆಯ ಚೌಕಟ್ಟಿನೊಳಗೇ ಗಟ್ಟಿಗೊಳ್ಳಬೇಕಾಗಿದ್ದ ಸ್ಥಳೀಯ ಅನನ್ಯತೆಯ ಸಂಕೇತಗಳೆನಿಸಿದ ಭಾಷೆ ಮತ್ತು ಸಂಸ್ಕೃತಿ ಪ್ರಶ್ನೆಗಳು ಈ ಎಲ್ಲ ಜಟಿಲ ಪ್ರಶ್ನೆಗಳನ್ನು ಪ್ರಮುಖವಾಗಿ ಎತ್ತಿಕೊಂಡು ಅವನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ಏಕಕಾಲದಲ್ಲಿ ಒಬ್ಬ ಸೃಜನಶೀಲ ಕಲಾಕಾರನಾಗಿಯೂ, ಅದೇ ವೇಳೆಗೆ ಒಬ್ಬ ಸಾಮಾಜಿಕ ಚಿಂತಕನಾಗಿಯೂ ರೂಪುಗೊಂಡ ಕುವೆಂಪು ಅವರು ನಮ್ಮ ಸಾಹಿತ್ಯ ಲೋಕದ ಬಹುದೊಡ್ಡ ಪ್ರತಿಭೆಯಾಗಿದ್ದಾರೆ.

ಕುವೆಂಪು ಅವರ 'ಮಲೆನಾಡಿನ ಚಿತ್ರಗಳು ' ಅವರ ಸಾಹಿತ್ಯ ಜೀವನದ ಆರಂಭದಲ್ಲಿ ಹೊರಬಂದ ಕೃತಿಯಾಗಿದೆ. ಅವರು ನಂತರ ಬರೆದಂತ ಎರಡು ಮಹಾಕಾದಂಬರಿಗಳ ಸಮರ್ಥ ಮುನ್ನೋಟವಾಗಿ ಈ ಕೃತಿ ಕಂಡುಬರುತ್ತದೆ. ಇದು ಅವರ ಸಾಹಿತ್ಯ ಸೃಷ್ಟಿಯಲ್ಲಿ ವಿಶಿಷ್ಟ ಮಾದರಿಯನ್ನು ಹೊಂದಿದೆ ಎನ್ನಬಹುದು. ಸೂಕ್ಷ್ಮವಾದ, ಏಕಮುಖವಲ್ಲದ ದೃಷ್ಟಿಯಿಂದ ಕೂಡಿದ ಇಲ್ಲಿನ ಪ್ರಬಂಧಗಳು ಅವುಗಳದ್ದೇ ಆದಂತಹ ವರ್ಗದಲ್ಲಿ ಉತ್ಕೃಷ್ಟವಾದವುಗಳಾಗಿವೆ.

ನಗರ ಜೀವನವನ್ನು ಅನುಭವಿಸುತ್ತಿರುವಾಗ, ಮೈಸೂರಿನಲ್ಲಿ ವಾಯು ವಿಹಾರಕ್ಕೆಂದು ತಮ್ಮ ಗೆಳೆಯರೊಂದಿಗೆ ಹೋದಂತಹ ಸಂದರ್ಭದಲ್ಲಿ ಯಾವುದೋ ಮಾತು ಬಂದು ಮಲೆನಾಡಿನ ಕೆಲವು ಅನುಭವಗಳನ್ನು ಹೇಳತೊಡಗಿದರು. ಆ ಅನುಭವಗಳೇ ಮಿತ್ರರ ಉತ್ತೇಜನದಿಂದ ಮಲೆನಾಡಿನ ಚಿತ್ರಗಳಾಗಿ ಮೂಡಿಬಂದಿವೆ. ಕುವೆಂಪು ಅವರು ಸಹ

ಆಧುನಿಕ ಜೀವನದ ಪ್ರಭಾವಕ್ಕೊಳಗಾದಂತಹ ಸಂದರ್ಭದಲ್ಲೇ ಬೇಸರವಾದಾಗ ಇಂತಹ ಹಿಂದಿನ ನೆನಪುಗಳನ್ನು ಮೆಲುಕು ಹಾಕುತ್ತಿದ್ದರು. ಜೊತೆಗೆ ಬೇರೆಯವರೊಂದಿಗೂ ಹಂಚಿಕೊಳ್ಳುತ್ತಿದ್ದರು. ಆದ್ದರಿಂದಲೇ ಇಂದು ನಾವೂ ಸಹ ಅದರ ಸವಿಯನ್ನು ಸವಿಯಲಾಗಿದ್ದು ಕುವೆಂಪು ಅವರೇ ಪರಂಪರೆ ಮತ್ತು ಆಧುನಿಕತೆಯ ಸಂಕ್ರಮಣ ಸ್ಥಿತಿಯಲ್ಲಿದ್ದು ಚಿಂತಿಸಿರುವಾಗ ಇಂದು ನಮಗೆ ಇಂತಹ ಬರಹಗಳ ಓದು ಹೆಚ್ಚು ಅವಶ್ಯಕ ಎಂದೆನಿಸುತ್ತದೆ.

ಕುವೆಂಪು ಅವರು ಈ ಕೃತಿಯನ್ನು ತಮ್ಮ ಬರವಣಿಗೆಯ ಪ್ರಾರಂಭದ ಹಂತದಲ್ಲಿ ಬರೆದಿರುವುದರಿಂದ ಆಗಿನ್ನೂ ಆಧುನಿಕತೆಯ ಪ್ರಭಾವ ಇತ್ತೀಚೆಗೆ ಆಗಿರುವಷ್ಟು ತೀವ್ರವಾಗಿ ಆಗಿರಲಿಲ್ಲ. 'ಮಲೆನಾಡಿನ ಚಿತ್ರಗಳು ' ಕುವೆಂಪು ಅವರ ಅನುಭವಗಳು ಮತ್ತು ನೆನಪುಗಳು, ಅವು ಕೇವಲ ಅವರ ನೆನಪಾಗಿ ಮಾತ್ರ ಉಳಿದಿಲ್ಲ, ಇಂದು ನಮ್ಮ ನೆನಪುಗಳೂ ಆಗಿವೆ. ಆದರೆ ನಮಗೆ ಆ ಚಿತ್ರಗಳು ನೈಜ ಅನುಭವಗಳಾಗಲು ಸಾಧ್ಯವಿಲ್ಲ. ಕುವೆಂಪು ವರ್ಣನೆಯ ಮೂಲಕ ಅವರ ಭಾಷಾ ಶೈಲಿಯ ಚಿತ್ರಣದ ಮೂಲಕ ಅದರ ಓದಿನ ಮೂಲಕ ನಾವು ಅನುಭವಿಸಬಹುದಾಗಿದೆ. ಇಂತಹ ಅನುಭವ ಪಡೆದ ಪ್ರತಿಯೊಬ್ಬರು ಇಂದಿನ ಮಲೆನಾಡು ಹೇಗಿರಬಹುದು ಎಂದು ಒಮ್ಮೆಯಾದರೂ ಚಿಂತಿಸತೊಡಗುತ್ತಾರೆ. ಈ ಅಧ್ಯಯನದಲ್ಲೂ ಸಹ ಕುವೆಂಪು ಮಲೆನಾಡನ್ನು ಅಂದು ಕಂಡಂತೆ ಹೇಗಿತ್ತು ಅದೇ ಮಲೆನಾಡು ಆಧುನೀಕರಣಕ್ಕೆ ಒಳಗಾಗಿ ಈಗ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಅಧ್ಯಯನದ ಉದ್ದೇಶ-ವ್ಯಾಪ್ತಿಯಲ್ಲಿ ಹೇಳಿದಂತೆ ಕುವೆಂಪು ಕಂಡ ಮಲೆನಾಡಿಗೂ ಇಂದಿನ ಮಲೆನಾಡಿಗೂ ತುಂಬಾ ಬದಲಾವಣೆಗಳಾಗಿರುವುದನ್ನು ಗಮನಿಸಬಹುದಾಗಿದೆ. ಆ ಬದಲಾವಣೆಗಳನ್ನು ಆಧುನಿಕತೆಯ ಪ್ರಭಾವವನ್ನು ತಿಳಿಯುವ ಮೊದಲು ಯಾವುದೇ ಅಧ್ಯಯನಕ್ಕೆ ಮೂಲ ಆಕರ ಎಂಬುದು ಅಗತ್ಯ. ಆದುದರಿಂದ ಇಲ್ಲಿ 'ಮಲೆನಾಡಿನ ಚಿತ್ರಗಳು ' ಕೃತಿಯನ್ನು ಮುಖ್ಯ ಆಕರವಾಗಿಟ್ಟುಕೊಂಡು ಇದರ ಆಧಾರದ ಮೇಲೆ 'ಕುವೆಂಪು ಅವರ ಮಲೆನಾಡಿನ ಚಿತ್ರಗಳು ; ಆಧುನಿಕ ನೋಟ ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಬಂಧವನ್ನು ವಿಸ್ತರಿಸಲಾಗಿದೆ.

ಮಲೆನಾಡಿನ ಚಿತ್ರಗಳ ಬಗೆಗೆ ಆಧುನಿಕ ಪ್ರಭಾವವನ್ನು ಗುರುತಿಸುವ ಮೊದಲು, ಚಿತ್ರಗಳು ಪ್ರಬಂಧ ಮತ್ತು ಹರಟೆ ಎರಡೂ ರೂಪಗಳನ್ನು ಪಡೆದಿರುವುದರಿಂದ ಹಾಗೆ ಕೆಲವೊಂದು ಕತೆಗಳ ರೂಪದಲ್ಲಿ ನಿರೂಪಿಸಲ್ಪಟ್ಟಿದ್ದರಿಂದ ಈ ಕೃತಿಯಲ್ಲಿ ಕುವೆಂಪುರವರು ಓದುಗರೊಡನೆ ಕಲ್ಪಿಸಿಕೊಂಡ ಆತ್ಮೀಯತೆಯನ್ನು, ಅವರ ಭಾಷಾ ಶೈಲಿಯನ್ನು ಹಾಗೂ ಈ ಚಿತ್ರಗಳಲ್ಲಿನ ಮುಖ್ಯ ವಸ್ತುವನ್ನು ಕುರಿತಂತೆ ಚರ್ಚಿಸಲಾಗಿದೆ. ಇಲ್ಲಿ ಕುವೆಂಪು ಅವರು ಒಬ್ಬ ಹರಟೆಗಾರ ಎಂದು ಹೇಳಿಕೊಳ್ಳುತ್ತಾ ನಿಜವಾದ ಹರಟೆಗಾರ ಹೇಗೆ ತನ್ನ ಹರಟೆಯನ್ನು ಕೇಳುವವರೊಂದಿಗೆ ಹರಟುತ್ತಾ, ಅದು ಇದು ಪ್ರಶ್ನೆ ಕೇಳುತ್ತಾ, ಕೇಳುಗರ ಗಮನ ಬೇರೆಡೆಗೆ ಹರಿಯದಂತೆ ತನ್ನ ಕಡೆಗೆ ಆಕರ್ಷಿಸಿಕೊಳ್ಳುತ್ತಾನೋ ಹಾಗೆ ನಮ್ಮನ್ನು ಆಕರ್ಷಿಸುವ ಶೈಲಿ ನಿಜವಾಗಿಯೂ ನಾವು ಕುವೆಂಪು ಅವರ ಮುಂದೆ ಕುಳಿತು ಅವರ ಮಾತುಗಳನ್ನು ಕೇಳುತ್ತಿದ್ದೇವೆಯೋ ಅನ್ನಿಸುವ ಹಾಗಿದೆ. ಹೀಗೆ ಅವರ ನಿರೂಪಣಾ ಶೈಲಿ ಆತ್ಮೀಯತೆಯಿಂದ ಕೂಡಿರುವುದರಿಂದ ಆ ಚಿತ್ರಗಳು ಇಂದಿಗೂ ಓದುಗರಿಗೆ ರುಚಿಸುತ್ತವೆ.

ಕುವೆಂಪು ಅವರ ಚಿತ್ರಗಳಲ್ಲಿನ ಶೈಲಿ ಮತ್ತು ತಂತ್ರವನ್ನು ತಿಳಿದ ನಂತರ, ಈ ಪ್ರಬಂಧಗಳು ಕೆಲವೊಂದರಲ್ಲಿ ಸಾಮ್ಯತೆ ಇರುವುದನ್ನು ಗಮನಿಸಿ ಅವುಗಳ ವಸ್ತುವಿನ ಆಧಾರದ ಮೇಲೆ ವಿಂಗಡಿಸಿಕೊಳ್ಳಲಾಗಿದೆ. ಅದರಲ್ಲಿ ಬೇಟೆಯ ಚಿತ್ರಗಳು ಅಧ್ಯಾಯವು ಒಂದಾಗಿದೆ. ಇಲ್ಲಿ ಮಲೆನಾಡಿನ ಬೇಟೆಗೆ ಸಂಬಂಧಿಸಿದ ವೈಶಿಷ್ಟ್ಯಗಳನ್ನು ಚರ್ಚಿಸಲಾಗಿದೆ. ಏಕೆಂದರೆ ಮಲೆನಾಡಿನಲ್ಲಿ ಬೇಟೆ ಎಂಬುವುದು ಅಂದಿನ ಜೀವನದ ಅವಿಭಾಜ್ಯ ಅಂಗವಾಗಿತ್ತು. ಅಲ್ಲದೇ 'ಮಲೆನಾಡಿನ ಚಿತ್ರಗಳಲ್ಲಿ' ಬಹುಪಾಲು ಚಿತ್ರಗಳು ಬೇಟೆಗೆ ಸಂಬಂಧಿಸಿದವುಗಳೇ ಆಗಿವೆ. ಬೇಟೆಗೆ ಸಂಬಂಧಿಸಿದಂತೆ ಹೇಳುವಾಗ ಅಲ್ಲಿ ಬಳಸುತ್ತಿದ್ದ ವಸ್ತುಗಳ ಬಗೆಗೆ ಬೇಟೆಯ ತಯಾರಿಯ ಬಗೆಗೆ, ಅಲ್ಲಿನ ನಿಯಮಗಳ ಬಗೆಗೆ ತಿಳಿಯುವುದು ಅವಶ್ಯಕವೆನಿಸಿ ಆ ಕುರಿತು ವಿಶ್ಲೇಷಿಸಲಾಗಿದೆ. ನಂತರ ಪ್ರಬಂಧಗಳಲ್ಲಿ ಚಿತ್ರಿತವಾದ ಚಿತ್ರಗಳ ಆಧಾರದ ಮೇಲೆ ಮರಸು ಬೇಟೆ, ಜೇನು ಬೇಟೆ, ಸಾರಿಕೆ ಬೇಟೆಗಳನ್ನು ವಿಸ್ತರಿಸಿ ನಂತರ ಇನ್ನೂ ಅನೇಕ ರೀತಿಯ ಬೇಟೆಯ ವಿಧಗಳು ಮಲೆನಾಡಿನಲ್ಲಿ ಬಳಕೆಯಲ್ಲಿದ್ದುದರಿಂದ ಆ ಕುರಿತು ಕೆಲವು ಮಾಹಿತಿ ನೀಡಲಾಗಿದೆ.

ಮಲೆನಾಡಿನ ಚಿತ್ರಗಳಲ್ಲಿ ಹೆಚ್ಚಿನ ಪ್ರಬಂಧಗಳು ಬೇಟೆಯನ್ನು ಕುರಿತು ಹೇಳಿದರೂ,

ಅಲ್ಲಿಯೂ ಸಹ ಕೆಲವೊಂದು ಜೀವನ ಚಿತ್ರಗಳು ಅದರೊಂದಿಗೆ ಬೆರೆತುಕೊಂಡಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಮುಂದಿನ ಅಧ್ಯಾಯದಲ್ಲಿ ಕುವೆಂಪು ಅವರು ಚಿತ್ರಿಸಿದ ಜೀವನ ಚಿತ್ರಗಳನ್ನು ವಿಶ್ಲೇಷಿಸಲಾಗಿದೆ. ಅಲ್ಲಿ ಕೆಲವೊಂದು ವ್ಯಕ್ತಿಚಿತ್ರಗಳು ಮುಖ್ಯವೆನಿಸುತ್ತವೆ. ರಂಗಯ್ಯ, ಹಿರಗ, ಅಣ್ಣಪ್ಪ , ಪುಟ್ಟಾಚಾರಿ, ಮಂಜಣ್ಣ ಇಂತಹ ವ್ಯಕ್ತಿಗಳು ಒಂದಲ್ಲ ಒಂದು ರೀತಿ ಇಂದಿಗೂ ಮಾರ್ಗದರ್ಶಕರಾಗಿ ಕಾಣುತ್ತಾರೆ. ಹಾಗೆ ಆ ವ್ಯಕ್ತಿಗಳು ನಮಗೆ ತುಂಬಾ ಆಪ್ತರೆನಿಸುತ್ತಾರೆ. ಇದರ ಜೊತೆಗೆ ಕುವೆಂಪು ಅವರು ಈ ಕೃತಿಯಲ್ಲಿ ತಮ್ಮ ಬಾಲ್ಯ ಜೀವನದ ನೆನಪುಗಳನ್ನು 'ಅಜ್ಜಯ್ಯನ ಅಭ್ಯಂಜನ ', 'ರಾಮ ರಾವಣರ ಯುದ್ಧ ' 'ಮನೆಯ ಶಾಲೆಯ ಐಗಳ ಮಾಲೆ ' ಮೊದಲಾದವುಗಳಲ್ಲಿ ಹಂಚಿಕೊಂಡಿದ್ದಾರೆ. ಅವರ ಬಾಲ್ಯದ ನೆನಪುಗಳಿಗೂ ಇಂದಿನ ಮಕ್ಕಳ ಬಾಲ್ಯ ಜೀವನಕ್ಕೂ ಇರುವ ವ್ಯತ್ಯಾಸವನ್ನು ಕುರಿತು ಇಲ್ಲಿ ವಿವರಿಸಲಾಗಿದೆ. ಬೇಟೆ ಚಿತ್ರಗಳು ಹಾಗೂ ಬಾಲ್ಯ ಜೀವನ ಚಿತ್ರಗಳು ಇವುಗಳನ್ನು ಬಿಟ್ಟರೆ ಇನ್ನಿರುವ ಕೆಲವು ಪ್ರಬಂಧಗಳಲ್ಲಿ ಅಂದಿನ ಬದುಕಿನ ಕ್ರಮ, ನಂಬಿಕೆಗಳು, ಆಚರಣೆ ಕುರಿತಂತೆ ಚಿತ್ರಿಸಲಾಗಿದೆ. ಆದುದರಿಂದ ಈ ಕುರಿತು ಆಯಾ ಪ್ರಬಂಧಗಳ ಹಿನ್ನೆಲೆಯೊಂದಿಗೆ ಇಂದಿನ ಮಲೆನಾಡಿನ ಬದಲಾದ ಚಿತ್ರವನ್ನು ವಿಶ್ಲೇಷಿಸಲಾಗಿದೆ.

ಪ್ರಬಂಧಗಳ ದೃಷ್ಟಿಯಿಂದ ಈ ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿದ ನಂತರ, ಈ ಅಧ್ಯಯನದ ಮುಖ್ಯ ಉದ್ದೇಶವಾದ ಮಲೆನಾಡು ಇಂದು ಯಾವ ರೀತಿಯಲ್ಲಿ ಆಧುನೀಕರಣಕ್ಕೆ ಒಳಗಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಜನಜೀವನವನ್ನು ಬೇಸಾಯ ಕ್ರಮವನ್ನು, ಶಿಕ್ಷಣ ಕ್ರಮವನ್ನು ವಿಶ್ಲೇಷಿಸಲಾಗಿದೆ. ಜನಜೀವನ ಕ್ರಮಕ್ಕೆ, ಬೇಸಾಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಳು ಮಲೆನಾಡಿನ ಚಿತ್ರಗಳಲ್ಲಿ ದೊರೆಯದಿದ್ದರೂ ಅದರ ಕಾದಂಬರಿಗಳಲ್ಲಿ ಈ ಕುರಿತು ಪ್ರತಿಯೊಂದು ವಿಷಯವನ್ನು ವರ್ಣಿಸಿದ್ದಾರೆ. ಆದ್ದರಿಂದ ಅಲ್ಲಲ್ಲಿ ಕಾದಂಬರಿಯ ಕೆಲವು ಭಾಗಗಳ ಉಲ್ಲೇಖವನ್ನು ಮಾಡಲಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ 'ಮನೆಯ ಶಾಲೆಯ ಐಗಳ ಮಾಲೆ 'ಯಲ್ಲಿ ಕೆಲವು ವಿಷಯಗಳು ತಿಳಿದರೂ ಪೂರ್ಣವಾಗಿ ಶಿಕ್ಷಣ ಕುರಿತ ಚಿಂತನೆ ಅವರ ಕಾದಂಬರಿ ಹಾಗೂ ವೈಚಾರಿಕ ಕೃತಿಗಳಲ್ಲಿ , ನೆನಪಿನ ದೋಣಿಯಲ್ಲಿ ಕಂಡು ಬರುವುದರಿಂದ ಅಲ್ಲಿನ ಕೆಲವು ವಿಚಾರಗಳು ಇಲ್ಲಿ ಚರ್ಚಿಸಲಾಗಿದೆ. ಒಟ್ಟಿನಲ್ಲಿ ಇಲ್ಲಿ ಆಧುನೀಕರಣದತ್ತ

ಮಲೆನಾಡು ಹೇಗೆ ಮುಖ ಮಾಡಿದೆ ಎಂಬುದನ್ನು ಕುರಿತು ಚಿಂತಿಸಲಾಗಿದೆ.

ಆಧುನೀಕರಣದತ್ತ ಮಲೆನಾಡು ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿ ಮಲೆನಾಡಿನ ಜನಜೀವನ, ಕೃಷಿ, ಶಿಕ್ಷಣ ಈ ಕುರಿತು ಚರ್ಚಿಸಿದರೂ ಮಲೆನಾಡು ಎಂದಾಗ ನಮಗೆ ತಕ್ಷಣ ನೆನಪಾಗುವುದು ಪ್ರಕೃತಿ. ಕುವೆಂಪು ಕೃತಿಗಳೂ ಸಹ ಪ್ರಕೃತಿಯನ್ನು ಬಿಟ್ಟಿರಲು ಸಾಧ್ಯವೇ ಇಲ್ಲ ಎನ್ನುವ ಮಟ್ಟಿಗೆ ಅದರೊಂದಿಗೆ ಬೆರೆತು ಹೋಗಿದೆ. ಕುವೆಂಪುರವರು ಮಲೆನಾಡಿನ ಚಿತ್ರಗಳಲ್ಲಿ ಬೇಟೆ, ಜೀವನ, ವ್ಯಕ್ತಿ ಈ ಎಲ್ಲಾ ಚಿತ್ರಗಳನ್ನು ಚಿತ್ರಿಸಿದ್ದರೂ ಇದೆಲ್ಲದರ ಬೆನ್ನೆಲುಬಾಗಿ ನಿಂತಿರುವುದು ಅವರ ಪ್ರಕೃತಿಯೇ. ಅವರೇ ಎಷ್ಟೋ ಬಾರಿ ಹೇಳಿದ್ದಾರೆ ಬೇಟೆಗಾಗಿ ಹೋದವರು ಪ್ರಕೃತಿಯ ಸುಂದರ ಸೊಬಗಿಗೆ ಬೆರಗಾಗಿ ಕಬ್ಬಿಗರಾಗಿ ವಾಪಾಸು ಬಂದೆವು ಎಂದು. ಇಷ್ಟೊಂದು ದಟ್ಟ ವಿಪಿನ ರಾಶಿಯನ್ನು ಹೊಂದಿದ ಮಲೆನಾಡು ಇಂದು ಆಧುನಿಕ ಪ್ರಭಾವಕ್ಕೊಳಗಾಗಿ ಎಷ್ಟರ ಮಟ್ಟಿಗೆ ನಾಶವಾಗಿದೆ. ಹೀಗಾಗಲು ಕಾರಣವೇನು ಎಂಬುದನ್ನು ಕುರಿತಂತೆ ಪ್ರಕೃತಿಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಮಲೆನಾಡು ಅಂದು-ಇಂದು ಎಂದು ಕುವೆಂಪು ಚಿತ್ರಿಸಿದ ಮಲೆನಾಡಿಗೂ ಇಂದು ಕಂಡುಬರುವ ಮಲೆನಾಡಿಗೂ ಇರುವ ವ್ಯತ್ಯಾಸಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಒಟ್ಟಾರೆ ಈ ಅಧ್ಯಯನದ ಮುಖ್ಯ ಉದ್ದೇಶವೇನೆಂದರೆ, ಮಲೆನಾಡು ಆಧುನೀಕರಣಗೊಂಡ ನಂತರ ಹೇಗಿದೆ. ಅದೇ ಕುವೆಂಪುರವರ ಕಾಲದಲ್ಲಿ ಯಾವ ರೀತಿಯಲ್ಲಿತ್ತು ಎಂಬುದನ್ನು ತಿಳಿಯುವುದಾಗಿದೆ. ಕುವೆಂಪು ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಲೆನಾಡಿನ ಪ್ರತಿಯೊಂದು ಸೂಕ್ಷ್ಮ ಸಂಗತಿಗಳನ್ನು, ಸನ್ನಿವೇಶವನ್ನು , ಪ್ರಕೃತಿಯನ್ನೂ ಸುಂದರವಾಗಿ ವರ್ಣಿಸಿದ್ದಾರೆ. ಅಂದಿನ ಮಲೆನಾಡಿನ ಸೊಬಗು, ಸೌಂದರ್ಯ ಈಗ ಕಾಣೆಯಾಗಿದೆ. ಇಂದು ಎಲ್ಲೇ ನೋಡಿದರೂ ಕಾಂಕ್ರಿಟ್ ಕಾಡುಗಳು ಕಾಣುವಂತಾಗಿದೆ. ಇದು ಹೀಗೆ ಮುಂದುವರಿದರೆ ಪರಿಸರ ಅಸಮತೋಲನದಿಂದ ಭೀಕರ ಪರಿಣಾಮ ಎದುರಿಸಬೇಕಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಈಗಾಗಲೇ ಪ್ರಕೃತಿಯ ಅಸಮತೋಲನದಿಂದ ಪ್ರವಾಹ, ಸುನಾಮಿ, ಓಝೋನ್ ಪದರದಲ್ಲಿನ ಬಿರುಕು, ಭೂಮಿಯೊಳಗಿನ ತಾಪಮಾನ ಹೆಚ್ಚಾಗುವಿಕೆ, ಹೊಸ ಹೊಸ ರೋಗಗಳು ಇಂತಹ ಅನೇಕ

ದುಷ್ಪರಿಣಾಮಗಳು ಗೋಚರಿಸುತ್ತಿರುವುದು ಕಂಡುಬರುತ್ತವೆ. ಇನ್ನಾದರೂ ಮನುಷ್ಯ ಎಚ್ಚೆತ್ತುಕೊಳ್ಳದಿದ್ದರೆ ಅದರ ಪರಿಣಾಮವನ್ನು ಪ್ರತಿಯೊಬ್ಬನೂ ಎದುರಿಸಲೇಬೇಕಾಗುತ್ತದೆ. ಏಕೆಂದರೆ ಪ್ರಕೃತಿಯ ವಿರುದ್ಧದ ಹೋರಾಟದಲ್ಲಿ ಎಂದಿಗೂ ಮನುಷ್ಯ ಜಯಿಸಲು ಸಾಧ್ಯವಿಲ್ಲ. ಹೀಗಾಗಲು ಅವಕಾಶ ಕೊಡದೆ ಆದಷ್ಟು ಬೇಗ ನಮ್ಮ ಪರಿಸರವನ್ನು ಸಮತೋಲನದಲ್ಲಿಟ್ಟುಕೊಳ್ಳಲು ಕ್ರಮ ಕೈಗೊಳ್ಳೋಣ ಎಂಬುವುದು ಈ ಅಧ್ಯಯನದ ಮುಖ್ಯ ಆಶಯವಾಗಿದೆ. ಹಾಗೆ ಕುವೆಂಪುರವರು ತಮ್ಮ 'ಮಲೆನಾಡಿನ ಚಿತ್ರಗಳಲ್ಲಿ' ಹೇಳಿರುವ ಅವರ ಅನುಭವಗಳು, ನೆನಪುಗಳು ನಮ್ಮ ನೆನಪುಗಳೂ, ಅನುಭವಗಳೂ ಆಗುವಂತೆ ನಮ್ಮ ಪರಿಸರವನ್ನು ರೂಪಿಸಿಕೊಳ್ಳುವುದು ನಮ್ಮೆಲ್ಲರ ಧ್ಯೇಯವಾಗಿರಲಿ.

卐 卐 卐 卐 卐

ಆಕರ ಗ್ರಂಥಗಳು

೧. ಕುವೆಂಪು : 'ಮಲೆನಾಡಿನ ಚಿತ್ರಗಳು', ಉದಯರವಿ ಪ್ರಕಾಶನ ಮೈಸೂರು, ೨೦೦೬.

ಪರಾಮರ್ಶನ ಕೃತಿಗಳು :

೧. ಕುವೆಂಪು : ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ಮೈಸೂರು, ೧೯೯೨

೨. ಕುವೆಂಪು : ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ ಮೈಸೂರು, ೧೯೯೨

೩. ಪೂರ್ಣಚಂತ್ರ ತೇಜಸ್ವಿ : ಅಣ್ಣನ ನೆನಪು, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೦೩

೪. ಪೂರ್ಣಚಂತ್ರ ತೇಜಸ್ವಿ : ಜುಗಾರಿ ಕ್ರಾಸ್, ಪುಸ್ತಕ ಪ್ರಕಾಶನ, ಮೂಡಿಗೆರೆ, ೨೦೦೯

೫. ಉದ್ದಂಡಯ್ಯ : ಕುವೆಂಪು ಕಥನ, ಅಧ್ಯಯನ ಮಂಡಲ, ಬೆಂಗಳೂಗು, ೨೦೦೪

೬. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು,೨೦೦೮

೭. ಡಾ. ಜೆ.ಕೆ. ರಮೇಶ್ (ಪ್ರಧಾನ ಸಂಪಾದಕರು) : ಸ್ಮೃತಿ ಸಂಸ್ಕೃತಿ, ಸಹ್ಯಾದ್ರಿ ಪ್ರಕಾಶನ ತೀರ್ಥಹಳ್ಳಿ, ೨೦೦೧

೮. ಗುರುಪಾದ ಮರಿಗುದ್ದಿ : ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ ಮೈಸೂರು, ೧೯೮೯

೯. ಕೃಷ್ಣಕುಮಾರ್ ಸಿ.ಪಿ. : ಕುವೆಂಪು ಸಾಹಿತ್ಯ ಸಂಧಾನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ೧೯೯೫

೧೦. ನಾಗಭೂಷಣ್ ಡಿ.ಎಸ್. (ಸಂ) : ಕುವೆಂಪು – ಒಂದು ಪುನರನ್ವೇಷಣೆ, ಲೋಹಿಯಾ ಪ್ರಕಾಶನ ಬಳ್ಳಾರಿ, ೨೦೦೫

೧೧. ಚೆನ್ನಬಸಪ್ಪ . ಕೋ. : ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ಸಾಮಾಜಿಕ ನಿಷ್ಠೆ ನವಕರ್ನಾಟಕ ಪ್ರಕಾಶನ,

೧೨. ಸರ್ಜಾಶಂಕರ್ ಹರಳಿಮಠ : ಬೆಚ್ಚಿ ಬೀಳಿಸಿದ ಬೆಂಗಳೂರು, ನಮ್ಮನಾಡು ಪ್ರಕಾಶನ ಶಿವಮೊಗ್ಗ , ೨೦೦೨

೧೩. ರಾಮಪ್ಪ ಗೌಡ ಕೆ.ಎಸ್. (ಕಡಿದಾಳು) : ಮಲೆನಾಡಿನ ಶಿಕಾರಿಯ ನೆನಪುಗಳು, ಸಾಹಿತ್ಯ ಪ್ರಕಾಶನ ತೀರ್ಥಹಳ್ಳಿ, ೧೯೮೯

೧೪. ಅಂಬಳಿಕೆ ಹಿರಿಯಣ್ಣ : ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೧೫. ಪುಟ್ಟಣ್ಣ ವೈ.ಎಸ್. : ನಾನು ಕಂಡ ಮಲೆನಾಡು, ಚಂಧನ ಪ್ರಿಂಟರ್ಸ್ ಬೆಂಗಳೂರು, ೧೯೯೧

೧೬. ಅರವಿಂದ ಮಾಲಗತ್ತಿ (ಪ್ರಧಾನ ಸಂಪಾದಕರು) : ಕುವೆಂಪು ಕೃತಿ ವಿಮರ್ಶೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ೨೦೦೬

೧೭. ಭೈರಪ್ಪ ಕೆ. ಅರವಿಂದ ಮಾಲಗತ್ತಿ (ಪ್ರಧಾನ ಸಂಪಾದಕರು) : ಕುವೆಂಪು : ಪುನರ್ಮನನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು, ೨೦೦೪

೧೮. ನಾಗೇಗೌಡ ಎಚ್. ಎಲ್. : ಮಲೆನಾಡ ವಾಲ್ಮೀಕಿ, ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು, ೨೦೦೧

೧೯. ಶಿವರುದ್ರಪ್ಪ ಜಿ.ಎಸ್. : ಶ್ರೀ ಕುವೆಂಪು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ೨೦೦೩

೨೦. ದೇಜಗೌ : ಕುವೆಂಪು ಶೈಲಿ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೧

೨೧. ಕುವೆಂಪು : ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ, ಉದಯರವಿ ಪ್ರಕಾಶನ ಮೈಸೂರು, ೧೯೯೮

೨೨. ಕುವೆಂಪು : ವಿಚಾರ ಕ್ರಾಂತಿಗೆ ಆಹ್ವಾನ, ಉದಯರವಿ ಪ್ರಕಾಶನ ಮೈಸೂರು, ೧೯೯೮

೨೩. ಚನ್ನಪ್ಪ ಎಸ್.(ಸಂ.) : ಕುವೆಂಪು ಕೃತಿ ಚಿಂತನೆ, ೨೦೦೬